ಯಕ್ಷಗಾನ ಪ್ರಸಂಗಗಳು

ಸಂಪುಟ ೧೪

ಸಂಗ್ರಾಹಕರು

ಎಚ್.ಬಿ.ಯಲ್. ರಾವ್, ಮುಂಬಯಿ

ಪ್ರಕಾಶಕರು

ಲಕ್ಷ್ಮೀನಾರಾಯಣ ಟ್ರಸ್ಟ್, ಮುಂಬಯಿ

ಮತ್ತು

ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ

ಬೆಲೆ ರೂ. 50/-

೧೯೯೬

ಎರಡು ಮಾತು...

ಮುಂಬಯಿಯಲ್ಲಿ ಯಕ್ಷಗಾನ ಸಾಹಿತ್ಯ ಸಮ್ಮೇಳನಗಳು ನೆರವೇರಿದಾಗಲೆಲ್ಲ ಪದವೀಧರ ಯಕ್ಷಗಾನ ಸಮಿತಿಯವರು ಯಕ್ಷಗಾನ ಪ್ರಸಂಗಗಳನ್ನು ಸಂಗ್ರಹಿಸಿ, ಪ್ರಕಟಿಸು ಸಂಪ್ರದಾಯ ನಡೆದುಬಂದಿದೆ. ಇದರಿಂದ ಈ ವರೆಗೆ 13 ಸಂಪುಟಗಳಲ್ಲಿ 66 ಪ್ರಸಂಗಗಳ ಮುದ್ರಣವಾಗಿವೆ. ಈ ಕಾಯಕ ನಡೆಯದಿರುತ್ತಿದ್ದರೆ, ಈ ಕೃತಿರತ್ನಗಳು ನಾಶವಾಗುತ್ತಿದ್ದ ಯಕ್ಷಗಾನ ಕಲಾಸಕ್ತರಿಗೂ ಇದರಿಂದ ಬಹಳ ಉಪಕಾರವಾಗಿದೆ. ಇದೀಗ 14ನೇ ಸಂಪುಟದ ನಾಲ್ಕು ಪ್ರಸಂಗಗಳು ಮುದ್ರಣವಾಗುತ್ತಿರುವುದು ಕೂಡ, ಕಲಾಪ್ರಪಂಚಕ್ಕೆ ಅಮೂ ಕೊಡುಗೆಯಾದೀತು ಎಂದು ನಮ್ಮ ಆಶಯ.

ಈ ಹಸ್ತಪ್ರತಿಗಳನ್ನು ಒದಗಿಸಿಕೊಟ್ಟ ಶ್ರೀ ಬಲಿಪ ನಾರಾಯಣ ಭಾಗವತರಿಗ ಪು. ಶ್ರೀನಿವಾಸ ಭಟ್ಟರಿಗೂ, ಹಾಗೆಯೇ ಸುಂದರ ಬರಹದ ಹಸ್ತಪ್ರತಿಗಳನ್ನು ಸಿದ್ಧಪಡಿಸಿಕೊ ಯಕ್ಷಗಾನ ಕಲಾಪ್ರೇಮಿ ಮಂಗಳೂರಿನ ಎಸ್. ನಾರಾಯಣ ಇವರಿಗೂ, ಮುದ್ರಣದಲ್ಲಿ ಸಹಕರಿಸಿದ ಕಿನ್ನಿಗೋಳಿಯ "ಯುಗಪುರುಷ" ಅಚ್ಚುಕೂಟದವರಿಗೂ, ಆರ್ಥಿಕವಾ ಸಹಕರಿಸಿದವರಿಗೆ ನಮ್ಮ ಕೃತಜ್ಞತೆಗಳು.

ಸಂಗ್ರಾಹ

1366

ಯಕ್ಷಗಾನ 1366

ಪ್ರಮೀಳಾ ಕಲ್ಯಾಣ

ಶ್ರೀ ಗುರು ಗಣಾಧಿಪತಯೇ ನಮಃ

ಮಹಾಭಾರತ ದೊಳ ಗಣ ಯಕ್ಷಗಾನ ಪ್ರಮೀಳೆ ಕಲ್ಯಾಣ ದುರ್ಮತಿ ಸಂವತ್ಸರ ದಕ್ಷಿಣಾಯನ ಶರದೃತು ಆಶ್ವಯುಜ ಕೃಯು (ತುಲಾ ೪)ಬುಧವಾರ ಅಪರಾಹ್ನ ೪.೩೦.

ವೃತ್ತ

ಶ್ರೀ ಮಾಯಾಪತಿ ನಾಕಲೋದಧಿಪಂ ದುರ್ಗಾಪ್ರಿಯಂ ಶಂಕರಂ।ಸೋಮದಿತ್ಯನಲಂ ತ್ರಿನೇತ್ರ ಧರಣಂ ಗಂಗಾಧರಂ ಧೂರ್ಜಟೀಂ ॥ ಕಾಮ್ಯಾರ್ಥಂ ಪರಿಪಾಲಕಂ ಸುರಪ್ರಿಯಂ ಭಕ್ತೋದಯಂ ಸ್ಮರಹರಂ। ಸ್ವಾಮಿತ್ಸರ್ವಜಗಾದವಂ ಗುಹಪಿತಂ ಸೋಮೇಶ್ವರ ಭಾವಯೇ ॥೧॥

ರಾಗ ನಾಟಿ   ರೂಪಕ ತಾಳ

ಜಯ ಜಯ ಸಿದ್ಧಿವಿನಾಯಕ ।ಜಯ ಭಕ್ತರ ಫಲದಾಯಕ । ಜಯ ಪಾಶಾಂಕುಶ ಧಾರಕ ।

ಜಯ ನಿನಗದು ವಿಶಿಖ ॥ಜಯ ಗಿರಿಜಾಪತಿ ಬಾಲಕ । ಜಯ ಜಯ ಪ್ರಮಥಾರಾಧಕ ।ಜಯ ತ್ರೈಲೋಕ್ಯ ಸುಪೂಜಿತ ।ಜಯ ಮನು ಮುನಿ ಸೌಖ್ಯ ॥ಜಯ ಜಯತು ಜಯತು ॥೧॥ ಶುಂಡಾಲಾನ ನದಾನನ ।ಖಂಡಲ ಮುಖ್ಯರ ಪೂಜನ । ದಿಂಡುಗೆಡಿಪ ಭವದೂಷ್ಯನ ।ಚಂಡ ಪರಾಕ್ರಮನ ॥ ಮಂಡಿಗೆಗಾರಿಗೆ ಕಜ್ಜನ ।ಉಂಡುಂಡಾಡುತ ಲೀರ್ಪನ ।ಕಂಡಾಂಸ್ತುತಿಸುವೆ ಪದವನ ।ಚಂಡಿಕೆ ಸುತ ನಿನ್ನ ॥ ಜಯ ॥ ೨॥ ಸಕಾಲರ್ಥಾ ದಯ ಗಜಮುಖ ।ಸಕಲರ ಪೊರೆವ ವಿನಾಯಕ । ಮುಕುರವ ಪೋಲುವ ಶ್ರೀಮುಖ । ಸುಖಕೆ ಮಗದುವೆ ಸಖ ॥ಶುಕನ ಮಹಾ ಹಿರಿ ಬಾಲಕ ।ಸಕಲಾರ್ಥಜ್ಞಸುದಾಯಕ ।ಭಕತಾನತರುದ್ಧಾರಕ ।ವಿಕಸಿತ ಕಮಲ ಮುಖ ॥ ೩॥

ವಾರ್ಧಿಕ್ಯ

ಶಿಪಿವಿಷ್ಟನಂ ಸ್ಮರಿಸಿ ವಿಶ್ವಕರ್ಮಂಗೆರಗಿ ।ಸುಪವಿತ್ರ ವಿಶಿಖಂಗೆ ಬಲಬಂದು ಪುತ್ರದೊಳ್ ।ಕೃಪೆಯಿಂದಲೇರುವ ಕೈ ಮುಗಿದು ಪದ್ಮಕೊಂದಿಸುತ ಪಿತೃ ಮಾತೃಗಳಿಗೆ ॥ವಿಪುಲರಿಂಗೆರಗುತ್ತ ಸಕಲ ಕವಿ ಜನರೊಲುಮೆ ।ಯಪಹರಿಸುತಲಿ ವಾಸವಾದ್ಯರಿಂಗೆರಗಿ ನಾ ಸಫಲವೆಂದಿರೆ ವಿರಚಿಪೆನು ದಯದಿ ಮಾನ್ಯರೀ ಕೃತಿಗೆ ಮತಿಯನ್ನೀವುದು ॥ ೧॥ ॥ ೪॥

ದ್ವಿಪದೆ

ವರ ಮಹಾ ಭಾರತ ಪುರಾಣ ಕಥನದಲಿ । ಧರಣೀಶಯಮತನುಜನಶ್ವಮೇಧದಲಿ ॥ ೧॥ವೀರ ಫಲುಗುಣ ಮಖದ ಹಯದೊಡನೆ ಗಮಿಸಿ । ಸ್ತ್ರಿ ರಾಜ್ಯದೊಳು ಪ್ರಮೀಳೆಯ ನೊಡಂಬಡಿಸಿ ॥ ೨॥ ಮುಂದ್ಯೆದಿ ಬಲ ಸಹಿತ ।ನೀರವಂತನೊಳು ।ಅಂದು ಯುದ್ಧವಗ್ಯೆದು ।ಕಪ್ಪಕೈಕೊಳಲು ॥ ೩॥ನರನಿಂದ

ನೇಮವನು ।ಗೊಂಡಾ ಪ್ರಮೀಳೆ । ತೆರಳಿದಳು ಗಜಪುರಿಗೆ ।ಸತ್ಯಗುಣ ಶೀಲೆ ॥ ೪॥ ಗಜಪುರಿಗೆ ಪೋಪ ಮಾರ್ಗದೊಳಾಕೆಯೊಡನೆ । ರಜತಕೇತನು ತಿಳಿಯ ।ದಿವಳ ಬಲವನ್ನೆ ॥ ೫॥ ತಡೆದು ಹೊಯ್ದಾಡಿ ಬಳಿಕರಿತು ತನಗಿದ್ದ । ಒಡವೆ ವಸ್ತುವ ಸಹಿತ ಬೆಂಬಲ ದೊಳೆದ್ದ ॥ ೬॥ ಮುಂದಾಕೆ ಪೋಗೆದಾ ನವರಡ್ಡವಿಸಲು । ಕೊಂದಳಾ ಹರಿನೇಮದಿಂದ ಸತಿಯವಳು ॥೭॥ನಾರಿ ಗಜಪುರಿಗೈದುತಿರಲಿಕಾ ಹೊತ್ತು ವೀರನೆಂದಂದದಿಂದಲಿ ಮದುವೆಯಾಯ್ತು ॥೮॥ ಪೇಳ್ವೆ ನಾನೀ ಕಥೆಯ ಯಕ್ಷಗಾನದಲಿ। ಬಾಳಾಕ್ಷನಾ ಮಹಾ ।ಲಿಂಗನೊಲುಮೆಯಲಿ ॥ ೯॥ ಫಲಗುಣನ ದಿಗ್ವಿಜಯ ವರುಷ ಶುಭವೆಂದು ॥ ತಿಳಿದಿದರ ಗೈದೆ ರಕ್ಷಿಸು ದಯಾ ಸಿಂಧು ॥೧೦॥

ರಾಗ ಸೌರಾಷ್ಟ್ರ ತಾಳ ತ್ರಿವಿಡೆ

ಧಾರಿಣಿ ಪ ಜನಮೇಜಯಗೆ ಮುನಿ ।ಭಾರತದ ಕಥೆಯರುಹೆ ಕೇಳ್ದು ವಿ।ಚಾರ ಮತಿ ಬಳಿಕೆಂದನಾ ಋಷಿ ।ವೀರ ನಿಂಗೆ॥೧॥ಎಂತು ನರನಂದಾ ಪ್ರಮೀಳೆಯ ।ಸಂತವಿಸಿದನು ಬಳಿಕಲಾ ಗುಣ ।ವಂತೆ ತಾನೇಂಗೈದಳೆಂಬುದ ।ಗೊಂತನರಿಯೆ ॥೨॥ ಪೇಳ ಬೇಕಾ ವಿವರವೆಂದಾ । ಕಾಲಿಗೆರಗಿದ ಡವನ ತಕ್ಕಿಸಿ ।ಬಾಲೆಯಳ ಸಕಲಾಗಮವ ಮುನಿಪಾಲ ನುಡಿದ ॥೩॥ ॥೧೫॥

ವಾರ್ಧಿಕ್ಯ

ನರನಾಥ ಲಾಲಿಸಿತ್ತಲು ಹಸ್ತಿನಾಪುರದಿ । ಧರಣೇಶ ಧರ್ಮಜಂ ಕೌರವಾದ್ಯರ ಕೊಂದ ।ದುರಿತ ಪರಿಹಾರಕೋಸ್ಕರ ವಾಜಿಮೇಧ ಮಂ ಹರಿ ದಯದಿ ವಿರಚಿಸಿದನು ॥ ಸ್ಮರಗೆ ದಳದಧಿಕಾರವಿತ್ತು ಬೇಕಾದ ಬಲ ।ನರಸಹಿತ ಕುದುರೆ ಬೆಂಬಲಕಾಗಿ ಪೋಗುತ್ತ।ಲಿರಲೊಂದು ದಿನ ಪಾರ್ಥನಶ್ವ ಸ್ತ್ರೀ ರಾಜ್ಯ ಕೈದಿತು ವಾದ್ಯದಬ್ಬರದಲಿ ॥೧॥

ರಾಗ ಭೈರವಿ ಝಂಪೆ ತಾಳ

ಇಂತು ಪಾರ್ಥನ ತುರಗ ।ಕಾಂತೆಯರ ಪುರವ ಪೊಗೆ । ಕೌಂತೇಯ ನೋಡಿ ಬಳಿ ।ಕಿಂತೆಂದನಾಗ ॥೧॥ ಯಾವುದೀ ಪುರದಪೆಸ ।ರಾವನೀ ಪುರದ ದೊರೆ ।ಈ ವಿವರವೆಲ್ಲವನು । ನೀವೆನಗೆ ಪೇಳಿ ॥೨॥ ಬಿಟ್ಟ ಕುದುರೆಯನಿವರು । ಕಟ್ಟುವರೊ ಕಪ್ಪವನು । ಕೊಟ್ಟು ಬರುವರೊ ಪೇಳಿ । ರಿಷ್ಟವೇನಿವರ ॥೩॥ ಈ ತೆರದಿ ನುಡಿಯೆ ವೃಷಕೇತು ಮುಂತಾದ ಬಲ । ವಾ ತರುಣಿಯಳ ಪರಿಯ । ನಾತಗು ಸುರಿದರು ॥೪॥

॥೨೦॥

ರಾಗ ಕೇತಾರ ಗೌಳ ಅಷ್ಟತಾಳ

ನರನೆ ಲಾಲಿಸು ಪುರದರಸು ಪ್ರಮೀಳೆಯೆಂ ।ಬುರು ಗುಣೌನ್ನಿ ತೆ ಚದುರೆ ॥ ಸಕಲ ಕಾಲಾಪೆ ಕೋವಿದೆ ನೀತಿ ಶಾಸ್ತ್ರಸ ।ಚ್ಚರಿತೆ ವೀ ರಾಧಿ ವೀರೆ ॥೧॥ ನಾರಿಯರಲ್ಲಿ ಮಂತ್ರಿಗಳು ಕಾಲಾಳ್ಗಳೀ ।ಯೂ

-ರ ಪ್ರಾಣಿಗಳೆಲ್ಲವು ॥ಸೇರಿರುವರು ಸ್ತ್ರೀಯರಲ್ಲದೆ ಪುರುಷರ ।ವಾರತೆಗಳ ಕಾಣೆವು ॥೨॥ ಧುರ ಪರಾಕ್ರಮಿ ಮಿಕ್ಕ ಧರೆಯ ಪಾಲಕರ ಧಿಕ್ಕರಿಸುವಳವಳು ನಮ್ಮ ॥ತುರಗವ ಕಟ್ಟಿ ಕಾದದೆ ಬಿಡುವಳೆ ಕಷ್ಟ। ಹೊರಿಸುವಳೀ ಸತಿಯು ॥೩॥ ನಾಗಭೂಷಣನ ಯುದ್ಧದಿ ಬಗೆಯದ ವೀರ ।ಳಾಗಿ ಹಳವಳೊಡನೆ ॥ ಹ್ಯಾಗಾಗುವದೊ ಜಯವೆಂಬುದನೆಲ್ಲವ ।ನಾಗಶಯನ ಬಲ್ಲನು ॥೪॥ ॥೨೪॥

ರಾಗ ಮಾರವಿ ಏಕ ತಾಳ

ಎನಲದ ಕೇಳುತ ರೋಷದಿ ಪಾರ್ಥನು ।ಕನಲುತಲಿಂತೆಂದ ॥ವನಿತೆಯ ಶೌರ್ಯವ ಪೊಗಳುವಿರ್ಯಾತಕೆ ।ಜನಪನ ಕ್ರತುವಿಂಗೆ ॥೧॥ ಭರದಿಂ ಕಪ್ಪವನೀಯದೆ ನಮ್ಮೊಳು ।ಧುರಕೆನುತಲೆ ಬರಲು ॥ಅರೆ ಕ್ಷಣ ಮಾತ್ರದಿ ಗರ್ವವ ನಿಲ್ಲಿಪೆ ।ನರಕಾರಿಯ ದಯದಿ ॥೨॥ ಎಂದು ಮಹಾರ್ಬಲ ಕುಸುರುತ ಪಾರ್ಥನು ।ಮುಂದಿಹ ಪುರವರಕೆ ॥ಇಂದಿಲಿ ನಮ್ಮೀತುರಗವ ಬಿಡಿರೆನು ।ತೆಂದನು ಸುಭಟರಿಗೆ ॥೩॥

ಭಾಮಿನಿ

ಅಲ್ಲಿ ನಾನಾ ಕಾರ್ಯಗಳಿಗಿಹು ।ದೆಲ್ಲ ಸ್ತ್ರೀ ಜನ ಹೊರತು ಗಂಡಸ ।ರಿಲ್ಲವೀ ಕುದುರೆಯನು ಕಾಣುತ್ತೋರ್ವೆ ಬೇಗದಲಿ ॥ನಿಲ್ಲದೋಡುತ ತನ್ನೊಡತಿ ಪದ । ಪಲ್ಲವಕೆ ವಂದಿಸುತ ಮಯ್ಯ । ಲ್ಲೆಲ್ಲ ಬೆವರುತ ಪೇಳಿದಳು ನರನಶ್ವದಾಗಮವ ॥ ೧ ॥

ರಾಗ - ಸಾರಂಗ - ಅಷ್ಟ ತಾಳ

ಲಾಲಿಸಬೇಕಮ್ಮಯ್ಯ । ಬಿನ್ನಪವನ್ನು । ಪೇಳುವೆಕೇಳ್ದಮ್ಮಯ್ಯ ॥ಜಾಲವಲ್ಲಿದು ಹೊರ । ಪಾಳಯ ಬಂದಿದೆ ।ವಾಲೆ ಕಟ್ಟಿದ ತೇಜಿಯ । ಕಂಡೆವಮ್ಮಯ್ಯ ॥೧॥ ಧುರಧೀರರೆಲ್ಲವರು । ಭೋರ್ಗರದು ಬಂ । ದಿರುವರು ನೋಡವರು ॥ ಶರಧಿಯಂದದಿ ಬಲ ॥ಮೊರೆವುದದರ ಪೇಳ । ಲರಿದಿನ್ನು ಕೇಳ್ಪರಾಕೆ । ಹೆಚ್ಚಿನ ಬೇಕೆ ॥೨॥ ಎನಲು ಕೇಳ್ದವಳಾ ಕ್ಷಣ । ನೋಡುವ ವಾಜಿ ।ಯನು ತನ್ನಿ ಬಿಡದೀಕ್ಷಣ ॥ಪಣೆಯೊಳಗಿಹ ವಾಲೆಯನು ಓದಿಸ್ಯದರ ಹ।ದನ ವೇನೆಂದರಿವೆನೀಗ ।ಪೋಗಿರಿ ಬೇಗ ॥೩॥ ॥೩೧॥

ಭಾಮಿನಿ

ಅರಸಿಯಪ್ಪಣೆಯಾಗಲಂದಾ ।ತುರಗವನು ತಂದೊಪ್ಪಿಸಿದರಾ ।ತರುಣಿ ಬಳಿಕದ ಕಂಡು ಸ್ತ್ರೀ ಮಾಲಿಕೆ ಶಿಖಾರತುನ ॥ಕರಣಿಕಳ ಮುಖದಿಂದ ಕುದುರೆಯ ।ಬರೆದ ವಾಲೆಯ ಬಿಚ್ಚಿ ಸ್ತ್ರೀಜನ ।ರರಿವ ತೆರದಿಂದೋದಿಸಿದಳೆಮ ಸುತನ ಬಿರಿದುಗಳ ॥೧॥

ರಾಗ ಕೇತಾರ ಗೌಳ ಅಷ್ಟತಾಳ

ಹಸ್ತಿನಪುರದಧಿಪತಿ ವೈರಿ ಕಮಲಕೆ ।ಹಸ್ತಿ ಶ್ರೀ ಹರಿ ಪಾದದ ॥ ಮಸ್ತಕ ಭೂಪ ಧರ್ಮಜ ಹಯಮೇಧದ ।ಪ್ರಸ್ತ ದೀಕ್ಷಿತನಾದೆನು ॥೧॥ ಪೊಡವಿಯೊಳುಳ್ಳ ಭೂಭುಜರು ಶೌರ್ಯದ ಸತ್ತ್ವ ।ದಡವಿಯ ಕಡಿಯಲೆಂದು ॥ಕೊಡಲಿಯೆನ್ನನುಜ ಪಾರ್ಥನ ಬಿಟ್ಟೆ ಹಯ ಸಹ ।ಕಡು ಸತ್ತ್ವದವನಿಪರು ॥೨॥ ಕಟ್ಟಿ ಕಾದಾಡ ಬೇಕಲ್ಲದಡೀ ನೃಪ ।ಬೆಟ್ಟ ಕುಲಿಶ ಪಾರ್ಥನ ॥ಇಷ್ಟು ಪಡೆದು ನೆಲಕನಕ ಕಾಣಿಕೆಯನ್ನು ।ಕೊಟ್ಟು ಬೆಂಬಲ ಬಪ್ಪುದು ॥೩॥ಆಸುಯೋಧನ ಬಂಧು ಬಾಂಧವರನು ಕೊಂದ ।ದೋಷ ನೀಗಾಡಲೆಂದು ॥ಈಸೊಂದು ಕ್ರತುವ ನಿರ್ಮಿಸಿದೆನು ಶ್ರೀಶರ ।ಮೇಶನಪ್ಪಣೆಯಿಂದಲಿ ॥೪॥ಧಾತ್ರಿಯ ನೃಪರ ಸತ್ವದ ಕಾಡಿಗಾ ವೀತಿ । ಹೋತ್ರನೆಂದರಿದಿಪ್ಪುದು ॥ಮಿತ್ರತ್ವಲೇಸು ಎಂದೆನೆ ಕೇಳಿ ಕೋಪದಿ ।ಮತ್ತೆದ್ದು ನುಡಿದಳಾಗ ॥೫॥ ॥೩೭॥

ರಾಗ ಕಾಂಬೋದಿ ಝಂಪೆ ತಾಳ

ಹರಿಯ ಸ್ತ್ರೀ ರಾಜ್ಯದೊಳು ಕಟ್ಟಿದವರಿಲ್ಲೆಂಬ। ಕೊರತೆ ಸಂಸ್ಥಾನಕ್ಕೆ ಬಹುದು ॥ಧುರದಿ ಹೊಯ್ದಾಡಬೇಕರಿಗಳಿಗೆ ಕಪ್ಪವನು ।ತೆರಬಾರದೆಂದು ನಿಶ್ಚೈಸಿ ॥೧॥ ಲಾಯದೊಳ್ಕುದುರೆಯಂ ಕಟ್ಟಿಸಿದಳಾಕೆ ಸಿ ।ದ್ಧಾಯಮಂ ಕೊಡೆನೆಂದು ಭರದಿ ॥ಪಾಯದಳಮಂ ನೆರಹಿ ಪಾರ್ಥನನುವರಕೆ ಕಮ । ಲಾಯ ತಾಂಬಕಿ ಪೊರಟಳಾಗ ॥೨॥ ॥೩೮॥

ವಾರ್ಧಿಕ್ಯ

ಇಂದು ಮುಖಿ ಚಲ್ಲಣವ ಬಿಗಿದುಟ್ಟು ಜಡೆಗಟ್ಟಿ ।ಗಂಧಕರ್ದಮವ ಲೇಪಿಸಿ ಸಮಸ್ತಾಭರಣ ।ದಿಂದಲಂಕರಿಸಿ ಕೋದಂಡಾಸ್ತ್ರಮಂಧರಿಸಿ ಸಮರ ಸನ್ನಾಹದಿಂದ ॥ಮಂದಿ ಶತ ಲಕ್ಷಮಂ ಬರಿಸಿ ರವಿ ಶಶಿ ಬಿಂಬ । ವೊಂದಾಗಿ ನಡೆತರುವ ಪೋಲು ಪ್ರಕಾಶದಿಂ ।ಹೊಂದೇರದರ್ದು ಪ್ರಮೀಳೆ ನಡೆತಂದು ಪಾರ್ಥನ ಕಾಣುತಿಂತೆಂದಳು ॥೧॥ ॥೧॥

ರಾಗ ಭೈರವಿ ಅಷ್ಟ ತಾಳ

ಪಾರ್ಥನೆಂಬವನೆ ನೀನು ।ನಿನ್ನಶ್ವವ ।ಸ್ವಾರ್ಥದಿ ಕಟ್ಟಿಹೆನು ॥ವರ್ತಿಸೆ ಉಭಯ ಯುದ್ಧಗಳುಂಟು ನಿನಗೆ ನಾ ।ಗೊತ್ತಿದ್ದು ಪೇಳ್ವುದೇನು ॥೧॥ಹೆಣ್ಣಿನೊಡನೆ ಯುದ್ಧವು ।ಮಾಳ್ಪರೆ ಅಗ್ರ। ಗಣ್ಯರು ಕೇಳ್ನಿಜವು॥ ಬಣ್ಣವಲ್ಲದ ಮಾತ ಬಿಡು ಎನ್ನ ವಚನವ। ಮನ್ನಿಸಲನು ಚಿತವು ॥೨॥ಹೆಂಡ್ಯರಿರುವ ರಾಜ್ಯವು ।ಪುರುಷರನ್ನು ।ಕಂಡೇವೆಂದರೆ ಇಲ್ಲವು ॥ಚಂಡ ಪರಾಕ್ರಮಿ ಗಂಡಸರೆಮ್ಮಯ ।ಗಂಡರು ಕೇಳ್ನಿ ಜವು ॥೩॥ ಅರಸು ನೀನೀ ರಾಜ್ಯಕೆ ।ಆಯುಧಗಳ ।ಧರಿಸಿಹೆ ನೋಡಲಿಕೆ ॥ ಸರಿಯೆ ವೇಶ್ಯೆಯರಂತೆ ಸ್ಮರನಾಗಮದ ಮಾತ ।ನರುಹುತಿದ್ದಪೆ ಯಾತಕೆ ॥೪॥ ವಿಷಸ್ತ್ರೀಯರಲ್ಲ ನಾವು ।ಪೂರ್ವದ ಪುಣ್ಯ ।ವಶದಿಂದೆಮ್ಮಯ

ಸಂಗ ॥ರಸೆಯೊಳು ದೊರಕಲು ಪೊಸ ಜವ್ವನರ ಮಾಡಿ ।ಕುಶಲದಿ ಕೂಡುವೆವು ॥೫॥ ಜಾಲ ವಿದ್ಯವು ನಿಮ್ಮಲಿ ।ಪುಟ್ಟಿಹುದೆಂದು ।ಕೇಳಿಹೆ ಪೂರ್ವದಲಿ॥ ಜಾಲವೆಮ್ಮೊಡನದು ಸಲ್ಲದು ಬಿಡು ಹಯ। ಲೋಲಾಕ್ಷಿ ವಿನಯದಲಿ ॥೬॥ತರುಣಿಯರೊಳು ಸೆಣಸಿ ।ಸೋಲಿಸದಿಂತು ।ತುರಗ ಕೇಳ್ವೆಯ ಸಹಸಿ॥ ಸ್ಮರನ ಶಾಸ್ತ್ರದೊಳಿಂತೆಂ ದೊರೆದುದ ನೀನದ ।ನರಿತುದಿಲ್ಲವೆ ಗ್ರಹಿಸಿ ॥೭॥ಪುರುಷ ಕಾಮಿಗಳು ನೀವು। ನಿಮ್ಮನು ಕೂಡಲ್ ।ನರರಿಗೇಳಿಗೆಯಿಲ್ಲವು ॥ವಿರಹದಿ ಪುರುಷರ ಮೇಲ್ಪಾಯ್ದು ದಿರೆ ನಮ್ಮ ।ಪರಿ ಬೇರೆ ತೊಲಗೆವೊ ॥೮॥ಪ್ರಣಯ ಕಲಹದೊಳಗೆ ಸೋಲಿಸಬಲ್ಲ।ಡನುವಾಗ ಬೇಕೆನಗೆ ॥ಮನವೊಡಂಬಡದಿಕಿರಣದಿ ಕಾದುವೆ ಹಯ ।ವನು ಬಿಡೆ ಬಿಡೆ ನಿನಗೆ ॥೯॥ಹೆಂಗೊಲೆ ಗಳುಕಿ ನಾನು ।ಪೇಳ್ದರೆ ಮಾತ ಹಂಗಿಸಿ ನುಡಿವೆ ನೀನು ॥ಭಂಗಿಸುವೆನು ಕೇಳು ಸಾರಿದೆ ನಮ್ಮ ತು ।ರಂಗವ ಬಿಡುವುದಿನ್ನು ॥೧೦॥ ॥೫೦॥

ರಾಗ ಪಂಚಾಗತಿ ಮಟ್ಟೆ ತಾಳ

ಭಂಗಿಸುವ ಸಹಸ ರಣ ।ರಂಗದಲ್ಲಿ ತೋರೆನುತ್ತ ।ಹಿಂಗದಸ್ತ ವೆಚ್ಚಳಾ ಕು ।ರಂಗ ಲೋಚನೆ ॥೧॥ ಬರುವ ಶರವಪಿತರಿದು ಪಾರ್ಥ ।ಒರೆದನೆಲೆಲೆ ಹುಚ್ಚುಮೂಳಿ ।ಅರಿಯೆಯೇನೆ ತನ್ನ ಸತ್ವ ।ದಿರವ ನಿಲ್ಲೆಲೆ ॥೨॥ಕೇಳಿ ಬಲ್ಲೆ ನಿನ್ನ ಸತ್ವ ।ಕಾಳಗದಲಿ ಅಲ್ಪರನ್ನು । ತೋಳ ಬಲದಿ ಗೆಲಿದ ಗರ್ವ ।ನಿಲಿಸದುಳಿಯೆನು ॥೩॥ಭ್ರಷ್ಟ ಮೂಳಿ ಕೇಳು ರಣದಿ ।ದುಷ್ಟರೆಲ್ಲರನ್ನು ಗೆಲಿದು ।ಇಷ್ಟದಿಂದ ನಮ್ಮ ರಾಜ್ಯ ಪಟ್ಟಗಟ್ಟಿದೆ ॥೪॥ ಹರಿಯ ದಯದಿ ಗೆಲಿದ ಶೌರ್ಯ।ದಿರವ ಕಾಂಬೆ ನಿಲ್ಲೆನುತ್ತ ।ಮರುತ ಬಾಣ ವೆಚ್ಚಡದರ ।ತರಿದು ಪೇಳ್ದನು ॥೫॥ ದುರುಳೆ ಶೂರ್ಪನಖಿಯ ಮೂಗ ।ತರಣಿ ಕುಲಜ ತರಿದ ತೆರದಿ ।ತರಳೆ ನಿನ್ನ ಮಾನ ಭಂಗ ।ಭರದಿ ಮಾಳ್ಪೆನು ॥೬॥ವೀರನ್ನೆಸೆ ಹಿಂದೆ ಪಾರ್ಥ ।ಭೂರಿ ತೋಷದಿಂದ ಸ್ವರ್ಗ ।ಕೇರಿ ಯೂರ್ವಶಿಯ ಶಾಪ ।ಧೀರ ಪಡೆದೆಯ ॥೭॥ಮಾತೆಯೆಂಬ ಭಾವದಿಂದ ।ನೀತಿ ಶಾಸ್ತ್ರದಂತೆ ನಡೆದೆ । ಭೂತಳದೊಳು ನಿಮ್ಮ ತೆರದಿ ।ನೀತಿ ತಪ್ಪದೆ ॥೮॥ನೀತಿವಂತನಹುದು ಪಾರ್ಥ ।ಕಾಂತೆಯನ್ನು ಐವರಾಳ್ಪ ।ರೀತಿಯನ್ನು ತಿಳಿದೆ ನಿಲ್ಲು ।ಶ್ವೇತವಾಹನ ॥೯॥

ರಾಗ ಸೌರಾಷ್ಟ್ರ ತಾಳ ತ್ರಿವುಡೆ

ನಾರಿಯೊಡನಾಳ್ತನವೆ ತಾ ಮದ ।ನಾರಿಯೊಳು ಸೆಣಸಿದವ ಚಾಪದ ।ನಾರಿಯೊಳು ಕಣೆ ತೊಡುವೆ ತಡೆವೆಯ ।ನಾರಿ ನೀನು ॥೧॥ ಹರನೊಡನೆ ಸರಿಯಾಗಿ ಕಾದಿದ ।ಧುರ ಪರಾಕ್ರಮಿಯಾದರೊಳ್ಳಿತು ।ತರುಣಿಯಳ ಕೈ ಚಳಕವನು ನೋ। ಡರೆ ನಿಮಿಷದಿ ॥೨॥ಅಂಗಜನ ಮದದಾನೆ ನಿನ್ನೊಳು । ಅಂಗಜಾಹವ ಯುಕ್ತವಲ್ಲದೆ ।ಸಂಗರಕೆ ನೀ ಪಾತ್ರಳೇ ಮಾ ।ತಂಗ ಗಮನೆ ॥೩॥

ಭಾಮಿನಿ

ನರನ ನುಡಿಗೊಡ ಬಟ್ಟು ಪೇಳ್ದಳು । ನರನೆ ನೀ ಎನ್ನರಸನಾಗದೆ। ಮರಳಗೊಡೆನಲ್ಲದಡೆ

ಧುರಕಿದಿರಾಗೆನಲು ನರನು ॥ಶಿರವರಿವೆನೆಂಬನಿತರೊಳಗಂ। ಬರವಚನವ್ಯಾತಿ ಸತಿಯ ಗೆಲ ।ಲರಿದೆನಲು ಕಲಿ ಪಾರ್ಥನುಡಿದನು ಸತಿಗೆ ವಿನಯದಲಿ ॥೧॥ ॥೬೩॥

ರಾಗ ಸೌರಾಷ್ಟ್ರ ಏಕತಾಳ

ಕೇಳೆಲೆ ಸದ್ಗುಣ ಸತ್ಯ ।ಬಾಲೆ ಮೃದು ಭಾಷಿಣಿಯೆ ಸುಪ್ರ।ಮೀಳೆ ನಿನ್ನ ವಚನವನ್ನು ।ಕೇಳುತೊಳಗಾದೆ ॥೧॥ ಒಳಗಾದರೆ ಸಾಕೆ ನೀನೆ । ನ್ನೊಳಗೆ ಕೃಪೆಯ ಮಾಡಿ ಪತ್ನಿ । ಯಳನು ಮಾಡಿಕೊಳಿರಿ ಸ್ಮರನ ।ಕಲಹಕೊದಗುವ ॥೨॥ ನಾಗಗಮನೆ ವರುಷವೊಂದು । ತಾಗಿದೆ ದೀಕ್ಷೆಯು ನಿನ್ನ । ಭೋಗಿಪ ಸಮಯವಿದಲ್ಲ । ನೀಗೆ ವ್ರತವನು ॥೩॥ ಹಾಗಾದರೇನೊಂದು ವರುಷ । ವಾಗದೆ ನೀ ಎನ್ನ ಕೂಡ । ಲಾಗದಲ್ಲಿ ಹಸ್ತಿಪುರಕೆ। ಹೋಗಲೊಪೇಳು ॥೪॥ ತೆರಳು ದಂತಿಪುರಕೆ ನಿನ್ನ । ಹರಿಯನುಜ್ಞೆಯಲ್ಲಿ ನಮ್ಮ । ಧ್ವರ ಪೂರಯ್ಸೆ ಮದುವೆಯ ಹೆನು । ಬರಿಯ ಮಾತಲ್ಲ ॥೫॥ ನರನ ನುಡಿಯ ಕೇಳಿ ಹರುಷ । ವೆರಸಿ ನಂಬುಗೆಯಗೊಂಡು । ತೆರಳಲಿತ್ತ ಜಿಷ್ಣು ಬಲವು ।ತಿರುಗಿತತ್ತಲು ॥೬॥ ॥೬೯॥

ವಾರ್ಧಿಕ್ಯ

ತರುಣಿಯಳ ಗಜಪುರಿಗೆ ಕಳುಹಿಸುತ ಬಳಿಕಲಾ । ನರನು ಹಯ ಸಹಿತ ಬೇಕಾದ ಮಾರ್ಬಲ ಗೂಡಿ । ತೆರಳಿದಂ ಪೃಥ್ವಿಪರ ಗೆಲಲೆನುತಲತ್ತಲಿತ್ತಲು ನಾರಿ ಹರುಷದಿಂದ ॥ಮುರಹರನ ಸಖ ತನಗೆ ಪತಿಯಾದನೆಂದುಬ್ಬಿ । ಪೊರಟಳಾ ಗಜ ಪುರಿಗೆ ಸಕಲ ಸನ್ನಾಹ ದಿಂ । ತರ ತರದ ವಸ್ತು ವಂಕಪ್ಪ ಕಾಣಿಕೆಗೊಂಡು ಪತಿಯಾಭಿಲಾಷೆಯಿಂದ ॥೧॥

ರಾಗ ಮಧ್ಯಮಾವತಿ ಏಕ ತಾಳ

ಕಪ್ಪತಂದಳಾಗ ಒಪ್ಪಿಸೆನರಗೆ ಸ್ತ್ರೀ । ಸರ್ಪಶಯನನೊಲುಮೆ । ಬಪ್ಪುದೆಂದೆನುತಲೆ ॥ಪಲ್ಲ॥ ಕನ್ಯೆಯರ್ಚೆಲುವೆಯ ರಿನ್ನು ಮಧ್ಯಮ ಸ್ತ್ರೀಯ ।ರನ್ನು ಪ್ರಮೀಳೆ ನೂ ।ರಿನೂರ ಕೂಡಿ ॥ ಹೊನ್ನಸತ್ತಿಗೆಯಾನ್ನೂ ।ರನ್ನೊದಗಿಸಿ ಪಾರ್ಥ । ನನ್ನು ಕೂಡುವೆನೆಂಬೊದುನ್ನತಾಶೆಯೊಳು ತಾ ॥೧॥ ಕರಿ ರಥ ಕುದುರೆ ಸಾ । ವಿರವ ಕೂಡಿಸಿ ಹಸ್ತಿ ।ಪುರಕೆನುತಲೆ ತನ್ನ । ಧರೆಯಿಂದಲಿ ॥ ಪೊರಟಳುವಾದ್ಯದ । ಬ್ಬರ ಘೋಷದೊಳು ಪೃಥ್ವಿ । ಧರಿಸಿದ ಹಿಪಗೆ ಬೇ । ಸರ ಹುಟ್ಟಿಸುತಲೆ ॥೨॥ ಹೊಸತು ಹೊಂಬಣ್ಣದ। ಎಸೆವ ಶಾಲೆಯನುಟ್ಟು । ಮಿಸುನಿಯ ರವಕೆಯ । ಕುಶಲದಿ ಕುಚಕೆ ॥ ಶಶಿಮುಖಿತಾ ತೊಟ್ಟು । ನೊಸಲಿಗೆ ತಿಲಕವಿಟ್ಟು । ವಸುಧೆಗಿಳಿದ ದೇವ। ತಸುಗಳ ಸ್ತ್ರೀಯಂತೆ ॥೩॥

ವಾರ್ಧಿಕ್ಯ

ನಕ್ಷತ್ರಕೊಯ ಕುಲಜನೆ ಲಾಲಿಸಿಂತು ಕಮ । ಲಾಕ್ಷಿಯರು ನಗುತ ಮಾತಾಡು ತರ್ತಿಸುತಲೆ ಸ।

ಮಕ್ಷದೊಳಗಿಹ ಕುಸುಮಗಳ ಕೊಯ್ದು ಕಂಚುಕಿಯ ಬಿಚ್ಚಿ ಬೀಳಿಸುವ ಗಾಳಿಯ ॥ ಪಕ್ಷಕಾ ಗುರುಕುಚವ ನೀಡುತ್ತಲಾಡುತ್ತ । ಕಕ್ಷದಿಂಬಿರೆಯರ್ಧ ದಿವದ ಬಿಸಿಲಿವರ ಕುಮು । ದಾಕ್ಷಿಯಂ ಮುಚ್ಚಿಸಿತು ನಡೆಯಲಾರದೆ ಬಳಿಕಲೊಂದು ವನಮಂ ಸಾರ್ದರು ॥೧॥ ॥೭೪॥

ಭಾಮಿನಿ

ಬಳಲಿ ಬಾಯಾರುತ್ತ ನಾರೀ । ಬಳಗವಾ ವನದಲ್ಲಿ ಸುತ್ತುತ । ಜಲವರಸಿತಾವಾಗ ಕಂಡರು ಕೆಲರು ಸರಸಿಯನು । ಎಲೆಲೆ ಬೆಂಡಾಗದಿರಿ ತುಂಬಿದ । ಕೊಳಪವುಹುದೆನಲ್ಕಾಗ ಮಿಕ್ಕುಲುಳಿದ ಸ್ತ್ರೀಯರು ಬಂದು ಕುಡಿದರುಜಲವ ಮನದಣಿಯೆ ॥೧॥

ಕಂದ ಪದ್ಯ

ಮಡದಿಯರೀ ಪರಿ ಜಲವನು । ಕುಡಿಯುತ ನಾನಾ ಸರಸದಿ ಮೆರೆದವರಾಗಂ ॥ ದಡದೊಳು ಸರ್ವಾಭರಣವ । ನಿಡುತುದಕಕೆ ಧಿಮ್ಮನೆ ಪಾಯ್ದರು ಮುದದಿಂದಂ ॥೧॥ ॥೭೬॥

ರಾಗ ಆಹೇರಿ ಏಕ ತಾಳ

ಆಡಿದರಾ ಜಲಕ್ರೀಡೆಯನು । ಹಿಂದೆ । ಗೂಡು ತೊಬ್ಬೊಬ್ಬರ ಬಿಡದಿನ್ನು ॥ಪಲ್ಲ॥ ಬಡ ನಡುವಿಂ ಗುಟ್ಟ । ಕಡುತರ ಸೀರೆಯ । ಬಿಡಿಸಿಡುತಲೆ ಶ್ವೇತ। ಮಡಿಯನುಟ್ಟು ॥ ಜಡೆಗೊಂಡೆ ಕಂಕಣ। ಕಡಗ ಮುಂತಾದ ಚಿನ್ನ । ದೊಡವೆಯ ಕಳಚುತ್ತ । ನಿಡುತಲೆ ಸತಿಯರು ॥೧॥ ಝಷಗಳಿಂಗಿದವಬ್ಜ । ದೆಸಳಿನಕ್ಷಿಗೆ ಚೆಲ್ವ । ಪೂಸ ಮುಖ ಕಮಲಕೊಂ ।ದಿಸಿತು ತಾವರೆಯು ॥ಕುಸುಮಶರನ ಪಂಚ । ವಿಶಿಖವೇನೆಂಬಂತೆ। ನಸು ನಗೆ ನೋಟದಿಂ ।ದೆಸೆವ ಶೃಂಗರಿಯರು ॥೨॥ ಮುಳುಗಿ ಲಂಘಿಸಿ ಬೇರೆ ।ಯಳ ಮತ್ತೋರ್ವಳು ಪಿಡಿ।ದೆಳೆದಿಟ್ಟು ನಕ್ಕಳು ಜಲದೊಳಗೆ ॥ ಎಲೆಲೆ ನಾನೀಚ್ಛೆ ನೊ।ಡಿಳಿ ನಿನ್ನ ಕಾರ್ಬಾರ । ಗಳ ಕಾಂಬೆನೆನುತಲೆ । ಗುಳು ಗುಳು ಶಬ್ದದಿ ॥೩॥

ಭಾಮಿನಿ

ಇಂತು ಜಲಕೇಳಿಯನು ಕಳೆದಾ । ಕಾಂತೆಯರು ತಡಿಗಡರಿಸುಮ ಸೆವಂತಿಗೆಯನತಿ ಜಾರ ಪುಷ್ಪಾದಿಗಳ ಕೊಯಿಕೊಯಿದು ॥ ನಿಂತಿರಲುವನ ಕಾವಲಿಗರ । ತ್ಯಂತ ಹೊಯ್ಲಲಿ ಬಂದು ನಾರೀ। ಸಂತತಿಯ ಕಾಣುತ್ತ ಲೆಂದರು ಮೂದಲಿಸುತಾಗ ॥೧॥ ॥೮೦॥

ರಾಗ ತೋಡಿ ಏಕ ತಾಳ

ತುಲ್ಯದೊಳಿಂದ್ಯಾರ್ಲೆ ಬಂದು । ಮುಲ್ಲೆ ಮಲ್ಲಿಗೆಯ ಕೊಯ್ದು । ಗೊಳ್ಳೇ ನೀರೆಲ್ಲ ಕೆಡಿಸಿದು

। ಪೆಣ್ಣಾತಿ ಇಂದು ॥೧॥ ವಾರ ಸ್ತ್ರೀಗಳ ತೆರದಿ ।ನಾರಿಯರೆ ನೀವೆಷ್ಟು ಬನದಿ ॥ ಹಾರ್ಯಾಡುವಿರಿಂದ್ಯಾಕೆ ಕಾಲ್ಮದದಿ । ಇದ್ಯಾರ ಬಲದಿ ॥೨॥ ದರ್ಬಾರೆಮ್ಮೊಡೆಯಗಿಹುದು । ಕಾರ್ಬಾರ್ಸಲ್ಲದು ಬಂದು । ದರ್ಬರನೆ ಪಿಡಿದೆಳೆವ ಬಿಡನಿಂದು । ಸಾರಿದೆ ವಾ ವಿಂದು ॥೩॥

ಭಾಮಿನಿ

ಚಾರರೆಂದುದ ಕೇಳ್ದು ಸತಿಕುಲ ।ತಾರಕೀಶೆಯು ನುಡಿದಳಂದಾ । ದೂರಿ ನಿಮ್ಮೊಡೆಯಂಗೆ ಪೋಗಿರಿ ನಮ್ಮ ಕೃತ್ಯವನ್ನು ॥ ಮೀರಿ ಬಂದರೆ ಸುಮ್ಮನಿರೆವಾ । ದೂರದಿರಿ ಮತ್ತೆನಲು ದೂತರು । ನೀರೆಯರೊಳೆವಗ್ಯಾಕೆ ನುತ ನಡೆದೆಂದರಾಳ್ದಂಗೆ ॥೧॥ ॥೮೪॥

ರಾಗ ಕೇತಾರ ಗೌಳ ಝಂಪೆ ತಾಳ

ಲಾಲಿಸಾವೆಂಬ ಮಾತು । ನಮ್ಮೆಲ್ಲ । ಪಾಲಿಸೈ ರಜತಕೇತು ॥ ಬಾಲೆಯರ ತಂಡವಿಂದು । ನಮ್ಮೊನವ । ಹಾಳು ಮಾಡಿದರು ಬಂದು ॥೧॥ ಸರಸಿಯನು ಕೆಡಿಸಿ ಮತ್ತಾ ॥ ತುಂಬ ತಾ । ವರೆಯ ಕೊಯ್ದರು ನಲಿಯುತ ।೨॥ ಕೇಡಿದೆಂದೆವು ನೀತಿಯ । ನಮ್ಮನ್ನು । ದೂಡಲಿಕೆ ಬಂದರಯ್ಯ ॥ ಬೇಡ ಪೆಣ್ಣಾತಿಯೊಳಗೆ । ಕಲಹವೆಂದೋಡಿದೆವು ಬಂದು ನಿನಗೆ ॥೩॥ ॥೮೭॥

ರಾಗ ಭೈರವಿ ಝಂಪೆ ತಾಳ

ದೂತರೆಂದುದ ರಜತ । ಕೇತ ಕೇಳುತ ಮನದಿ ।ಖಾತಿಯೊಳು ಮಂತ್ರಿಯಲಿ । ಮಾತೊಂದ ನೆಂದ ॥೧॥ ಕೇಳಿದೇನ್ಯೆ ಚೋದ್ಯ । ಬಾಲೆಯರು ಬಂದು ವನ । ಹಾಳು ಮಾಡಿದರೆ ನ । ಮ್ಮಾಳುತನದೊಳಗೆ ॥೨॥ ಯಾರೆಂದು ನೀ ನೋಡಿ । ಬಾರಿತ್ತಲವರಿಂದು । ಮೀರಿ ಬಂದರೆ ಪಿಡಿದು । ತಾರೆನ್ನ ಬಳಿಗೆ ॥೩॥ ॥೯೦॥

ಭಾಮಿನಿ

ಆಳ್ದನೆಂದುದ ನುಡಿಯ ನಾ ಕ್ಷಣ ಕೇಳ್ದು ಜೀಯ ಹಸಾದವೆಂಬುದ । ಬಲ್ದುಡುಕಿಯಾ ಮಂತ್ರಿಯು ಪವನಕಾಗಿ ನಡೆತಂದು ॥ ಕೇಳ್ದು ಸತಿಯರಸಿಯಳ ನಾಮವ । ತಾಳ್ದು ಹತ್ತಿರೆ ಬಂದು ಸುಳಿಯಗು । ರುಳ್ದಬಲೆ ಕಾಂತ ಜನವಕಂ ಡೆಂದನವಳೊಡನೆ ॥೧॥ ।೯೧॥

ರಾಗ ನಾದನಾಮಕ್ರಿಯೆ ಅಷ್ಟ ತಾಳ

ಫಣಿ ವೇಣಿ ಕೇಳು ನೀನಿಂದಲಿ । ನಾರಿ । ಜನವ ಕೂಡುತ ಬಂದು ಭರದಲಿ ॥ ವನ ಜಲ ಕೆಡಿಸಿದೆ ಗರ್ವದಿ । ದೂತ।ರನು ಹೊಡೆದಟ್ಟಿದೆ ನಿಮಿಷದಿ ॥೧॥ ಇದಕಾಳ್ವನಿಹನೋರ್ವ ರಾಜನು । ನೀವ್ಹೆ । ದುದನಾತಗರುಹಿದ ದೂತನು ॥ ಅದನು ಕೇಳ್ದೆನ್ನ ಕಳುಹಿದನು । ರಾಜ । ಸದನಕ್ಕೆ ಬರಲೆಂದ ನಿಮ್ಮನು॥೨॥

ಛಲದಿ ನೀ ಬಾರದಿದ್ದರೆ ನಿನ್ನ । ಪಿಡಿ । ದೆಳೆದು ತಾರೆಂದ ಭೂಭುಜರನ್ನ ಲಲನೆ ತನ್ನೊಂದಿಗೆ ಬರುವೆಯ। ಬರದುಳಿವೆಯ ಪೇಳೊಂದು ನಿಶ್ಚಯ ॥೩॥ ನಾರಿಯರಂತಲ್ಲವೆಂಬುದು । ನಮ್ಮ ।ಭೂರಮಣಗೆ ವೇದ್ಯವಾದುದು ॥ ಚಾರರು ಸೋಡೇಹೇನಾದವು । ನಿನ್ನ । ನಾರಾಚ ಧನುವಿಗಾವಂಜೆವು ॥೪॥ ಧೀರೆ ಕಾಳಗ ತೃಪ್ತೆ ನಿನ್ನೊಳು । ಕೇಳ್ವೆ।ನೂರ್ಯಾವದೆಂದರು ಹೆನ್ನೊಳು ॥ಚೋರರಂದದಿ ಪೊಕ್ಕು ವನವನು । ಲೂಟಿ। ದೋರಿಸಿದರೆ ಬಿಡೆ ಬಿಡೆ ನಾನು ॥೫॥ ॥೯೮॥

ಭಾಮಿನಿ

ನಾರಿ ಪೇಳ್ದಳು ನಿನಗೆ ನಾವ್ಯಾ ।ರ್ಯಾರು ಬಳಿಕೆಲ್ಲೆಂದು ಕೇಳ್ಪ ವಿ ।ಚಾರವನು ಕೊಟ್ಟಾತನಾವನು ಬಾರೆವಾವೀಗ ॥ಊರನಾಳುವ ದೊರೆಗೆ ಶೀಘ್ರದಿ । ದೂರೆನಲು ಕೇಳುತ್ತಕಣು ಕೆಂ ।ಪೇರಿ ಕೋಪಾಟೋಪದಲಿ ಝಡಿದೆಂದನವಳೊಡನೆ ॥೧॥ ॥೯೭॥

ರಾಗ ಮಾರವಿ ಏಕ ತಾಳ

ಲಲನೆಯರೆಂದೀ ವರೆಗಾ ಸುಮ್ಮನೆ ।ಕುಳಿತಿದ್ದೆನು ಬಣಗೆ ॥ ಸಲುಗೆಯ ಗಿರಿ ನಡೆತಂದೀ ಕ್ಷಣದಲಿ । ತಲೆಗಡರಿತು ನಿನಗೆ ॥೧॥ ಕ್ಷಣದಲಿ ನೋಡೀಗೆನಗರಿಯೆಯ ನಾ ।ಕನಕನು ಬಲು ಧೀರ ॥ ನೆನುವಾವಮಾತ್ಯನು ನಿನಗೆ ಬಿಡೆನು ಕಾಣೆನಗಿಹ ದರ್ಬಾರ ॥೨॥ ಪಿಡಿದ್ಯೊದೀಗಿಂದೊಡೆಯನಿಗೊಪ್ಪಿಪೆ । ಪಡೆ ಸಹ ನಿನ್ನುವನು ॥ ಮೃಡ ಗಿಡ ತಡೆಯಲಿಕೊಡಬಡೆನೆನೆ ಸ್ತ್ರೀ।ಯೊಡತಿ ನುಡಿದಳಿನ್ನು ॥೩॥ ॥೧೦೦॥

ರಾಗ ಶಂಕರಾಭರಣ ಮಟ್ಟೆ ತಾಳ

ಸಾಕು ಬಲ್ಲೆ ಬಲ್ಲೆ ನಮ್ಮ । ನೂಕಿಕೊಂಡು ಪಿಡಿದು ಪೋಗ । ಲ್ಯಾಕೆ ಸತ್ತ್ವನೋಳ್ಪೆನೋಳ್ಪೆ । ಸಾಕೆ ಧುರದಲಿ ॥ ಶಾಕಿನಿಯರ್ಗೆ ನಿನ್ನರಕ್ತ । ತೋಕಿ ತೃಪ್ತಿ ಪಡಿಪೆ ನಿಲ್ಲು । ಈ ಕಠಾರಿಯೊಳಗೆನುತ್ತ । ಲಾಕೆ ನುಡಿದಳು ॥೧॥ ಭಳಿರೆ ನೀನು ಹೆಂಗುಸಿಂಥ । ಛಲವ ತೊಟ್ಟೆಯಾದರಾವು । ಗಳಿಸಲ್ಯಾಕೆ ಪುರುಷತನವ। ನೆಲೆ ಪ್ರಮೀಳೆಯೆ ॥ ಇಳೆಯೊಳರಿಯೆವಲ್ಲ ಸ್ತ್ರೀ । ಗಳು ವಿವಾದಕೀಗ ಪುರುಷ । ರೊಳಗೆ ನಿಲ್ಪದಿದು ವಿಚಿತ್ರ। ಸುಲಭವೇ ಧುರ ॥೨॥ ನಾನು ಬದ್ಧಸ್ತ್ರೀಯ ತನ್ನ । ಬಾಣಕುಂಟೆ ಹೆಂಗುಸತ್ವ । ಕಾಣಬಹುದು ನಿಲ್ಲು ನಿಲ್ಲು। ತ್ರಾಣವೀಕ್ಷಣ ॥ ಕ್ಷೋಣಿಯಬಲೆಯರ ಸಮಾನ । ನೀನು ಬಗೆಯಬ್ಯಾಡೆನುತ್ತ । ಸಾಣೆ ವಿಡಿದ ದಿವ್ಯ ಶರವ। ಕಾಣುತೆಚ್ಚಳು ॥೩॥ ಬರುವ ಶರವ ತರಿದು ಪೇಳ್ದ । ನರರೆ ನಿನ್ನ ಬಲುಹು ಬಲು ಮುಂ । ದ್ವರಿಸಿತಲ್ಲ ತನ್ನನೀಗ । ಧುರದ ಮಧ್ಯದಿ ॥ ಕಿರಿದು ಶಕ್ತಿಯವರು ನಾವು । ಪರಿಕಿಸೆನುತ ಸಚಿವ ದಿವ್ಯ । ಶರವನೆಸೆಯಲದರ ಕಂಡು । ತರಿದಳಾಕೆಯು ॥೪॥ ಇಂತು ರಥವನೇರುತವರು । ಪಂಥದಿಂದ ಕಾದು ತಿರಲು । ಕೊಂತದಿಂದ ಸಚಿವನನ್ನು । ಚಿಂತಿಸಿದಳು ॥ಗೊಂತುಗೆಟ್ಟು ಕನಕಧುರದಿ । ಮುಂತೆಜೈಸಿ ಗೃಹಕೆ

ಪೋಪ । ಪಂತಿ ಕಾಣೆನೆಂದು ಬೇಗ ।ಪಿಂತೆ ತಿರುಗಿದ ॥೫॥ ॥೧೦೫॥

ಭಾಮಿನಿ

ರಜತನಗರಕೆ ಪೊಕ್ಕು ಸಚಿವನು । ರಜತಕೇತನಿಗೆಂದ ನಾರೀ । ವ್ರಜದೊಳಗೆ ಹೊಯ್ದಾಡಿ ಬದುಕುವರಿಲ್ಲ ನರರೊಳಗೆ ॥ ನಿಜವಿದನು ನೀ ನೋಡು ಧುರಕಂ ।ಬುಜನಯನೆಯರು ಮುನಿದು ನಿಂದರೆ। ತ್ರಿಜಗದೊಳದಿರಿಲ್ಲೆನಲು ಮೊಗದಿರುಹಿ ಗರ್ಜಿಸಿದ ॥೧॥ ॥೧೦೬॥

ರಾಗ ಘಂಟಾರವ ಅಷ್ಟ ತಾಳ

ಭಳಿರೆ ಮಂತ್ರಿ ಸಂಗರ ಧೀರ ನೀನಹೆ । ಲಲನೆಯರ ವೆಗ್ಗಳವ ಬಿಡದೆನ್ನೊ।ಳಗುಸುರ ಲೈ ತಂದೆಯ ॥೧॥ ಲಕ್ಷ ದ್ರವ್ಯವ ಕಸದು ಬೇಕಾದನ್ನ । ಭಕ್ಷಿಸುತ ಬೇರೇನ ನೀನಿಂ । ದೀಕ್ಷಿಸದೆ ಕುಳಿತಿರುತಿಹೆ॥೨॥ ಧುರವ ಬಿಟ್ಟು ಹಿಂದಕೆ ಬಂದುದ್ಯಾಕೆ। ಮರಣಗೊಂದೋಡಿದವ ಭಾಪುರೆಶರವನೆಸೆವ ಪರಾಕ್ರಮಿ ॥೩॥ ॥೧೦೭॥

ಭಾಮಿನಿ

ಇಂತು ಸಚಿವನ ಜರೆದು ಬಂದಿಹ। ಕಾಂತೆಯರ ನಾ ನೋಳ್ಪೆನೆಂದು ಮ ।ಹಾಂತ ಮತಿ ದಳ ಸಹಿತ ನಡೆತಂದಾಗಲು ಪವನದಿ ॥ ನಿಂತಿರುವ ಸ್ತ್ರೀಯ ರಸಿಯಾಗಿರು । ವಂತವಳ ಗುರುತರಿತು ಧುರ ವಿ । ದ್ಧಾಂತನೆಂದನು ಕರೆದು ಹೋ ಹೋ ತರುಣಿ ಕೇಳೆನುತ ॥೧॥ ॥೧೦೮॥

ರಾಗ ಭೈರವಿ ಅಷ್ಟ ತಾಳ

ಕಡು ನೀಚೆ ಯಾರೆ ನೀನು । ಪಾನೀಯವ । ಕೆಡಿಸುತ್ತದೂತರನು ॥ ಹೊಡೆದಟ್ಟುತಿದಕೀಗಾ । ರೊಡೆಯರಿಲ್ಲೆಂಬುದ । ಜಡಮತಿ ಬಗೆದೆಯಲ್ಲ ॥೧॥ ಒಡೆಯ ನೀನಿದ್ದರೇನು । ನಮ್ಮಯ ತಪ್ಪ । ನುಡಿ ನುಡಿ ಮಾಜದಿನ್ನು ॥ ಜಡದಿ ಮಿಂದೆವು ಪುಷ್ಪ । ಕ್ಕೊದವೇನದರಿಂದೇ । ನೊಡುನಾಗಲೆನಲೆಂದನು ॥೨॥ ಪ್ರಹರಣವನು ಧರಿಸಿ । ಬಂದೆನು ನಾನು । ಮಹಿಳೆಯಾಳುವ ಸಹಸಿ ॥ ಸಹಜವಲ್ಲೀ ಪಂಥ । ಬಿಡು ನಿನ್ನ ಪಿಡಿದೆನ್ನ । ಗೃಹಕೆ ಕೊಂಡೊಯ್ಯುವೆನು ॥೩॥ ಕೊಂಡೊಯ್ವಕೈಗಳನು । ನೀ ಕ್ಷಣ ನೋಡು । ಖಂಡಿಪೆನಾನದನು ॥ ಭಂಡರಂದದೊಳೆಮ್ಮೊ । ಳೊಂದೊಂದರುಹಿ ಲಜ್ಜೆ । ಗೊಂಡೋಡಬೇಡೆನಲು॥೪॥ ಸುರಪಾದ್ಯರನು ಮನದಿ । ಲೆಕ್ಕಿಸೆನೊಂದು । ತರುಣಿ ನೀನೀ ಯುದ್ಧದಿ ಬರಿದೆ ಸತ್ತರೆ ಹೆಂಗುಸರ ಕೊಲೆ ಬಿಡದೆಂದೀವರೆಗಿದ್ದೆ ಬಿಡೆ ನಾನಿನ್ನು ॥೫ । ಆದುದನೆಲ್ಲವನು ।ನೋಡುವೆ ದೊಡ್ಡ । ಮೇದಿನಿಯಧಿಪ ನೀನು ॥ ಕಾದುವೆನರೆ ಕ್ಷಣ ಬಾರೆನ್ನಸತ್ವವ । ವಾದಕೆ ನಿಲ್ಲೆಂದಳು ॥೬॥ ॥೧೧೪॥

ರಾಗ ಭೈರವಿ ಮಟ್ಟೆ ತಾಳ

ಕೇಳಿ ಧನುವಗೊಂಡು ನೃಪತಿ ।ಧುರದೊಳೆಂದನು । ಬಾಲೆ ನಿನ್ನೊಳ್ಯಾಕೆ ಬೇಡವೆನುತಲಿದ್ದೆನು ॥ ಮೇಲೆ ಬಿದ್ದು ಬರುವೆ ಮತ್ತು ಮತ್ತು ಗರ್ವದಿ । ಕಾಳಗದೊಳು ಮುರಿವೆ ನೋಡು ಸೊಕ್ಕ ನಿಮಿಷದಿ ॥೧॥ ಆಯಿತಾಯಿತಾಯಿತಿಂದು ಬಲ್ಲೆನೆಲ್ಲವ । ಬಾಯಲೇನು ಪೇಳ್ದರುಂಟೆ ಬೇಡೆಂದೆನ್ನುವ ॥ ಸ್ತ್ರೀಯರಾದಡೇನು ಹಿಂದೆ ದೇವಿ ಖೂಳರ । ಕಾಯವರಿಯಲಿಲ್ಲವೇ ಇದೇನು ಹೊಸ ಧುರ ॥೨॥ ದೇವತಾಸುಪೂಜ್ಯಳೀ ಚರಾಚರಾಳಿದ । ದೇವಿಗೀಡೆ ಬಣಗೆ ಸ್ತ್ರೀ ಗುಲಾಮೆ ಕೇಳಿದ ॥ ಯಾವಳಾದಡೇನು ನೋಡು ತನ್ನ ಸತ್ವವ । ಕಾವರ್ಯಾರು ಬರಲಿ ನಿನ್ನ । ಬಲಕೆ ನೋಡುವ ॥೩॥॥೧೧೭॥

ಭಾಮಿನಿ

ಕಾವವರ ಕೇಳದಿರು ಸುರಗಜ । ವಾವನುಕಿ ಧರೆಗಿಳುಹಿದನುವು । ತ್ತಾವವನು ಹರಿಹರರೊಡನೆ ಕಾದಾಡಿದತಿ ಬಲನು ॥ ಆ ವಿಭುವೆ ತನಗಹನು ಪತಿ ಮ । ತ್ತಾ ವಿಚಾರವದ್ಯಾಕೆ ನಿನಗೆನ । ಲಾ ವಿರೋಧಿಯು ಕೇಳ್ದು ಬೆಕ್ಕಸ ಬೆರಗುವಟ್ಟೆಂದ ॥೧॥ ॥೧೧೮॥

ವಾರ್ಧಿಕ್ಯ

ಹರ ಹರಿನಿತಾಯ್ತೆನ್ನ ಪ್ರಾಣಸಖನಾಗಿರ್ಪ । ನರನರಸಿಯೆಂದು ತಿಳಿಯದೆ ವೃಥಾ ಕಾದಾಡಿ । ಹರಿಗೆ ಸಹ ರಜತಕೇತನು ದೂರವಾದನಿನ್ನೇಂಗೈವೆನೆಂದೆನ್ನುತ ॥ ಮರುಗಿ ಹಲವಂಗದಲಿ ವ್ಯಸನ ಪೂರಿತನಾಗಿ । ಕರದ-ಧನುವಂ ರಥದಿ ಬೀಸಾಡಿ ಮುಂತಿಪ । ತರುಣಿಯೆಡೆಗೈತಂದು ಕರಗಳೆರಡಂ ಮುಗಿದು ಬಲು ದೈನ್ಯದಿಂದೆಂದನು ॥೧॥ ॥೧೧೯॥

ರಾಗ ಸೌರಾಷ್ಟ್ರ ಏಕ ತಾಳ

ತಪ್ಪುಗಳ ಪಾಲಿಸಬೇ । ಕಲೆ ತಾಯೇ। ತನ್ನ । ನೊಪ್ಪುಗೊಳಬೇಕು ಬಿಡದಿಗೆಲೆ ತಾಯೆ ॥ ಸರ್ಪಶಯನ ನಾಪ್ತ ಪಾರ್ಥ । ನೆಲೆ ತಾಯೆ । ಸಖನಾ । ಗಿಪ್ಪನೆನಗೆ ತಿಳಿಯದಾದೆ । ನೆಲೆ ತಾಯೆ ॥೧॥ ಜರೆದು ನುಡಿದೆ ಬಹಳ ಬಗೆಯಿಂ । ದೆಲೆ ತಾಯೆ । ಅದನು । ಮರೆತು ತನ್ನುದ್ಧರಿಸಬೇಕು । ಎಲೆ ತಾಯೇ । ಪರಮ ಮಿತ್ರನರಸಿ ನೀನು । ಎಲೆ ತಾಯೇ । ಮೊದಲಾ । ನರಿಯದೆ ಮಾಡಿದ ತಪ್ಪ । ನೆಲೆ ತಾಯೆ ॥೨॥ ಮೊದಲೆ ನಿಜವನರಿದಿದ್ದಡೆ । ಎಲೆ ತಾಯೇ ।ಇಂಥ । ಕದನಗೆಯ್ಯಲಿತ್ತೆ ಬಿಡದೇ ಎಲೆ ತಾಯೇ । ಚದುರ ಕಲಿ ಗಾಂಡೀವಿಗರಸಿ । ಎಲೆ ತಾಯೆ। ನೀನ । ಲ್ಲದೆ ಬೇರಿನ್ಯಾವಳು ಯೋಗ್ಯ । ಎಲೆ ತಾಯೆ ॥೩॥ ॥೧೨೦॥

ರಾಗ ಕೇತಾರ ಗೌಳ ಅಷ್ಟ ತಾಳ

ಕುಚಕುಂಭಯುಗೆ ಬೆರಗಾದಲಾತನ ಮೃದು । ವಚನವ ನಾಲಿಸುತ॥ ಶಚಿಪ್ರೀತನಾತ್ಮ ಸಂಭವ

ಪಾರ್ಥ ಸಖನೆಂಬೊಂ। ದುಚಿತಕಿಂತೆಂದಳಾಗ ॥೧॥ ನೃಪ ಸಾರ್ವಭೌಮ ಯುದ್ಧವ ಬಿಟ್ಟು ಬಂದೆನ್ನ। ನುಪಚರಿಸುವೆ ಯಾತಕೆ ॥ ಕಪಟನಾಟಕನಾಪ್ತನರ ನಿನ್ನ ಮೇಲೆಂತು । ಕೃಪೆಯಾದನೆಂದೆನಲು ॥೨॥ ಇಂದ್ರನಾತ್ಮಜ ತೀರ್ಥಯಾತ್ರೆಗೋಸುಗವಿಲ್ಲಿ । ಬಂದು ಮಾರ್ಗಶ್ರಮದಿ ॥ ನಿಂದುದ ನರಿತು ನಾನು ಪಚಾರದಿಂ ತನ್ನ । ಮಂದಿಕಿರದೊಯ್ದೆನು ॥೩॥ ಮೂರೊಂದು ದಿನ ತನ್ನ ಮನೆಯೊಳಗಿದ್ದು ಬೇ। ರೂರಿಗೆ ಪೋದನಾಗ ॥ ಈ ರೀತಿಯೊಳು ನಮ್ಮ ಸಖತನವೆನೆ ಚೆಲ್ವ । ನಾರಿ ಮತ್ತಿಂತೆಂದಳು ॥೪॥ ಚಿಂತೆಯಿಲ್ಲಿದಕೇನು ತಿಳಿಯದೆ ಮಾಡಿದ । ಪಂಥದ ಕಲಹವಿದು ॥ ಅಂತ ರಂಗದೊನಗಿಲ ಮುನಿಸು ಬಿಟ್ಟೆ । ಮುಂತೆ ಪೋಗುವೆನೆಂದಳು ॥೫॥ ॥೧೨೭॥

ವಾರ್ಧಿಕ್ಯ

ಆಕೆಯೆಂದುದ ಕೇಳ್ದು ತೋಷದಿಂದಾಕ್ಷಣ ಪಿ । ನಾಕಿಯಾಪ್ತನ ಭಕ್ತ ನರನರಸಿಗಾಗಲಾ । ಬೇಕಾದ ನವರತ್ನ ಕನಕ ರಜತಾದಿ ನಾನಾ ವಸ್ತುವಂಗೂಡುತ॥ ರಾಕೇಂದುವದನೆಗೆ ಸುವಸ್ತು ಸಹತಲೆ ನರನ। ತಾ ಕಂಡು ಬುರುವೆನೆಂದೆನುತ ಬೆಂಬಲಕೈದ । ನಾಕಾಶದೊಳು ಸುಮದ ವೃಷ್ಟಿಯಂಗರೆದರಂದಾ ಪ್ರಮೀಳೆಗೆ ಹರುಷದಿ ॥೧॥ ॥೧೨೮॥

ದ್ವಿಪದಿ

ಗಜನಗರಿಗಾಗ ಪ್ರಮೀಳೆ ನಡೆತರಲು ॥ ರಜತಕೇತನು ಸಹಿತ ಸಂಗಡ ದೊಳಿರಲು ॥೧॥ ಸಮಸಪ್ತಕರ್ಗೆ ಮೊಮ್ಮಂದ್ಯರಾಗಿರುವ ॥ ಕುಮತಿ ಖಳ ದುರ್ಮರ್ಷಣಾಖ್ಯ ಮತ್ತೋರ್ವ ॥೨॥ ದುರುಳ ದುರ್ಮತಿಯು ಸಹ ರತ್ನ ಶಿಖರದಲಿ ॥ ಇರುತಿರ್ದರವರಂದು ಸುರರ ವೈರದಲಿ ॥೩॥ ಅವರ ಸಂಹರಿಸಬೇಕೆನುತಲೆಂದಾಗ॥ ದಿವಿಜವಂದಿತ ನಾರದಾಂಕ ನಡೆದಾಗ॥೪॥ ರತ್ನ ಶಿಖರವ ಪೊಗಲು ಖಳರು ಕಂಡಾಗ ॥ ರತ್ನ ಪೀಠವನಿಡುತ ಕೈಮುಗಿದರಾಗ ॥೫॥ ॥೧೩೩॥

ರಾಗ ಕಾಪಿ ಅಷ್ಟ ತಾಳ

ಕೈ ಮುಗಿದರ ಕಂಡು ಮುನಿಪನು । ಮೈ ಮುಟ್ಟಿ ಕುಳಿರಿ ಸಾಕೆಂದನು ॥ ಪಲ್ಲ॥ ವೀರರು ನೋಡ್ನಿಮ್ಮ ಬಾಹು ಬಲಾಢ್ಯಕ್ಕೆ । ಮೂರು ಲೋಕದಿ ಸರಿಗಾಣೆನೆಂದು ॥ ಕಾರಿಯವೇನಿಪ್ಪಿದ್ದರು ಖಳ ಕುಲ ಸಂ । ಹಾರ ಮಾಡುವ ನೊಬ್ಬನಿರುರವನಿಂದು ॥೧॥ ಹಿಂದೆ ನಿಮ್ಮಯಜ್ಜ ಮುತ್ತಜ್ಜರೆಲ್ಲರ । ಕೊಂದನು ಧುರಧೀರ ನರನೆಂಬನು ॥ ಎಂದಾದರದರಿಂದ ನಿಮಗಾತ ಕಂಟಕ । ನೆಂದರಿಯಿರಿ ಮರೆಯದಿರೆಂದನು ॥೨॥ ಆತನ ಬಿಡದೆ ಸಾಕ್ಷಾತ ನಾರಾಯಣ । ಸೂತನಾಗಿಹನದರಿಂದವನು ॥ ಭೂತಳದೊಳು ಬಲು ಖ್ಯಾತಿಗೊಂಡನು ನಿಮ್ಮ ।ಯಾತು ಧಾನರಿಗೆಲ್ಲ ಪಗೆಯೆಂದನು ॥೩॥

ರಾಗ ಭೈರವಿ ಝುಂಪೆ ತಾಳ

ಕೇಳುತಾ ಕ್ಷಣದೊಳಗೆ। ಕಾಲ ಭೈರವನಂತೆ। ತಾಳಿ ರೌದ್ರವ ಮುನಿಗೆ। ಪೇಳಿದರು ಮಗುಳೆ ॥೧॥ ಏನಿದೇನಿದು ಹಿರಿಯ । ದಾನವರನೆಲ್ಲರನು । ಹಾನಿಗೈದನೆ ಶಕ್ರ । ಸೂನು ಚೋದಿಗವು ॥೨॥ ನಾನವರ ಸಂತತಿಯ । ರೀ ವಿವರ ಕೇಳುತೀ । ಭೂಮಿಯೊಳಗಿರಲೆಂತು । ದೇವ ಋಷಿವರ್ಯ ॥೩॥ ಅದರಿಂದ ಪಗೆಯ ತೀರ್ಚದೆ ಬಿಡೆವು ನರನ ಧುರ । ಕೊದಗುವಂತೆತ್ನ ಬೇಗದೊಳರುಹಿರೆಮಗೆ ॥೪॥ ಇಂದಿನೀ ವರೆಗೆ ಪಗೆ। ಯೆಂದಿರ್ದ ನರನನ್ನು ಕೊಂದಲ್ಲದಿರೆವೆನ । ಲ್ಕೆಂದ ಋಷಿವರ್ಯ ॥೫॥ ॥೧೪೧॥

ರಾಗ ಸಾಂಗತ್ಯ ರೂಪಕ ತಾಳ

ಬರಿ ಬಾಯ ಪೌರುಷದಿಂದಲೇನಹುದಿಂದು। ಪೊರೆವನಾತನ ಸಾಕ್ಷಾದ್ವಿಷ್ಣು ॥ ಧುರಿದಿ ನಿಮ್ಮನು ಕೊಲ್ಲಿಸದೆ ಬಿಡ ದಿಟವದ । ಕ್ರೂರವೆನೊಂದೆತ್ನವೀ ಕ್ಷಣದಿ ॥೧॥ ಸುರವಂದ್ಯ ದ್ರುಹಿಣನ ತಪದಿ ಮೆಚ್ಚಿಸುತಿಷ್ಟ। ವರವ ಸಂಪಾದಿಸಿ ಬಳಿಕ ಧುರದಿ ಹ್ಯೊದಾಡಲರ್ಜುನನ ಕಾಂಬೆತ್ನವ। ನರಹುವೆ ಬಿಡದೆ ಲಾಲಿಪುದು॥೨॥ ಗುರುಕುಚದಬಲೆ ಪೋಗುವಳೋರ್ವೆ ಮಾರ್ಗದೋಳರಸ ಧರ್ಮಜನ ಮಂದಿರಕೆ ॥ನರಗೆ ಮುಂದರಸಿಯಾ ಗುವಳವಳನು ತಡೆ । ಯಿರಿಪಾರ್ಥ ಬರುವನಾ ಸ್ಥಳಕೆ ॥೩॥ ಬಾರದಿರನು ದಿಟವಾಕೆ ಬೆಂಬಲಕೆಯಾ । ಧೀರನ ಕಾಣಲುಪಾಯ ॥ ಬೇರಿಲ್ಲವೆಂದು ಗಂಟಿಕ್ಕಿ ನಡೆದ ಋಷಿ । ನಾರದಾಂಕನು ಲೋಕಹಿತಕೆ ॥೪॥ ॥೧೪೫॥

ವಾರ್ಧಿಕ್ಯ

ನಾರದನ ನುಡಿ ಕೇಳ್ದು ಘೋರ ದಾನವರಂದು । ವಾರಿಜೋದ್ಭವನುಗ್ರ ತಪವ ಗೈದರು ದಿವ್ಯ ।ವಾರಿಯಂ ಮಿಂದೊಂದು ಕಾಲೂರುತತ್ಯುಗ್ರದಿಂದಿರಲು ಬಳಿಕಾ ಕ್ಷಣ॥ ಮೂರೊಂದು ಮುಖದವನು ಸುರರ ಪೊಗಳಿಕೆಯಿಂದ।ನಾರದಾಂಗೀರಸ ಸಮಸ್ತರೊಟ್ಟಿಗೆಧರೆಗೆ।ಸಾರಸಜ ಭವ ಸತ್ಯಲೋಕವೇ ಬಂದ ತೆರ ಬಂದು ದನು ಜರೊಳೆಂದನು ॥೧॥ ॥ ೧೪೬॥

ರಾಗ ಸುರುಟಿ ಏಕ ತಾಳ

ಅಸುರರು ಕೇಳಿನ್ನು । ನಿಮ್ಮ ತೇಪಸಿಗಾ ಮೆಚ್ಚಿದೆನು ॥ ಉಸುರುಸುರೇ ನೀಮ್ಮೊಸಗೆಯ ಕೇಳಿ ನಿ । ಮಿಷದೊಳಗೀವೆ ಸಂ । ತಸದೊಳಗೀ ಕ್ಷಣ ॥೧॥ ಸರಸಿಜ ಭವನೆಂದಾ । ಮಾತಿಗ । ಸುರರು ಕೈ ಮುಗಿದಂದಾ ॥ ಧರೆಯೊಳಗಿಹಪುರು । ಷರ ಕೈಯಿಂದಲಿ । ಮರಣ ಬರದ ವರ । ಕರುಣಿಸಿರೆಂದರು ॥೨॥ ಕುಜನರ ಮಾತಿಂಗೆ । ಆ ಸರ । ಸಿಜ ಭವ ನಗುತವರ್ಗೆ ॥ ಭಜಕರೆ ಕೊಟ್ಟೆನೆಂ। ದಜ ಪೋಗಲ್ಕಾ । ಭುಜ ಚಪ್ಪರಿಸುತ । ಗಜ ಬಜಿಸ್ಯೆದ್ದರು ॥೩॥ ॥೧೪೭॥

ಭಾಮಿನಿ

ಖೂಳ ಬಲ ನೂರಾರ ಕೂಡಿ ಪ್ರ ।ಮೀಳೆ ಪೋಗುವ ಮಾರ್ಗದೊಳಗಾ । ಸಾಲುಗಟ್ಟಡ್ಡವಿಸಿ ನಿಂದರು ಘೋರ ರೂಪಿನಲಿ ॥ ಕಾಳು ಮೂಳಿಯರಿರ ನಿಮಗೆ ಕೆಂ । ದೂಳಿ ಯೆನಿಪೆವೆನುತ್ತಕೆಂಗರಿ । ಗೋಲನೆಸೆಯಲ್ಕ ಬಲೆಯರು ಕಂಗಾಣದೋಡಿದರು ॥೧॥ ॥೧೫೦॥

ರಾಗ ಸೌರಾಷ್ಟ್ರ ತಾಳ ತ್ರಿವುಡೆ

ನಾರಿಯರ ಗಜಬಜವ ಕಾಣು । ತ್ತಾರು ಭಟಸುತ ರಜತಕೇತು ಮ । ಹೀ ರಮಣ ತಡೆದೆಂದನವರನು। ಧೀರತನದಿ ॥೧॥ ಸಂಗರದಿ ಕಡು ಧೀರರಿರ ಹೆಣ್ । ಹೆಂಗಸರ ಬೆಂಬೊತ್ತದಿರಿ ಸಮ । ರಾಂಗಣಕೆ ತಾನಿಹೆನು ನಿಲ್ಲಿರಿ । ಹಿಂಗದಿಲ್ಲಿ ॥೨॥ ಪೇಳುತೀಪರಿ ಖೂಳರೆಂಬಾ । ಬಾಳೆಯುಪವನಕಾಗ ಮದಗಜ । ದೋಲಗವ ತಾನಿತ್ತನಾ ನೃಪ । ಪೇಳಲೇನು ॥೩॥ ಓಡುತಿಹ ಜನಕ ಭಯಗಳ ತಾ । ನೀಡುತಲೆ ಕುಣಪಾಶನರ ಬಡಿ । ದೋಡಿಸಿದನಾ ನಿಮಿಷ ಮಾತ್ರದೊಳಾಡಲೇನು ॥೪॥ ॥೧೫೪॥

ಭಾಮಿನಿ

ರಜತಕೇತನು ಸಂಗರದೊಳಾ । ರಜನಿಚರರನ್ನಟ್ಟೆ ಕಂಡಾ । ಗಜರಿ ವೀರಾವೇಶದಲಿ ದುರ್ಮತಿಯು ನಡೆತಂದು ॥ ಭುಜವ ಚಪ್ಪರಿಸುತ್ತಲಾಯುಧ । ನಿಜ ಕರದಿ ಪಿಡಿಯುತ್ತಲಾ ಕ್ಷಣ । ಸುಜನ ಬಾಧಿತ ದೈತ್ಯ ನೃಪಗಿಂತೆಂದನಾರ್ಭಟಿಸಿ ॥೧॥ ॥೧೫೫॥

ರಾಗ ಭೈರವಿ ಮಟ್ಟೆ ತಾಳ

ರಾತ್ರಿ ಚರರನೆಲ್ಲ ಧುರದಿ । ಪೂರ್ತಿ ಗೆಲಿದೆನೆಂಬ ಗರ್ವ । ವ್ಯರ್ಥವಾಗಿ ತೋರ್ವದೆನ್ನ। ಚಿತ್ತಕೀಗಲು ॥ಭರ್ತಿ ಸತ್ವದಾತ ಧುರದೊಳಿತ್ತನಿಲ್ಲು ತನ್ನೊಳೆನುತ । ಕತ್ತಿ ಪಿಡಿದು ದನುಜ ರೋಷಾವೆತ್ತುನಿಂದನು ॥೧॥ ಖಳಕುಲಾಧಮ ಧಮ ನಿಲ್ಲು ಗಳಿಗೆಯೊಳಗೆ ನಿನ್ನ ಸತ್ವ । ತಿಳಿವೆ ತೊಲಗಬೇಡ ಯಮನ ನಿಳಯಕೀ ಕ್ಷಣ ॥ ಕಳುಹದಿರೆನು ನೋಡು ತನ್ನ । ಬಲುಹನೀ ರಣಾಗ್ರ ನಿನ್ನ । ಬಲದ ಪರಿಭವರಿತು ವ್ಯರ್ಥ । ಸಿಲುಕಿ ಸಾವೆಯ ॥೨॥ ಚದುರೆಯರನು ಕೂಡಿ ದೊಡ್ಡ । ಮದದಿ ಪೋಪೆಯಲ್ಲಿ ನಿನ್ನ । ಸದೆದು ನಾರಿ ಜನವ ಪಿಡಿದು । ಸದನಕೊಯ್ಯುತ ॥ ಮದುವೆ ಮಾಡಿಕೊಂಡು ಭೋಗ। ವಿಧಿ ವಿನೋದದಿಂದಲಿರುವೆ । ವದಕೆ ಭೂತನಾಥ ತಡೆದ । ರಿದಿರುಗೊಳ್ಳೆನು॥೩॥ ಕತ್ತೆ ನಿನಗೆ ಮದುವೆ ಮಾಳ್ಪೆ । ಮೃತ್ಯು ದೇವತೆಯನು ನಿನ್ನ । ರಕ್ತವಾಕೆ ಭೋಗಿಸುವಳು । ನಿತ್ಯದಿಂದಲಿ ॥ಪೃಥ್ವಿಭಾರ ಕಳೆದು ಸುರವಿ । ಪತ್ತ ಬಿಡಿಸಿ ಕಾವೆ ನಿಲ್ಲೆ । ನುತ್ತ ಸರಳ ಮಳೆಯ ಕರೆದ । ಧೂರ್ತ ದನುಜಗೆ ॥೪॥ ಬರುವ ಬಾಣ ತರಿದು ಪೇಳ್ದ । ನರರೆ ಪೋರ ನಿನ್ನ ಸತ್ವ । ದಿರವನರಿತೆವೀಗ ಬಿಡೆವು । ಕೊರಳ ಮುರಿಯುತ ॥ ಕರದಿ ಪಿಡಿದು ತಿನ್ನದಿರಲು ।

ಕೊರತೆದನುಜ ಕುಲಕೆ ಬಾರ । ದಿರದು ನೋಡು ಕುಂದ ನಾನು । ಪರಿಹರಿಪೆನು ॥೫॥ ಮಣ್ಣಕೂಡಿಸುವೆನು ದನುಜ ॥ ನಿನ್ನನಲ್ಲಿ ಯಮನ ಪುರದಿ । ತಿನ್ನಿಸುವರು ಗೈದ ಪಾಪ । ವನ್ನು ಬಾಯೊಳು ॥ ಇನ್ನು ಬಹಳ ಮಾಡೆ ತಡವು । ಗನ್ನಗತಕ ಕಾವಡಿಹಡೆ । ಮುನ್ನ ಬರಿಸಿಕೊಳ್ಳೆನುತ್ತ । ಕಣ್ಣ ತಿರುಹಿದ ॥೬॥ ॥೧೬೧॥

ಭಾಮಿನಿ

ಕುಮುದ ಮಿತ್ರಾನ್ವಯ ಶಿರೋಮಣಿ । ಮಮತೆಯಿಂದಲಿ ಕೇಳು ಭೂಪತಿ । ಕಮಠನೆದೆ ಬಿರಿವಂತೆ ಶರಕೋದಂಡ ಝೇಗೈಯೆ ॥ ಸುಮನಸಾಂತಕ ರೋಷದಲಿ ಕೋ । ಪಮಿತನಾಗಿಯೆ ದಿವ್ಯಶರವನು । ಕುಮತಿ ತಡೆ ನಿಲ್ಲೆನುತ ಭೂವಲ್ಲಭಗೆ ಬಿಡದೆಚ್ಚ ॥೧॥ ॥೧೬೨॥

ರಾಗ ಕಾಂಬೋದಿ ಝಂಪೆ ತಾಳ

ಎಚ್ಚ ಬಾಣವ ತರಿದು ಮಗುಳೊಂದು ಕೂರ್ಗಣೆಯ । ನೆಚ್ಚಡಾಕ್ರಮ್ಯಾದ ಕಡಿಯೆ ॥ ಕಿಚ್ಚಕಣ್ಗಳಲಿ ಸೂಸುತ್ತ ಬೇರೊಂದು ಶರ । ಬಿಚ್ಚಿ ಬಿಟ್ಟನು ಖಳಾಧಮಗೆ ॥೧॥ ಗಳಿಗೆಯೊಳಾಗಾ ಶರವ ತರಿದು ಭೂಪನ ಕಡೆಗೆ । ತಲೆ ನೆಗಹಿ ನೋಡಿ ಬೊಬ್ಬಿರಿದು ॥ ಭಳಿರೆ ಶಾಭಾಸು ಬಿಲ್ಲಾಳು ನೀನಹೆ ತಿಳಿದೆ । ಯಳುಕೆ ನಾನೆನಲೆಂದನಾಗ ॥೨॥ ಮಾಂಸಾಪಹಾರಿ ನೀನೆಷ್ಟಿದ್ದರೇನಾಯ್ತು । ಹಿಂಸೆಗೆಯ್ಯದೆ ಬಿಡೆನು ನಿನ್ನ ॥ ಕಂಸ ಮರ್ದನನ ಕೃಪೆ ತನಗಂಟು ನಿಲ್ಲೆನುತ । ಧ್ವಂಸಗೈದನು ಖಳನ ರಥವ ॥೩॥ ಬೇರೊಂದು ರಥವನೇರ್ದಂದನೆಲೆ ಶಾಭಾಸು । ಪೋರ ನಿನಗಾಧಾರನಾದ ॥ ಚೋರ ಮತ್ತವನ ಸಖ । ನರನೆಂಬ ಹುಳುವಸಂ । ಹಾರ ಗೈಯಲೆ ಕಾದಿಹೆನು ॥೪॥ ಸಗಣಕೆ ಸಹಸ್ರ ಮಧ್ಯಾಹ್ನಕ್ಕೆ ಲಯವೆಂಬು । ವಗಣಿತಾಧಮರು ನಿನ್ನಂತೆ ॥ ನಗಧರನ ದೂರಿ ಕಾಲಿಗೆ ಹಡಪವಾಗಿಹರು । ಬಗುಳಲ್ಯಾಕದ ತಿಳಿದು ಬರಿದೆ ॥೫॥ ಈ ತೆರದಿ ಬಹಳ ಮೂದಲೆಯ ಬಿರುಸಾಗಿರುವ ।ಮಾತುಗಳನಾಡುತಲೆ ಬಾಣ ॥ ಜಾತದಿಂ ಹೊಯ್ದಾಡುತಿರ್ದರದನೇನೆಂಬೆ । ಯಾತುಧಾನನ ಸತ್ವದಿರವ ॥೬॥ ಕಾತುರದೊಳಾಖೂಳ ನಾರ್ಭಟಿಸುತಾಗ ಶರ । ವ್ರಾತವೆಸೆಯಲು ನೃಪಗೆ ತಾಗಿ ॥ ಧಾತು ಹಿಂಗುತ ಕರದ ಧನುವಿಟ್ಟು ಬಿದ್ದಾನಾ । ಭೂತಳಕೆ ಮೈಮರೆಯುತಾಗ ॥೭॥ ॥೧೬೯॥

ಭಾಮಿನಿ

ಭೂಲಲನೆಗೆಡೆ ಬಿದ್ದ ನೃಪತಿಯ । ಬಾಲೆಯರು ಕಂಡಾಗ ಬಾಯ್ಬಿಡೆ । ಖೂಳ ಬಲ ನಲಿದಾಡುತಿರ್ದುದು ಶರಧಿ ಘೋಷದಲಿ ॥ ಕೋಲಗಾಯದಿ ನೊಂದು ರಾಜನು । ಬೀಳುತೇಳುತಲೆದ್ದು ಬಳಿಕಾ । ಶ್ರೀ ಲಲಾಮಗೆ ಹಲುಬಿದನು ತನ್ನಯ ಪರಾಜಯಕೆ ॥೧॥ ॥೧೭೦॥

ರಾಗ ನೀಲಾಂಬರಿ ಏಕತಾಳ

ಮೈದೋರೋಹರು । ಷದಿ ಮಧೂಸೂದನ । ತ್ರಿದಶರ ಪೂಜ್ಯ ಸುಭಾಷಣ ॥ ಪಲ್ಲ ॥

ನೀಲಾಂಗನೆ ವನ । ಮಾಲ ಶರಧಿಜಾ । ಲೋಲ ಮುಕುಂದನೆ ಬಾರೊ ॥ ಪಾಲುಗಡಲಶಯ । ಪಾಲಿಸೆನ್ನಯ। ಮೇಲೆ ಕರುಣರಸ ಬೀರೊ ॥೧॥ ಪರಮಾಪ್ತನು ನರ । ಗರಸೀಕೆಯು ಬರೆ । ಸರಣಿಯೊಳಗೆ ನಾ ಕಂಡೆನು ॥ ಅರಿಯದೆ ಧುರವೆಸ । ಗಿರೆಯಾ ತಪ್ಪಿಗೆ । ತರುಣಿಗೆ ಬೆಂಬಲ । ಬಂದೆನು ॥೨॥ ಲಲನೆಯು ಸಹಿತಾ । ನಿಲ್ಲಿಗೆ ಬರಲೀ । ಖಳರು ತಡೆಯಲಿದಿರಾದೆನು ॥ ಕಲಹದಿ ವಡಬಾ । ನಲ ನುರುಬೆಗೆ । ಬಿದ್ದೆಳ ಲತೆಯಂದದೊಳಾದೆನು ॥೩॥ ತನ್ನ ಪರಾಭವ । ವರಿತೀಖೂಳರು । ಕನ್ನೆಯರನು ಪಿಡಿದೊಯ್ವುದು ॥ ಕಣ್ಣಿನೊಳಗೆ ಕಡು ಪಾತಕ ನೃಪನಾ ।ನಿನ್ನೆಂತೈಯದ ಕಾಂಬುದು ।೪॥ಅದರಿಂದೀಕ್ಷಣ । ನಿನ್ನಯ ಪಾವನ। ಪದದರು ಶನವನ್ನೀವುದು ॥ ಮದ ಮುಖರನು ಸಂಹರಿಸುತ ನಮ್ಮನು । ಸದಮಲ ಚರಿತನೆಕಾವುದು ॥೫॥ ॥೧೭೫॥

ವಾರ್ಧಿಕ್ಯ

ಕಪಿಲಾಪ್ತಕುಲಜ ಲಾಲಿಸಿ ಕೇಳು ಭೂವರಂ । ಸುಪವಿತ್ರನಾದ ಮಣಿ ನೇತ್ರಗರ್ಣವಗೆಯ್ಯೆ । ವಿಪಿನ ಸುರಮನು ಮುನೀಶ್ವರರ ಕೇಶಾಗ್ರದೊಳು ಧರಿಸುತ್ತ ಪೊರೆವ ಹರಿಯ ॥ ಅಪರ ಬುದ್ದಿಗಳ ಯುದ್ಧದಿ ಸೋತವನ ಮೇಲೆ । ಕೃಪೆ ಸುಧೆಯ ತಳಿದು ಸಖನಾದ ಪಾರ್ಥನ ಮೊಗ । ಕ್ಕಪರಿಮಿತ ಕರುಣಿ ಸಮುದ್ರ ನೋಡುತ್ತ ಸರ್ವರು ಕೇಳ್ವ ತೆರನೆಂದನು ॥೧॥ ॥೧೭೬॥

ರಾಗ ಭೈರವಿ ಏಕತಾಳ

ಕೇಳು ಪಾರ್ಥನೆ । ನಾ । ಪೇಳುವುದನು ನೀ । ಕೇಳು ಪಾರ್ಥನೇ ॥ ಪಲ್ಲ ॥ ಕೇಳು ಪಾರ್ಥನೆನುವೆನು ಬ । ಹಾಳವಾದುದೊಂದು ಕಾರ್ಯ ॥ ಅ. ಪ. । ಪ್ರೀತಿಯ ನಿನ್ನಾಪ್ತ ರಜತ । ಕೇತು ಮಾರ್ಗದಲ್ಲಿ ಕೆಟ್ಟ॥ ಯಾತುಧಾನರೊಡನೆ ಸೆಣಸಿ । ಸೋತು ಸ್ಮರಿಪ ತನ್ನ ಪದವ ॥೧॥ ಪೋಗಿ ಕಾಯದಿರಲು ಭಕ್ತ।ರಾಗು ಹೋಗೆನ್ನದೆಂಬುದು ॥ ನೀಗಿತಲ್ಲ ಮುಂದೆಲ್ಲ ಹಾ । ಳಾಗದಿರದು ರಾಜ ಕಾರ್ಯ ॥೨॥ ಚೆಲುವ ಮಖದ ಕುದುರೆಗೋರ್ವ । ನಿಲಲಿ ರಕ್ಷೆಗಾವೆಲ್ಲರು । ಖಳರ ಯುದ್ಧಕೈದಿ ನೃಪನ। ಸಲಹಬೇಕೆಂದೆನುತೆದ್ದರು ॥ ೩॥ ॥೧೭೮॥

ರಾಗ ಮಾರವಿ ಏಕ ತಾಳ

ಇಂದಿರೆಯರಸ ಗೋ । ವಿಂದ ಬಂದನು ॥ ಪಲ್ಲ ॥ ಗರುಡವಾಹನನು । ಉರಗಶಯನನು ॥ ಕರುವನರಸಿ ಬಹ । ತುರುವಿನಂದದಿ ಬೇಗ ॥೧॥ ನಗೆಮೊಗದೊಳಗೆ। ಮಿಗುವಸತ್ ಪ್ರಭೆಗೆ॥ ಜಗ ಬೆಳಗಿಸಿ ಸರ್ವ । ಜಗದೊಡೆಯನು ತಾನು ॥೨॥ ಸರುವ ವಂದಿತನು । ನರರಂತೆ ತಾನು ॥ ನರ ನಾಟಕವ ನಟಿ । ಸಿರುವ ಶ್ರೀ ಹರಿಯು ॥೩॥ ॥೧೮೨॥

ಭಾಮಿನಿ

ಸರುವ ಜಗದಾಧಾರ ಭಕ್ತರ । ಕೊರತೆಯನು ತಾನೆಂತು ಸೈರಿಪ । ನರ ಸಹಿತಲತಿ ತ್ವರಿಯದಿಂ ಭೂವರನ ಕಾಣುತ್ತ ॥ ಕರುಣರಸವೆಂಬ ಮದ್ದು ತಳಿಯಲು । ಕರುಣಾವಾರಿಧಿ ಕೃಷ್ಣನಡಿದಾ । ವರೆಗೆ ತಲೆವಾಗುತ್ತ ನಾನಾ ತೆರದಿ ಸ್ತುತಿಸಿದನು ॥೧॥

॥೧೮೩॥

ರಾಗ ಮಧುಮಾಧವಿ ತ್ರಿವುಡೆ ತಾಳ

ಪಾಲಿಸೆನ್ನನು ಗೋವಿಂದ । ಜಯ ಜಯ ಭಕ್ತ । ಪಾಲಯ ನಿತ್ಯಾನಂದ ॥ ನೀಲ ಕಾಯ ವಿಶಾಲ ಮುನಿಪ್ರಿಯ । ಪಾಲ ಲಕ್ಷ್ಮೀಲೋಲ ಕೌಸ್ತುಭ । ಮಾಲ ಪೊಳೆವ ಕಪೋಲ ಸುವಿಮಲ । ಶ್ರೀ ಲಲಾಮನೆ ಜಯತು ಜಯ ಜಯ ॥೧॥ ಶತ ಮಖ ಸುರ ವಂದಿತ । ಗತಿ ನೀನೆಮಗೆ । ಶ್ರುತಿ ಸೂನು ಪ್ರತಿರಹಿತ ॥ ರತಿ ಪತಿಯ ಪಿತ ಸತತ ಮಮಪ್ರಿಯ । ಸತಿ ಸುತಾದ್ಯರ ಹಿತಗೊಳಿಸಿ ಕುಲ । ಲತೆಯ ಗುಡಿಯುನ್ನ ತಿಸು ಸಿತಗಳ । ನತಿ ಪ್ರಿಯದ ಸ । ನ್ನುತ ಗುಣೋದಧಿ ॥೨॥ ಇಕ್ಷು ಚಾಪನ ತಾತನೆ । ಜಯ ಜಯ ಜಯತು । ಪಕ್ಷಿವಾಹನ ದೇವನೆ ॥ ಯಕ್ಷಸುರ ಮುನಿ ಪಕ್ಷದುರ್ಜನ । ಶಿಕ್ಷಶ್ರೀ ಕಮಲಾಕ್ಷಶರಧಿಜೆ । ಲಕ್ಷ್ಮೀವಕ್ಷಧರೀಕ್ಷಿಸೆಮ್ಮನು । ರಕ್ಷಿಸೈ ಬಿಡದನು ದಿನದಿನೀ ॥೩॥ ॥೧೮೪॥

ವಾರ್ಧಿಕ್ಯ

ನರನಾಥ ಲಾಲಿಸೀ ಪರಿಯ ಸಂಸ್ತುತಿಸೆ ಶ್ರೀ ಹರಿಯು ಕರಕಮಲದೊಳು ಬಿಗಿಯಪ್ಪಿ ಪೇಳ್ದನಾ। ನರಿತೆ ನಿನ್ನ ವಿಪತ್ತ ಸೈರಿಸೊಂದರೆಗಳಿಗೆ ದುರುಳರಂಕೊಲಿಸದಿರೆನು ॥ ಅರಸನೊಳಗಿಂತೆಂದು ತರುಣಿಯರ ಗುರುತ ಶ್ರೀ। ವರ ಕೇಳಲರ್ಜುನಂ ಹಿಂದಿನಾಗಮ ವೆನಲು । ವರ ರಜತ ಕೇತುವಂ ಮೈದಡವಿ ಪಾರ್ಥನಪ್ಪುತ ಪ್ರಿಯದೊಳಿಂತೆಂದನು ॥೧॥ ॥೧೮೫॥

ರಾಗ ಭೈರವಿ ತಾಳ ಝಂಪೆ

ಪರಮ ಸಖ ನಿನ್ನ ದಿನ । ಕರ ಮೊಗವ ಕಾಣುತ್ತ । ಅರಳಿತೆನಗತಿತೋಷ । ದರಳು ಸರಸಿಜವು ॥೧॥ ಎಂದದಿಂತೆಂದನಾ । ಬಂದೆ ನಿನ್ನನು ನೋಡಲೆಂದಿಲ್ಲಿ ವರೆಗಕಟ । ನೊಂದೆ ಕಾದುತ್ತ ॥೨॥ ಅಷ್ಟೆನಲು ನುಡಿದ ನರ । ದುಷ್ಟರನು ತತ್‌ಕ್ಷಣದಿ । ಕುಟ್ಟಿ ಕೊಲ್ಲುವೆ ದೃಷ್ಟಿ । ಬಿಟ್ಟು ನೋಡದನು ॥೩॥

॥೧೮೦॥

ಭಾಮಿನಿ

ಎಂದ ಮಾತನು ಕೇಳ್ದು ದಾನವ । ನಂದು ಭುಗುಭುಗಿಲೆಂದು ಕೋಪಿಸು । ತಿಂದಿದಾ ರೈ

ಬಂದವರು ಬಡನೃಪಗೆ ಬೇಕಾಗಿ ॥ ಕೊಂದವರ ತನ್ನೊಳಗೆ ಕಾದಿದ । ಮಂದಮತಿಯನು ಪಿಡಿದು ಸಾರೀ। ವೃಂದವನು ಕೊಂಡೊಯ್ದು ಸುಖದಿಂದಾಳ್ವೆನೆಂದೆದ್ದು ॥೧॥ ॥೧೯೧॥

ರಾಗ ಭೈರವಿ ಏಕ ತಾಳ

ಎನುತೀ ಪರಿ ದಾನವರು । ಘ । ರ್ಜನೆಗೊಂಡರೆ ಬಳಿಕವರು ॥ ಅನುವರಕೆನು ತಲೆ ಬರಲು । ಕಂ । ಡನುಸಾಲ್ವನು ಖಾತಿಯೊಳು ॥೧॥ ಧಿಮ್ಮನೆ ತಾನೆದ್ದಾಗ । ಆ । ದುರ್ಮತಿಯನು ಕಂಡಾಗ ॥ ಕರ್ಮಿ ಖಳನೊಳಂದವನು । ಬಲು । ಧರ್ಮದ ನುಡಿಯುಸುರಿದನು ॥೨॥ ಕಲಿ ಪಾರ್ಥನ ವೈರದಲಿ । ನಿನ್ನ । ತಲೆಯನು ಕೊಡಬೇಡಿಲ್ಲಿ ॥ ಜಲಜಾಕ್ಷಗೆ ನಮಿಸುತ್ತ । ಪೃಥೆಯಳಸುತಗೆರಗೀಗತ್ತ ॥೩ ॥ ಖಳಕುಲದೊಳು ಸಂಜನಿಸಿನರ । ಹುಳುಗಳ ಬಲವಾಶ್ರಯ್ಸಿ ಇಳೆಯೊಳು ಬದುಕಲದೇನು । ಫಲ । ವೆಲೆಯನು ಸಾಲ್ವನೆ ನೀನು ॥೪॥ ಸರುವ ಚರಾಚರಭರಿತ। ನರ ।ಗಿರುವನು ಬೆಂಬಲವೆನುತ ॥ ಅರಿತಾ ಪಾರ್ಥನ ಬಲಕೆ । ಬಂ। ದಿರುವೆ ಕೊರತೆ ಪೇಳಿದಕೆ ॥೫॥ ಧುರದೊಳು ಮಡಿದರೆ ಸ್ವರ್ಗ । ಪುರು । ಷರಿಗದು ದೊರೆಯುವುದಗ್ಗ॥ ಮರಣಭಯಕೆ ವೈರಿಗಳ । ಸೇರಿರುವೆ ಕೊರತೆಯದು ಕೇಳ ॥೬॥ ಎಂದೀ ಪರಿಯೊಳು ನುಡಿದು । ಶರ । ವೃಂದವ ಬಿಡಲದ ತರಿದು ॥ ಒಂದಸ್ತ್ರವನನು ಸಾಲ್ವ । ತೆಗೆ । ದಂದೆಚ್ಚಡೆ ಕಡಿದನಲ ॥೭॥ ಅವನತಿ ಪೊಸ ಶರಬಿಡಲು । ತಾ । ಗಿವ ಬೀಳಲು ಭೂಮಿಯೊಳು ॥ ಭುವನ ಬಿರಿವ ಗರ್ಜನೆಯ । ಗೈ । ದವಗೆಂದನು ಹರಿತನಯ ॥೮॥ ॥೧೯೬॥

ರಾಗ ಭೈರವಿ ಅಷ್ಟತಾಳ

ಫಡ ದುರ್ಮತಿಯೆ ನೀ ಬಾರೊ । ಅನುಸಾಲ್ವನ । ಕೆಡಹಿದ ಬಲುಹತೋರೊ ॥ ಕಡಿದು ನಿನ್ನನು ಭೂತ । ಗಡಣಕಾಹುತಿಯನ್ನು । ಕೊಡುವೆ ನೋಡೆನುತೆಚ್ಚನು ॥೧॥ ಎನಲೆಂದ ದುರ್ಮತಿಯು । ಶಭಾಸುರೆ । ಘನದ ಪರಾಕ್ರಮಿಯ ॥ ನಿನಗೆ ಯುದ್ಧವು ಚೆಲ್ವ । ವನಿತೆಯರೊಳಗಲ್ಲ । ದೆನಗೆ ನೀಗಣ್ಯ ವೇನೈ ॥೨॥ ಅದ ಕೇಳ್ದು ಕಂದರ್ಪನು । ತನ್ನಯ ಚೈತ । ನ್ಯದಿ ದಿವ್ಯ ಬಾಣವನು ॥ ಹೆದೆಗಿಡುತೆಳೆದು ದೈತ್ಯನಿಗೆಸೆಯಲು ಕಾಣು । ತ್ತದನು ಖಂಡಿಸಿದನಾಗ ॥೩॥ ಹಿಂದೆ ಪಿನಾಕಿಯಿಂದ । ಕಣ್ಗಿಚ್ಚಲಿ । ಬೆಂದು ಭಸ್ಮೀಕವಾದ ॥ ಅಂದದಿ ದಿವ್ಯಾಸ್ತ್ರ । ದಿಂದ ಸುಟ್ಟುರುಹುವೆ । ನೆಂದೆಚ್ಚ ಕೂರ್ಗಣೆಯ ॥೪॥ ಎಚ್ಚ ಬಾಣವು ಬೇಗದಿ । ಪ್ರದ್ಯುಮ್ನನ । ಚುಚ್ಚಲಿ ಕಜಯ ಹೊಂದಿ ॥ ಅಚ್ಯುತ ಸಲಹೆಂದು । ಬೆಚ್ಚಿ ಬೆದರಿ ಕಣ್ । ಮುಚ್ಚಿಬಿದ್ದನು ಧರೆಗೆ ॥೫॥ ॥೨೦೪॥

ಭಾಮಿನಿ

ಕಾಮ ಮೊದಲಾದ ಖಿಳ ಬಲ ಬಲು । ತಾಮಸವಗೊಂಡಿರಲು ಕರ್ಣಿಯು । ಶ್ರೀ ಮನೋಹರಗೆರಗಿ ಪಾರ್ಥನ ನೇಮವನು ಗೊಂಡು ॥ ವಾಮದೇವನ ತೆರದಿ ಗರ್ಜಿಸಿ । ಯಾಮಿನೀಚರನನ್ನು ಕಾಣುತ್ತೇ

ಮಂದಾಥನೆ ನಿಲ್ಲೆನುತ ಶರ ವರ್ಷಗರೆದೆಂದ ॥೧॥ ॥೨೦೫॥

ರಾಗ ಬೈರವಿ   ತಾಳ ಮಟ್ಟೆ

ತನ್ನನರಿಯ ನೋಡು ಬಿಡದೆ ಕುನ್ನಿ ದಾನವ । ಕರ್ಣಸುತನು ಬಿಡೆನು ನಾನು । ನಿನ್ನ ಪ್ರಾಣವ ॥ ಉಣ್ಣಿಸುವೆನು ಬಿಸಿಯ ರಕ್ತ । ಶಾಕಿನಿಯರಿಗೆ । ಸಣ್ಣ ಹಬ್ಬ ಮಾಳ್ಪೆ ನಿಲ್ಲು । ತೊಲಗದಿದಿರಿಗೆ ॥೧॥ ಅಜಭವಾದಿ ಸುರರಗಿರರ । ಪಾಡನರಿವೆನೆ । ನಿಜಕೆ ತರುವನಲ್ಲ ನಿನ್ನ । ಶೌರ್ಯಗುಣವನೆ ॥ ವಿಜಯನೆಂಬ ಕುನ್ನಿಯನ್ನು । ತೋರು ಬೇಗದಿ । ಭುಜ ಪ್ರತಾಪದಿಂದ ಸೆಣಸಿ । ಬಿಡುವೆ ನಿಮಿಷದಿ ॥೨॥ ತನ್ನ ಜೈಸಿ ಬಳಿಕೆ ಪಾರ್ಥನನ್ನು ಕೇಳೆಲಾ । ಮುನ್ನ ಕೇಳ್ದರೊಂದು ಬಾಯ । ಹಲ್ಲನಿಡೆ ಖಳಾ ॥ ಬನ್ನ ಬಡುವ ಸುರರ್ವಿಪತ್ತ । ನೋಡು ನಿಮಿಷಕೆ । ನಿನ್ನಕೊಂದು ನಿಲಿಸದಿರೆನು । ನಿಲ್ಲು ಸಮರಕೆ ॥೩॥ ಖುಲ್ಲ ಬಿಡೆನು ಬಿಡೆನು ನಿನ್ನ । ಪೌರುಷಗಳ । ಬಲ್ಲೆಬಲ್ಲೆನೆಲ್ಲವೆಲ್ಲ । ಬಿಗಿದು ಪಿಡಿದೆಲ ॥ ಹಲ್ಲಿಗಲ್ಲು ಮುಟ್ಟಿದಂತೆ । ತಿಂದು ನಿಮಿಷಕೆ । ಇಲ್ಲಿ ನೆರೆದ ಸ್ತ್ರೀ ಜನರನು । ಪಿಡಿವೆ ಸುರತಕೆ ॥೪॥ ಬಗುಳಿ ಬಗುಳಿ ವ್ಯರ್ಥದಿಂದ ನಿನ್ನ ಹಿರಿಯರು । ನಗಧರನ್ನ ಸಖಿಗೆ ತಮ್ಮ । ಪ್ರಾಣವಿತ್ತರು ॥ ಮಗನು ಪಾರ್ಥಗೀಗ ನಾನು । ನಿನ್ನ ಜೀವವ । ತೆಗೆವ ಹಕ್ಕಿದೆನುತ ಬಿಟ್ಟ । ಬಹಳ ಬಾಣವ ॥೫॥ ಎಲ್ಲ ನಮ್ಮ ಹಿರಿಯರನ್ನು । ಕೊಂದ ನರನನು । ಕೊಲ್ಲದಿರೆನು ನೋಡು ತನ್ನ ಸತ್ವದಿರವನು ॥ ಉಳ್ಳಡವನ ತೋರು ನಿನ್ನ । ಬಿಟ್ಟು ಬಿಡುವೆನು । ಅಲ್ಲದಿರಲು ಕ್ಷಣಕೆ ರಣದಿ । ಕೊಂದು ಕಳೆವೆನು ॥೬॥ ಇಷ್ಟು ಧೀರನಾದೆಲಾ ನೀ ನೆನುತ ಕರ್ಣಜ । ಸಿಟ್ಟಿನಿಂದ ದಿವ್ಯಶರವ । ತೆಗೆದು ಖೂಳಜ ॥ ಗಿಟ್ಟಡವನು ತರಿದು ಮಗುಳೆ ದಿವ್ಯ ಬಾಣವ । ಬಿಟ್ಟು ಬಿಡಲು ತಾಗಿ ಬಿದ್ದ ಕರ್ಣಸಂಭವ ॥೭॥ ॥೨೧೨॥

ಭಾಮಿನಿ

ಜಲಜಸಖಿ ಸುತ ಭವನು ಬೀಳಲು । ತಿಳಿದು ಪಾರ್ಥನು ಮರುಗಿ ಗೋಳಿಟ್ಟಳಲಿ ಬಲುಬಗೆಯಿಂದ ಧಾರಿಣಿಗೊರಗಿ ಬಳಿಕಾಗ ॥ ಚೆಲುವ ನಿನಗಿನಿತಾಯ್ತೆ ಧರಣಿಗೆ । ಮಲಗಲೇನ್ ಕಾರಣವಿದೆನುತಲೆ । ಜಲಜನಾಭನ ಸನ್ನಿಧಿಯೊಳಳಲಿದನು ಬಾಲನಿಗೆ ॥೧॥ ॥೨೧೩॥

ರಾಗ ನೀಲಾಂಬರಿ - ರೂಪಕ ತಾಳ

ಭೀಮ ವಿಕ್ರಮಾ । ಹರಿಕುಲೋತ್ತಮಾ ॥ ಈ ವಿಮುಖನೊಳು । ಬಿದ್ದೆ ಧರೆಯೊಳು ॥೧॥ ಧೈರ್ಯ ನರನದು । ಕುಸಿದು ಪೋದುದು ॥ ಶೌರ್ಯವಂತನೆ । ಏಳು ಧಿಮ್ಮನೆ ॥೨॥ ದುಡುಕು ಬಿಲ್ಲನು । ತೊಡಗು ರಣವನು ॥ ಮಡುಹುರಿಪುವನು । ತಡೆವದ್ಯಾಕಿನ್ನು ॥೩॥ ॥೨೧೪॥

ಭಾಮಿನಿ

ರಾಯಕೇಳೀ ಪರಿಯ ದುಃಖಿಸ । ಲಾಯಶೋನಿಧಿ ಬಭ್ರುವಾಹನ । ಜೀಯನೀ ಪರಿ ಮರುಗುವರೆ

ಪಗೆಯವರು ನಗುವಂತೆ ॥ ಶ್ರೀಯರಸ ನಮಗಿರಲು ಬೆದರೆನು । ಬೀಯಗೈಯುವೆ ಖಳನಸೀ ರಾ । ಧೇಯಸುತನಿಗೆ ಕರಗದೆನಗಪ್ಪಣೆಯ ನೀಡೆಂದ ॥೧॥ ॥೨೧೭॥

ಸೀಸ ಪದ್ಯ

ಕೇಳಿದು ತನಯನ ಮಾತಂ । ತಾಳಿದ ದುಗುಡವ ಬಿಟ್ಟರ್ಜುನ ಬಳಿ ಕಾಗಂ ॥ ಬಾಲಗೆ ನೇಮವ ನೀಡಲು । ಪಾಳಯ ಸಹಿತಂ ಧುರದೊಳು ಖಳಗಿಂತೆದಂ ॥೧॥ ॥೨೧೮॥

ರಾಗ ಸೌರಾಷ್ಟ್ರ ತಾಳ ತ್ರಿವುಡೆ

ಪುಣ್ಯಜನ ಕುಲರಥಮ ನಿನ್ನನು । ಗಣ್ಯ ತರುವವನಲ್ಲ ಪಾರ್ಥಜ । ನೆನ್ನ ಕರೆವರು ಬಭ್ರುವಾಹನ। ನೆನ್ನುತೀಗ ॥೧॥ ಮೂರು ಚೂತ ಸಮಾನನಿರುವೀ । ಪೋರ ನಿ ನಗಿನಿತಾಯ್ತೆ ಪೌರುಷ । ವೀರರೇನಾದರು ವಿಚಾರಿಸಿ । ಬಾರೊ ರಣಕೆ ॥೨॥ ಕಿರಿದು ಬಲರನು ಧಾರಿಣಿಯೊಳೀ । ಗೊರಗಿಸಿದೆನೆಂದೆಂಬ ಗರ್ವವ । ನೊರೆಯ ಬೇಡೆಲೊ ತನ್ನ ಯುದ್ಧದ । ಪರಿಯ ನೋಡು ॥೩॥ ಫಲುಗುಣಿಯೆಗಳಹದಿರು ನಿನ್ನಯ । ತಲೆಯ ಮುರಿದೀ ಕ್ಷಣದಿ ಭೂತದ । ಬಳಗ-ಕುಣಿಸುವೆ ನಿಲ್ಲೆನುತ ಶರಗಳನು ಸುರಿದ ॥೪॥ ಎಚ್ಚಶರವನುಕೊಚ್ಚಿ ನರಜನು । ಕಿಚ್ಚನುಗುಳುವ ಬಾಣವನು ದೃಡ । ದಿಚ್ಛೆಯೊಳು ಬಿಡೆ ಖಳನು ಬಿದ್ದನು। ಬೆಚ್ಚಿಧರೆಗೆ ॥೫॥ ಏಳುತಲೆ ಬಲು ರೋಷದೊಳಗೆ ಕ । ರಾಳ ಶಕ್ತಿಯ ಬಿಡಲು ವಿಜಯಜ । ಕಾಳಗದಿ ಸೋತಿಳೆಯೊಳ್ ಮಲಗಿದ । ಪೇಳಲೇನು ॥೬॥ ಮಣಿಪುರಾಧಿಪ ಬೀಳೆ ಕುಂತೀ । ತನುಜನತಿ ಚಿಂತಾ ಸಮುದ್ರದಿ । ಮುಣುಗಿ ಹಲವಂಗದಲಿ ಮರುಗಿದ । ತನಯನಿಂಗೆ ॥೭॥ ॥೨೨೫॥

ರಾಗ ನೀಲಾಂಬರಿ - ಏಕ ತಾಳ

ಕಂದ ಎಮ್ಮಯ ವಂಶದ । ತಿಲಕಪೂರ್ಣ । ಚಂದ್ರ ತನ್ನಯ ಮೋಹದ ॥ ಕಂದರ್ಪರೂಪನಿಗೆ। ಈಗೇನು ಮುನಿಸಿ । ನ್ನೊಂದು ಮಾತಾಡೆನಗೆ ॥೧॥ ಅತಿ ವೀರ ನಾನು ಜಗದಿ । ಹಿಂದಿಲಿ ತನ್ನ । ಹತಿಸಿದೆಯಲ್ಲ ಧುರದಿ ॥ ಪೃಥಿವಿಯೊಳದರಿಂದಲಿ । ನಿನ್ನ ಯಕೀರ್ತಿ । ಲತೆಗುಡಿ ಪರ್ಬಿತಲ್ಯಲ್ಲಿ ॥೨॥ ಇಂತಾ ಬಿಲ್ಲಾಳ್ದನಿಗೆ । ಯುದ್ಧದಿ ಸೋಲ । ಬಂತೆ ಈ ರೀತಿಯೊಳಗೆ ॥ ಅಂತಕಾತ್ಮಜನ ಯಾಗ । ನಿಷ್ಫಲವಾಯ್ತೆ । ಇಂತಾಗಲೆಮ್ಮ ಯೋಗ ॥೩॥ ॥೨೨೮॥

ಭಾಮಿನಿ

ರಾಯ ಕೇಳೀ ಪರಿಯೊಳಗೆ ಕೌಂತೇಯ ನಾನಾ ಪರಿಯ ದುಃಖಿಸಲಾಯಚಾರನು ಮದ್ಯಪಾನವ ಮಾಡಿ ಮದದಿಂದ ॥ ಬಾಯ ಪೌರುಷದಿಂದಲಾ ನಾರಾಯಣನ ಸಖ ನರನ ನೋಡುತ । ಗಾಯ ಪಡೆದಿಹ ಸೂಕರನ ತೆರನಂತೆ ಪೇಳಿದನು ॥೧॥ ॥೨೨೯।

ರಾಗ ಸೌರಾಷ್ಟ್ರ ತಾಳ ತ್ರಿವುಡೆ

ಭಳಿರೆ ರಣಕಂಠೀರ ಯದ್ಧ ದೊಳಳುವೆ ಯಾತಕೆ ಪೆಣ್ಗಳಂದದಿ । ಕೊಳುಗುಳಕ್ಕಿದಿರಾಗು ಸತ್ವದ। ನೆಲೆಯದೋರು ॥೧॥ ತನ್ನ ಪೂರ್ವಜರಾದ ರಾಕ್ಷಸ । ರನ್ನು ನೀನೇ ಕೊಂದು ಕಳೆದುದ । ಕಿನ್ನು ನಾ ಕಿರಿಯವನು ತರಿಯದೆ ॥ ನಿನ್ನನಿರೆನು ॥೨॥ ಪೂರ್ಣಸಖನಾಗಿರುವ ನಿನ್ನಸು । ಪರ್ಣವಾಹನನನ್ನು ಬೆಂಬಲ। ವನ್ನು ಮಾಡಿಕೊ ವಾಜಿ ನಡೆಸಲಿ । ತನ್ನ ಧುರಕೆ ॥೩॥ ಹಿರಿಯರಳಿದಿಹ ದುಃಖವಹ್ನಿಯ ।ದುರುಳ ನಿನ್ನಯ ನೆತ್ತರವ ತೆಗೆ । ದೆರೆದು ನಂದಿಪೆ ನಿಲ್ಲೆ ನುತ ಪ । ಲ್ಮೊರೆದನಾಗ ॥೪॥ ॥೨೩॥

ವಾರ್ಧಿಕ್ಯ

ಫಲು ಗುಣನು ಖಳನ ಮೂದಲೆಯ ಕೇಳುತ್ತಲಾ । ಜಲಧಿ ಮಗುಚುವ ಘೋಷದಂತಬ್ಬರದಿ ಪಾದ । ಗಳ ಧರಣಿಗಪ್ಪಳಿಸುತೆಲೆಲೆ ಪಾಪಿಯೆ ದುರಾಚಾರಿ ನಿಲ್ಲೆನುತಲಾಗ ॥ ಪ್ರಳಯ ಭೈರವನಂತೆ ಹೂಂಕೃತಿಯ ದೋರಿ ಬಿಲ್ಗೊಳುತಾಗ ಶರ ಪಿಡಿದು ರಥವೇರ್ದು ದ್ವಯ ಕಣ್ಗ।ಳೊಳಗೆ ಕಿಡಿ ಸೂಸಿ ಕೊನೆ ಮೀಸೆಯಲುಗಿಸುತ ಪಲ್ಗಡಿಯುತ್ತಲಿಂತೆಂದನು ॥೧॥ ॥೨೪॥

ರಾಗ ಕಾಂಬೋಧಿ ಝಂಪೆ ತಾಳ

ಮುಂದಲೆಯ ಮೇಲೆ ಕೈ ಮಾಡುವೆಯ ತನ್ನನ್ಯಾ । ರೆಂದು ಬಲ್ಲೆಯ ದುರಾಚಾರ ॥ ಸೈಂಧವಾದ್ಯ ಖಳ ಮಹ ದ್ರೋಣ ಕರ್ಣಾದ್ಯರನು । ಕೊಂದಾತ ತಿಳಿದು ಮಾತಾಡು ॥೧॥ ತಾಯಿಗೋಸುಗ ಹಿಂದೆ ದೇವ ಲೋಕದ ದೊಡ್ಡ । ರಾಯನಾನೆಯ ತಂದುದರಿಯಾ ॥ ಮಾಯಕದಿ ಬಂದ ಹರನೊಳು ಸೆಣಸಿ ಪಾಶುಪತ। ಸಾಯಕವ ಪಡೆದಾತ ನೋಡಾ ॥೨॥ ಗಯನ ನೆವದಲಿ ಕೃಷ್ಣ । ತನ್ನೊಡನೆ ಕಾದಾಡಿ । ಜಯವಾಗ ದಿರಲು ಸರ್ವದಲಿ ॥ ಮಯನಾದ ಹರಿಯು ಪುನ । ರಪಿಯಾತನನು ಕೊಟ್ಟ ।ಭಯವ್ಯಾರದಿನ್ನು ಕಾದುವರೆ ॥೩॥ ಹಿಂದೆ ನಿನ್ನಯ್ಯಜ್ಜ, ಮುತ್ತಜ್ಜರನು ಕಾದಿ । ಕೊಂದೆ ನೀನದನರಿತು ಧುರಕೆ ॥ ಬಂದು ನೊಣ ದೀಪ ಹ। ಣ್ಣೆಂದು ಬಿದ್ದಂತೆ ಮದ । ದಿಂದ ಸಾಯುವೆ ಸಾರ್ದೆ ಬೇಡ ॥೪॥ ಮೂರು ಲೋಕದ ಗಂಡನೆಂಬ ಪೆಸರೆನಗೆ ಬೇ।ರ್ಯಾರು ಹಂಗಿಲ್ಲಹರಿ ಹೊರತು ॥ಚೋರ ನಿನಗೀಗ ಬಂದಿದೆ ಕಾಲ ಬಿಡೆನು ಯಮ । ನೂರ ಪೊಗಿಸುವೆನೆನಲ್ಕೆಂದ ॥೫॥ ॥೨೫॥

ರಾಗ ಮಾರವಿ ಏಕ ತಾಳ

ತನ್ನಗ್ಗಳಿಕೆಯ ತಾಸೆನ್ನುವ ಹುಲು । ಕುನ್ನಿ ಬಗುಳಲೇನು ॥ಕರ್ಣಾದ್ಯರ ಕೊಂ । ದಂದವಿದಲ್ಲವು ನಿನ್ನ ತರಿಯದಿರೆನು ॥೧॥ ನಿನ್ನ ಹಿರಿಯ ಖಳರೀ ಪರಿಯೊಂದೊಂ।ದನ್ನು ನುಡಿದು ಮೃತ್ಯು ॥ ವನ್ನು ಪಿಡಿದರಾ ಗತಿ ನಿನಗಹುದೀ । ನಿನ್ನೇನೀ ಹೊತ್ತು ॥ ೨॥ಹೆಣ್ಣುಗಳಿಹ ಮನೆ ಮನೆ ಪೊಕ್ಕಾಪಾ । ಲ್ಬೆಣ್ಣೆಯ ಕದ್ದುಂಬ ॥ ಅನ್ಯಾಯದ ಹರಿ ಬಲವೆ ನಿನಗೆ ತೋ । ರೆನ್ನೊಳಗದ ಕಾಂಬ ॥೩॥ ಸರುವ ಚರಾಚರ

ಭರಿತನಲ್ಲದೆ ಬೇರಿರುವುದೆ ಬಲ ತನ್ನ । ದರಿತುಕೊಹರಿ ಹಳಿವಿನ ನಾಲಿಗೆ ಘರ । ಘರನೆ ಕೊಯ್ಪೆ ಮುನ್ನ ॥೪॥ ನಾಲಿಗೆಯನು ಕೊಯ್ದಿಕ್ಕುವ ಬರಿ ಹುಲು । ತೋಳಗಡಿವೆನೆನುತ ॥ ಕೋಲಿನ ಮಳೆ ಸುರಿದನು ನರನಂಗಕೆ । ತಾಳಿಕೊ ನೋಡೆನುತೆ॥೫॥ ॥೨೪೪॥

ಭಾಮಿನಿ

ಬಿಟ್ಟ ಶರವನು ತರಿದು ಮಗಳೊಂ । ದಿಟ್ಟಡಾ ಕಣೆ ಖಳ ತರಿಯೆ ನರ । ಸುಟ್ಟು ಬಿಡುವೆನು ದಾನವರನೆಂದಂಬ ಗರೆಯಲ್ಕೆ ॥ ಕುಟ್ಟಿಯದ ದುರ್ಮತಿಯು ಕೂರ್ಗಣೆ । ತೊಟ್ಟೆಸೆಯಲರ್ಜುನಗೆ ತಾಗಲು । ಸೃಷ್ಟಿಯಲಿ ಮೈಮರೆದು ರೌದ್ರಾಕಾರದೊಳಗೆದ್ದ ।೧॥ ॥೨೪೫॥

ವಾರ್ಧಿಕ್ಯ

ಪ್ರಳಯ ಕಾಲದ ಶಿವನೊ ಮೃತ್ಯು ಸ್ವರೂಪನೋ । ಕೊಳುಗುಳದ ನರ ಹರಿಯೊ ಗಾಯದ ವರಾಹನೋ । ತಿಳಿಯೆ ಕೈ ಕಚ್ಚಿಧರೆಗಪ್ಪಳಿಸಿ ಗಾಂಡೀವಮಂ ನೆಗೆಹಿ ಝೇಗೈಯಲು ॥ ಇಳೆಯ ಜಜ್ಝರಿತವಾದಂತೆ ಜಲಧಿಗಳೇಳು । ಚಲಿಸುತ್ತ ಮಗುಚುವಂತಾಯ್ತು ನರನಾರ್ಭಟೆಗೆ । ಖಳನ ಕಣ್ತೆರುಹಿ ನೋಡುತ್ತ ಮುಂದ್ವರಿಯುತ್ತಲತಿರೌದ್ರದಿಂದೆಂದನು ॥೧॥ ॥೨೪೬॥

ರಾಗ ಶಂಕರಾಭರಣ ಮಟ್ಟೆ ತಾಳ

ಶುಕ್ರ ಶಿಷ್ಯನಹುದೊ ನಿನ್ನ । ವಿಕ್ರಮಕ್ಕೆ ಯಾವ ದೊಡ್ಡ । ಶಕ್ರಗಿಕ್ರರಲ್ಲ ಪಾಡು । ವಕ್ರಮತಿ ಖಳ॥ ಈ ಕ್ರಮಗಳ ನೋಡು ಶರದ । ಚುರ್ಕಿನಿಂದ ಬಿಡದೆ ಪ್ರಾಣ । ವರ್ಕಜಾತಗೀವೆ ನಾ ಕು । ತರ್ಕ ನಿಲ್ಲೆಲಾ ॥೧॥ ಪಾಂಡುಪುತ್ರ ಕೇಳು ನಿನ್ನ । ತುಂಡು ತುಂಡು ಸಿಗಿದು ಮಾಂಸ । ಖಂಡ ಖಂಡವನ್ನು ದಿವ್ಯ । ಕೆಂಡದಿಂದಲಿ ॥ ಸೆಂಡಿಗೆಯನು ಕಾಸಿದಂತೆ । ಹಿಂಡು ಬಳಗವೆಲ್ಲ ಕೂಡಿ । ಕೊಂಡು ಕಾಸಿ ತಿಂಬೆ ಬಿಡೆನು। ಭಂಡ ನಿಲ್ಲೆಲಾ ॥೨॥ ದನುಜ ನಿನ್ನ ಕರ್ಮಫಲವ । ನುಣಿಸಿ ಬಿಡುವೆ ನಿಮಿಷದಲ್ಲಿ । ಯುಣಲು ಬರಲಿ ನಿನ್ನ ಬಂಧು । ಜನರು ಬೇಗದಿ ॥ ದಿನಪಜಾತನಲ್ಲಿ ಭೋಜನದ ಶಾಲೆಯಾಯ್ತು ನಿನಗೆ । ಕಣೆಯ ಮುಖದಿ ದಾರಿಗೊಟ್ಟು । ಕ್ಷಣದಿ ಕಳುಹುವೆ ॥೩॥ ಬಿಡದೆ ಬಹಳ ಮೂದಲೆಗಳ । ನುಡಿದು ಮತ್ತು ಕಾದುತಿರಲು। ಕಡು ಕರಾಳ ಶಕ್ತಿಯನ್ನು । ಬಿಡಲು ಪಾರ್ಥನ ॥ ಪೊಡವಿಗೊರಗಿಸಿತ್ತು ಬಾಣ । ಜಡಜ ಭವನ ವರದ ಬಲದಿ । ನಡೆದುದಲ್ಲದುಂಟೆ ವಿಜಯ । ನೊಡನೆ ನಿಲುವರು ॥೪॥ ಶ್ರೇಷ್ಠನರನು ಮಲಗೆ ನೋಡಿ । ಸೃಷ್ಟಿಗೊಡೆಯ ಕಾರ್ಯವೆಲ್ಲ । ಕೆಟ್ಟುದೆಂದು ಚಕ್ರ ಪಿಡಿದು । ಸಿಟ್ಟಿನಿಂದಲಿ ॥ ದುಷ್ಟನನ್ನು ಬಿಡದೆ ಬೇಗ । ಸುಟ್ಟು ಬಿಡುವೆನೆಂದು ನಿಲ್ಲ।ಲಷ್ಟರೊಳಗೆ ನುಡಿದುದೊಂದು । ಗುಟ್ಟ ಕೇಳೆಲಾ ॥೫॥ ॥೨೫೧॥

ವಾರ್ಧಿಕ್ಯ

ನೃಪ ರಜತಕೇತು ಸ್ಮರಿಸಲು ತಿಳಿದ ಹರಿಯು ಬಳಿ । ಕಪರ ಮತಿಗಳವರವನರಿಯನೇ ನರನಾಟ।

ಕಪರಾಧವೇನು ಚಕ್ರವ ಪಿಡಿದು ನಿಲ್ಲಲಾ ವೇಳಯದೊಳಂಬರದಲಿ ॥ ಸುಪವಿತ್ರ ಕೇಳು ಧರೆಯೊಳಗುಳ್ಳ ಪುರುಷರೊಳ । ಗಪಕಾರಿಗಳು ಸಾಯದಂತೆ ತಪದಿಂದ ಜನ । ಕೃಪೆ ಪಡೆದು ವರವ ಕೇಳ್ವಿಹರೆನಲು ಹರಿಯಾ ಪ್ರಮೀಳೆಯೊಳು ಬಳಿಕೆಂದನು ॥೧॥ ॥೭೫೨॥

ರಾಗ ಸಾಂಗತ್ಯ ರೂಪಕ ತಾಳ

ಕೇಳಮ್ಮ ಬಾಲೆ ಪ್ರಮೀಳೆ ಸಜ್ಜನ ಶೀಲೆ । ಕೇಳಿದೆ ನಂಬರವಚನ ॥ ಖೂಳರು ವರವ ಕೇಳಿಹರಂತೆ ಪುರುಷರ । ಕಾಳಗದಲಿ ಸಾಯದಂತೆ ॥೧॥ ಬಲವೆಲ್ಲ ಧುರದಿ ಸೋತಿಳೆಗೊರಗಿತು ಈದು। ರ್ಬಲರು ಸಾವರು ಹೆಂಗಸರೊಳು ॥ ಅಳುಕದೆ ನೀ ಧುರವೆಸಗವ್ವ ನಿನ್ನ ಬೆಂ।ಬಲಕೆ ನಾ ನಿಹೆನಂಜಬೇಡ॥೨॥ ಸೃಷ್ಟಿಗಾಧಾರ ನೀ ನರಿದೆನಾದರು ನೀನು । ಕೊಟ್ಟಪ್ಪಣೆಯ ಮಿರಲ್ಯಾವ ॥ ಶ್ರೇಷ್ಠರಿಹರು ದಾನವರ ಕೊಲ್ವೆ ನೀ ದಯ । ವಿಟ್ಟಪ್ಪಣೆಯ ಪಾಲಿಸೆನಗೆ ॥೩॥ ತಂಗಿ ಪೋಗವ್ವ ರಾಕ್ಷಸರನಿಂದಿನ ಯುದ್ಧ । ರಂಗದಿಕೊಂದು ಜಯವೆಂಬ ॥ ಅಂಗನೆಯನು ನಿನ್ನರಮಣಗೆ ನೀಡೆನ । ಲಂಗ ಜ ಪಿತನಿಗೊಂದಿಸುತ ॥೪॥ ಪೊಂದೇರನೇರ್ದು ಜಟ್ಟಿಯ ಕಟ್ಟಿ ಶರದ ಮ । ತ್ತೊಂದು ಬತ್ತಳಿಕೆಯ ಧರಿಸಿ ॥ ಬಂದು ನಿಂದಳು ನಿಶಿಚರ ಕಾಡಿಗಗ್ನಿಯೊ।ಲಿಂದಿರೇಶನ ಕರುಣದಲಿ ॥೫॥ ॥೭೫೮॥

ಭಾಮಿನಿ

ಧಾರುಣೀ ಪತಿ ಕೇಳು ಬಳಿಕಾ । ನಾರಿ ಧುರಕೊದಗಲ್ಕೆಯಾ ನಿಶಿ । ಚಾರನತಿ ಗರುವದಲಿ ಸಮ್ಮುಖ ಕೈದಿ ನೋಡುತ್ತ ಮಾರನರ ಗಿಣೆಯೋವಿಚಾರಿಸ । ಲ್ಯಾರಿವಳು ಒರೆಯಲ್ಕೆ ಯುದ್ಧಿ ವಿ । ಕಾರಿ ಕಾಣಲು ಸ್ತ್ರೀಯೆನುತ ಲಿಂತೆಂದನವಳೊಡನೆ ॥೧॥ ॥೭೫೯॥

ರಾಗ ನವರೋಜು ಏಕ ತಾಳ

ಬಂದುದು ಕಾರಣವೇನೇ । ಪೂರ್ಣೆಂದಿರಾನನೆ ನೀನೆ ॥ ಚೆಂದವಾಯಿತು ಬಾ । ರಿಂದು ಮಾತುಗಳಾಡು । ತೊಂದಾಗಿರುವೆಂ । ದೆಂದಿಗು ಸೌಖ್ಯದಿ ॥೧॥ ಮಾರನ ಯುದ್ಧದಿ ಬಿಡೆನು । ಬಲು । ಧೀರನೆಂದೆನಿಸುವೆನು ॥ ದೋರು ಕುಚವ ಕ । ಯ್ಯಾರೆ ಬಿಗಿವೆ ವರ । ಮಾರನುಪದ್ರಕೆ । ತೋರೊಂದೌಷಧಿ ॥೨॥ ಸುರತ ಕಲಾಪವ ನಡೆಸಿ । ಮನ । ಹರುಷದೋರಿವೆ ವೆರಸಿ ॥ ಇರಿವನು ಸ್ಮರನವ । ದುರುಳಾನು ಬಾರೆಂ । ದೊರೆಯಲು ಕಣ್ಣಡಿ । ಸುರಿಸುತಿಂತೆಂದಳು ॥ ೩॥ ॥೭೬೦॥

ರಾಗ ಸೌರಾಷ್ಟ್ರ ತಾಳ ತ್ರಿವುಡೆ

ಪೇಳು ಪೇಳಿನ್ನೊಮ್ಮೆ ಕೇಳುವೆ । ಸೂಳೆ ನಾನೆಂದೆಣಿಸದಿರು ಯಮ । ನಾಲಯಕೆ ಕಳುಹುವೆನು ನಿನ್ನನು । ಕಾಳಗದಲಿ ॥೧॥ ಬಿದ್ದನರಗಾನರಸಿ ಖೂಳನೆ । ಬುದ್ಧಿಗಲಿಸುವೆ ನಿನಗೆ ಸ್ಮರನೌಷಧ್ಯಗೊಡಿಸುವೆನೊಂದು ಬಾಣದಿ । ಬದ್ಧವೀಗ ॥೨॥ ಪತಿಯ ಬಲವೆಲ್ಲೀಗ

ಯುದ್ಧದಿಪೃಥಿವಿಗೊರಗಿಸಿ ಬಿಟ್ಟೆನೆಂಬು । ನ್ನತದ ಗರುವವ ನಿಲಿಸದಿರೆ ನಾ । ಸತಿಯೆ ನೋಡಾ ॥೩॥ ॥೨೬೪॥

ರಾಗ ಸಾವೇರಿ ಏಕ ತಾಳ

ಎನಲು ಪೇಳ್ದನರರೆ ನೀನು । ವನಿತೆಯೆಂದು ನಿನ್ನೊಳಿಂಥ । ವಿನಯದಿಂದ ನುಡಿದೆ ಹೊರತು। ರಣಕೆ ಬೆದರೆನು ॥೧॥ ಇನಯಳ ಕೂಡಿಂಥ ಮಾತ । ನೆನ ಬೇಕಲ್ಲ ದನ್ಯಸ್ತ್ರೀಯ । ರನು ಕೇಳ್ಪೆಯಾದರೆ ನಿನ್ನ । ಕ್ಷಣದಿ ಕೊಲುವರು ॥೨॥ ಸ್ತ್ರೀಯರೊಡನೆ ಪುರುಷರ್ಬಂದು । ಕಾಯಜನೊಲುಮೆಯ ನುಡಿದ । ನ್ಯಾಯವಲ್ಲವೇನೇ ತಪ್ಪೇನಾಯಿತು ಕಾಂತೇ ॥೩॥ ಸ್ತ್ರೀಯರೆಂದಡೇನು ಪರ । ಸ್ತ್ರೀಯರು ತನ್ನಯ ಪೆತ್ತ। ತಾಯಿಗೀಡಲ್ಲವೆ ಮತ್ತೆ । ನಾಯಿ ಕೇಳಿಂದು ॥೪॥ ಬಾಯ ಮುಚ್ಚುಹುಚ್ಚುಮೂಳಿ । ನಾಯಿಯ ಸತ್ವವ ತೋರ್ಪೆ । ಸಾಯಕದೊಳೆನುತಲೆದ್ದ । ಬಾಯ ಬಿಡುತ್ತ ॥೫॥ ಆಯಿತಾಯಿತೇನಾದರು । ನೋಯುವಳಾನಲ್ಲ ಶರವ । ನೀವೆ ನಿಲ್ಲೆನುತ್ತಲೆಚ್ಚ । ಳಾಯತಾಂಬಕಿ ॥೬॥ ॥೨೭೦॥

ವಾರ್ಧಿಕ್ಯ

ಉಡುನೃಪತಿ ಕುಲಜ ಲಾಲಿಸಿ ಕೇಳು ಈಕೆ ಬಿ । ಟ್ಟಡೆ ದಿವ್ಯ ಬಾಣಮಂ ಕಡಿದು ಪುನರಪಿಯಾತ। ನೊಡನೊಂದು ಶರವೆಸೆಯ ಲಿವಳದರ ಕಡಿಯೆ ಬಳಿಕೊಂದು ಬಾಣವ ಬಿಟ್ಟನು ॥ ತಡೆದ-ದರ ಹರಿಯ ಪದ ದೃಢವಿಡಿದು ಸ್ಮರಿಸುತ್ತ ಜಡಜಲೋಚನೆ ದಿವ್ಯಶರವ ಕಿವಿವರೆಗೆಳೆದು । ಬಿಡಲಾಗ ಖಳ ಧರಣಿಗೊರಗಿ ದಂ ಕಂಡು ಮಲ್ಲಿಗೆ ಮಳೆಯ ಸುರರು ಸುರಿಯೆ ॥೧॥ ॥೨೭೧॥

ರಾಗ ಕಾಂಬೋಧಿ ಝಂಪೆ ತಾಳ

ದುರ್ಮತಿಯ ಮಡಿಯಲ್ಕೆ ಖಾತಿಯೊಳಗಾರ್ಭಟಿಸಿ । ದುರ್ಮರ್ಷಣಾಖ್ಯ ಜವನಂತೆ ॥ ಕೂರ್ಮಾವತಾರನಾಪ್ತನ ಸತಿಯ ನೋಡಿ ದು । ಷ್ಕರ್ಮಿತಾನಿಂತೆಂದನಾಗ ॥೧॥ ಯಾರೆಲೆ ದುರಾಚಾರೆ ನೋಡಲ್ಕೆ ನೀ ಚೆಲ್ವ । ನಾರಿಯಂದದಿ ಕಾಂಬೆಯೊಗ ॥ ಕಾರಣವದೇನು ತಮ್ಮನ ಕೊಂದೆ ನಿನ್ನ ಯಮ। ನೂರ ಪೊಗಿಸುವೆನೊಂದು ಶರದಿ ॥೨॥ ಸಾಯ್ಸುಪರಿ ಬೊಬ್ಬೆಯನು ಮಾಡುತ್ತಲೀ ಕೆಟ್ಟ । ನಾಯಿ ಬಿದ್ದನು ಕೋಣನಂತೆ ॥ ಆಯಿತದೆ ಗತಿ ನಿನಗೆ ನಿಲ್ಲೊಂದು ಕ್ಷಣ ತನ್ನ ಸಾಯಕವ ನೋಡೆಂದಳ ಬಲೇ ॥೩॥ ಬಾಲೆಯರು ಧುರಕೊದಗುವುದನು ನಾ ನೀ ವರೆಗೆ । ಕೇಳಿಲ್ಲ ಕಂಡೆ ಹೊಸ ಪರಿಯ ॥ ಏಳು ಲೋಕಗಳು ಬೆದರುವದೆನಗೆ ನೀನೇನು । ಕಾಳಗದೊಳೀಡೆ ತೃಣವೈಸೆ ॥೪॥ ಚಂಡ ಮುಂಡಾದಿ ಖಳ ಶುಂಭಾದ್ಯರನು ಹಿಂದೆ । ಚಂಡಿಕೆಯು ತರಿದಳದ ನರಿಯಾ ॥ ಹೆಂಡಿರಾದಡದೇನು ನಿಲ್ಲೆನುತ ನುಡಿದು ಕೋ । ದಂಡವನು ಝೇಗೈದಳಾಗ ॥೫॥ ಎಂದ ಮಾತನು ಕೇಳುತಾ ಕ್ಷಣದೊಳಾ ದುಷ್ಟ । ಮಂದಮತಿ ಬಹಳ ಖತಿವೆತ್ತು॥ ಒಂದು ಶರವೆಸೆಯಲದರನು ತರಿಯುತವಗೆ ಮ । ತ್ತೊಂದು ಬಾಣವ ಬಿಟ್ಟಳಾಗ ॥೬॥ ಆ ಶರವ ತರಿದು

ಮತ್ತೊಂದು ಬಾಣವನವಳಿ । ಗಾಸುರಾಧಮನೆಸೆಯಲದರ ॥ ಗಾಸಿ ಮಾಡುತ ದಿವ್ಯ ಮಾರ್ಗಣವ ಪಿಡಿದಳಾ । ವಾಸುದೇವನ ನೆನೆದು ಬಾಲೆ ॥೭॥ ॥೨೭೮॥

ಭಾಮಿನಿ

ಕಿಚ್ಚನುಗುಳುವ ಬಾಣವನು ತೆಗೆದೆಚ್ಚಳಾಗ ಪ್ರಮೀಳೆಯಾ ಶರ।ಕ ಚ್ಚುತಾತನ ಶಿರವ ಧರಣಿಗೆ ಕೆಡಹಿತಾ ಕ್ಷಣದಿ॥ಮೆಚ್ಚಿಸುರರಂಬರದೊಳಾಕೆಗೆ।ಯಚ್ಚ ಮಲ್ಲಿಗೆ ಮಳೆಯ ಸುರಿದರು।ಅಚ್ಯುತನಪದ ಭಕ್ತರಿಂಗೇನರಿದು ನೋಡುವರೆ ॥೧॥ ॥೨೩೭॥

ರಾಗ ಸಾಂಗತ್ಯ ರೂಪಕ ತಾಳ

ಧರಣೀಶ ಕೇಳಯ್ಯ ತರಳೆ ಪ್ರಮೀಳೆಯು।ದುರುಳರ ಕೊಂದು ಬೇಗದಲಿ ॥ ಹರಿಗೊಂದಿಸಲ್ಕೆ ಪ್ರೇಮದೊಳಪ್ಪಿ ತಕ್ಕಯ್ಸಿ । ಕರುಣಾಳು ಬಳಿಕೆಂದನಾಗ ॥೧॥ ನಿನ್ನಿಂದ ಧುರವು ಪೂರೈಸಿತಲ್ಲದೆ ಬೇರಿ । ನ್ನನ್ಯರಿ ಗರಿದು ದಾನವರ ॥ ನಿರ್ನಾಮ ಗೈದೆ ಭಾಪರರೆ ಶಾಭಾಸುರೆ । ಕನ್ನೆ ನಿನ್ನಂ ತವರ್ಯಾರು ॥೨॥ ಪಾರ್ಥನ ಸುಕೃತವಿನ್ನೇನೆಂಬೆನಾತಗೆ । ಪತ್ನಿ ನೀ ನಾಗ್ಪದರಿಂದ ॥ ಮತ್ತೆ ನಿನ್ನನು ಕೂಡಿರುವುದಕ್ಕೆ ಬಹುಜನ್ಮ। ಕೃತ್ಯದ ಫಲ ಫಲಗುಣಗೆ ॥೩॥ ಬಾಲೆ ನಿನ್ನುಪಕಾರಕಾನೊಂದನೊ ರವೆನೀ।ರೇಳು ಲೋಕದ ಸ್ತ್ರೀ ಜನಗಳು ॥ ತಾಳುತ್ತ ಸೌಖ್ಯ ದೀರ್ಘಾಯುಷ್ಯದೊಳ್ ಭೂಮಿ। ಮೇಲೆ ಬಾಳಲಿ ಎಂದಡವಳು ॥೪॥ ನಿಗಮವಂದಿತ ನಿನ್ನ ದಯದಿಂತಾಯ್ತಲ್ಲದೆ । ಪೊಗಳಲ್ಯಾಕೆನ್ನನು ಬರಿದೆ ॥ ನಿಗಮ ಪೊತ್ತವಗೆ ಬೇರರಿದೇನು ನರರಂತೆ । ಸೊಗಸನಾಡುವೆ ಯಾಕೆನ್ನೊಡನೆ ॥೫॥ ಇಂತೆಂದುದಕೆ ಮನಮೆಚ್ಚುತಾಕ್ಷಣ ಲಕ್ಷ್ಮೀಕಾಂತ ಯುದ್ಧದಿ ಬಿದ್ದ ನರನ ॥ ಮುಂತೆ ಮುಟ್ಟಲು ಪಾರ್ಥಾದಿಗಳು ಮೈಮುರಿಯುತ್ತ। ತಂತಮಗೆಚ್ಚರ್ತೆದ್ದಿರಲು ॥೬॥ ಅಂದೆದ್ದವರನಾಕೆ ನೋಡಿ ಪಾರ್ಥನಪಾದ। ದ್ವಂದ್ವ ಕೊಂದಿಸಿದಡಾಕೆಯನು॥ ಚೆಂದವಾಯಿತು ಸಾಕೇಳು ಕುಳ್ಳಿರು ಬಹಳ। ನೊಂದವಳೆಂದು ನಾನರಿತೆ ॥೭॥ ಹೋಗು ನೀ ಹಸ್ತಿನಪುರಕೆ ನಿನ್ನಿಂದ ಹಿಂ।ದಾಗಿ ಬರುವೆ ಸ್ವಲ್ಪ ದಿನದಿ ॥ ಯಾಗ ತೀರಿದ ಮೇಲೆ ವೈದಿಕೋಕ್ತದಿ ಮದುವೆ। ಯಾಗುವೆನೆಂದನರ್ಜುನನು ॥೮॥ ಬಡನಡುವಿನ ಮುದ್ದು ಮಡದಿಯೊಳೀ ಪರಿ। ನುಡಿದು ನಿಂದಿರಲತ್ತಲಾಗ॥ ನಡೆದು ದೊಂದತಿ ಚೋದಿಗದ ಸಂಗತಿಯನು ನಿ।ನ್ನೊಡನೆಂಬೆಲಾಲಿಸಿ ಕೇಳು ॥೯॥ ॥೨೮೮॥

ವಾರ್ಧಿಕ್ಯ

ತುಂಗ ಭುಜಬಲ ಮಹಾಕ್ಷಿತಿಪ ಕೇಳ್ಳೆ ಖಳರ। ತಂಗಿಯೋ ರುವಳೂರ್ಧ್ವ ಕೇಶಿಯೆಂಬಳಿಗಂತ। ರಂಗದಿಂ ಬಂದು ದಾನವರಳಿವನರುಹಿ ತೆರಳಿದನೋರ್ವನದನು ಕೇಳಿ ॥ ಸಿಂಗ ಮುರಿದೆದ್ದಂತೆ ಮೃತ್ಯು ಭೋರ್ಗರೆವಂತೆ। ಅಂಗ ಭೀಕರ ಮಹಾ ಕೋರ್ದಾಡೆ ಮಸೆಯುತಧು। ರಾಂಗಣಕೆ ಪ್ರಳಯ ಭೈರವಿಯಂತೆ ಬಂದು ಪಲ್ಲ ಡಿಯುತ್ತ ಲಿಂತೆಂದಳು ॥೧॥

ರಾಗ ಭೈರವಿ ಅಷ್ಟ ತಾಳ

ಯಾರು ಕೊಂದವರು । ಅಣ್ಣಂದ್ಯರ । ಯಾರು ಕೊಂದವರು ॥ ಯಾರು ಕೊಂದವರವರಸುರೆ ಸಂ। ಹಾರಗೈದು ರುಧಿರ ಕುಡಿದಾ । ಹಾರ ಸೌಖ್ಯದಿಂದ ಬಿಡದೇ । ನೂರು ಜನ ಕೂಡುತ್ತ ಮಾಳ್ಪೆವು ॥೧॥ ತುಂಡು ತುಂಡಿಗೆ ಕಡಿಕಡಿದು । ಉರಿ । ಗೆಂಡದ ಮ್ಯಾಲಿಟ್ಟು ಹುರಿದು ॥ ಹಿಂಡು ಬಳಗವ ಕೂಡಿ ಬಂದಾ। ಗಂಡ ಗಿಂಡಂದ್ಯರ ಸಮೇತದೊ।ಳುಂಡು ಥರ್‍ರನೆ ತೇಗು ತೆಲುವ । ಕಂಡ ಕಡೆಗೆ ಚೆಲ್ಲದಿರೆನು ॥೨॥ ಹೊಟ್ಟೆ ಭರ್‍ರನೆ ಹರಿಹರಿದು । ಎದೆ । ಗಟ್ಟವ ಗುದ್ದುತ್ತ ಬಗಿದು ॥ ಜ್ಯೇಷ್ಠರಳಿದುದಕವರ ಎಲುಕಟ । ಕಟ್ಟ ನಾಡಿಸಿ ಪಗೆಯ ತೀರ್ಚುವೆ । ಬಿಟ್ಟೆನಾದರೆ ಹೆಣ್ಣೆನಾನೀ । ಗುಟ್ಟಿರುವದ್ಯಾಂಕಿತ ಸೀರೆಯ ॥೩॥ ॥೨೯೨॥

ಭಾಮಿನಿ

ಅರರೆ ರಾಕ್ಷಸಿಯಬ್ಬರಕೆ ಮಂ।ದರ ಜರಿದು ಬೀಳ್ವಂತೆ ಸಪ್ತಕ । ಶರಧಿ ಮೇರ್ವರಿವಂತೆಯಾದುದು ಸಕಲ ಜನ ಬೆದರೆ ॥ ಪರಕೆ ಪರತರವಸ್ತು ಕೃಷ್ಣನು । ಕರೆದು ಹನುಮಂತನನು ಪೋಗೀ।ದುರುಳೆಯನು ಸಂಹರಿಸೆನಲು ಜವನಂತೆಯಡ ಹಾಯ್ದು ॥೧॥ ॥೨೯೩॥

ರಾಗ ಮಾರವಿ ತಾಳ ಏಕ

ತಟ್ಟನೆ ಧರೆಗಿಳಿದಬ್ಬರ ಕಂದಾ।ಗಷ್ಟ ದಿಕ್ಕುಗಳದುರಿ । ಮುಷ್ಟಿಯಯ ಬಲಿದು ಮಹಾರೂಪನು ತಾ। ಭ್ರಷ್ಟೆಯೊಳಿಂತುಸುರಿ ॥೧॥ ಹಿಂದು ಮುಂದರಿಯದ ಭ್ರಷ್ಟಖಳಾಧಮೆ । ಮುಂದರಿಯಲು ಬ್ಯಾಡ ॥ಒಂದೇ ಪೆಟ್ಟಿಲಿ ಯಮನಾಲಯಕೀ ।ಗಿಂದಟ್ಟುವೆ ನೋಡ ॥೨॥ ಮರದಿಂಮರ ಕುತ್ತರಿಸುವ ಹಳೆ ಮುದಿ । ತಿರುಕೋಡಗ ನಿನ್ನ ॥ ಕರುಳ ಬಗಿದು ಸರಸರನೆ ಬರುವ ನೆತ್ತರವ ಕುಡಿವೆ ಮುನ್ನ ॥೩॥ ಹೆಚ್ಚಾಡಿದೆಯಾ ದರೆ ನೀ ನೋಡಿಕೊ ಬಿಚ್ಚಿಸುವೆನು ಕರುಳ ॥ ಹುಚ್ಚು ದುರುಳೆ ನಿಲ್ಲೆನುತಲೆ ಪಿಡಿದನು। ಬಿಚ್ಚುತವಳ ಕುರುಳ ॥೪॥ ತಲೆ ಪಿಡಿಯಲು ಹನುಮಂತನ ದ್ವಯಕರ।ದೊಳಗೆ ಬಿಗಿದು ಪಿಡಿದು ॥ ಎಳೆಯ ಲು ಛೀ ತೊಲಗೆನ್ನುತಲಸುರೆಗೆ । ತುಳಿದನು ಹಾಯ್‍ಹಾಯ್ದು ॥೫॥ ಮತ್ತವಳನು ತನ್ನಯ ಬಿಗು ಬಾಲದಿ । ಸುತ್ತಿ ಶರಧಿಗಾಚೆ ॥ ಗೆತ್ತಿಟ್ಟನು ಬಂದೆರಗಿದನಾ ಹರಿ । ತೀರ್ಥ ಚರಣಕೀಚೆ ॥೬॥ ಎರಗಿದ ಹನುಮಂತನ ಮನ್ನಿಸು ತಲೆ । ನರನಧ್ವಜಕೆ ಕಳುಹಿ ॥ ಇರಲಾಕ್ಷಣ ದಲಿ ರಜತನೃಪಾಲಕ । ಹರಿನರಗಿಂತರುಹಿ ॥೭॥ ॥೩೦೦॥

ವಾರ್ಧಿಕ್ಯ

ಸರುವ ಸದ್ಗುಣಧಾಮ ನರಸಹಿತ ಕೇಳಿ ನಾ । ತೆರಳುವೆನು ಹಿಂದೆ ತನ್ನರಮನೆಗೆ ನಲ್ಮೆಗ । ಕರೆದಪ್ಪಿ ಶ್ರೀಶ ನೀಕೆಯ ಮದುವೆ ತೀರಿದನ ಕರ ಪೋಗಬೇಡ ನೀನು ॥ ತರುಣಿ ಸಹ ಹಸ್ತಿನಾ ಪುರಿಗೈದು ನಾವು ಬಲು । ಧರಣಿಪರ ಗೆಲಿದು ಬಹೆವೆಂದು ಕಳುಹಿದ ಸುದತಿ।ಸುರಧೇನು ಸಹಿತ ಬಲುತರ

ಕಪ್ಪಮಂಗೊಂಡು ಪೋದರದ ನೇನೆಂಬೆನು ॥೧॥

ರಾಗ ಕೇತಾರ ಗೌಳ ಅಷ್ಟ ತಾಳ

ಆತರುಣಿಯ ಸಹ ಕಳುಹುತ್ತಲಾ ಪರ । ಮಾತುಮ ನರ ಸಹಿತ ॥ ಸೂತಜಸುತಸಹ ನಡೆಯಿತು ಬಲ ಮೀನಕೇತನಪ್ಪಣೆಯಿಂದಲಿ ॥೧॥ ನರಮುರಾಂತಕರಿಂತು ಧುರದಿ ಮಾರ್ಮಲೆತಿಹ।ಧರಣಿಪರೆಲ್ಲರನು॥ ಭರದಿ ಗೆಲ್ಲುತ್ತ ಮುಂದೆ ಬರುತಿರೆ ವರರತ್ನ । ಗಿರಿ ಪುರವನೆ ಕಂಡರು ॥೨॥ ॥೩೦೩॥

ರಾಗ ಭೈರವಿ ಝಂಪೆ ತಾಳ

ನೋಡಿದನು ಪಾರ್ಥ ಹೊಮ್ಮಾಡಿಗೆಯ ಮಣಿಮಯದಿ । ಮಾಡಿರುವ ಗೃಹಕೆ ಸರಿ । ಜೋಡಿಲ್ಲವೆನುತ ॥೧॥ ಭೂತಳದೊಳಿಂತಿರ್ಪ । ನೂತನದ ಪುರವರವು । ತಾ ತೊಳಲಿದರು ಕಾಣೆ । ಈ ತೆರದ ನಗರ ॥೨॥ ಆರ ಪುರವರವಿದಕೆ । ಧಾರಿಣೀಶ್ವರನ್ಯಾರು । ವಾರುಹವ ಕಟ್ಟುವ ಸುಧೀರನಾಗಿಹನೊ ॥೩॥ ಕಟ್ಟಳೆಗಳೆಂತಿರ್ಪು।ದೆಷ್ಟು ಜನ ಕರಣಿಕರು।ಕಟ್ಟಾಳು ದಳಪತಿಗ।ಳೆಷ್ಟು ಜನರೆನಲು ॥೪॥ ॥೩೦೭॥

ರಾಗ ಸೌರಾಷ್ಟ್ರ ಅಷ್ಟ ತಾಳ

ಕೇಳಯ್ಯ ಪಾರ್ಥ ಈ ಪುರವನು । ಈಗ । ಆಳುವಾತನು ನೀರವಂತನು ॥ ಬಾಲಕತನದಲಿ ಇವನಯ್ಯ । ತಾನು । ಹೇಳದೆ ಹೋಗಿಹನಂತಯ್ಯ ॥೧॥ ಈತಗೆ ಹದಿನೆಂಟು ವರುಷವು । ಆಗ । ಲಾತನ ಜನನಿಗೆ ವಿರಹವು ॥ ಪ್ರೀತನಕಾಣದ ಶೋಕದಿ । ಆಗ । ಳಾತಳು ಸವತಿಯ ನೀಕದಿ ॥೨॥ ಜನನಿಯಗಲ್ದ ದಿವಸದಿಂದ । ಮಂತ್ರಿ । ಘನ ಸತ್ಯವಂತನಾದುದರಿಂದ ॥ ಜನಪಗೆ ಮುಂಜಿ ಮದುವೆಯನು । ಮಾಡಿ। ಜನಪತಿತ್ವದಿ ನಿಲ್ಲಿಸಿರುವನು ॥೩॥ ಸತ್ಯಸುಶೀಲನೆಂಬಾತನು । ಮಂತ್ರಿ । ಯುತ್ತಮನೆಲ್ಲ ಸುಪ್ರೀತನು ॥ ಮತ್ತೆ ಕೇಳೈ ಶತ್ರು ಭಂಗನು । ಮಂತ್ರಿ । ಪುತ್ರಿಯ ಗಂಡ ದಳೇಶನು ॥೪॥ ಗುರು ಪಿತೃ ಮಾತೃಗಳೆನುವಂಥ। ದೆಲ್ಲ । ವರ ಮಂತ್ರಿಯೆಂಬುದ ಭೂನಾಥ ॥ ನೆರೆನಂಬಿ ಸರ್ವವು ಹರಿಯೆಂದು । ಭೂಪ । ನಿರತ ಸ್ತುತಿಸೆ ನೆಲಸಿಹ ಬಂದು ॥೫॥ ॥೩೧೨॥

ಭಾಮಿನಿ

ಈ ತೆರದ ವಿಭವದಲಿ ವರ್ತಿಪ । ನಾಥನಾದುದರಿಂದ ನಿನ್ನಯ । ಪೂತ ಕುದುರೆಯ ಕಟ್ಟಿ ಕಾದದೆ ಬಿಡುವ ಭಟನಲ್ಲ ॥ ನೀತಿಯುತ ಬಲವಂತ ನಿವನನು । ಆತು ರಣದಲಿ ಗೆಲುವ ಸುಭಟರ । ಮಾತೆ ಯಾವಳೊ ಎನಲು ಫಲುಗುಣ ಗರ್ಜಿಸುತಲೆಂದ ॥೧॥ ॥೩೧೩॥

ರಾಗ ಭೈರವಿ ಏಕ ತಾಳ

ಮನ್ನೆಯರೆಲ್ಲರು ಕೇಳಿ ॥ ಈ । ಕುನ್ನಿಯ ಪೊಗಳದಿರೇಳೀ ॥ ಪನ್ನಗ ಭೂಷಣನಲ್ಲ । ಕಿಡಿ । ಗಣ್ಣು

ಇವಗೆ ಪಣೆಗಿಲ್ಲ ॥೧॥ ಈತನು ಹರಿಭಕ್ತಗಡ । ಸಲೆ । ಭೂತದಯಾತ್ಮಕನು ಗಡ ॥ ಈತನ ಪುರರಕ್ಷಣೆಗೆ। ಪರ । ಮಾತುಮಗದೆಯಂತಿ ವಗೆ ॥೨॥ ಒರೆಯಿತ್ತರೆ ಅವಗೇನು । ಕಡಿ । ದೊರಸುವ ಖಡ್ಗವ ತಾನು ॥ ಹರಿ ನಮಗೊಶವಾಗಿ ಹನು । ಬಡ । ಧರಣಿಪನಿಂದಹುದೇನು ॥೩॥ ಗೋತ್ರಾರಿಯ ಸುತನೆನಿಸಿ । ಮಿಗೆ। ಶತ್ರುಗಳೆಲ್ಲರ ಜೈಸಿ ॥ ಪೃಥ್ವಿಪಗಂಜಲಿಕುಂಟೆ । ಬಿಡಿ । ರತ್ತತುರಗವ ನಿಘಂಟೆ ॥೪॥ ॥೨೧೭॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಹುರಿಕಟಿಸಿ ಚಾರಕರು ಯಜ್ಞದ । ತುರಗವನು ವರರತ್ನಗಿರಿ ಪುರ। ವರದ ಬಾಹ್ಯೋಪವನಕೆಬಿಟ್ಟರು। ಭರದೊಳಾಗ ॥೧॥ ಪೂತು ಬೆಳದುಪವನಕೆ ಹಯ ಬಂ।ದಾತಿರೇಕದಿ ತೃಣಗಿಡಂಗಳ । ಘೂತಿಗೊಳಿಸಲು ಕಂಡರಾ ನೃಪ । ದೂತರುಗಳು ॥೨॥ ಎತ್ತಣೆಂದ್ಯೆ ತಂದುದೀ ಹಯ । ತುತ್ತುಗೊಂಡುದು ರಾಯನು ಪವನ। ಪತ್ತೆ ಪೇಳ್ವೆವೆನುತ್ತ ಬಂದರು । ಮತ್ತೆ ಭರದಿ ॥೩॥ ॥೩೬೦॥

ಭಾಮಿನಿ

ಎಲೆ ಧರಾಧಿಪ ಲಾಲಿಸಿತ್ತಲು । ಇಳೆಯ ಪತಿ ತಾ ನೀರವಂತನು । ಬಲುತರದ ವಿಭವದೊಳಗೊಡ್ಡೋಲಗದಿ ಕುಳಿತಿರಲು ॥ ಬಳಲುತೇಳುತ ಚರರು ಬಂದಾ । ಚೆಲುವ ತರಳಗೆ ನಮಿಸಿಯು-ಪವನ । ದೊಳಗೆ ಹಾನಿಯದಾದುದೆನೆ ವಿವರಿಸಿರಿ ತನಗೆಂದ ॥೧॥ ॥೩೨೧॥

ರಾಗ ಮುಖಾರಿ ಏಕ ತಾಳ

ಲಾಲಿಸು ನೀರವಂತ । ಸದ್ಗುಣವಂತ । ಲಾಲಿಸು ನೀರವಂತ ॥ ಲಾಲಿಸೆಮ್ಮಯ ನುಡಿ । ಜಾಲವಲ್ಲಿದು ರಿಪು । ದಾಳಿ ಇಟ್ಟಿಹರಿಂದು । ಕೇಳು ನೀ ಗುಣಸಿಂಧು ॥ ೧॥ ಪಂಚವರ್ಣದ ಕುದುರಿ । ಶೋಭಿಪುದೊಂದು । ಮಿಂಚಿನ ತೆರದಿ ತೋರಿ ॥ ಪಂಚಬಾಣನ ಮೈಯ । ವಂಚಿಪ ಭಟಸೈನ್ಯ । ನಾಂ ಚಲಿಸದೆ ಬಂದು । ವಂಚಿಸಿದರು ವನ ॥೨॥ ಭಾಳದೊಳಗೆ ಲೇಖನ । ಕಟ್ಟಿಹುದೊಂದು । ಹೇಳಲೇನದರ ಮುನ್ನ ॥ ಪೇಳಲರಿದು ಹಯ । ದೂಳಿಗವನು ಕಟ್ಟಾಳು ನೀನಾದರೆ । ಏಳೆನುತೆರಗಿದ ॥೩॥ ॥೩೨೪॥

ರಾಗ ಭೈರವಿ ಅಷ್ಟ ತಾಳ

ಚರರೆಂದ ನುಡಿ ಕೇಳುತ । ಭೂಪನು ತನ್ನ । ಕಿರಿ ಮೀಸೆ ಹುರಿ ಮಾಡುತ್ತ ॥ ಅರರೆ ಇದೇನು ನಮ್ಮಲ್ಲಿ-ಗೊಬ್ಬರ ಹಯ । ಬರಲಿಲ್ಲ ವೆಂದೆನುತ ॥೧॥ ದೊಪ್ಪನೆ ಪೀಠದಿಂದ । ಹಾರಿದು ಧರೆ।ಗಪ್ಪಳಿಸಿದನು ವಂದ ॥ ಅಪ್ಪನಲ್ಲೆಮ ಗವ ನಶ್ವವ ಬಿಡದಿ ರೆಂ । ದಪ್ಪಣೆಯನು ಕೊಡುತ ॥೨॥ ಕ್ಷತ್ರಿಯರುದರದಲಿ। ಪುಟ್ಟಿದ ಮೇಲೆ । ಸುತ್ರಾಮ ಸುತನಾಗಲಿ ॥ ಧಾತ್ರಿಗೆ ಬಂದು ಸೇರಿದ ಹಯ ಬಿಟ್ಟರೆ। ಪುತ್ರನೆನ್ನರೆ ಪಿತಗೆ ॥೩॥ ಬಾರಯ್ಯ ಮಂತ್ರಿರಾಯ । ಈ ತುರಗವಿ । ದಾರದೆಂದರಿತು ಪ್ರಿಯ ॥ ಚಾರು ಸಂಗತಿಯ

ವಿಚಾರಿಸಬೇಕು ನೀ । ಭೋರನೆ ಪತ್ರಿಕೆಯ ॥೪॥ ವಾಚಿಸಿ ಹೇಳಬೇಕು । ಮನ್ಮನಸಿಗೆ । ಗೋಚರಿಸಿದರೆ ಸಾಕು॥ ಆ ಚದುರರು ಬರೆದೊಕ್ಕಣೆಗಳನೆಲ್ಲ । ನಾಚದೆ ಓದೆಂದನು ॥೫॥ ॥೩೨೯॥

ಭಾಮಿನಿ

ಹಯದ ಭಾಳದ ಲಿಖಿತ ತಾನೇ । ಧ್ವಯರಹಿತ ಬಿಚ್ಚಿದನು ಮಂತ್ರಿಯ । ಧ್ವಯ ಕರಾಗ್ರಕೆ ಕೊಡಲು ನೆರೆದ ಸಭಾಗ್ರಮಧ್ಯದಲಿ ॥ ದ್ವಯರಹಿತನಂಕಿತದ ಮುದ್ರೆಯ । ದ್ವಯನ ಮಾಡಿದು ರಾಜಸಭೆ ಸಂ।ಚಯ ಕೆ ಕೇಳುವ ತೆರದಿ ಓದಿದನಾ ಮಹಾಲಿಖಿತ ॥೧॥ ॥೩೩೦॥

ರಾಗ ಕಾಂಬೋದಿ ಝಂಪೆ ತಾಳ

ಚಂದ್ರವಂಶಶಲಲಾಮನೆನಿಪ ಗಜಪುರದರಸ । ಇಂದಿರೇಶನ ಪಾದ ಕಮಲ ॥ ಹೊಂದಿ ಸುಖದಿಂದಲಿಹ ಧರ್ಮಸುತ ಕೌರವರ । ಕೊಂದ ಘುವ ಕಳೆಯಲೆಂದೆನುತ ॥೧॥ ಮುನಿಪ ವೇದವ್ಯಾಸರೆಂದ ರನುಮತಿಯಿಂದ । ವಿನುತ ಹಯಮೇಧವನು ತೊಡಗಿ ॥ ವನಿತೆ ದ್ರೌಪದಿಸಹಿತ ದೀಕ್ಷೆ ತಾಳಿದು ತನ್ನ। ಅನುಜ ವಿಜಯಗೆ ಹಯದ ರಕ್ಷೆ ॥೨॥ ಕೊಟ್ಟು ದಳಪತಿ ತನಕೆ ಕೃಷ್ಣಸುತ ಪ್ರದ್ಯುಮ್ನ । ಕಟ್ಟಾಳುವೆಂದು ನಿಶ್ಚೈಸಿ ॥ ಕಟ್ಟಳೆಯೊಳಿರಿಸಿ ಚತುರಂಗ ಮಾರ್ಬಲವ ಸಹ । ಬಿಟ್ಟೆ ಈ ಭೂಮಂಡಲದಲಿ ॥೩॥ ತೋಳ ಬಲವುಳ್ಳವರು ಕಟ್ಟಿದರೆ ಕುದುರೆಯನು । ಕಾಳಗದೊಳವರ ಸದೆ ಬಡಿದು ॥ ಸೋಲಿಸಿದು ಕಪ್ಪ ಸೆಳಕೊಂಬ ಬಗೆ ಪಾರ್ಥನದು । ಆಳರಸರವರು ಕಟ್ಟುವರು ॥೪॥ ಬಲಹೀನರಾದವರು ಕಪ್ಪಕೊಡಲವರುಗಳ । ತಲೆಗಾಯ್ವ ಕರುಣ ಫಲುಗುಣಗೆ ॥ ನಿಲೆಯೆಂದು ಬರೆದೊಕ್ಕಣೆಯ ಲಾಲಿಸುತ ಪೀಠ ।ವಿಳಿದು ಗರ್ಜಿಸುತೆಂದ ನರಸ ॥೫॥ ॥೩೩೫॥

ರಾಗ ಭೈರವಿ ಏಕ ತಾಳ

ಕೊಡೆ ಕೊಡೆ ನಾ ಕಪ್ಪವನು । ಕ ।ಟ್ಟಿಡಲಾತನ ಶೌರ್ಯವನು ॥ ಬಿಡೆ ಬಿಡೆ ಹಯವೆಂದೆನುತ । ಪ । ಲ್ಗಡಿದನು ಭೂಪನು ನಗುತ ॥೧॥ ಹರಿಯಾಜ್ಞೆಯೊಳವನಂತೆ । ಮುನಿ । ವರರುಪದೇಶಿಸಿದಂತೆ ॥ ತುರಗಾಧ್ವರ ಮಾಳ್ಪಂತೆ । ಶೇಕರಿಸಿದವನು ತಾನಂತೆ ॥೨॥ ಬಲಹೀನರು ಕಪ್ಪವನು । ಕೊಡ।ಲುಳಿಸುವ ಗಡ ಫಲುಗುಣನು ॥ ತಲೆಯನು ಕಾಯ್ವುವನೆಂದು । ಸಲೆ।ತಿಳುಹಿದ ವಕ್ಕಣೆಗಿಂದು ॥೩॥ ಕಪ್ಪವ ಕೊಡುವರೆ ಭೂಪ । ನಮ। ಗಪ್ಪನೊ ಯಾಕಿನಿ ತಲ್ಪ ॥ ದರ್ಪದಿ ಬರೆದನೆ ಜೋರು । ಅಳು । ಕಿಪ್ಪನೆ ಸುಡು ದರ್ಬಾರು ॥೪॥ ನೀತಿಯೊಳರುಹಿದರವಗೆ । ಮೊದ । ಲಾತನ ಮನ್ನಿಸಿ ಪುರಿಗೆ ॥ ಆತಗೆ ಕೊಡಬಹುದಿತ್ತು । ಹೀ । ಗ್ಯಾತಕೆ ಬರೆಯಬೇಕಿತ್ತು ॥೫॥ ॥೩೪೦॥

ಭಾಮಿನಿ

ತನ್ನ ದರ್ಬಾರುಗಳ ತಾನೇ । ಮನ್ನಿಸಿದು ಬರೆಸಿದರೆ ಲೇಖನ।ವನ್ನು ಕ್ಷತ್ರಿಯ ಧರ್ಮದವನಿಪರವರು

ಬೊಗ್ಗುವರೆ॥ಎನ್ನ ಮನಕನು-ಚಿತವು ಗುರು ಸಂ। ಪನ್ನ ಮತಿಯುತ ಜನಕನೆನಿಸುವೆ। ನಿನ್ನ ಬಗೆಯೇನೆನಲು ಮಂತ್ರಿ ಸುಶೀಲ ನಿಂತೆಂದ ॥೧॥ ॥೩೪೧॥

ರಾಗ ಶಂಕರಾಭರಣ ಅಷ್ಟ ತಾಳ

ಆಗದೂ । ಇದು । ಆಗದೂ । ಪಲ್ಲ ॥ ಆಗದು ಇದು ಸೊಗಸಾಗದು ಎನಗೆ । ಹ್ಯಾಗೆ ತೆರುವೆವಯ್ಯ ಕಪ್ಪವ ನೃಪಗೆ ॥ಅ.ಪ॥ ಆತನು ಶಶಿಕುಲಲ ಲಾಮ ತಾನಂತೆ । ವಾತೋರು ಹಾಕ್ಷನಪ್ಪಣೆಯಿಂದವಂತೆ ॥ ಭೂತಳದಲಿ ಹಯ ಬಿಟ್ಟಿಹನಂತೆ । ಸೋತು ಕಪ್ಪವ ಕೊಟ್ಟು ಬದುಕಬೇಕಂತೆ ॥೧॥ ಆತನೆ ಕ್ಷತ್ರಿ ಬೀಜದಿ ಪುಟ್ಟಿದಾತ । ಪೇತುಗರೆಂದು ಯೋಚಿಸಿ ನಮಗಾತ ॥ ಈ ತೆರದಿಂದಲಿ ಬರೆದಿಹ ಲಿಖಿತ । ನೀತಿಯೆ ಕಪ್ಪವ ತೆರಲೆಂಬ ಮಾತ ॥೨॥ ಗಂಡಸುತನ ವಾತಗೊಬ್ಬಗೆ ಅಲ್ಲ । ಉಂಡಾಡಿಗಳು ನಾವೆಂದೆಣಿಸಿದನಲ್ಲ ॥ ಹೆಂಡ್ಯರೊಳಾಡುವ ಮಾತುಗಳೆಲ್ಲ । ದಂಡಕೆ ಮಾಡಿಷ್ಟು ಬರೆಸಿದನಲ್ಲ ॥೩॥ ಕಪ್ಪವ ಕೊಡುವರೆ ಭೂಪನು ನಮಗೆ ॥ ಅಪ್ಪನೊ ವಿಜಯ ಚಿಕ್ಕಪ್ಪನೊ ಕಡೆಗೆ ॥ ಒಪ್ಪೆನಾನಿದಕೆ ಪಾಳ್ಯವ ಕರೆಸಯ್ಯ । ಅಪ್ಪಣೆ ಕೊಡು ಹೋಗಿ ಕಾದುವೆನಯ್ಯ ॥೪॥ ಕರೆಸಯ್ಯ ಮಂತ್ರಿ ನೀ ನಮ್ಮಯ ಸೇನೆ । ಧರಿಸುವೆ ಬೇಗದಿ ನಾ ಶಸ್ತ್ರೌಘವನೆ । ಬರಹೇಳು ಶಸ್ತ್ರ ಭಂಗಾದಿ ದಳಪರ । ಹೊರಡಿಸು ನಮ್ಮ ಚತುರ್ಬಲ ನಿಕರ ॥೫॥ ॥೩೪೬॥

ಭಾಮಿನಿ

ಇಂತು ನೀರಾವಂತ ರಾಯನು । ಮಂತ್ರಿಗಪ್ಪಣೆ ಕೊಡಲು ಸೇನಾ । ಸಂತತಿಯ ನೆರಹಿದನು ಬಂದರು ಸಕಲ ನಾಯಕರು ॥ ಕಂತು ಸನ್ನಿಭ ಬಾಲ ಭೂಪನ । ಪಂಥದಿರವನು ಕಂಡು ಮೆಚ್ಚಿ ಮ। ಹಾಂತರಿಪುಭಟ ಭಂಗ ಬಿನ್ನೆಯ್ಸಿದನು ಭೂಪತಿಗೆ ॥೧॥ ॥೩೪೭॥

ರಾಗ ಭೈರವಿ ಅಪ್ಪು ತಾಳ

ಜೀಯ ನೀನಿರು ಪುರದಿ । ಬಂದಿಹ ರಿಪು । ರಾಯರ ಸಂಗರದಿ ॥ ಆಯಮನೆಡೆಗಟ್ಟ ದಿರ್ದಡೆ ನಿನ್ನಯ । ಪ್ರೀಯ ದಳೇಶನಲ್ಲ ॥೧॥ ತನುವಿನ ಕಷ್ಟವೆಲ್ಲ । ಕೈಕಾಲುಗ । ಳನುಸರಿಸಿರ್ಪುದೆಲ್ಲ ॥ ನಿನಗೇಕೆ ಯುದ್ಧ ನಾ।ವಿರಲು ನಿನ್ನವರಾಗಿ । ತನಗೀಯೊ ನೇಮವೆಂದ ॥ ೨॥ ಅನಿತರೊಳಾ ಕ್ಷಣದಿ । ವೃದ್ಧಾಪ್ಯದ। ಘನ ಮಂತ್ರಿತಾ ಮುದದಿ ॥ ಅನುಮಾನಿಸದೆ ಚಾಪವನು ಗೊಂಡು ರಿಪುಗಳ । ಹನನಕ್ಕೈದುವೆ ನೆಂದನು ॥೩॥ ಆಗಲಾಕ್ಷಣ ಭೂಪನು । ವೀಳ್ಯವನಿತ್ತು । ಬೇಗದೊಳಿಂತೆಂದನು ॥ ಹೋಗಿ ನೀವೆನೆ ಭೇರಿ ತಂಬಟೆ ವಾದ್ಯಗ । ಳಾಗಲೆ ಬಾರಿಸುತ ॥೪॥ ಬಂದಾಗ ರಿಪುನೃಪರ । ನೋಡುತ ಶರ । ವೃಂದವ ಬಿಡುತವರ ॥ ಕುಂದದ ಬಲಗಳ । ಹೊಯ್ದುಟ್ಟ ಲೇನೆಂಬೆ । ನಂದಿನ ರಣ ವಿಭವ ॥೫॥ ॥೩೫೨॥

ಭಾಮಿನಿ

ಈತೆರದಿ ರಿಪುನೃಪರ ಸೇನೆಯ । ಘಾತಿಸುತ ಗರ್ಜಿಸುತ ಸುಭಟರ । ವ್ರಾತ ಗೆಲ್ಲುತ ಬರಲು ಕಂಡಾ ನರನ ಬಲದೊಳಗೆ ॥ ಯಾತು ದಾನವನೆದ್ದು ಧಿಮ್ಮನೆ ॥ ಭೂತನಾಥನ ತೆರದಿ ರೋಷದೊಳಾ ತತುಕ್ಷಣ ರಥವ ಚಾಚುತಲೆಂದನವರೊಡನೆ ॥೧॥ ॥೩೫೩॥

ರಾಗ ಮಟ್ಟೆ ತಾಳ

ಆರೆಲೋ ಮಹಾತ್ಮ ಸುಭಟ । ಧೀರ ಧೀರುರೆ ॥ ಭೂರಿ ಬಲವ ಗೆದ್ದು ಬರುವ । ವೀರ ಜಾಗುರೆ ॥೧॥ ಯಾತುದಾನವೇಶ ಬಂದ ।ರೀತಿಯೊಳ್ಳಿತು ॥ ಭೂತಳದೊಳು ನರನ ಸ್ನೇಹ । ವೆಂತು ದೊರಕಿತು ॥೨॥ ಒದರಲ್ಯಾಕೆಮನುಜ ನಮ್ಮ । ಕುದುರೆ ಕಟ್ಟಿದೆ ॥ಅದರ ಬಿಡಿಸ ಬಂದೆ ಸುಭಟ । ವಿದಕೊ ಹೆಚ್ಚಿದೆ ॥೩॥ ನೀತಿಯಿಂದ ಕುದುರೆ ಕೇಳ್ದ । ರಾತು ಗೊಂಬೆವು ॥ ಘಾತಿ ಬುದ್ಧಿ ತೋರ್ದಡೀಗ। ಧಾತು ಗೊಂಬೆವು ॥೪॥ ನರಗುರಿಗೆ ಯಾತಕಿಷ್ಟು । ಧುರ ಪರಾಕ್ರಮ ॥ ತುರಗ ಕೊಟ್ಟು ಪಾದಕೆರಗು । ಬಿಡುವೆ ವಿಕ್ರಮ ॥೫॥ ತುರಗ ಕೊಡುವೆ ನಿನಗೆ ಯಮನ । ಪುರದೊಳೆನ್ನುತ ॥ ದುರುಳಗೆಚ್ಚು ಕೆಡಹಿಸಿದನು । ಧರೆಗೆ ಬೀಳುತ ॥೬॥ ॥೩೫೯॥

ಕಂದ ಪದ್ಯ

ಸಾಲುವ ಬೀಳಲು ರುಗ್ಮಿಣಿ । ಬಾಲಕ ಖತಿಯಂಗೊಂಡಾ ಕ್ಷಣ ದೊಳ್ ಪ್ರಳಯ ಕ॥ ಪಾಲಿಯ ತೆರದಿಂ ರೋಷವ । ತಾಳ್ದಾಗಲೆರಿಪುದಳಪನ ತಡೆಯುತಲೆಂದಂ ॥೧॥ ॥೩೬೦॥

ರಾಗ ಕೇತಾರ ಗೌಳ ಅಷ್ಟ ತಾಳ

ಆರೆಲೊ ನೀನೀಗ ಬಂದವ । ನಮ್ಮ । ವೀರನು -ಸಾಲ್ವನ ಕೊಂದವ ॥ ಭೂರಿ ಪರಾಕ್ರಮವೆನ್ನೊಳು। ಸಲೆ।ತೋರೆನುತಸ್ತ್ರವ ಸುರಿಯಲು ॥೧॥ ಕತ್ತರಿಸುತಲೆಂದನಾತನು । ನಿನ್ನ । ಪೆತ್ತವನ್ಯಾರೊಪೇಳಾತನು ॥ ಚಿತ್ತಜನಂದದಿ ತೋರುವೆ । ಸುಭ ।ಟೋತ್ತಮರೊಳು ಚೆಂದವೆತ್ತಿಹೆ ॥೨॥ ಪುರುಷೋತ್ತಮನ ನೀನು ಬಲ್ಲೆಯ ॥ಅವ ನರಸಿ ರುಗ್ಮಿಣಿಗೆ ತಾ ಮಗನಯ್ಯ ॥ ದೊರೆಯೆ ನೀನ್ಯಾರು ಪೇಳೆನಲೆಂದ । ನಾನು । ಅರಸಗೆ ಮೊದಲ ದಳಪನೆಂದ ॥೩॥ ದಳಪನೆ ನೀನು ನಿನ್ನರಸಗೆ । ಬುದ್ಧಿ । ತಿಳುಹಿಸಿ ಹಯವನು ವಿಜಯಗೆ ॥ ತಳುವದೆ ಕೊಡಿಸಿದರುತ್ತಮ । ಅಲ್ಲ । ದಳಿವೆಯೊ ಪಾಪಿದಳೋತ್ತಮ ॥೪॥ ತುರಗವ ಬಿಡಿಸಿಕೊಂಬಾತನೆ। ನಮ್ಮ । ರಣಕಿದಿರಾಗಿ ಸಾಯ್ವಾತನೆ ॥ ತುರಗವ ನಿನಗೆ ಈ ಬಾಣದಿ । ಎಂದು । ಮುರಿದೆಚ್ಚು ಕೆಡಹಿದ ನುಗ್ರದಿ ॥೫॥ ॥೩೬೫॥

ಕಂದ ಪದ್ಯ

ಸ್ಮರ ಮೈ ಮರೆಯಲು ಚಂಪಕ । ಪುರದರಸನು ಹಂಸಧ್ವಜ ಖತಿ ತಾಳುತ್ತಂ ॥ ಧರಿಸುತ ಶಸ್ತ್ರವರಿಪುವಿನ । ಸರಿಸಕೆ ರಥ ಚಾಚುತಲೆಂದ ದಳೇಶನಿಗಂ ॥೧॥ ॥೩೬೬॥

ರಾಗ ಘಂಟಾರವ ಅಷ್ಟ ತಾಳ

ನಿಲ್ಲು ನಿಲ್ಲೆಲೊ ಸುಭಟ ನೀ ನಮ್ಮಯ । ಎಲ್ಲ ಬಲ ಗೆಲಿದಂಥಶೌರ್ಯವ । ನಿಲ್ಲಿ ತೋರಿಸು ತನ್ನೊಳು ॥೧॥ ಸಾಕು ಸಾಕೆಲೊ ಪೋಕ ವೃದ್ಧನೆ ಯೆನ್ನ । ನ್ಯಾಕೆ ಕೆಣಕುತ ಸಾಯ್ವೆ ಸುಮ್ಮನೆ । ಸಾಕು ಮನೆಗೆ ತೆರಳೆಲಾ ॥೨॥ ನೋಡಿ ನಮ್ಮಯ ರೂಢಿಯ ಪಾಲನ । ಬೇಡಿಕೊಳುತಲಿ ತುರಗ ಕೊಡದಿರೆ । ಮಾಡಿಸುವೆ ಮನೆಯಮನಲಿ ॥೩॥ ಬೇಡಿಕೊಂಬುದು ಹೇಡಿಯ ಮತವಿದು । ಮೂಢ ತತ್‌ಕ್ಷಣದಲ್ಲಿ ನಿನ್ನನು । ತೋಡಿ ತೆಗೆವನು ಕರುಳನು ॥೪॥ ॥೩೭೦॥

ರಾಗ ಮಾರವಿ ಏಕ ತಾಳ

ಎಂದುಸುರಲು ಚಂಪಕಪುರದರಸನು । ನೊಂದುಕೊಳುತ ಭರದಿ ॥ ಮುಂದ್ವರಿದಾಕ್ಷಣ ದಳಪನ ರಥತಾ । ನಂದಿಲಿ ಪುಡಿಗೆಯ್ಯೆ ॥೧॥ ರಥ ಪುಡಿಯಾಗಲು ಕಾಣುತಲಾ ಮುರ । ಮಥನನ ತೆರದಿಂದ॥ ಪೃಥಿವಿಪಗೆಚ್ಚನು ತರತರದಸ್ತ್ರವ । ಪ್ರತಿಭಟ ಖತಿಯಿಂದ ॥೨॥ ಸೊಕ್ಕಿದನೀತನು ದಳಪನು ಎನ್ನುತ । ಉಕ್ಕಿದ ರೋಷದಲಿ ॥ ಅರ್ಕನ ಬಾಣದಿ ಕಡಿದುರುಳಿಚಿದನು । ಚಿಕ್ಕಣಿಕೆಯೊಳಾಗ ॥೩॥ ಅಳಿಯನು ಮೈಮರೆದೊರಗಲು ಕಂಡಾ । ಬಲು ತರ ರೋಷದಲಿ ॥ ಮಲೆತರಿಭಟನಿಗೆ ಮಂತ್ರಿಯು ಶಸ್ತ್ರವಾ·ಘುಳಿಲನೆ ಬಿಡಲಂದು ॥೪॥ ॥೩೭೪॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ನೋಡಿದನು ವೃದ್ಧನ ಪರಾಕ್ರಮ । ಜೋಡಿಸುತ ಶರವೆಂಟರನು ಮಿಗೆ । ಪೂಡುತಿರಲಾ ಕ್ಷಣದಿ ಬಿದ್ದನು । ರೂಢಿಗಾಗಿ ॥೧॥ ಚೇತರಿಸಿ ಮಂತ್ರೀಶ ನಿಲ್ಲೆಂ । ದಾತನನು ತೆಗೆದೆಸೆಯೆ ಕಾಯದೊಳಾತ ಕಳವಳಿಸಿದನು ಬಾಣ। ವ್ರಾತಕಾಗ ॥೨॥ ವೃದ್ಧ ನಿನಗೇಕೀ ಪರಾಕ್ರಮ । ಉದ್ದರುಟುತನ ನಿಲಿಸುವೆನು ಎಂ।ದೊದ್ದು ಕೆಡಹಲು ಧರೆಗೆ ಮೂರ್ಛಿಸಿ । ಬಿದ್ದನವನು ॥೩॥ ॥೩೭೭॥

ಭಾಮಿನಿ

ಸತ್ಯಶೀಲನ ಮೂರ್ಛೆಯನು ಕಾಣುತ್ತ ಸಕಲ ಬಲೌಘಪಾರ್ಥನ । ಮುತ್ತಿಮುಸುಕಲು ಕಂಡು ರವಿಸುತನಣುಗ ಖಾತಿಯಲಿ ॥ ಚಿತ್ತಜಾರಿಯ ತೆರದಿ ಘುಡುಘುಡಿ । ಸುತ್ತ ಬಾಣಾಂಬುವನು ಕರ ಕರೆ। ಯುತ್ತರಿಪುವಾಹಿನಿಯ ಸವರುತ ಪೊಕ್ಕಸೇನೆಯಲಿ ॥೧॥ ॥೩೭೮॥

ವಾರ್ಧಿಕ

ತರಣಿಸುತಸುತನಮಲ ಬಾಣದಿಂ ತ್ರಾಣದಿಂ। ಪರಶು ಮುದ್ಗರ ದಿಂ ಕೃಪಾಣದಿಂ ಗೇಣದಿಂ। ಸುರಗಿ ಈಟಿ ಕಠಾರಿ ಶಲ್ಯದಿಂ ಬಲ್ಯದಿಂ ಧರೆ ಹಾಯ್ದು ಹಾಯ್ದು ಸುಯ್ದು ॥ ಬರಿಗೈದನಿನಿತು ಚತುರಂಗ ಮಂ ಭಂಗಮಂ । ಕರಿಘಟೆವ ರೂಥಮಂ ಯೂಥಮಂ ಮೆಟ್ಟಿದಂ । ಭರದಿಂದ ಸಂಹರಿಸಿ ಮಾರ್ಬಲವನೆಲ್ಲವಂ ಸಂಗರಂ ಸಿಂಗರದೊಳು ॥೧॥ ॥೩೭೯॥

ಕಂದ ಪದ್ಯ

ಬಲಮೀ ಪರಿ ಯಾಗಲಾ । ಘಳಿಲನೆ ಚರನೋರ್ವನೃಪಗೆ ಪೇಳಲ್ಕಾಗಂ ॥ ತಳುವದೆ ಹರಿಯಂ ಧ್ಯಾನಿಸಿ । ಕೊಳುಗು-ಳಕೈದಲ್ ರಭಸದಿ ಸೂತನೊಳೆಂದಂ ॥೧॥ ॥೩೮೦॥

ರಾಗ ಭೈರವಿ ಏಕ ತಾಳ

ಪ್ರೀತಿಸಿ ಸಾರಥಿ ನೀನು । ಸಂ । ಗಾತದಿ ಬಂದರೆ ನಾನು ॥ ಘಾತಿಸುವೆನು ಶತ್ರುಗಳ। ನಿರ್ಭೀತಿಯೊಳಿಡುವೆನು ಸರಳ ॥೧॥ ಕಾಸೆಯ ನೆರಿವಿಡಿದುಟ್ಟ । ಸಣ್ಣ । ಮೀಸೆಯ ತಿರುಹಿಸಿದಿಟ್ಟ ॥ ಭ್ಯಾಸದ ಧನು ಝೇವಡಿದ ।ಲ। ಕ್ಷ್ಮೀಶನ ಕರುಣವ ಪಡೆದ ॥೨॥ ಸಾರಥಿ ರಥ ನಡೆಸೆಂದು । ಪೊಂ । ದೇರನು ತಾನೇರ್ದಂದು ॥ ಚೀರಲು ರಥ ಹಾರಿಸಿದ । ರಣ।ಧಾರುಣಿಗೈದಿ ನಿಲಿಸಿದ ॥೩॥ ಸಾರಥಿ ಕರೆ ಕರೆ ಈಗ।ರಿಪು। ವೀರರ ಪರಿಕಿಪೆನೀಗ॥ಭೂರಿಪರಾಕ್ರಮವನ್ನು।ಸಲೆ। ತೋರಲಿ ನಮ್ಮೊಳಗಿನ್ನು ॥೪॥೩೮೪॥

ರಾಗ ಕಾಂಬೋದಿ ಝಂಪೆ ತಾಳ

ಎಂದೆನುತ ಭೂಪ ಮುದ ದಿಂದ ತನುವುಬ್ಬೇರಿ । ಮಂದಮತಿ ವೈರಿಭಟರುಗಳ । ವೃಂದವನು ನೋಡಿ ಪಲ್ಗಡಿದು ಖತಿಯುರಿಯಿಂದ । ಅಂದು ಗರ್ಜಿಸಿ ಕರೆದನಾಗ ॥ ೧॥ ಆರೆಲೋ ಉಪವನಕೇವಾರು ಹವ ಬಿಟ್ಟ-ಧಮ । ಮೀರಿ ನಮ್ಮಯ ಸೇನೆಯನ್ನು ॥ ಧಾರುಣಿಗೆ ಕೆಡಹಿಜ-ಜ್ಞಾರಭಟನೆಂಧು ಮದ । ವೇರಿದ ದುರಾತ್ಮ ಬರಲೆನುತ ॥೨॥ ಕುರುನೃಪರ ಕೊಂದಘವ ಕಳೆಯಲೋಸುಗನಮ್ಮ । ನೆರೆದ ಚತುರಂಗವನು ಕೊಂದ ॥ ಧುರಧೀರ ವೀರ ಕಾಳಗದಿ ಕಪ್ಪವ ಸೆಳೆವ । ಪರಮ ಸಾಹಸಿ ಬಾರೆನುತ್ತ ॥೩॥ ವಿಜಯ ತಾನೇನೆಂದು ನಿಜದೊಳೆನಗಿದಿರಾಗಿ । ಭುಜಶೌರ್ಯ ತೋರಿ ಕಾದಿದರೆ ॥ ರುಜುವಾಗದಿಹುದೆ ಪೆಸರಾಂತ-ತನವೆಂದು ಹೆಚ್ಚುಜವನಾಡಿಸುತೆಂದನರಸ ॥೪॥ ಛಪ್ಪನ್ನ ದೇಶದರಸುಗಳ ರಣದಲಿ ಗೆದ್ದು । ಕಪ್ಪವನು ಸೆಳೆದ ರಣಧೀರ ॥ ಇಪ್ಪತ್ತು ನಯನ ವಿದ್ದವನಾಗಲವನ ಹೆದ್ದರ್ಪವನು ನಿಲಿಸದಿರೆನೆಂದ ॥೫॥ ॥೩೮೯॥

ಭಾಮಿನಿ

ವೀರ ಫಲುಗುಣೆಯಿಂತು ಖತಿಯು । ಬ್ಬೇರಿ ಕರೆಯಲು ಕೇಳುತಾಕ್ಷಣ । ಮೀರಿದತಿರೋಷದಲಿ

ಪಾರ್ಥನ ಬಲದ ನಾಯಕರು ॥ ತೇರ ನೀಕ್ಷಿಸಿ ಹಾಯ್ದು ಮುತ್ತಲು । ವೀರ ಕರ್ಣಕುಮಾರಕನು ಖಿತಿ । ಯೇರಿ ರಥ ಚಾಚುತ್ತನುಡಿದನು ವೈರಿನೃಪನೊಡನೆ ॥೧॥ ॥೩೯೦॥

ರಾಗ ಭೈರವಿ ಅಷ್ಟ ತಾಳ

ಭಳಿರೆ ನೃಪಾಲ ನಮ್ಮ । ಹಯವ ಕಟ್ಟಿ । ಬಳಲುವದೇನು ಪ್ರೇಮ ॥

ಛಲವ್ಯಾಕೆ ನಿನ್ನಯ ಜನನಿ ಜನಕರ್ಯಾರು । ತಳುವದೆ ಪೇಳೆಂದನು ॥೧॥ ಧರಣಿಯ ಪೊತ್ರಿರ್ಪನ। ಮಗಳು ಲೂಪಿ । ತರಳನು ಕೇಳು ಮುನ್ನ ॥ ತುರಗದಾಶೆಯ ಬಿಟ್ಟು ಪ್ರಾಣದಾಶೆಯ ನಿಟ್ಟು । ಒರೆ ನಿನ್ನ ಜನಕರ್ಯಾರು ॥೨॥ ಶೇಷನ ಮೊಮ್ಮ ನೀನು । ನಿನ್ನಯ ಸತ್ವ । ವೀ ಸಾರಿ ಪರಿಕಿಪೆನು ॥ ಲೇಸಾಯ್ತು ತನ್ನಯ ಜನಕನು ರವಿಸೂನು । ವೃಷಕೇತನೆಂಬರೆನ್ನ ॥೩॥ ಕರ್ಣನಾತ್ಮಜನೆ ನೀನು । ಸಾಹಸ ಶೌರ್ಯ। ಪೂರ್ಣನಾಗಿಹ ಭಟನು ॥ ತನ್ನೊಳಗಿದಿರಾಗಿ ನಿಲ್ಲೆನು ತಸ್ತ್ರವ । ಕೆನ್ನೆಗೇರಿಸುತೆಚ್ಚನು ॥೪॥ ಬರುವ ಶರವ ಖಂಡಿಸಿ । ಹೂಂಕರಿಸುತ್ತ । ಒರೆದನು ಎಲೆ ಸಾಹಸಿ ॥ ಧುರದಿ ತನ್ನನು ಗೆಲ್ವ । ದೆನುವದಂತಿರಲಿನ್ನು । ಪರಿಕಿಪುದೆನುತೆಚ್ಚನು ॥೫॥ ರಿಪುಭಟನಸ್ತ್ರಂಗಳ । ಕತ್ತರಿಸುತ್ತ । ವಿಪರೀತ ಬಾಣಗಳ ॥ ತಪನಮೊಮ್ಮಗೆ ಬಿಡಲವ ಮೂರ್ಛಿಸುತಲೆದ್ದು । ನೃಪತಿಗೆ ಮಗುಳೆಂದನು ॥೬॥ ॥೩೯೬॥

ರಾಗ ಶಂಕರಾಭರಣ ಮಟ್ಟೆ ತಾಳ

ಎಲೆಲೆರಿಪುನೃಪಾಲ ನಮ್ಮ । ಬಲುಹ ತಿಳಿಯದಕಟ ಕೆಟ್ಟೆ । ಇಳೆಯೊಳುಳಿದರ್ಯಾರು ನಮ್ಮ । ಕಲಹಕೊದಗುತ ॥೧॥ ಪೃಥ್ವಿಪಾಲರಲ್ಪರನ್ನು । ಸತ್ವದಿಂದ ಗೆಲಿದ ಶೌರ್ಯ । ಇತ್ತತೋರ್ದರೆನ್ನ ಶರವು। ತುತ್ತುಗೊಂಬುದು ॥೨॥ ಕಂಡರಲ್ಪ ಹುಡುಗಖಾತಿ । ಗೊಂಡು ನುಡಿವೆಯಕಟ ನಿನಗೆ । ಚಂಡ ತನ ವಿದ್ಯಾಕೆ ಹಯವ । ಕೊಂಡು ಒಪ್ಪಿಸು ॥೩॥ ದೇಹಿಯೆಂದು ಬೇಡು ತುರಗ । ನಾಯಿ ನಿನಗೆ ಕೊಡುವನಲ್ಲ । ಬಾಯಿಗಂಜಿ ಬಿಟ್ಟುಕೊಡುವ । ದಾಯವಿಲ್ಲೆಲಾ ॥೪॥ ಚಿಕ್ಕತನದಿ ರಾಯನಾದ । ಸೊಕ್ಕು ನಿನಗೆ ಹೆಚ್ಚಿತೀಗ। ದಕ್ಕ ಗೊಡೆನು ಹಯವನೆಂದು । ಮಿಕ್ಕಿ ಹೊಡೆದನು ॥೫॥ ॥೪೦೧॥

ಭಾಮಿನಿ

ತರಣಿಜಾತನ ಸುತನ ಬಾಣಕೆ । ಧರಣಿಯೊಳು ಬೀಳುತ್ತ ಭೂಪತಿ । ಅರೆಕ್ಷಣದೊಳೆಚ್ಚರ್ತು ಸಿಂಹನವೋಲು ಗರ್ಜಿಸುತ ॥ ಅರರೆ ತನ್ನನು ಗೆ ಲಿದೆನೆನ್ನುತ । ಹರುಷಿಸಲು ಬೇಡೆಂದು ಪೊಡೆಯಲು । ತಿರುತಿರುಗಿ ಬಿದ್ದೆದ್ದು ಭೂಪತಿಗೆಂದ ಖಾತಿಯಲಿ ॥೧॥ ॥೪೦೨॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಏನೆಲವೊ ನೃಪತರಳ ತನ್ನನು । ಹೀನ ವಿಕ್ರಮನೆಂದು ಬಗೆದೆಯ । ಆನೆಯನು ತಾ ಗೆಲುವುದುಂಟೇ।

ಶ್ವಾನ ತಿಳಿಯೈ ॥೧॥ ಎಂದೆನಲು ಕೇಳುತ್ತ ಕರ್ಣನ । ಕಂದಗೆಂದನು ಆನೆಯನು ಗೆಲ । ಲಿಂದು ಮೃಗಪತಿ ತಾನೆ ಗಾರ್ದಭ। ಹಂದೆ ಕೇಳೈ ॥೨॥ ವ್ಯರ್ಥ ಬಳುಗದಿರೆಲವೊ ನಿನಗಾ। ಮೃತ್ಯು ತಾನೆಂಬುದನು ತಿಳಿಯೈ। ಮತ್ತೆ ಮಾತಾಡಿದರೆ ನಾಲಿಗೆ । ಕತ್ತರಿಸುವೆ ॥೩॥ ಸಾಕೆಲವೊ ವೃಷಕೇತು ನಿನ್ನನು । ಏಕ ಶರದಿಂದುದರ ಸೀಳಿದು । ಶಾಕಿನಿಯ ಬಳಗಕ್ಕೆ ರಕ್ತ ವಿ । ವೇಕದಿಂದ ॥೪॥ ಎಂದೆನಲು ವೃಷಕೇತನೆಚ್ಚಡೆ । ಸಂದಭೂಪನು ಮೂರ್ಛೆಯಲಿ ಬಲ। ವೃಂದವನು ಗೆಲ್ವದರ ಪೇಳ್ವುದೇ । ನಂದು ನೃಪತಿ ॥೫॥ ॥೪೦೭॥

ಕಂದ ಪದ್ಯ

ಧರಣಿಪ ಕೇಳೈ ಕರ್ಣನ । ತರಳನು ನೃಪಸೇನೆಯನ್ನು ಘಾತಿಸುತಾಗಂ ॥ ತುರಗವ ಪಿಡಿದತಿ ಬೇಗದಿ । ಹರುಷವತಾಳ್ದಾಗ ಸೇನೆಯಲಿ ಮೆರೆದಿರ್ದಂ ॥೧॥ ॥೪೦೮॥

ಭಾಮಿನಿ

ನೃಪತಿ ಕೇಳಾ ಸಮಯದಲಿ ಭೂ । ಪತಿಯು ಮೂರ್ಛೆಯ ತಿಳಿದು ಬಳಿಕಾ । ತಪನ ಮೊಮ್ಮನ ನೋಡಿ ನುಡಿದನು ಕೋಪಯುತನಾಗಿ ॥ ನಿಪುಣತನವನು ತೋರು ನಿನ್ನಯ । ಅಪರಿಮಿತ ಶೌರ್ಯಗಳನೆನುತಲಿ । ನೃಪತಿ ಸೂರ್ಯನಸುತನ ಕುವರನ ಧನುವ ಖಂಡಿಸಿದ ॥೧॥ ॥೪೦೯॥

ರಾಗ ಶಂಕರಾಭರಣ ಮಟ್ಟೆ ತಾಳ

ಚಾಪ ಮುರಿಯೆ ಕಂಡು ಕರ್ಣ।ಜಾತ ರೋಷದಿ ॥ ಭಾಪು ಎನುತ ಶರವ ಬಿಡಲು । ಕಡಿದನುಗ್ರದಿ ॥೧॥ ಒಡನೆ ಅನಲಶರವ ನೆಚ್ಚ । ನಾಗ ಕರ್ಣಜ ॥ ನಡುವೆ ವಾರುಣಾಸ್ತ್ರದಿಂದ । ತರಿದ ವಿಜಯಜ ॥೨॥ ದಿಟ್ಟ ಭಳಿರೆ ಭೂಪ ಎನುತ । ಉರಗಶರವನು ॥ ಸಿಟ್ಟಿನಿಂದಲೆಸಯೆ ಗರುಡ । ಶರದಿ ಗೆಲ್ದನು ॥೩॥ ಬಳಿಕ ಮಲೆತು ತಿಮಿರ ಶರವ । ಭೂಪಗೆಚ್ಚನು ॥ ಗೆಲಿದನಂದು ರವಿಯ ಬಾಣ। ದಿಂದಲದರನು ॥೪॥ ಭಳಿರೆ ಧೀರನಹೆ ಶಭಾಸು । ಮಲೆತ ವ್ಯಾಘ್ರಗೆ ॥ ಸಲುವುದೇನೊ ಕುರಿಗೆನುತ್ತ । ಪೊಡೆದ ನೃಪತಿಗೆ ॥೫॥ ಮತ್ತೆ ಕೋಪದಿಂದ ಭೂಪ । ಎತ್ತಿಗದೆಯೊಳು ॥ ಅತ್ತ ಬೀಳೆನುತ್ತ ಪೊಡೆಯೆ । ಬಿದ್ದ ಭುವಿಯೊಳು ॥೬॥೪೧೫॥

ಭಾಮಿನಿ

ಧರಣಿಪತಿ ಚಿತ್ತವಿಸು ಕರ್ಣನ । ತರಳ ಮೂರ್ಛೆಯೊಳೊರಗೆ ಭೂಪನು । ಉರಿಯುಗುಳಿ ಫಲುಗುಣನ ಬಲವನು ಕೆಡಹಿ ಬರುತಿರಲು ॥ ಅರರೆ ಏನಾಶ್ಚರ್ಯವೆನ್ನುತ । ನರನು ಹೂಂಕೃತಿಗೊಟ್ಟು ಪ್ರಳಯದ । ಪುರಹರನ ತೆರದಿಂದ ಧನು ಝೇಂಕರಿಸುತಿಂತೆಂದ ॥೧॥ ॥೪೧೬॥

ರಾಗ ಸೌರಾಷ್ಟ್ರ ತಾಳ ತ್ರಿವುಡೆ

ಇತ್ತ ಕೇಳೆಲೊ ಹುಡುಗ ನಿನ್ನನು । ತುತ್ತುಗೊಂಬವರಿಲ್ಲವಿಂದಿಲಿ । ಚಿತ್ತಜಾರಿಯು ಬರಲಿ

ನಿನಗೀ । ಹೊತ್ತಿನೊಳಗೆ ॥೧॥ ತಲೆಯ ಸಲೆಚೆಂಡಾಡದಿದ್ದರೆ । ಇಳೆಯೊಳಾಸಿದ್ದೇನು ಫಲ ಜಗ।ದೊಳು ವಿಜಯನೆಂದೆಂಬ ಪೆಸರ್ಯಾ। ಕೆಲವೊ ತನಗೆ ॥೨॥ ಬಗುಳದಿರು ನೀ ವ್ಯರ್ಥ ನಿಸ್ನಯ । ಬಗೆಯ ಬಲ್ಲೆನು ತುಂಡು ದೊರೆಗಳ । ಅಗಿದ ಗರ್ವವ ನಿಲಿಪೆ ತನ್ನಯ । ಬಗೆಯ ನೋಡು ॥೩॥ ಹಿಡಿ ಧನುವನನುವಾಗು ಸಾಕಿ । ನ್ನೆಡ ಬಲವ ನೋಡದಿರೆನುತ್ತವ । ತೊಡಕಿದನು ಕೂರಲಗ ಪಾರ್ಥನ । ಒಡಲಿಗಾಗ ॥೪॥ ಬಾಳಬೇಕೆಂಬಾಶೆಯುಳ್ಳಡೆ । ಕಾಲಿಗೆರಗಿದು ಜೀವದಾನವ । ಕೇಳೆನುತ ಗರ್ಜಿಸಿದನಾಸುರ। ಪಾಲತನುಜ ॥೫॥ ॥೪೨೧॥

ರಾಗ ಮಾರವಿ ಏಕ ತಾಳ

ಭಾಪುರೆ ಫಲುಗುಣ ನಿನ್ನಯ ನುಡಿಯ ಪ್ರ।ತಾಪಕೆ ಮೆಚ್ಚಿದೆನು ॥ ಈ ಪೌರುಷವನು ತೋರೆನ್ನುತಲಾ। ಕೋಪದಿ ಶರವೆಸೆದ ॥೧॥ ತರಳನೆಕೇಳೈ ನಮ್ಮಯ ಯಜ್ಞದ । ತುರಗವನೊಲಿದಿತ್ತು ॥ ಶರಣೆನ್ನುತ ಶ್ರೀ ಹರಿಯೊಲುಮೆಯ ಪಡೆ।ದಿರುವುದು ಲೇಸಿಂದು ॥೨॥ ಹರಿಯನು ನಿತ್ಯವು ಸ್ತುತಿಸುತಲಿರ್ಪೆನು । ತುರಗವ ನೀನೀಗ ॥ ಭರದೊಳು ದೇಹಿಯೆಂದೆನ್ನುತ ಬೇಡಲು । ತಿರುಗ ಕೊಡೆನು ಎಂದ ॥೩॥ ಪುಂಡು ಹುಡುಗ ಏನೆಂದೆಯ ತ್ರಿಭುವನ । ಗಂಡನೆನುವರೆನ್ನ ॥ ಚಂಡಪರಾಕ್ರಮಿ ಹರಿಹರರೊಳಗು ।ದ್ದಂಡ ಸೆಣಸಿದವನು ॥೪॥ ಬಲ್ಲೆನು ತವ ಬಲು ಹೆಲ್ಲವ ನಾಚಿಕೆ । ಇಲ್ಲವೆ ನಿನಗೀಸು ॥ ನಿಲ್ಲದೆ ನಿನ್ನನು ನೀನೆ ಪೊಗಳ್ವ ರೆ । ಕೊಳ್ಳೆನುತವನೆಚ್ಚ ॥೫॥ ಎಚ್ಚ ಮಹಾಸ್ತ್ರವ ಕೊಚ್ಚುತ ಫಲುಗುಣ । ಹೆಚ್ಚಿನ ಶರ ಬಿಡಲು ॥ ಬೆಚ್ಚದೆ ಖಂಡಿಸೆ ನೃಪತಿಗೆ ತಾ ಮನ । ಮೆಚ್ಚುತ ನರನೆಂದ ॥೬॥ ॥೩೨೭॥

ಭಾಮಿನಿ

ಧೀರ ನೀರಾವಂತ ನಿನಗೆಣೆ । ಯಾರು ರಣರಂಗದಲಿ ತನ್ನಯ। ಕೂರಲಗ ಪರಿಹರಿಸಿ ಮೆರೆದ್ಯೆಭಳಿರೆ ಭಳಿರೆನುತ ॥ ಭಾರಿ ಗಾಂಡೀವವನು ಝೇಂಕೃತಿ । ದೋರಿ ಘನ ವಿಶಿಖವನು ಸಂಧಿಸಿ । ವೀರ ಫಲುಗುಣನೆಸೆಯಲಾ ಪ್ರತಿಭಟನು ಮೂರ್ಛಿಸಿದ ॥೧॥ ॥೪೨೮॥

ರಾಗ ಭೈರವಿ ಅಷ್ಟ ತಾಳ

ಧರೆಗೊರಗಿದ ಭೂಪನು । ಎದ್ದೆಂದನು । ನರನೆ ಮೆಚ್ಚಿದೆನು ನಾನು ॥ ಸರಿ ಭಟನಹುದು ಪಾರ್ಥಿವರೊಳಗ್ಗಳ ತನ್ನ । ಶರವ ಕೊಳ್ಳೆಂದೆಚ್ಚನು ॥೧॥ ಎಚ್ಚ ಬಾಣವ ತರಿದು । ಪಾರ್ಥನು ಬಹು । ಕಿಚ್ಚಿನ ಶರ ತೆಗೆದು ॥ ಬೆಚ್ಚದೆ ನಿಲ್ಲೆಂದು ಪೊಡೆಯಲು ಪ್ರತಿಭಟ । ಕೊಚ್ಚಿದ ನಡುಪಥದಿ ॥೨॥ ಇಳೆಯ ಪಾಲಕರಲ್ಪರ । ಗೆಲ್ದಿಹ ಪಿತ್ಥ । ತಲೆಗಡರಿಹುದು ವೀರ ॥ ತಳುವದದಕ್ಕೆ ತಕ್ಕೌಷಧಿ ನೋಡೆಂದು । ಮುಳಿದೆಚ್ಚನಾ ಪಾರ್ಥಗೆ ॥೩॥ ಮರುಳಲ ಬಡತರಳ । ಮಂಜಿನ ಮಳೆ। ಸುರಿದರೆ ಈ ಭೂತಳ ॥ ಜರಿದು ಬೀಳುವುದುಂಟೆ ನಿನ್ನಸ್ತ್ರ ಪಾರ್ಥನ । ಸರಿಸಕ್ಕೆ ಬಹುದೆ ನೋಡ ॥೪॥

ಸಾಕು ಸಾಕೆಲೊ ಪಾರ್ಥನೆ । ಸುಮ್ಮನೆ ಶೌರ್ಯ । ವ್ಯಾಕೆಲೊ ನಮ್ಮೊಡನೆ ॥ ಆ ಕುರಿಪೆರ್ಚಿದ-ರಾನೆಯಪ್ಪುದೆ ಬಹು । ಜೋಕೆಯೆಂದೆನುತೆಚ್ಚನು ॥೫॥ ॥೪೩೩॥

ಭಾಮಿನಿ

ಶರಧಿಯಂಬರದೊಡೆಯ ಕೇಳೈ । ಪರಮ ಸಾಹಸಿ ನೀರವಂತನ । ಶರಹತಿಗೆ ಭುವಿಗೊರಗಿ ಮೆಲ್ಲನೆ ಚೇತರಿಸುತೆದ್ದು ॥ ಶಿರವ ತಗ್ಗಿಸಿಕುಳಿತು ಲಕ್ಷ್ಮೀಯರಸನಂ ನೆನೆನೆನೆದು ತನ್ನಯ । ಪರಮ ಸಖನಾಗಿಪ್ಪಹನುಮನ ನೆನೆದ-ನಾಕ್ಷಣದಿ ॥೧॥ ॥೪೩೪॥

ರಾಗ ಮಾರವಿ ಏಕ ತಾಳ

ನೆನೆದಾ ಕ್ಷಣದಲಿ ಹನುಮನು ನಡೆತಂ । ದ ನಿಮಿಷರೊಲ್ಲಭನ ॥ ತನಯನಿಗೆಂದ ನೀನ್ಯಾತಕೆ ತನ್ನನು । ನೆನೆದುದನರುಹೆನಲು ॥೧॥ ನರನೆಂದನು ಕೇಳ್ ಮರುತ ಕುಮಾರಕ । ಪರಮ ಸಖಿತ್ವದಲಿ ॥ ಧುರಕೆ ಸಹಾಯವನೆಸಗೆನೆ ರಾಮನ । ಚರಣ ಭಜಕನೆಂದ ॥೨॥ ಎನ್ನ ಸಹಾಯಗಳೇನದ ನುಡಿನುಡಿ । ನಿನ್ನಂದದ ಭಟರು ॥ ಎನ್ನಲು ಬಿಡಲಿಕ ಸಾಧ್ಯವ ಮನಸಿನ । ನಿರ್ಣಯ ವಿನಿತೆಂದ ॥೩॥ ಮರಚರ ವರ್ಯನೆ ಲಾಲಿಸು ಈ ಬಡ । ಧರಣಿಪ ನಿವನೆಚ್ಚ ॥ ಶರದಲಿ ಸೋತುದು ಮೋಹರವೆಲ್ಲವು । ಧುರಕೈದುವೆ ನಾನು ॥೪॥ ಚಲಿಸದೆ ರಥದೊಳು ನೆಲಸುತ ಕಾಳಗ । ದೊಳು ಜಯವನು ನಮಗೆ ॥ ಫಲಿಸುವ ತೆರ ಮಾಡೆಂದೆರಗಲು ಮಿಗೆ । ಚಲನಾತ್ಮಜ ನುಡಿದ ॥೫॥೪೩೫॥

ರಾಗ ಶಂಕರಾಭರಣ ರೂಪಕ ತಾಳ

ಸುರಪಜಾತ ಕೇಳು ನಿನ್ನ ಸ್ಯಂದನಧ್ವಜ । ವೆರಸಿಕುಳಿತರಿವನ ಗೆಲ್ವೆ ಎಂಬೆ ಕುಂತಿಜ ॥ ಭರದಿ ತಾನೆ ಭೂಪನನ್ನು ಗೆದ್ದರಾಗದೆ । ಪರಿಕಿಸೆನ್ನ ನೆನಲು ಪೇಳ್ದ । ನರನು ಮೀರದೆ ॥೧॥ ತಾನೆ ಧುರಕೆ ನಿಂತು ಬಪ್ಪ ಹಾನಿ ವೃದ್ಧಿಯ । ಏನ ನೋಡದುಳಿದು ನಿನ್ನ ನೂಕಲೆಂದೆಯ ॥ ಜಾಣತನದಿ ಕಾದು ನೀನು ಎಂದು ನುಡಿಯುತ । ಪ್ರಾಣಧಾರಸುತಗೆ ಪೇಳ್ದ । ನಿನಿತು ವಿಹಿತವ ॥೨॥ ಬಳಿಕ ಮರುತ ಜಾತ ಬೇಗ ಸೂಟಿಯಿಂದಲಿ । ಇಳೆಯ ಪತಿಯ ನೋಡಿ ಭರದಿ ನುಡಿದ ನಗುತಲಿ ॥ ಭಳಿರೆ ನೃಪತಿ ನಿನ್ನ ಕಲಹ ಘನಸವಲ್ಲಿದು । ಗಳಿಗೆಯಲ್ಲಿ ನೋಡಬಹುದು । ಶೌರ್ಯ ನಿಲುವದು ॥೩॥ ॥೪೪೨॥

ರಾಗ ಸೌರಾಷ್ಟ್ರ ತಾಳ ತ್ರಿವುಡೆ

ಹನುಮನೆಂದುದ ಕೇಳಿ ಪಾರ್ಥಜ । ಕಣುಗಳಲಿ ಕಿಡಿ ಸೂಸುತಾ ಕ್ಷಣ । ಬಣಗು ಮರ್ಕಟ ಗಣ್ಯವಲ್ಲೆಂ । ದೆನುತ ಲೆಚ್ಚ ॥೧॥ ಮರುತಸುತನವ ನೋಡಿ ಬೇಗದಿ । ಕರದ ಮುಷ್ಟಿಯೊಳದರ ಪಿಡಿಯುತ। ಗರುಡ ಉರಗನ ಕೊಂದ ತೆರದೊಳು । ಮುರಿಯೆ ನುಡಿದ ॥೨॥ ಭ್ರಷ್ಟ ಕೋಡಗ ವನದಿ ಫಲವನು । ಇಷ್ಟದಿಂ ಮೆಲದಿಂದು ತನ್ನೊಳು । ಕಷ್ಟವನು ಬಯಸದಿರು ಕರೆ ಕರೆ । ಶ್ರೇಷ್ಠ ನರನ ॥೩॥

ಕೊಳಚೆ ನೀರನು ದಾಟದವ ಬಲು । ಜಲಧಿಯುತ್ತರಿಸುವನೆ ತನ್ನನು । ಗೆಲುವುದೆಂದೆನುತೆರಗೆ ಬಿದ್ದನು। ಇಳೆಗೆ ಭೂಪ ॥೪॥ ಅರೆ ಕ್ಷಣದಿ ಚೇತರಿಸಿ ಬಳಿಕಾ । ನರಪತಿಯು ಕೋಪದೊಳು ಪವನನ। ತರಳಗೆಂದನು ಗೆಲ್ದ ಹೆಮ್ಮೆಯ । ಭರದಿ ನಿಲಿಪೆ ॥೫॥ ॥೪೪೭॥

ರಾಗ ಭೈರವಿ ಏಕ ತಾಳ

ಅತ್ತಲು ವಿಜಯನ ಸುತನು । ಬಲು । ಶಕ್ತಿಲಿ ಕೋದಂಡವನು ॥ ಎತ್ತುತ ಕರ್ಣಾಂತರಕೆ । ಬಿಡ। ಲತ್ತಲು ತೀರ್ಚಿದ ನೆಲಕೆ ॥೧॥ ಪಡಪಡ ಎನುತಾರ್ಭಟಿಸಿ । ಮುಂ।ಗಡೆಯಲಿ ಕೋಪವ ಧರಿಸಿ ॥ ದೃಢತರ ಮುಷ್ಟಿಲಿ ತಿವಿಯೆ । ನೃಪ । ತಡೆದುರೆತಪ್ಪಿಸಿ ನಲಿಯೆ ॥ ೨॥ ಉಗ್ಗಡದರಿ ಭಟನನ್ನು । ಧರೆನುಗ್ಗುವ ತೆರದೊಳಗಿನ್ನು । ಜಗ್ಗಿಸು ತೆಡಕಾಲಿಂದ । ಕೆಡೆ । ದುಗ್ಗಡದೊಳಗಿರಲಂದ ॥೩॥ ಕಿಕ್ಕಿರಿ ಕಿರಿ ಕಿರಿ ಎನುತ। ಬಿಸಿ । ಯೊಕ್ಕುದು ಬಾಯೊಳು ರಕುತ ॥ ಗಕ್ಕನೆ ಪಾರಲ್ಕತ್ತ । ನೃಪ । ಪಕ್ಕನೆ ನಕ್ಕನು ಮತ್ತ ॥೪॥॥೯೫॥

ಕಂದ ಪದ್ಯ

ಹರಿಯಾತ್ಮಜನುಂ ಮೈಮರ । ದೊರಗಲ್ ಹರಿಮೊಮ್ಮನು ಹರಿಯೋಲ್ ಗರ್ಜಿಸುತಂ ॥ ಹರಿಸುತನಂ ಮೂದಲಿಸುತ । ಪರಿಪರಿಯಿಂದಂ ತಾಜರೆ ದಾಡಿದ ನಾಗಳ್ ॥೧॥ ॥೪೫೨॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಎಲವೊ ಬಾಹಿರ ಭಂಡ ಫಲುಗುಣ । ಕೊಳುಗುಳದಿ ನಿನ್ನವರ ಪರಿಯನು । ತಿಳಿದು ನೋಡ್ಯೆ ತಲೆಯ ತಗ್ಗಿಸಿ । ಕುಳಿತುದ್ಯಾಕೈ ॥೧॥ ಕಪ್ಪವನು ತರಲೆನುತ ನೀ ಬಹು । ಕ್ಷಿಪ್ರದಿಂ ಪೊರಟಿಂದು ಸೋತೈ। ಕಪ್ಪುಗೊರಳನ ಕೂಡೆ ಸೆಣಸಿದ । ದರ್ಪ ಹೋಯ್ತೆ ॥೨॥ ಗಂಡು-ತನ ನಿನಗ್ಯಾಕೆ ಮೂರ್ಖರ । ಗಂಡ ಮೀಸೆಯದ್ಯಾಕೆ ವಿಧವೆಯ । ಹೆಂಡ್ಯರಂದದಿ ಪೋಗು ವಸನವ । ಮಂಡೆಗಿರಿಸಿ ॥೩॥ ಧರಣಿ ಪತಿ ಧರ್ಮಜನು ನಿನ್ನಯ । ಬರವ ನೋಳ್ಪನು ಸಾಕು ಕಪ್ಪವು । ತುರಗದಾಶೆಯ ಬಿಟ್ಟು ತೆರಳೈ । ಪುರಕೆ ಬೇಗ ॥೪॥ ॥೪೫೬॥

ಭಾಮಿನಿ

ಕುಂಡದಗ್ನಿಗೆ ಹವಿಯ ತುಪ್ಪದ । ಭಾಂಡ ಸುರಿದಂತಾಯ್ತು ಸೂಕರ । ಗಂಡಲೆದ ಹಾಗಾಯ್ತು ಬಳಲಿಕೆ ಹೋಯ್ತು ಫಲುಗುಣಗೆ ॥ ಗಂಡ ತನದುರಿ ಹೆಚ್ಚಿಸಲೆ ಹುತ ।ಕೊಂಡದಗ್ನಿಗೆ ವಾಯು ಬೆಂಬಲ। ಗೊಂಡವೋಲ್ ನರನೆದ್ದು ತಿವಿದನು ಬಿಲ್ಲಕೊಬ್ಬಿನಲಿ ॥೧॥ ॥೪೫೭॥

ರಾಗ ಶಂಕರಾಭರಣ ಅಷ್ಟ ತಾಳ

ಪೋರ ನೀನೇನೆಂದೆ ಎನ್ನನು । ಈಗ । ಹೀರುವೆ ನೋಡ್ನಿನ್ನ ಕರುಳನು ॥ ಮಾರಿದೆ ತಲೆಯೆನ್ನ

ಬಾಣಕೆ । ಇನ್ನು । ಜಾರಲಿಕೆಡೆಗೊಡೆ ಠಾಣಕೆ ॥೧॥ ಎಂದು ಬ್ರಹ್ಮಾಸ್ತ್ರವ ತೆಗೆದನು । ಆತ । ನಂದದಿ ನೃಪನು ಮಂತ್ರಿಸಿದನು ॥ ಬೆಂದುದಿಬ್ಬರ ಶರದುರಿಯಲಿ । ಜಗ । ವೊಂದಾಗಿ ಬೊಬ್ಬಿಟ್ಟರಲ್ಲಲ್ಲಿ ॥೨॥ ನಡುಗಿದರಮರರು ಭಯದಲಿ । ರಣ । ವಡಗಿಹರ್‍ಯಾರೊ ಹಾ ಇಂದಿಲಿ ॥ ಪೊಡವಿ ಶೀಕರಿಯಾಯ್ತು ಎನ್ನುತ । ಬೊಬ್ಬೆ । ಇಡಲದ ಕೇಳ್ದು ಬ್ರಹ್ಮನು ಮತ್ತ ॥೩॥ ಕರೆದನು ನಾರದ ಮುನಿಪನ । ಕಂದ । ತೆರಳಿ ಪೋಗೀಗ ಭೂಜನಪನ ॥ ಅರುಹು ಪಾರ್ಥಗೆ ನಿನ್ನಸುತನೆಂದು । ಭೂಪ । ಗರುಹು ಪಾರ್ಥನು ನಿನ್ನ ಪಿತನೆಂದು ॥೪॥ ಎಂತಾದರಿಬ್ಬರಸ್ತ್ರಂಗಳ । ಸ್ವಲ್ಪ । ಸಂತವಿಸೈಯ ಮಂತ್ರಂಗಳ ॥ ಶಾಂತ ಮಾಡೆನ್ನುತ್ತ ಕಳುಹಿದ । ಅತ್ತ । ಸಂತಸದಿಂದಲಿಕೋವಿದ ॥೫॥ ॥೪೬೨॥

ರಾಗ ನೀಲಾಂಬರಿ ರೂಪಕ ತಾಳ

ಹರಿ ನಾರಾಯಣ ಕೃಷ್ಣ ಕೇಶವ ಮಾಧವ । ಪರಮ ಮಂಗಲ ರೂಪನೆನುತ ಧರೆಯೊಳಗಣ ದುರಿತಗಳ ಸಂಹರಿಸುತ್ತ । ತರಣಿ ಪ್ರಕಾಶನೈತಂದ ॥೧॥ ಅಂಬುಜನಾಭ ಮುರಾರಿಮುಕುಂದ ಜೀ । ವಾಂಬಕ ನರಹರಿಯೆನುತ ॥ ತುಂಬುರದಲಿ ಹರಿನಾಮವ ನುಡಿಸುತ್ತ । ಕುಂಭಿನಿಗಿಳಿ ತಂದ ಮುನಿಪ ॥೨॥ ಕಂಡರಿಬ್ಬರು ಮನೋಭಾವದಿ ನುತಿಸುತ್ತ । ಮಂಡೆ ಚಾಚಿದರು ನಿತ್ತಲ್ಲಿ ॥ ಗಂಡುಸರೆನ ಬೇಕು ತಂದೆ ಮಕ್ಕಳು ನೀವು । ಉಂಡು ಹೆಚ್ಚಿದು ಮಾಳ್ಪ ರಣಕೆ ॥೩॥ ಜಗಕೆ ಕಂಟಕರಾಗಬೇಡಿ ನಿಮ್ಮಸ್ತ್ರಂಗ । ಳುಗುಳದಗ್ನಿಯ ಬೇಗೆಯಿಂದ ॥ ಶೆಗೆ ತಾಳಲಾರದೆ ಸುರರು ನಮ್ಮಯ್ಯಗೆ । ಮುಗಿದು ಪೇಳ್ವರು ನಿಮ್ಮ ಟೋಪ ॥೪॥ ಅದರಿಂದ ಬಂದೆ ಅಸ್ತ್ರಗಳ ಸಂತವಿಸಿರಿ । ನ್ನದರ ಮೇಲಿನ ಪೌರಾಣವನು ॥ ಅದನ್ನೆಲ್ಲ ನಿಮಗೆ ನಾ ತಿಳಿಸುವೆನೆನಲಿಬ್ಬ ।ರೊದಗಿ ತಂದರು ಶಾಂತಕಸ್ತ್ರ ॥೫॥ ॥೪೬೭॥

ಭಾಮಿನಿ

ಜಗಕೆ ಮಂಗಲವಾಗೆ ನಾರದ । ತೆಗೆದು ಬಿಗಿಯಪ್ಪಿದನು ಇಬ್ಬರ । ಸುಗುಣನಿವ ತಾಲೂಪಿಗುದಿಸಿದ ಕಂದನಾಗಿಹನು ॥ ಹಗರಣದೆ ಪಿತನೊಡನೆ ಹಿಂದಕೆ । ಮುಗುದೆ ಲೂಪಿಯ ಕೂಡೆ ಪಾರ್ಥನು । ವಿಗಡ ಗರ್ಭದಿ ನಾನು ಪುಟ್ಟಿದೆ ಪಿತಗೆ ಸಂತವಿಸು ॥೧॥ ೪೬೮॥

ರಾಗ ಭೈರವಿ ಝಂಪೆ ತಾಳ

ಮುನಿಪ ನಾರದನಿಂತು । ಜನಕ ಸುತರೆಂದೆಂಬು । ದನು ಪೇಳೆ ಫಲುಗುಣನು । ಮುನಿಯ ಪದಕೆರಗಿ ॥ ವಿನಯದಿಂಕೇಳ್ದನಿವ । ತನಯನೆಂಬುವ ಪರಿಯ । ತನಗೆ ಪೆಸರಿಟ್ಟದರ । ಕ್ಷಣದಿ ಪೇಳಯ್ಯ ॥೧॥ ಮರೆತೆಯೇನೈ ಪಾರ್ಥ । ವರ ತೀರ್ಥಗಳ ನೀನು । ಚರಿಸಲೈತಂದಾಗ । ತರುಣಿಲೂಪಿಯನು ॥ ನಿರದೆ ಗಡೆ ಏಳು ದಿನ । ಇರುಳಿರ್ದು ಅವಳಲ್ಲಿ । ತರುಣಿ ಗರ್ಭವ ಧರಿಸಿ । ತರಳನನು ಪಡೆಯೇ ॥೨॥ ಚಿಣ್ಣನಿಗೆ ಪ್ರಾಯ ಬರೆ । ನಿನ್ನ ಮಾವನ ರಾಜ್ಯ ।ವನ್ನು ಕೊಟ್ಟಾತನನು । ಮನ್ನಿಸಿದ ಬಳಿಕ ॥ ನಿನ್ನ ವಿರಹದಿ ಲೂಪಿ।

ತನ್ನ ಅಕ್ಕನ ಗೃಹಕೆ । ಕನ್ನೆಮಣಿ ಐದಿದಳು । ಇನ್ನು ಬರಲಿಲ್ಲ ॥೩॥ ಎಂದುಸುರಿ ನರನಡಿಗೆ । ಕಂದಗೊಪ್ಪಿಸಿ ಮುನಿಪ । ನಂದು ಬೀಳ್ಕೊಂಡ ಹರಿ । ಎಂದು ಸ್ತುತಿಸುತ್ತ ॥ ಕಂದನನು ತೆಗೆದಪ್ಪು । ತಂದು ಸಂತಸದಿಂದ। ಮಂದಿ ಮಾರ್ಬಲ ಸುಖದೊ।ಳಿಂದಿರ್ದರತ್ತ ॥೪॥ ॥೪೭॥

ರಾಗ ಕೇತಾರ ಗೌಳ ಅಷ್ಟ ತಾಳ

ಇತ್ತಲೀ ಪರಿಯಿಂದ ಪಾರ್ಥಿಯು ಪಾರ್ಥಗೆ । ಇತ್ತು ಬಹುವಸ್ತುವನು ॥ ಮತ್ತಲ್ಲಿ ನಾಲ್ಕೊಂದು ದಿವಸ ನಿಲ್ಲುತ ಮಂತ್ರಿ । ಗಿತ್ತುತಾ ಪೊರಮಟ್ಟರು ॥೧॥ ಮಯೂರ ಧ್ವಜಾದಿ ಪೃಥ್ವಿಪರೊಳು ಕಪ್ಪವ । ನೊಯಿದು ಮುಂದೊತ್ತಿ ಪೋಗೆ ॥ ಪ್ರಿಯ-ನಭಿಲಾಶೆಯಿಂದಲಿ ಪೊಕ್ಕಳಾ ದಂತಿ । ಪುರವರ ಕಾ ಪ್ರಮೀಳೆ ॥೨॥ ಕಲಶ ಕನ್ನಡಿ ನೃತ್ಯ ಗೀತ ಚಾಮರ ವಾದ್ಯ।ಗಳ ಘೋಷದಿಂ ಬರಲು ॥ ಇಳೆಗಿಳಿದರೊ ದೇವ ವಧುಗಳೆನುತ ಚೋದ್ಯ । ದೊಳಗಿದ್ದರಲ್ಲೈಲ್ಲರು ॥೩॥ ಇಳಿದು ದಂಡಿಗೆಯ ತಂದಿಹ ಸರ್ವಮಯ ರತ್ನ।ಗಳ ಯಜಮಾನಿಗೊಪ್ಪಿಸಿ ॥ ಕೆಳದಿಯರೊಡನೊಂದಿಸಿದಡಾಕೆಯನು ಬೆಸ । ಗೊಳಲೆಂದಳವಗೆ ದಿಟ ॥೪॥ ಅನಿತರೊಳೈತಂದು ರಜತನೃಪಾಲನು । ಜನಪಗೊಂದಿಸಲು ನೋಡಿ ॥ ಮನ ಹರುಷದೊಳಾತ-ನಿರವ-ನರಿತು ಮನ್ನಣೆಗೆಯ್ಯುತಿರಲಾಕೆಯು ॥೫॥ ಮತ್ತೆ ಭೀಮಗೆ ನಮೋ ಎನ್ನುತ್ತ ಪೋಗಿತ । ನ್ನತ್ತೆಕುಂತಿಯ ಪಾದಕೆ ॥ ಗುತ್ತಿ ತಲೆಯ ಸೌಭದ್ರಾಂಗನೆಯಳ ದಿವ್ಯ । ಚಿತ್ತವ ಪಡೆದಳಾಗ ॥೬॥ ಚದುರೆ ಮುಂದೊತ್ತಿ ಕಂಡಳು ನಾರಿ ಮಣಿಯ ದ್ರೌ।ಪದಿಗೊಂದಿಸಲ್ಕಾಕೆಯು ॥ ಕುದಿದು ಚಿತ್ತದೊಳೇನೊಂದು-ಸುರದೆ ತಾನು ಕ । ಣ್ಣೆದರು ತಿಂತೆಂದಳಾಗ ॥೭॥ ॥೪೮॥

ರಾಗ ಘಂಟಾರವ ಏಕ ತಾಳ

ಭಳಿರೆ ಶಭಾಸು ಸ್ತ್ರೀ । ಬಳಗ ಸಹಿತ ಬಂದೀ।ಗೊಳ ಪೊಕ್ಕೊಂದಿಸಿದೆಯ । ತಿಳಿದೆ ನಾ ಬಗೆಯ ॥೧॥ ಸುಳಿಗುರುಳುತ್ತ ಮೂ।ದಲೆ ಯಾಕೆ ಪಾರ್ಥನು । ಕಳುಹಿಸಿದುದರಿಂದೀ । ನಿಳಯಕ್ಕೆ ತಂದೆ ॥೨॥ ಜಾರೆಯಳಂದದೊ।ಳ್ಯಾರಾರ ಪುರುಷರ । ಹಾರೈಸಿ ಬಂದೆ ಬ।ಜಾರಿ ಮೆಚ್ಚಿದೆನು ॥೩॥ ಜಾರೆಯಲ್ಲವ್ವ ನಾ। ನೂರ ನಾಳುವ ದೊರೆ । ಬೇರಾರ ಪುರುಷರ । ಹಾರೈಸಲಿಲ್ಲ ॥೪॥ ನರನೆಂದಡೇನನ್ನ । ಪುರುಷನೊ ವರನೊ ನ ।ಮ್ಮರೆಯ ನಲ್ಲದೆ ನೀನು । ಮರುಳು ಮಾಡಿದೆಯ ॥೫॥ ಮರುಳು ಮಾಡಿದುದಿಲ್ಲ । ತೆರಳು ನಿನ್ನರಸನಾ।ಗಿರುವೆನೆಂದುದರಿಂದೀ । ಪುರಕಿಲ್ಲಿ ಬಂದೆ ॥೬॥ ಇಂತು ಮಾತಾಡ್ವದ । ಕುಂತಿ ಕೇಳುತಲಿವರ। ಸಂತೈಸಿದಳು ಗುಣ । ವಂತೆಯಾಜಗಳ ॥೭॥ ಮುಂತೆ ಪಾರ್ಥನು ಪೃಥ್ವೀ।ಕಾಂತರ ಗೆಲಿದು ಶ್ರೀ।ಕಾಂತಸಹಿತ ಬಂದ । ದಂತಿ ಪಟ್ಟಣಕೆ ॥೮॥ ತುರಗ ಕಪ್ಪವ ಸಹ । ಧರಣಿ ಪಗೊಪ್ಪಿಸಿ ।ಕರಗಳ ಮುಗಿದು ನಿಂ।ದಿರಲು ಕಂಡೆ ಮಜ ॥೯॥ ಹರುಷಾಬ್ಧಿಯೊಳಗಾಡಿ । ಹರಿಯನ್ನು ಕೊಂಡಾಡಿ । ನರನನಪ್ಪುತ ಬಂದ । ವರ ಮನ್ನಿಸೆಂದ ॥೧೦॥ ॥೪೯॥

ರಾಗ ಕಾಂಬೋದಿ ಝುಂಪೆ ತಾಳ

ಬನ್ನಿರೈ ಸಕಲ ಪೃಥ್ವಿಪರು ಕುಳ್ಳಿರಿ ಬಹಳ । ನೊಂದಿರಾಹವದೊಳಗೆ ನೀವು ॥ ಕಂದ ವೃಷಕೇತು ಬಾ ಮಗನೆನುತಲಪ್ಪಿ ಗೋ।ವಿಂದಗೆಂದನು ಕಯ್ಯ ಮುಗಿದು ॥೧॥ ಲಕ್ಷ್ಮೀ ಸಮೇತ ನೀನಿವರೆಲ್ಲರನು ಬಿಡದೆ । ರಕ್ಷಿಸಿದೆ ನಮ್ಮೊಳಹುದೇನು ॥ ಈಕ್ಷಿತಿಯೊಳಿಹ ಭೂಮಿಪರಗೆಲಲು ನರಗರಿದೆ । ಪಕ್ಷಿ ವಾಹನ ನಿನ್ನ ದಯವು ॥೨॥ ಅನಿತರೊ ಳಗಾ ಪಾರ್ಥಿ।ಯಾ ನೀರವಂತ ಯಮ।ಜನ ಪಾದ ಕೊಂದಿಸಲ್ಕವನು ॥ ಮನುಮಥನ ಪಿತನೊಳಿವನ್ಯಾರೆಂದು ಕೇಳಲಾ । ತನಿಗೆಂದ ನಗುತ ಶ್ರೀವರನು ॥೩॥ ॥೪೯೨॥

ರಾಗ ಸೌರಾಷ್ಟ್ರ ಅಷ್ಟತಾಳ

ಒಮ್ಮೆ ಗೀತನು ಕೇಳು ಮಣಿಪುರಾಧಿಪನೀತ । ಶಾಮಜಾತ ॥ ನಿನ್ನ । ತಮ್ಮ ಪಾರ್ಥನ ಸುತ ಬಭ್ರುವಾಹನನೀತ । ಶಾಮಜಾತ ॥೧॥ ಅರಸುಗಳೊಳಗೆ ಕೋವಿದ ನೃಪನೀತನು ॥ ಶಾಮಜಾತ । ಯಜ್ಞಾ ತುರಗವ ಕಟ್ಟಿ ಪಾರ್ಥನ ಕೆಡಹಿದ ನೀತ । ಶಾಮಜಾತ ॥೨॥ ಅಳಿದ ಪಾರ್ಥನ ಸಂಜೀವನದಿಂದೆಬ್ಬಿಸಿದನು। ಶಾಮಜಾತ । ಪಡೆ । ದಳು ಚಿತ್ರಾಂಗದೆ ತಾಯಿ ನರಗವ ಳರಸಿಯು । ಶಾಮಜಾತ ॥೩॥ ವರ ರತ್ನಗಿರಿ ಪುರದರಸ ನಿರಾವಂತ । ಶಾಮಜಾತ । ಮಾತೆ । ತರುಣಿ ಲೂಪಿಯ ಮಗ ಪಾರ್ಥಗೆ ತರಳನು ಶಾಮಜಾತ ॥೪॥ ॥೪೯೬॥

ವಾರ್ಧಿಕ್ಯ

ಹರಿಯೆಂದುದಂ ಕೇಳಿ ಹರುಷಾಬ್ಧಿಯೊಳಗಾಳಿ । ತರುಣರಂ ಬಿಗಿಯಪ್ಪುತರಸ ಧರ್ಮಜನಾಗ। ಗುರುಮುಖದಿ ವಿಧ್ಯುಕ್ತದಿಂವಾಜಿಮೇಧವಂ ಕಳಿದು ಪೂರಯ್ಸಲಲ್ಲಿ ॥ ಇರಲು ಶ್ರೀ ಹರಿ ಯಮಜನಾನನವ ನೋಡುತ್ತ । ತರುಣಿ ಮಣಿಯಾ ಪ್ರಮೀಳೆಯ ಕರೆದು ತನ್ನ ಹತ್ತಿರೆ ಕುಳ್ಳಿರಿಸಿಕೊಂಡು ನರನ ಮುಂದರಸಗಿಂತೆಂದನಾ ಶ್ರೀಶ ನಗುತ ॥೧॥ ॥೪೯೭॥

ರಾಗ ಮಧು ಮಾಧವಿ ಏಕ ತಾಳ

ಕೇಳು ಧರ್ಮಜ ಪೇಳುವ ಮಾತ। ಬಾಲೆಯಿವಳ ಪೂರ್ವ ಸ್ಥಿತಿಯೆಂಬೆ ಗುರುತ ॥ಪಲ್ಲ॥ ಲಲನೆಯಿವಳು ಸಾಮಾನ್ಯಳೆ ಸ್ತ್ರೀರಾಜ್ಯ । ಗಳ ಪಾಲಿಪಳು ಸತ್ಯದೊಳು ಗುಣಮಣಿಯು॥ ಚೆಲುವೆ ನಿನ್ನಶ್ವವೀ ಕಲಶಕುಚೆಯು ಕಟ್ಟಿ । ಕಲಹಕೆನುತ ಪಾರ್ಥನೊಳು ನಿಂದಳಯ್ಯ ॥೧॥ ಅಂಬುಜಾಕ್ಷಿಯು ಧನುವಂಬ ಪಿಡಿದು ತನ್ನ । ಬಿಂಬ ಸ್ವರೂಪನೊಳ್ ರಂಭೆ ನಿಂದಿರಲು ॥ ಅಂಬರ ವಚನದಿ । ಕಂಬು ಕಂಠಿನಿ ಯುದ್ಧ । ಸಂಭ್ರಮವಲ್ಲ ಬೇ।ಡೆಂಬ ಸಮಯದೊಳು ॥೨॥ ಒಡನಿತ್ತ ಭಾಷೆ ನೀನಡೆ ಹಸ್ತಿಪುರಕೆ ನಿನ್ನೊಡಗೂಡುವೆನು ಜ್ಯೇಷ್ಠನೊಡಬಡಿಕೆಯಲಿ ॥ ಮಡದಿ-ಗೀ ಪರಿ ಭಾಷೆಗೊಡಲು ಬಂದಳು ಮುಂದೆ। ನಡೆವದೆಂತೆನಲೆಂದ । ನಡಿಗೆರಗುತ್ತ ॥೩॥ ॥೫೦೦॥

ರಾಗ ಮಧ್ಯಮಾವತಿ ಏಕ ತಾಳ

ಶ್ರೀಲೋಲ ಚಿತ್ತಾವಧಾನ ಪರಾಕು । ಆಲಸ್ಯವಿರದೆ ಪಾಲಿಸಿಕೊಳಬೇಕು ॥ ಬಾಲೆಗಿತ್ತಿಹ ಭಾಷೆ ಸಲಿಸಲು ಬೇಕು । ಈ ಲಗ್ನಕಖಿಳ ವಸ್ತೊದಗಿಸಬೇಕು ॥೧॥ ನರನಿತ್ತ ಭಾಷೆಪೊಳ್ಳಾದರೆ ಕುಲಕೆ । ಬರುವುದು ಕೊರತೆ ಸಾಮಾನ್ಯಳೆ ಈಕೆ ॥ ಬರೆಸು ಪತ್ರಿಕೆ ಸರ್ವ ಜನ ಬರುವುದಕೆ । ಪುರವ ಶೃಂಗರಿಸಬೇಕಲ್ಲ ನಾವಿದಕೆ ॥೨॥ ಗುರುವೆಲ್ಲಿ ಬರಲಿ ಬೇಕಾದ ಸಾಹಿತ್ಯ । ತರಿಸಿಕೊಡಿಸು ಬೇಗದಲಿ ಕಲಿ ಪಾರ್ಥ ॥ ಹರಿಯಪ್ಪಣೆಯನು ಪಡೆದು ಸುಮುಹೂರ್ತ । ವೆರಸಿ ವರಿಸು ಮಾತಿಗಿದುವೆ ಯಥಾರ್ಥ ॥೩॥ ॥೫೦೩॥

ಭಾಮಿನಿ

ಅರಸನೆಂದುದಕಾಗ ಪಾರ್ಥನು । ಹರಿಯ ನೇಮವ ಪಡೆದು ಪೃಥ್ವೀಶ್ವರರ ಬರಿಸುತ ಮಂಟಪಾದಿ ಸಮಸ್ತ ಶೃಂಗರವ ॥ ವಿರಚಿಸಿದರಾ ದೇವಲೋಕದ । ಪುರವ ಹೀಯಾಳಿಸುತ ಬಳಿಕಾ । ಧರೆಸುರರು ನಡೆತಂದು ನೆರೆದರು ಮದುವೆ ಚಪ್ಪರದಿ ॥೧॥ ॥೫೦೪॥

ರಾಗ ಕಾಪಿ ಅಷ್ಟ ತಾಳ

ವರ್ಣೋತ್ತಮರು ಬಂದರಾಗ । ಶಾಸ್ತ್ರ । ನಿರ್ಣಯ ತರ್ಕವ ಕಲಿತವ ಬೇಗ ॥ ಪಲ್ಲ ॥ ಪಟ್ಟೆಯ ನುಡುತಲಿ ಬೇಗ । ಗೋಪಿ । ಗಟ್ಟಿಯ ತಳೆದವರಾಗ । ಪಣೆಗಿಟ್ಟ ನಾಮವು ಚೆಲ್ವದಾಗ । ಮ್ಯಾಲೇ ಮಟ್ಟಿಯ ಪೂಸುತ್ತಲಾಗ । ತಾವು । ಒಟ್ಟುಗೂಡುತಲಂದು ಚಿಕ್ಕ ಮಕ್ಕಳನೆಲ್ಲ । ತಟ್ಟನೆ ಕರೆ ಕರೆ ದಟ್ಟಹಾಸದೊಳಾಗ ॥೧॥ ಹೊಟ್ಟೆಗೆ ಮೂರ್ನಾಮವೆಳೆದು । ದೊಡ್ಡ । ಬೊಟ್ಟನಿಡುತ ಗಂಧ ಬಡಿದು ॥ ತಮ್ಮ । ಹುಟ್ಟು ಪುಸ್ತಕ ತೆಗೆತೆಗೆದು । ಗಂಟ । ಕಟ್ಟಿ ಗಟ್ಟಿಗರೆಂದು ನಲಿದು । ಚಂಡಿ । ಬಟ್ಟೆಯ ತಲೆಗೆ ಹೇರೊಟ್ಟೆಯಲ್ಲಾಡಿಸಿ । ಬಟ್ಟೆ ವಿಡಿದು ಹಸ್ತಿ ಪಟ್ಟಣಕವರೆಲ್ಲ ॥೨॥ ತರಳರು ವೃದ್ಧರು ಸಹಿತ । ನಾವು । ತೆರಳುವ ಮದುವೆಗೆನುತ್ತ । ಅಲ್ಲಿ । ಪರಿ ಪರಿಭಕ್ಷ್ಯಗಳುಣುತ । ಮತ್ತು । ಕರ ತುಂಬ ದಕ್ಷಿಣೆಗೆನುತ । ಬೇಗ । ಬರಬೇಕೆನ್ನುತ್ತಲಿ ಕೊರಳ । ರುದ್ರಾಕ್ಷಿಯ । ಸರವಲುಗಿಸುತ ಶಿಷ್ಯರ ಕೂಡುತವರಾಗ ॥೩॥ ॥೫೦೭॥

ಭಾಮಿನಿ

ಅರಸ ಧರ್ಮಜ ಸರ್ವರನು ಸತ್ಕರಿಸಿ ಸಭ್ಯುಪಚಾರಗೆಯ್ಯಲು । ತರುಣಿಯಳ ಶೃಂಗರಿಸಿ ಮೆಲ್ಹಾಸಿನೊಳು ನರಸಹಿತ ॥ ಇರುತಿರಲು ವಿಧ್ಯುಕ್ತದಿಂದಲಿ । ತರುಣಿಮಣಿಯಂದಾ ಪ್ರಮೀಳೆಯ । ನರಗೆ ಮಡದಿಯ ವಿರಚಿಸುತಲರುಶಿನವ ತಿಮರಿದಳು ॥೧॥ ॥೫೦೮॥

ರಾಗ ಶಂಕರಾಭರಣ ಏಕ ತಾಳ

ಪತಿಗರುಶಿನ ತಿಮರಿದಳಾಗ । ಆ । ಸತಿಗುಣಮಣಿ ನಾಚುತ ಬೇಗ ॥ ಪಲ್ಲ ॥ ಕರುಣದೋರುತ

ಸರವಲುಗಿಸುತಾಕ್ಷಣ । ಗುರು ಕುಚದೆಡೆಗೆ ಸೀರೆಯ ಬಲಿದು ॥ ಅರಸನ ಮುಖ ಕಮಲಕೆ ತನ್ನ ಕೋಮಲ। ಕರದಿಂದಲಿ ಮೆಲ್ಲ ಮೆಲ್ಲನೆಯು ॥೧॥ ಯುವತಿಯ ಮುಖ ಕಮಲವ ನೋಡುತ ಮತ್ತೆ । ಕುವಲಯಾಂಬಕಿ ಮುಖದೋರೆನುತ ॥ ಸುವಿಶಾಲದಿ ಮೋಹನ ಕರದಗ್ರದೊಳವಯಕೆ ತಿಮರಿದ ನರುಶಿನವ । ಸತಿಗರುಶಿನ ತಿಮರಿಯನಾಗ ॥೨॥ ॥೫೧೦॥

ಭಾಮಿನಿ

ಬಂದ ಭೂಸುರರನ್ನು ಮನ್ನಿಸು । ತಂದು ಕಳುಹುತ ಸಕಲ ನೃಪರನು । ಮಂದಿರಕ್ಕವರವರ ಕಳುಹಿಸಿ ಹರುಷದಿಂದಾಗ । ಚೆಂದದರಳಿನ ಮಳೆಯ ಸುರಿದರು । ಮಂದಗಮನೆಯರಂದು ಶೋಭನ ।ವೆಂದು ದಂಪತಿಯರಿಗೆ ಹರಿಯಾರತಿಯ ಬೆಳಗಿದರು ॥೧॥೫೧೧॥

ರಾಗ ಧವಳಾರ ಏಕ ತಾಳ

ಶುಂಭ ನಿಶುಂಭಾಂತಕಿಯಾ । ನಂಬಿದ ರತುನದಾರತಿಯಾ । ಕುಂಭ ಪಯೋಧರೆಯರು ಪಿಡಿಯುತ ॥ ಕಂಬುಕಂಠದ ದಿವ್ಯ ಸರವಲುಗಿಸುತಾ । ಅಂಬುಜಾಕ್ಷನ ಸಖಿಗಂಬುಜ ನೇತ್ರೆಗೆ । ಸಂಭ್ರಮದಾರತಿಯಾ । ಬೆಳಗಿರೆ । ಶೋಭಾನಂ ॥೧॥ ಹರಿದಶ್ವರೂಪನಂತೆ ಸೆವಾ । ಹರಿಸುತ ಕೇತನನಾಗಿರುವಾ। ಹರಿಭೂಷಣನ ಭಜಕ ಪಾರ್ಥನಿಗೆ । ಹರಿವೇಣಿಗೆ ಸ್ತ್ರೀಯರ ಗುಣಮಣಿಗೆ ಹರಿಣಾಕ್ಷಿಯರುಲ್ಲಾಸದಿ ನಲಿಯುತ । ಹರಿಯಾರತಿಯನು । ಬೆಳಗಿರೆ ಶೋಭಾನಂ ॥೨॥ ಮುತ್ತಿನ ಮಣಿ ಮಂಟಪದೀ । ಚಿತ್ರದ ಮೇಲ್ಪಾಸನದೀ ॥ ಅರ್ಥಿಯೊಳಿರುವ ಪ್ರಮೀಳೆಗೆ ನರಗೆ ಮುತ್ತೈದೆಯರಾರತಿಯ ಬೆಳಗೆ ॥ ಚಿತ್ತಜಪಿತ ನಿಮ್ಮ ಸಲಹಲೆಂದೆನುತಲೆ । ಮುತ್ತಿನಕ್ಷತೆಯ ತಳಿದರು । ಶೋಭಾನಂ ॥೩॥ ೫೧೪॥

ವಾರ್ಧಿಕ್ಯ

ಅನಿತು ದಂಪತಿಯರಿಗೆ ಮನುಮುನಿ ಸುರಾದ್ಯರುರೆ । ಚಿನುಮಯಾತ್ಮಕ ಕುಂತಿ ಧರ್ಮಜ ನಿಲಜ ಸಹಿತ । ಘನ ಹರುಷದಿಂದ ಪರಸಿದರು ಮಂಗಲ ವಾದ್ಯ ಘೋಷದಿಂದೇನೆಂಬೆನು ॥ ದಿನಪನಂ ಬಯಸುವಂಬುಜದಂತೆ ಕಾಂತನಂ । ಮನುಮಥಾಹವಕೆ ಬಯಸುವ ದಿವ್ಯ ಸತಿ ರತ್ನ ।ವನು ದಣಿಸಿದಂ ಪೂಶರಾಹವದಿ ಕಲಿಪಾರ್ಥ ಹಸ್ತಿನಾ ನಗರಿಯಲ್ಲಿ ॥೧॥ ಇಂತಾದ ಕಥೆಯ ನಾನೆಕ್ಷಗಾನದೊಳೊರೆದೆ। ಗೊಂತಿಲ್ಲ ಶಾಸ್ತ್ರದರ್ಥವನೋದಿದವನಲ್ಲ । ಎಂತಾದರಿದರ ಜರೆಯದೆ ಪ್ರಾಜ್ಞರೋದಿತಪ್ಪಿರಲು ತಿದ್ದಿಯೆ ಮೆರೆಸುತ ॥ ಸಂತೋಷದಿಂದೋದಿ ಕೇಳ್ದ ಸತ್ಪುರುಷರಿಗೆ । ಸಂತಾನ ಸೌಭಾಗ್ಯವಿತ್ತು ಪಾಲಿಪ ಲಕ್ಷ್ಮೀ । ಕಾಂತ ಬಿಡದನುದಿನದಿ ದೀರ್ಘಾಯುವಿತ್ತು ಹರುಷದಿ ನಡೆಸುವಂ ನಿಶ್ಚಯ ॥೨॥ ॥೫೧೬॥

ಮಂಗಲ ಪದ

ನೀಲ ಮೇಘ ಶ್ಯಾಮನಿಂಗೆ ।ಜಯ ಮಂಗಲಂ । ವ್ಯಾಳಶಯನ ಲಕ್ಷ್ಮೀ ಧವಗೆ । ಶುಭ

ಮಂಗಲಂ॥ ಕಾಲ ದೂರ ಭಕ್ತೋದ್ಧರಗೆ । ಜಯ ಮಂಗಲಂ । ಸ್ಥೂಲ ಸೂಕ್ಷ್ಮಭರಿತಸಿಂಗೆ । ಶುಭ ಮಂಗಲಂ ॥೧॥ ನಾರದಾದ್ಯರಿಂ ವಂದಿತಗೆ । ಜಯ ಮಂಗಲಂ । ಕ್ರೂರರಸುವ ಸೀಗಿದವಗೆ । ಶುಭ ಮಂಗಲಂ ॥ ಧೀರ ತರಳಗೊಲಿದವನಿಗೆ । ಜಯ ಮಂಗಲಂ । ಮಾರನಯ್ಯ ಜಗದೋದ್ಧರಗೆ । ಶುಭ ಮಂಗಲಂ ॥೨॥ ಮಹದ ತಮಭಾಸ್ಕರನಿಂಗೆ । ಜಯ ಮಂಗಲಂ । ಮಹಿಮನ ನಾನಾವತಾರಿಗೆ । ಶುಭ ಮಂಗಲಂ ॥ ಅಹಿಯ ಪೆಡೆಯ ತುಳಿದ ಹರಿಗೆ । ಜಯ ಮಂಗಲಂ । ಮಹಲಿಂಗನ ಸಖ ಮಾಧವಗೆ । ಶುಭ ಮಂಗಲಂ ॥೩॥ ॥೫೧೯॥

ಮಂಗಲ ಪದ

ನೀಲ ಮೇಘ ಶ್ಯಾಮ ಲಕ್ಷ್ಮಿ । ಲೋಲಗೆ ಮಂಗಲಂ । ವ್ಯಾಳಶಯನ ಕುಜನ ಕುಠಾರಗೆ ಶುಭ ಮಂಗಲಂ॥ ಕಾಲ ದೂರ ಭಕ್ತೋದ್ಧಾರಗೆ । ಜಯ ಮಂಗಲಂ । ಸ್ಥೂಲ ಸೂಕ್ಷ್ಮದೊಳು ಸದ್ಭರಿತನಿಗೆ। ಜಯ ಮಂಗಲಂ ॥೧॥ ನಾರದಾದ್ಯರಿಂದೊಂದಿತಗೆ । ಜಯ ಮಂಗಲಂ । ಕ್ರೂರರಸುವ ನೀಗಿದವಗೆ । ಜಯ ಮಂಗಲಂ ॥ ಧೀರ ತರಳಗೊಲಿದವನಿಗೆ । ಶುಭ ಮಂಗಲಂ । ಮಾರನಯ್ಯ ಜಗದೋದ್ಧಾರಗೆ। ಶುಭ ಮಂಗಲಂ ॥೨॥ ಮಹದಾ ತಮಭಾಸ್ಕರನಿಂಗೆ । ಶುಭ ಮಂಗಲಂ । ಮಹಿಮನ ನಾನಾವತಾರಗೆ। ಜಯ ಮಂಗಲಂ ॥ ಅಹಿಯ ಪೆಡೆಯ ತುಳಿದ ಹರಿಗೆ । ಶುಭ ಮಂಗಲಂ । ಮಹಲಿಂಗನ ಸಖ ಪ್ರೀತಿರಹಿತಗೆ ಜಯ ಮಂಗಲಂ । ನಿತ್ಯ ಶುಭ ಮಂಗಲಂ ॥೩॥ ॥೫೧೯॥

ಅಂತು ಸಂಧಿ ೧ಕ್ಕೆ ಪದ ೫೨೫ ಮರಿಗಳ ಮಹಾ ಶ್ರೀ ॥

ವಿಭವ ಸಂವತ್ಸರದ ಆಷಾಢ ಕೃಷ್ಣ ಪಕ್ಷದ ನವಮಿ ದಿವಸಕ್ಕೆ ಬುಧವಾರ ಗಂಟೆ ೨ಕ್ಕೆ ಬರೆದು ಸಮಾಪ್ತಿಯಾಗಿದೆ.

ಇದನ್ನು ಬರೆದಾತ ಮಂಗ್ಳೂರು ತಾಲೂಕು ಬಾಳೆಪುಣಿ ಮಾಗಣೆ ಕೈರಂಗಳ ಗ್ರಾಮದಲ್ಲಿರುವ ಹವ್ಯಕ ಬ್ರಾಹ್ಮಣ ಜಲ್ಲಿ ಕೇಶವ ಭಟ್ರ ಮಗ ನಾರಾಯಣ ಭಟ್ಟನ ಸ್ವಹಸ್ತ ಬರಹವಾಗಿರುತ್ತದೆ. ಪ್ರತಿಯಲ್ಲಿ ಇದ್ದ ರೀತಿ ಬರೆದಿರುವೆನು. ಸುಜನರು ನೋಡಿದ್ದಲ್ಲಿ ತಪ್ಪು ಇದ್ದರೆ ನನ್ನನ್ನು ಜರೆಯದೆ ತಿದ್ದಿಕೊಳ್ಳಬೇಕು ಎಂಬುದೇ ಪ್ರಾಜ್ಞರಿಗೆ ನನ್ನ ಅರಿಕೆ.

ದುರ್ಮತಿ ಸಂವತ್ಸರ ದಕ್ಷಿಣಾಯನ ಶರದೃತು ಆಶ್ವೀಜ ಕೃ ೩೦ ಯು (ತುಲಾ ೧೦) ಕುಜವಾರ ರಾತ್ರೆ ಗಂಟೆ ೭. ೪೫ಕ್ಕೆ ಬಂಟ್ವಾಳ ತಾಲೂಕು ಅಮ್ಮೆಂಬಳ ಕುರ್ನಾಡು ಗ್ರಾಮದ ತೆಕ್ಕುಂಜ ಶಂಕರ ಭಟ್ಟರ ಮಗ ಕೇಶವನು ಬರೆದು ಪೂರ್ತಿಗೊಳಿಸಿದುದು. ಅಲ್ಲಲ್ಲಿ ಯಥಾಮತಿ ತಿದ್ದಲಾಗಿದೆ.

27.10.1981

ಪ್ರಮೀಳೆ ಕಲ್ಯಾಣ

ಪಾತ್ರ ಪರಿಚಯ

೧.	ಅರ್ಜುನ	-	ಮಧ್ಯಮ ಪಾಂಡವ
೨.	ಪ್ರದ್ಯುಮ್ನ	-	ಪಾಂಡವ ಸೇನಾಧಿಪತಿ
೩.	ವೃಷಕೇತು	-	ಕರ್ಣ ತನಯ
೪.	ಹಂಸಧ್ವಜ	-	ಚಂಪಕ ಪುರಾಧಿಪತಿ
೫.	ಬಭ್ರುವಾಹನ	-	ಮಣಿಪುರದರಸ
೬.	ಅನುಸಾಲ್ವ	-	ಸೌಭನಗರಾಧಿಪತಿ
೭.	ಪ್ರಮೀಲೆ	-	ಸ್ತ್ರೀರಾಜ್ಯದ ರಾಣಿ
೮.	ದೂತಿಯರು	-	
೯.	ರಜತಕೇತು	-	ರಜತ ಪುರಾಧಿಪತಿ
೧೦.	ಚಾರಕರು	-	
೧೧.	ಕನಕ	-	ರಜತಕೇತನ ಮಂತ್ರಿ
೧೨.	ದುರ್ಮರ್ಷಣ	-	ರತ್ನಶಿಖರೇಶ ದಾನವ
೧೧.	ದುರ್ಮತಿ	-	ದುರ್ಮರ್ಷಣನ ತಮ್ಮ
೧೪.	ನಾರದ	-	ದೇವಋಷಿ
೧೫.	ಬ್ರಹ್ಮ	-	ಸೃಷ್ಟಿಕರ್ತ
೧೬.	ಶ್ರೀಕೃಷ್ಣ	-	ಭಗವಾನ್ ವಾಸುದೇವ.
೧೭.	ಊರ್ಧ್ವಕೇಶಿ	-	ದುರ್ಮರ್ಷಣನ ತಂಗಿ.
೧೮.	ಹನುಮಂತ	-	ಶ್ರೀರಾಮ ಭಕ್ತ.
೧೯.	ನೀರವಂತ	-	ರತ್ನಗಿರಿ ಪುರದರಸ
೨೦.	ಸತ್ಯಶೀಲ	-	ನೀರವಂತನ ಮಂತ್ರಿ
೨೧.	ಶತ್ರುಭಂಗ	-	ಸೇನಾಧಿಪತಿ
೨೨.	ಧರ್ಮರಾಯ	-	ಹಸ್ತಿನಾಪುರದರಸ
೨೩.	ದ್ರೌಪದಿ	-	ಪಾಂಡವರರಸಿ
೨೪.	ಬ್ರಾಹ್ಮಣರು		

ಯಕ್ಷಗಾನ

ಪಾಂಡವೋತ್ಪತ್ತಿ

ಶಾರ್ದೂಲ ವಿಕ್ರೀಡಿತ

ಶ್ರೀ ವಾಣೀಧವ ಮುಖ್ಯ ನಿರ್ಜರನುತಂ ಶ್ರೀ ಪಂಚವಕ್ತ್ರಂ ನುತಂ । ಶ್ರೀ ಪದ್ಮಾವರ ನಿತ್ಯ ಸದ್ಗುಣನಿಧಿಂ ಶ್ರೀ ಪಂಕಜಾಕ್ಷಂ ಹರಿಂ ॥ ಶ್ರೀ ವತ್ಸಾಂಕಿತರಸ್ತ ದುಷ್ ಖಳಹರಂ ಶ್ರೀ ಪಾರ್ಥ ಸೂತಂ ವಿಭೋ । ಶ್ರೀ ವಾರ್ಧೀಸುತ ಭಾವ ರಂಜಿತ ರವಿಂ ಶ್ರೀ ದೇವ ದೇವಂ ಭಜೇ ॥೧॥

ರಾಗ-ನಾಟಿ-ರೂಪಕತಾಳ

ಶ್ರೀ ಸರ್ಬ್ಬಾಣಿಕುಮಾರಘ । ನಾಶ ದಿನೇಶ ಶುಭೋಪಿತ । ಮೂಷಿಕರೂಢನೆ ನಿತ್ಯದಿ। ವಾಸವಾದಿವಿನುತ ॥ ಪಾಶಾಂಕುಶ ರಕ್ತಾಂಬರ । ಭೂಷಿತ ಸರ್ವೇಶ್ವರ ಹಿತ । ಲೇಸನು ಪಾಲಿಸು ವರ ವಿಘ್ನೇಶನೆ ಶುಭಕರನೆ ॥ ಜಯ ಜಯ ॥೧॥ ಹರಿ ಶಶಿ ಮುಖ್ಯರ ಧ್ಯಾನಿಸಿ । ಹರುಷದಿ ಸೇನಾನೀ ಪದ।ಸರಸಿಜಕೆರಗುತ ಮುನಿಜನ। ಹರಕಮಲಜರುಗಳ॥ಭರದೊಳು ನುತಿ ಸುತ ಭಕ್ತಿಯೊ।ಳಿರದಮರರ್ಕಳ ಪೊಗಳುತ। ವಿರಚಿಪೆ ಕೃತಿಗಿದ ನೀಡೈ। ನಿರತ ಸುಮಂಗಲವ ॥ಜಯ ಜಯ ॥೨॥ ಇಂದಿರೆ ಶಂಕರಿ ವಾಣಿಯ। ರಿಂದೆಲ್ಲರ ಬಲಗೊಳ್ಳುತ। ಗಂಧವಾಹಾತ್ಮಜ ಸಜ್ಜನ। ವೃಂದವನುತಿಗೈವೆ॥ ಚಂದಿರನಂದವ ಬೀರುತ । ಲಿಂದೆನ್ನಯ ಸುಖ ಸಿರಿಯಳ । ಚಂದದಿ ಪೊರೆಯೈ ಶ್ರೀ ಗುರು । ಮಂದರಧರ ಹರಿಯೆ ॥ ಜಯ ಜಯ ॥೩॥

ವಾರ್ಧಿಕ

ಕ್ಷಿತಿಯುದಯ ಧೃತಿಲಯಾಧೀಶನಂ ಶ್ರೀಶನಂ। ರತಿ ಪತಿಯ ಪಿತ ಮಿತ್ರತೇಜನಂ ಭೋಜನಂ। ಹಿತಕರಾಂಬುಜ ಚಕ್ರಧಾರನಂ ವೀರನಂ ವಿಶ್ವನಂ ವಿಶ್ವಾತ್ಮನಂ ॥ ಚತುರ್ಮುಖಾದ್ಯಖಿಳ ಸುರತಾತನಂ ಧಾತನಂ। ಮತಿವಂತ ಕೋಮಲ ಸುಗಾತ್ರನಂ ಸ್ತೋತ್ರನಂ । ಪಿತಸುತರ ಪೊರೆವಂತೆ ನೋಳ್ಪವನ ಮಾಳ್ಪವನ ನುತಿಸಿ ಕೃತಿಯುಂ ಪೇಳ್ವೆನು ॥೧॥

ಭಾಮಿನಿ

ವಿಶ್ವಮಯ ವರ ವಿಶ್ವಲೋಚನ। ವಿಶ್ವಬಾಹುಕ ವಿಶ್ವರೂಪಿತ। ವಿಶ್ವರಂಜಿತ ವಿಶ್ವ ಮಹಿಮನೆ ವಿಶ್ವಮೂರುತಿಯೆ ॥ ವಿಶ್ವವಂದ್ಯನೆ ವಿಶ್ವಚರಿತನೆ । ವಿಶ್ವಶೀಲನೆ ವಿಶ್ವಮಾಲನೆ । ವಿಶ್ವಪಾಲಿತವಿತ್ತು ಸಲಹುಗೆ ಮತಿಗೆ ಮಂಗಲವ ॥೧॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ

ಘನತಪೋಧನ ಸೂತ ಶೌನಕ । ವನದೊಳಾ ಭಾರತ .ಚರಿತ್ರವ । ನನುನಯ ದೊಳೆಂದುದನು ಭೂಮಿಪ । ವನಧಿಶತಿಗೆ ॥೧॥ ಯತಿಪ ವೈಶಂಪಾಯನಾ ಕ್ಷಿತಿ । ಪತಿ

ಪರೀಕ್ಷಿತಜಾತಗುಸುರಲು । ಅತಿ ಹಿತದೊಳಿರಲೆರಗುತೆಂದನು । ಪೃಥಿವಿನಾಥ ॥೨॥ ವೀರನಾಗಿಹ ಶಾಂತನಿಧಿಗಂ ।ಭೀರ ಭೀಷ್ಮಕ ಚಿತ್ರತಾಯ ಮು।ದಾರ ಪಾಂಡವರೆಂತು ಜನಿಸಿದ । ಸಾರಪೇಳ್ಳೆ ॥೩॥ ಎಂದು ಭಕ್ತಿಯೊಳೆರಗಿ ನುತಿಸುವ। ಚಂದ್ರಕುಲವಾರಿಧಿ ಶಶಾಂಕಗೆ। ಚಂದದಿಂ ಮೈದಡವಿ ಮುನಿಕುಲ। ಚಂದ್ರನೆಂದ ॥೪॥

ವಾರ್ಧಿಕ

ಅತ್ರಿಪುತ್ರನ ಕುಲದೊಳುತ್ತಮನೆ ಧಾತ್ರಿಪತಿ। ಚಿತ್ತವಿಪುದಿತ್ತ ಪ್ರಶಸ್ತಮೆನಿಸುತ್ತಿರ್ಪ। ಹಸ್ತಿಪುರ ಪೃಥ್ವಿಯಂ ಸತ್ವದಿಂದೆತ್ತಲುಂ ನಿತ್ಯಬಲು ಸತ್ಯದಿಂದ ॥ ಮತ್ತೆ ರಿಪು ಕತ್ತಲೆಯ ಕತ್ತರಿಪ ಮಿತ್ರನಂ। ವತ್ತಿ ನಿಜದಾಪ್ತಜನ ಮತ್ತೀರ್ದನುತ್ಸವದೊ।ಳಿತ್ತ ಸುಖವೆತ್ತಲುಂ ಮತ್ತಾ ಚರಿತ್ರಮಂ ಬಿತ್ತರಿಸಲೇನ್ನಾತ್ರಿಗೆ ॥೧॥ ಹರಿಯ ಮದ ಶರಭ ಮಧುಕರ ಭ್ರಮರನಾಲಿಸ್ಯೆ। ಹರಿಯ ಸುತನೋಲಗದಿ ಹರಿಸದಿಂದೊಪ್ಪಿರಲ್। ಹರಿಹರಿಜೆಯರ್ಮುನಿಗಳಿರೆ ವಸಿಷ್ಠನು ಶಪಿಸೆ ಅಷ್ಟವಸುಗಳು ಧರೆಯಲಿ ॥ ನರಜನ್ಮವಂ ಪೊದ್ದಲೈತರುತ ಜಾಹ್ನವಿಯ । ತರಳರಾಗುತ ತಿರುಗಿ ಬಪ್ಪೆವೆಂದಿರುತಿರಲು । ಮರುತನೈತಂದಾ ಪ್ರದೀಪನಿಗೆ ಸುತನಾಗಿ ಮೆರೆದನತಿ ವಿಕ್ರಮದಲಿ ॥೨॥

ಭಾಮಿನಿ

ಅಶ್ವರೂಢನ ಧನವ ಮೆರೆವ ಸು।ರೇಶ್ವರನ ವಿಭವಗಳ ನಾನಾ।ಗೇಶ್ವರನ ರತ್ನಗಳ ಹಿಂಗಿಸುವಂತೆ ವೈಭವದಿ ॥ ಶಾಶ್ವತದ ರಂಜಿತದ ನೆರೆ ಧರ ।ಣೇಶ್ವರರ ಜೈಸುತಲಿ ಶಂತನು। ವಿಶ್ವ ಮಹಿಮನ ನೆನೆದು ಮೆರೆದನು ರಾಜತೇಜದಲಿ ॥೧॥

ಆರ್ಯ ಸವ್ಯಾ

ಇನಿತಾ ಭೂಪರ ವನರುಹ ಮಿತ್ರನು । ಘನತರ ತೋಷದೊಳೊಪ್ಪಿರಲು ॥ ವನಚರರೆಲ್ಲರು ಕ್ಷಣದಲಿ ಬಂದಾ। ಜನಪಗೆ ಭೀತಿಲಿ ಪೇಳಿದರು ॥೧॥

ರಾಗ-ಮುಖಾರಿ-ಆದಿತಾಳ

ಲಾಲಿಸಬೇಕು ಮಾತಜೀಯ।ಮೂಲೋರ್ಕದಯ್ಯ।ಲಾಲಿಸಬೇಕು ಮಾತಜೀಯ ॥ಪ॥ ಇಂದು ವನದೊಳಗೈತಂದು । ಗರ್ಜಿಸಿ ಮುಂದು। ಮಂದಾರ ಚೂತ ಪನಸತಿಂದು ॥ಕೊಂದವು ಸಸಿಗಳ । ನಿಂದುರೆ ಸುಮಗಳ। ಮುಂದೆಯೆ ಧೂಳಿತ। ದಂದವ ಗೈದವು ॥ ಲಾಲಿಸ ॥೧॥ ತರತರ ದ್ರಾಕ್ಷಿ ಜಂಬುಗಳನು । ಮಾದಳ ಬದರಿ। ಪರಿ ಪರಿ ಚೆಲ್ವ ಫಲಗಳನ್ನು॥ ಹರಿಸಿತು ಸರ್ವವ।ನೊರೆಯಲಿಕೇನದ। ಪರಿಕಿಸಲಿನ್ನೇಳ್।ದೊರೆಯೆ ಪರಾಕು ॥ಲಾಲಿಸ॥೨॥

ಕಂದ

ಭೀತಿಲಿ ಚರರೆನ್ನಲ್ ನಿರ್ಭೀತಿಯ ತೋರ್ಪನೆನುತ ಶಬರರ ಕರೆಸುತ್ತಂ ॥ ಭೂತಳಪತಿ ಪೊರಮಟ್ಟುಂ । ರೀತಿಯೊಳು ಬೇಟೆಯನಾಡುತ್ತೈದಂ ಮತ್ತಂ ॥೧॥

ರಾಗ-ಮುಖಾರಿ-ಏಕತಾಳ

ಬಂದಾಭೂಭುಜ ಬೇಟೆಯಾಡೆ । ಮೃಗಗಳ ನೋಡೆ । ಬಂದಾ ಭೂಭುಜ ಬೇಟೆಯಾಡೆ ॥ಪ॥ ಮಂದಮತಿಯ ಶರ। ವೃಂದದೊಳೊರಗಿಸಿ । ಕೊಂದವ ಕೂಗುತ ।ಲಂದುರೆ ಗಜರುತ ॥ ಬಂದಾಭೂಭುಜ ॥ಅ.ಪ॥ ಗುರಿಯಿಟ್ಟು ಬಲೆಯ ಬೀಸಿ ಮತ್ತ । ಗಂಡಿಗಳತ್ತ । ಸರಿನಿಂದು ಶರವ ಸುರಿಸುತ್ತ ॥ ಉರಿಗಣ್ಣನ ಕ।ತ್ತುರಿ ಚಮರಿಯ ಕರಿ।ಕರಡಿ ಶರಭಗಳ । ನೆರವಿಯ ಘಾತಿಸಿ ॥ಬಂದಾ॥೧॥

ಭಾಮಿನಿ

ಇನಿತು ಬೇಟೆಯನಾಡಿ ಸುಖದೊಳು । ಜನಪ ಚಂದ್ರಮಲುಬ್ಧಕರ ಮನ । ದಣಿಯೆ ಮನ್ನಿಸಿ ಸರಸಿಯರಸುತ ಬಂದು ತಟದೊಳಗೆ ॥ ಘನತರದ ಬೇಸರಿಕೆ ಹಿಂಗಿಸಿ । ವಿನಯದಿಂ ಕುಳ್ಳಿರಲು ಪರಿಕಿಸಿ। ವನಜಗಂಧಿನಿ ಪೆಣ್ಣು ರೂಪದಿ ಬಂದಳಾ ಗಂಗೆ ॥೧॥

ರಾಗ-ಕಲ್ಯಾಣಿ-ಆದಿತಾಳ

ಬಂದಳಾಗ ಕಾಂತೆ । ಶ್ರೀಮಂತೆ । ಬಂದಳಾಗ ಕಾಂತೆ ॥ಪ॥ ಬಂದಳಾಗ ಮುಂದಕೆ ಗುಣವಂತೆಯು । ಚಂದಿರನಂದವ ಕುಂದಿಪ ಸೊಬಗಿಲಿ ॥ ಬಂದಳಾಗ ॥ಅ.ಪ.॥ ಧರಿಸುತ । ಕಂಕಣ ಹಾರಂಗಳ । ಸರಿಸುತ । ಕುಪ್ಪಸವ ತೊಟ್ಟದ । ನ್ನಿರಿಸುತ । ಪೀತಾಂಬರಾದ್ಯವಂ । ಮೆರೆಸುತ । ನಡು ಸೀರೆ ನೆರಿಯ ಸರಿ । ಗಿರಿಸುತ । ಕಮಲಾಕ್ಷಿಯು ವರನ ।ನ್ನರಸುತ । ಮುಂಗುರುಳ ತಿಲಕಗಳ । ಮೆರೆಸುತ । ಸರಿಸರಿಯಂಗೈಯುತ್ತ ॥ ವರಸ್ವರ್ಣಾಂಬರ ಧರೆವರ ರಂಜಿತೆ ।ಧರೆಯ ವಿಟರ ಮನ ಕರಗುವ ತೆರದಲಿ। ಬಂದಳಾಗ ॥೧॥ ಬಂದಳು । ಭೂಮೀಶನಿದಿರಿನೊಳು । ನಿಂದಳು । ನವಮೋಹನಾಂಗಗೆ । ನೊಂದಳು। ರೂಪಿನೊಳಿವಗಿದಿರಿಲ್ಲೆಂದಳು । ಈತನ ಬಳಿಸಾರುವೆ।ನೆಂದಳು । ವರಿಸುವೆನು ಸಂತಸ ಮನ।ಕೆಂದಳು। ಮೋಹಿಸುತ ಭೂಮಿಪನ । ನಿಂದಳು । ಮುಂದಕೆ ಸಂದವಳು ॥ ನಿಂದಿರಲಾ ಸುಮಗಂಧಿಯನಂದವ। ನಂದವನೀಕ್ಷಿಸುತಂದಚ್ಚರಿ ಪಡೆ ॥ಬಂದಳಾಗ॥೨॥

ವಾರ್ಧಿಕ

ಕಂಗಳೋ ಕಾಮನ ಶರಂಗಳೋ ನೀಲಾಳ । ಕಂಗಳೋ ಮಳೆಯ ಬಳಗಂಗಳೋ ರಕ್ತಾಧ । ರಂಗಳೋ ಪವಳದ ಪಿಕಂಗಳೋ ತೊಳಪ ವದನಂಗಳೋ ಪೂರ್ಣಕಳೆಯೋ ॥ ತಿಂಗಳೋ ನಗೆಯ

ಬೆಳದಿಂಗಳೋ ತುಂಗಸ್ತ । ನಂಗಳೋ ಚಕ್ರವಾಕಂಗಳೋ ಮೃದುಪದ ತಳಂಗಳೋ ತಳಿರ ಕೆಂಪಂಗಳೋ ಸರಿಯೆನಲು ರಂಜಿಸಿದಳಾ ಮಾನಿನಿ ॥೧॥

ರಾಗ-ಶಂಕರಾಭರಣ-ರೂಪಕತಾಳ

ಇನಿತು ಸೊಬಗ ತೊಳಪ ಸತಿಯ ।ಜನಪನೋಡಿ ಭ್ರಮಿತನಾಗಿ।ಮನದೊಳೆಂದ ಧನ್ಯನಾದೆ । ನೆನುವದೇನದ ॥ ವನಜನೇತ್ರೆಯಳನು ಕೂಡ । ಲೆನಗೆ ಸಂದುದಿಚ್ಛೆಯೆನುತ । ಘನತೆ ತೊರೆದು ಪೇಳ್ದನಂದ । ಮನದ ಭಾಷಿತ ॥೧॥

ರಾಗ-ಪಂತುವರಾಳಿ-ಏಕತಾಳ

ಇತ್ತನೋಡೆಲೆ ಮತ್ತಕಾಶಿನಿ ನೀತಿಯುತೆ ಬಾಲೆ । ಸದ್ಗುಣ । ಧಾತೆ ಜಗದ್ವಿಖ್ಯಾತೆ ನಿನ್ನೊಡನೋತು ಮನಸೋತೆ ॥ ಭೂತಳವತಳ ತಳಾತಳದೊಳು ಸಹಿ । ತೀ ತೆರದೊಳು ನಿಂ ದೋತುರೆ ಶೋಭಿಪ।ಜಾತಿಯವೆಂಗಳ ರೀತಿಯ ಕಾಣೆನು । ಮಾತಿದನೊಂದನು ಪ್ರೀತಿಯೊಳಾಲಿಸು ॥೧॥ ಧಾತ್ರಿಯೋಳು ಪ್ರಶಸ್ತ ಮಾಗಿಹ ಹಸ್ತಿನಾಪುರದ । ಧೊರೆಯಾಂ । ಅತ್ರಿ ಪುತ್ರನ ನಿತ್ಯವಂಶದ ನಿತ್ತ ಕೇಳದರ ॥ ಸತ್ವದ ನಿಧಿ ಯವನುತ್ತಮ ಶಂತನೆ ।ನುತ್ತಲಿ ಮೂಜಗದತ್ತಲೆ ಕೀರ್ತಿಯು । ಮತ್ತುರೆ ಬೆಳಗುಗು ಮತ್ತಸುಕಾಶಿನಿ । ಚಿತ್ತದೊಳರಿವುದು ಬಿತ್ತರಿಸುವದೇನ್ ॥೨॥ ಮಂದಮತಿಯರವಿಂದ ಶರದಿಂ ನೊಂದು ಬಂದಿರುವ ।ತಾಪವ । ಕುಂದಿಸುತ ಮನತಂದು ತನ್ನೊಡನಿಂದು ನೀ ಮೆರೆವ ॥ ಅಂದವಾದ ಪೂರ್ಣೇಂದು ವದನೆ ಸುಮ । ಗಂಧಿನಿ ಬಾರೆನುತಂದವನುಸುರಲು । ನಿಂದಾ ಮಾರಗೆ ಸಂದಡೆ ಮನವದ । ಕೆಂದಳು ಶ್ರೀ ವರ ನಂದನೆ ಭರದಿ ॥೩॥

ಭಾಮಿನಿ

ಈತನೇ ಕಮಲಜನ ಸಭೆಯೊಳ । ಗೋತು ಶಾಪವಗೊಂಡು ತನ್ನನು । ಪ್ರೀತಿ ಮಿಗೆ ವರಿಸಲ್ಕೆ ಬಂದಿಹನೆಂದು ತಿಳಿದವಳು ॥ ಈ ತತೂಕ್ಷಣಕೊಲಿಸೆ ವಸುಗಳು ।ಜಾತರಾಗಲು ತರಿವೆ ಮನಸಿನ । ರೀತಿಯಾಯ್ತೆಂದಬುಜಲೋಚನೆ ಮಾತನಾಡಿದಳು ॥೧॥

ರಾಗ-ಕೇತಾರ ಗೌಳ-ಝಂಪೆತಾಳ

ಚೂತಶರ ರೂಪಕೇಳು । ನೀನೆಂದ । ಮಾತುಗಳು ಸಹಜತಾಳು ॥ ಕಾತರದಿ ಬಳಲಬೇಡ । ಮುಂಗಜ್ಜ । ದಾತೆರನ ಕೇಳು ಗಾಢ ॥೧॥ ವೀರ ನೀನೆಂಬುದರಿತೆ । ತನ್ನ ಮನ । ದಾರೀತಿ ನಡೆವ ನಡತೆ॥ ಪೂರೈಸಬೇಕದರನು । ವರ್ಜಿಸಲು । ಧೀರ ತೊರೆದಪೆ ನಿನ್ನನು ॥೨॥ ಎಂತಾದಡೆನ್ನ ಮಾತ। ಮೀರುವರ। ಲಂತೊರೆವೆ ನಿಲ್ಲೆನತ್ತ ॥ ಪಂಥ ಪೆರ್ಮೆಗಳೆನ್ನುತ । ನುಡಿಯೆ ಸೀ । ಮಂತಿನಿಯೊಳೆಂದ ಮಾತ ॥೩॥

ವಾರ್ಧಿಕ

ಸರಸಿಜಾಂಬಕಿ ನಿನ್ನ ಮಾತಕ್ಕೈಕೊಂಡೆನೆನೆ। ಹರುಷದಿಂದೊಡಗೂಡುತಯ್ತಂದ ಪಟ್ಟಣಕೆ। ಪರಮಲಗ್ನವಗೈದು ಸಮ್ಮೇಳದಿಂದಿರ್ದ ಸಮ್ಮೋಹವೆರದು ಮುದದಿ॥ ಸರಸದಿಂ ಗರ್ಭಮಂತಾಳ್ದಿರಲು ಸೀಮಂತ। ವಿರಚಿಸಲು ಬಳಿಕಲೊಬ್ಬೊಬ್ಬರಂ ಪಡೆದೇಳು। ತರಳರಂ ಘಾತಿಸುತಲಿರುತೆಂಟನೆಯ ವಸುವ ಶುಭಮುಹೂರ್ತದಿ ಪಡೆದಳು ॥೧॥

ರಾಗ-ಕೇತಾರಗೌಳ-ಅಷ್ಟತಾಳ

ಪುಟ್ಟಿದನನು ಕಂಡು ದಿಟ್ಟನೀತನನಿಂದು। ಕುಟ್ಟಿ ಮರ್ದಿಪೆನೆನುತ ॥ ದಿಟ್ಟಿಸಿ ಖಡ್ಗವ ಝಟ್ಟಿಸಿ ಗಜರಲಿ। ಕಷ್ಟರೊಳ್ ಸೃಷ್ಟಿನಾಥ ॥೧॥ ಏಳು ಮಕ್ಕಳನು ಗಯಾಳಿಸಿ ಭಂಗಿಸಿ। ಬಾಲನೀತನನು ಕೊಂದು॥ ಕಾಲಗೊಪ್ಪಿಸಲು ನಾ ಬೀಳುಗೊಡುವನಲ್ಲ। ಬಾಲಕಿ ಬಿಡುವದಿಂದು ॥೨॥ ಎನೆ ಕ್ರೋಧದಿಂದ ಹೇ ಜನಪಾಲ ಮುನ್ನಿತ್ತ। ಘನಪರಾಕ್ರಮದ ಮಾತ ॥ ವಿನಯನಿಂದೆಂಬುವ ಘನತೆಲ್ಲಿ ಪೋದುದಿ। ನ್ನನುಮಾನ ಬೇಡದತ್ತ ॥೩॥ ಒರೆದ ಮಾತನು ಮೀರಿ ದುರುಳತನಂಗಳ। ಮೆರೆಸುವೆ ಭಟನೆ ನಿನ್ನ॥ಅರಸಿಯಾಗಿರಲೊಲ್ಲೆನರಿಯೆಂದು ಶಿಶು ಸಹ। ಪೊರಮಟ್ಟಳಿಭಪುರವ ॥೪॥

ವಾರ್ಧಿಕ

ತರುಣಿ ಬಲು ಸಿಟ್ಟನಿಂ ಪೊರಮಟ್ಟು ಬಾಲಕನ। ಹರುಷದಿಂ ಪಾಲಿಸುತ ಮೆರೆವ ಭಾರ್ಗವನತ್ತ। ಕರುಣದಿಂ ಸಲಹೆಂದು ಒರೆದೆಲ್ಲ ನಿಜವಂದು ಕೊಟ್ಟಡವನಿಷ್ಟದಿಂದ ॥ ಸರಸದಿಂ ಶರಮಲ್ಲ ವಿದ್ಯಾದಿಗಳನೆಲ್ಲ। ಭರಿತಮಾಗ್ಯವನಂದು ಕಲಿಸೆ ಪಂಡಿತನೆಂದು। ಸರಸಿಜಾಂಬಕಿಗೀಯೆ ಸುತನ ಕರಕೊಂಡೊಯ್ಯೆ ಶಾಂತಗೀಯುತ ಪೋದಳು ॥೧॥

ಭಾಮಿನಿ

ಮತ್ತೆ ಧಾತ್ರಿಪ ಪುತ್ರನಿಗೆ ಮನ। ವಿತ್ತು ಸತ್ಕರ್ಮಗಳ ಗೈಯುತ। ಪೃಥ್ವಿಯೊಳು ರಣಧೀರ ಗಂಡರಗಂಡನೆನಿಸಿರ್ದ ॥ ಇತ್ತ ಮುನಿಪತಿ ವರಪರಾಶರ। ಚಿತ್ತದಾನಂದದಲಿ ಚರಿಸುತ। ಮತ್ತೆ ಯಮುನಾ ನದಿಯ ದಾಟಲ್ಕೆನುತ ನಡೆತಂದ ॥೧॥

ಕಂದ

ನಿತ್ತಾ ಮೌನಿಪೊಡೆಯನಂ। ದತ್ತಿತ್ತಲು ನೋಡಲ್ಕಾ ಝುವಗಂಧಿನಿಯುಂ ॥ ನಿತ್ತಿರೆ ಪರಿಕಿಸುತಂಗವ। ಚಿತ್ತಜಗೊಪ್ಪಿಸುತೆಂದನು ಮೃದುತರ ನುಡಿಯೊಳ್ ॥೧॥

ರಾಗ-ಕೇತಾರಗೌಳ-ಝುಂಪೆತಾಳ

ಲಾಲಿಪುದು ನಾಗವೇಣಿ । ನಿನ್ನೊಡನೆ । ಪೇಳುವೆನು ಮಧುರವಾಣಿ ॥ ನೀಲ ಕುಂತಳೆ ಸುಶೀಲೆ।ಪದ್ಮಮುಖಿ । ಬಾಲೆದರ್ಪಣ ಕಪೋಲೆ ॥೧॥ ಪುತ್ಥಳಿಯ ಬೊಂಬೆ ತನ್ನ । ಪುಷ್ಪಶರ।ಕುತ್ತಿಕೊಲುತಿರ್ಪ ನಿನ್ನ ॥ ಇತ್ತು ಎನಗಂಗ ಸುಖವ । ಮೆರೆಯುವೆಂ । ದಿತ್ತೊರೆದಳ್ ಮನದ ಭಾವ ॥೨॥ ಯತಿರಾಯನಾಲಿಸಿಂದು । ನೀನು ಮನ್ಮಥನಸ್ತ್ರಹತಿಯೊಳಿಂದು ॥ ವ್ಯಥಿಸಿದರೆ ನಾನಪ್ಪೆನೆ। ಸೂತಸುತೆ । ಖತಿ ಮಾಡಬೇಡ ನೀನೆ ॥೩॥ ಕುಲದೊಳುತ್ತಮಳು ನೀನು । ತನ್ನೊಡನೆ । ಹುಲು ಮಾತಿದೇತಕಿನ್ನು ॥ ನಳಿನ ಶರನಾಟಕೀಗ । ಒದಗೆನಲು ।ಚೆಲುವೆ ಮಣಿ ಪೇಳ್ದಳಾಗ ॥೪॥ ಆರಿಂದ ಪುಟ್ಟಿ ತಾನು । ಬೆಳೆದಿರುವ ।ಸಾರವೆಲ್ಲವನು ನೀನು ॥ ಭೂರಿದಯದಿಂದ ಪೇಳು । ಎಂದೆನಲು । ನಾರಿಗೆಂದನು ದಯಾಳು ॥೫॥

ವಾರ್ಧಿಕ

ತರುಣಿಕೇಳ್ ಪಿಂತೆ ವಸುವೆಂಬ ರಾಯಂ ತನ್ನ । ತರುಣಿ ವಾಂಛಿಸೆ ಮಾಂಸ ತಹೆನೆಂದು ಶಚಿಯರಸ । ನಿರದಿತ್ತ ಪುಷ್ಪಕದಿ ಬರೆ ವೀರ್ಯಮುಂ ಬೀಳೆ ಪಕ್ಷಿಗಳ ಸಂಗ್ರಾಮದಿ ॥ ಮೆರೆವ ನದಿಗಂ ಬೀಳಲದ ಮತ್ಸ್ಯ ನುಂಗಲ್ಕೆ । ಭರದಿಂದ ಸೀಳಲುಂ ಶಿಶುವೆರಡರಲಿ ನಿನ್ನ । ಹಿರಿಯ ಮತ್ಸ್ಯೇಶ್ವರಂ ಕಿರಿಯೆ ನೀನೆನ್ನಲುಂ ಕರಮುಗಿಯುತಿಂತೆಂದಳು ॥೧॥

ರಾಗ-ಶಂಕರಾಭರಣ-ಏಕತಾಳ

ಯತಿ ಪತಿಯೆಕೇಳುದಿವದಿ । ರತಿಕ್ರೀಡೆ ಸಲುವದುಂಟೆ ॥ ಖತಿಯದೋರ ಬೇಡವೆನಲು । ಹಿತದೊಳೆಂದನು ॥೧॥ ಸತಿ ಶಿರೋಮಣಿಯೆ ದ್ಯುಮಣಿ । ಗತಿಯ ನಾನಡಗಿಸುವೆನೆನುತ । ಹಿತದಿ ನಿಶಿಯ ನಿರ್ಮಿಸಿದನು । ವ್ರತಿಪನಾಗಲೆ ॥೨॥

ಭಾಮಿನಿ

ಕತ್ತಲೆಯ ನಿರ್ಮಿಸುತ ನಾವೆಯ। ಮತ್ತೆ ನದಿ ಗಡ್ಡೆಯಲಿ ನಿಲಿಸುತ । ನಿತ್ತು ತಪ ಬಲದಿಂದ ಯೋಜನಗಂಧಿಯಂ ಮಾಡಿ ॥ ಇತ್ತು ಸಂಭೋಗವನು ತವಕ ।ನ್ಯತ್ವ ಕೆಡದಿರಲೆಂದು ವರಗಳ। ನಿತ್ತು ಸರಿಯಲು ಗರ್ಭವಾಂತುರೆ ಹೆತ್ತಳಬುಜಾಕ್ಷಿ ॥೧॥

ರಾಗ-ಕಾಂಬೋದಿ-ಝುಂಪೆತಾಳ

ಧರಣಿಪತಿ ಕೇಳ್ಬಳಿಕ ತರಳನಿಗೆ ಪೆಸರಿಟ್ಟು । ಕರುಣದಿಂ ವ್ಯಾಸನೆಂದೆನುತ ॥ ಪೊರೆಯುತಿರಲೊಂದಿವಸ ಚರಣಕೆರಗುತ ಮಾತೆ।ಗೊರೆದ ದೈನ್ಯದಲಿ ಮುನಿನಾಥ ॥೧॥

ರಾಗ-ಸೌರಾಷ್ಟ್ರ-ಏಕತಾಳ

ತಾಯೆ ಚಿತ್ತವಿಪುದು ಮಾತ । ತೋಯಜಾಕ್ಷಿ ತಪಕೆ ಪೋಪೆ ॥ ನೋಯಬೇಡ ಕಳುಹಿಂದೆನ್ನ। ಪ್ರೀಯದಿಂದಲಿ ॥೧॥ ನೋಯಲೇನು ಮನದಿ ಮಗನೆ । ಕಾಯವಿರಲು ಬಿಟ್ಟು ನಿನ್ನ ॥ ಪ್ರೀಯದಿಂದಲಿಹುದೆಂತಿನಿತು । ಪಾಯ ಪೇಳಯ್ಯ ॥೨॥ ತಲ್ಲಣಿಸಬೇಡ ನೆನಸಿ । ದಲ್ಲಿಗಾನು ಬಪ್ಪೆನೆನುತ। ನಿಲ್ಲದಂದು ತಪಕೆ ಪೊರಟ । ಮಲ್ಲ ಯತಿರಾಯ ॥೩॥

ಶರಷಟ್ಪದಿ

ಇತ್ತ ಪರಾಶರ ಪುತ್ರನು ತಪಸಿಗೆ । ನುತ್ತ ಪೋಗಲಂದಾ ॥ ಧಾತ್ರಿಪ ಶಂತನು ಚಿತ್ತದಿ ಸಂತಸ। ವೆತ್ತುತಲಿಂತೆಂದ ॥೧॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ

ಕೇಳಿದರೆ ಯೋಚನೆಯ ನಿಮ್ಮಲಿ । ಪೇಳುವೆನು ಸಂತಸದಿ ಬೇಟೆಗೆ । ಏಳಿ ನೀವೆನಲೊಪ್ಪಲಾ ಭೂ । ಪಾಲಪೊರಟ ॥೧॥ ಬಂದು ಬೇಟೆಯನಾಡಿ ಮೃಗಗಳ । ಕೊಂದು ಕಳೆದೈದಲ್ಕೆ ಮುಂದಕೆ । ಬಂದುದೈ ಸೌಗಂಧ ಪರಿಮಳ । ವಂದು ತಿಳಿದು ॥೨॥ ಏನಿದಚ್ಚರಿಯೆನುತ ಬಾಹುಜ । ತಾನೆ ಮುಂದೈತಂದು ಪರಿಕಿಸೆ । ಮಾನಿನಿಯ ನೋಡುತ್ತ ಬಣ್ಣಿಸೆ । ಮಾನವೇಶ ॥೩॥

ರಾಗ-ಶಂಕರಾಭರಣ-ಅಷ್ಟತಾಳ

ಎಂಥಾ ಸುಂದರಿಯಿವಳು । ಮಾರನ ಮದ । ದಂತಿಯಂದದೊಳಿಹಳು ।ಲಾವಣ್ಯಗ । ಳೆಂತಿದು ಶೋಭೆಗಳು । ತನ್ನದು ಸರಿ । ಸಂತಸವೇಳ್ಗಳೊಳು । ಇಲ್ಲೆಂಬುದ । ಮುಂತೆಯೆ ಕಂಡಿವಳು । ತನ್ನನು ಮಾರ । ತಂತ್ರಕ್ಕೆ ಸಿಲುಕಿಸಲು । ಸೃಷ್ಟಿಸಿದ ಜ । ನೆಂತಿಂಥ ಪ್ರೀತಿಯೊಳು । ಪೇಳ್ವದೇನಿವಳು ॥ ಸಂತತ ತನ್ನೊಶವಾಂತರೆ ಸುಖ ಸೌಖ್ಯ । ವಂತ ಧನ್ಯನೆನುತ್ತ ನಿಂತು ಬಣ್ಣಿಸಿದನು ॥೧॥ ಸುರನರಲೋಕದಲಿ । ಗಂಧರ್ವಕಿ । ನ್ನರ ಯಕ್ಷ ಸಿದ್ಧರಲಿ । ದಾನವರು ಕಿಂ । ಪುರುಷರೊಳುರಗರಲಿ । ಚಾರಣ ವಿದ್ಯಾ । ಧರ ವಂಶ ಸತಿಯರಲಿ । ಇಂಥಾಸತಿ । ಗೆರಕವ ಕಾಣೆನಿಲ್ಲಿ । ನನ್ನನು ಕೂಡಿ । ಮೆರೆಯಬೇಕೆನ್ನುತಿಲ್ಲಿ । ನಿಂದಿರ್ಪಳೆಂ । ದರಿಯಲು ಬೇಹುದಿಲ್ಲಿ । ಪೇಳ್ವದೇನಿಲ್ಲಿ ॥ ಸರಿ ಸರಿ ಸುಕೃತದಿ ದೊರಕಿದುದಲ್ಲದೆ । ಧರೆ ಮೂರರೊಳಗಿಂಥ ಪರಿಶೋಭೆ ಕಾಣೆನು ॥೨॥ ಇಂದು ವದನೆ ನೋಡಲು । ಕುಸುಮಾಕ್ಷಿಯು । ಕುಂದರದನೆ ಪಾಡಲು । ಕೋಕಿಲರವ । ನಂದುವಂತೆಸೆಯುವಳು । ಶುಕಂಗಳ । ನಿಂದಿಪ ಗಾನಗಳು ಹಂಸವದೂರ್ವ । ಚಂದದ ನಡಕೆಗಳು । ಮಧ್ಯವು ಮೃಗ । ಒಂದೇ ಹಿಡಿಯೊಳಿಹಳು । ಈಕೆಯ ಸರ್ವ। ಚಂದವಬಣ್ಣಿಸಲು । ಶೇಷನೈತರಲು ॥ ಅಂದವನೊರೆಯಲಿಕೆಂದು ಸಾಧ್ಯಗಳಲ್ಲ । ವಿಂದೇನ ವಿವರಿಪೆನೆಂದು ಭ್ರಮಿತನಾದ ॥೩॥

ವಾರ್ಧಿಕ

ಕುಂಭಕುಚವೆಂಬ ಕಲಶಂಗಳಿಂ ಪೊಳೆವಧರ । ವೆಂಬ ಪಲ್ಲವಗಳಿಂ ತೊಳತೊಳಪನುಣ್ಗಲ್ಲ ।ವೆಂಬ ದರ್ಪಣಗಳಿಂ ಪುಳಕಾಂಕುರಗಳೆಂಬ ಹರುಷಾಶ್ರುವಕ್ಷತೆಗಳಿಂ॥ ಬೆಂಬಳಿಯು ನೂಪುರಧ್ವನಿಯೆಂಬ ವಾದ್ಯಂಗ ।ಳಿಂ ಭಕ್ತಿಯೆಂಬ ಸುಮನೋರಾಗದಿಂ ನಯನ ।ವೆಂಬ ದೀಪಂಗಳಿಂ ಮದನನಂ ಇದಿರ್ಗೊಂಬವಂತವಳ್ ರಂಜಿಸಿದಳು. ॥೧॥

ರಾಗ-ಕೇತಾರಗೌಳ-ಅಷ್ಟತಾಳ

ಧಾತ್ರಿಪ ಕೇಳಜ ಚಿತ್ರಿಸಿ ಬರೆದಿರ್ಪ । ಚಿತ್ರದ ಬೊಂಬೆಯಂತೆ ॥ ಮತ್ತಕಾಶಿನಿ ರಂಜಿಸಲ್ಕೆ ಶಂತನು ಬಲು । ಹತ್ತಿರಕ್ಕೈದುತೆಂದ ॥೧॥ ವಾರಿಜಗಂಧಿಕೇಳ್ ನೀರಜನಸ್ತ್ರದಿ । ನೂರೆಪೋಗಿರ್ಪೆ ನೀಗ॥ ಭಾರಿಸುಪ್ರೀಯವಂದೋರುತುದ್ಧರಿಸೆನೆ । ವೀರಗಿಂತೆಂದಳಾಗ ॥೨॥ ಬಲ್ಲಿದ ಭೂಪಾಲ ಕೇಳು ನಾಳಿಕ ಶರ । ಕೊಲ್ಲಲೆತ್ನಿಸೆ ನಿನ್ನನು ॥ನಿಲ್ಲದೆ ಕಾವರದಿಲ್ಲಿ ಯಾರೆಂದೆನೆ । ಪುಲ್ಲನಯನೆಗೆಂದನು ॥೩॥

ರಾಗ-ಸುರುಟಿ-ಏಕತಾಳ

ಕರುಣದೋರೆನಾರಿ । ಎನ್ನೊಳು । ಸರಸ ಬೀರೆ ಮೀರಿ ॥ ದುರುಳ ಮದನ ಶರ । ಹರಿಸಲಿ ಕೌಷಧ । ವರಿತಿಹೆ ನೀಪೊರೆ । ಸರಸಿಜಲೋಚನೆ ॥೧॥ ವೀರ ಕೇಳು ನೀನು । ನಿಧಿಗಂ । ಭೀರ ಪೆಚ್ಚಿದೇನು ॥ ಕಾರುಣ್ಯದಿ ಗುಣ । ವಾರದಿ ಪಾಲಿಪ । ದಾರಪಿತನ ಮಹ । ವಾರಿಧಿ ಕೇಳ್ನಡೆ ॥೨॥ ಚಿತ್ತದ ಭಯಬೇಡ। ತನ್ನಯ । ವತ್ತಿನರಸಿ ನೋಡ ॥ ಇತ್ತಲೆ ಬಾರೆಂ । ಧಾತ್ರಿಪ ಕರವಿಡೆ । ಅತ್ತ ಸರಿದು ಬಳಿ । ಕುತ್ತರವಿತ್ತಳು ॥೩॥

ವಾರ್ಧಿಕ

ಸ್ಮರರೂಪ ಭೂಪ ಕೀರ್ತಿಕಲಾಪ ಕೇಳಿತ್ತ । ಹರುಷದಿಂದೆನ್ನಯ್ಯನೀಯಲಾಂ ಬಹೆನಯ್ಯ । ಕರಮಿಲ್ಲದಿರೆ ಮತ್ತೆ ತೆರಳತ್ತಮೆನ್ನುತ್ತ ತಿರುಗೆ ಧಾತ್ರೀ ಶನಿತ್ತ ॥ ತಿರುಗೆ ಗುಣಮಣಿತರುಣಿ ಶುಕವಾಣಿ ಫಣಿವೇಣಿ । ತೊರೆದಳೆನ್ನನ್ನೆಂದು ಬಂದು ಪುರದೊಳ್ನಿಂದು । ಕರಗಿದನು ಒರಗಿದನು ಸೊರಗಿದನು ಮರುಕದಿಂ ಪೊರಳುತಂದುಃಖಿಸಿದನು ॥೧॥

ರಾಗ-ನೀಲಾಂಬರಿ-ರೂಪಕತಾಳ

ಇನ್ನೇನೆಸಗಲಿ ಎನ್ನಯ । ಪುಣ್ಯದ ಫಲವಿನಿತಾದುದೆ । ಪನ್ನಗವೇಣಿಯು ವರಿಸವೆ । ಎನ್ನುವ ನೆರೆ ಜರೆದು ॥ ಮನ್ನಿಸಿ ತಂದೆನ್ನಯ ಮನ । ಕಿನ್ನಣೆ ಗೈವನದಾರವ । ನೆನ್ನುತ ನೆನನೆನೆದಾ ಸಂಪನ್ನನು ಮರುಗಿದನು ॥೧॥ ವರಿಸಿದೆನೋರ್ವಳ ಮುನ್ನವೆ । ಕರಗಿಸಿದಳು ಮನ ಪುತ್ರರ । ನಿರಿದಳು ಜರೆವಡೆ

ಮರಳುತ । ಸರಿದಳು ಖತಿಗೊಂಡು ॥ ಎರಡನೆ ನಾರಿಯ ಕಂಡಡೆ । ಹಿರಿಯರ ಕೇಳಲಿಕಾದುದು। ಮೆರೆಯುವ ಖ್ಯಾತಿಯು ಖಿಲಕರ । ಪರಿಹಾಸ್ಯವಿದಾಯ್ತು ॥೨॥

ಭಾಮಿನಿ

ಏನು ಫಲ ವೈಭವದಿ ಮತ್ತಿ । ನ್ನೇನು ಫಲ ರಾಜ್ಯದಲಿ ಸುಭಟರೊಳೇನು ಫಲ ಸರ್ವಸ್ವಮಿದ್ದಡದೇನು ಫಲಮಾಯ್ತು ॥ ಮಾನಿನೀ ಮಣಿಯೊಂದು ಪುರುಷಗೆ । ತಾನಿರದ ಮೇಲಿಂದು ದೊರೆತನ । ಪ್ರಾಣಮೇಕೆಂದೆನುತ ಕರಗುತ ದುಗುಡದೊಳಗಿರ್ದ ॥೧॥

ರಾಗ-ಮಾರವಿ-ಏಕತಾಳ

ದೊರೆ ತಾಚಿಂತಿಪ ಪರಿಯನು ಕೇಳುತ । ಸುರನದಿಜನು ಬಂದು ॥ ಚರಣದೊಳೆರಗುತ ಕರ ಕರೆ ಪೇಳೆಂ । ದೊರೆದವನಿಂತೆಂದ ॥೧॥ ಏನಾದುದು ಬಲು ಕ್ಷೋಣಿಪ ರೆಲ್ಲರು । ತಾನದಿರ್ಕೈತಪರೊ ॥ ದಾನವರುಪಟಳ ಕಾಣಿಸಲಾದುದೆ । ಏನೆಂಬುದನುಸುರೈ ॥೨॥ ಬಂದವಮಾನವನಿಂದುಸುರಲು ಮಸಿ। ಕಂಧರನೆಡೆ ತಡೆಯೆ ॥ ಇಂದದ ಖಂಡಿಸಿ ಮುಂದಕೆ ತಹೆನೆನ । ಲೆಂದನು ನುಡಿದೊರೆಯೆ ॥೩॥

ರಾಗ-ಭೈರವಿ-ತ್ರಿವುಡೆತಾಳ

ಕಂದ ಕೇಳಿನ್ನೇನನುಸುರುವೆ । ಬಂದ ಚಿಂತಾ ಪರಿಯನು । ಚಂದದಿಂ ವನಬೇಟೆಗೈದಿರ । ಲಂದು ನದಿಬಳಿಸೇರ್ದೆನು ॥ ಮಂದಗಾಮಿನಿ ಸುಂದರಾಂಗಿಯು । ನಿಂದಿರಲಿ ಕಾಂ ನೋಡ್ದೆನು । ಮಂದಮತಿಯುರವಿಂದ ಶರನಿಗೆ । ಸಂದು ಹೋಗುತಲೆಂದೆ ನುಡಿಯನು ॥ ಕೇಳು ಮಗನೆ ॥೧॥ ತರುಣಿ ತನ್ನನು ವರಿಸಬೇಕೆಂ । ದಿರದೆ ಪೇಳಲು ಕೇಳುತ । ಒರೆದಳೈ ಪೆತ್ತವನ ಕೇಳ್ದಡೆ । ಬರುವೆ ನಿನ್ನೊಡನೆನ್ನುತ॥ ತಿರುಗಿದಳು ಸೂತನನು ಕೇಳ್ಪಡೆ । ಕರಗಿದೆನು ನೆರೆ ದುಃಖದಿ । ಸೊರಗಲಾಯ್ತು ಪಕೀರ್ತಿ ಪೊದ್ದಿತು । ಧರಣಿಯೊಳಗೆನ್ನುತ್ತ ದುಗುಡದಿ ॥ಪೇಳ್ವನಾಗ॥೨॥ ಏನ ಪೇಳಲಿ ಬಾಲಕೇಳಾ । ವೇಣಿ ವಕ್ತ್ರೆಯ ಲಗ್ನವ । ತಾನು ಗೈಯದ ಮೇಲೆ ಬದುಕಿ । ನ್ನೇನು ಫಲನೀ ಕೇಳದ ॥ ಜಾಣನಾದರು ಬಾಲ ನೀ ಸಮ । ಧಾನಗೈಯಲು ಸಾಧ್ಯವೆ । ತಾನೆ ತನ್ನಯ ವಿಧಿಯ ಕಲ್ಪಿತ । ವೇನಗೈದರು ಮೀರಲಾಪವೆ ॥ ಎಂದು ನುಡಿಯೆ ॥೩॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ

ತಾತ ಬಿಡು ಬಿಡು ದುಗುಡ ನಿನ್ನಯ । ಮಾತ ನಡೆಸದೆ ಪೋದೆನಾದಡೆ । ಮಾತೆ ಭಾಗೀರಥಿಯ ಸುತ ತವ । ಜಾತನಲ್ಲ ॥೧॥ ಹರಿಹರಾದ್ಯಮರೌಘ ತಡೆಯಲಿ । ಭರದಿ ವಾರಿಧಿ ಮುಸಿಯೆ ಸೂತನ । ತರಳೆ ಯೋಜನಗಂಧಿಯುರ ಕರೆ । ತರುವೆನಯ್ಯ ॥೨॥ ಒರೆಯಲೇನ್ ತವಕರುಣವೈ ಶ್ರೀ । ಗುರುವು ರಾಮನ ದಯಗಳಿದ್ದಡೆ । ವಿರಚಿಸುವೆ ಪರಿಣಯವ ಬಿಡು ಮನ । ಮರುಕವೆಂದ ॥೩॥

ಭಾಮಿನಿ

ಎಂದು ಜನಕನ ಸಂತವಿಸುತಲಿ । ಬಂದು ಮಣಿರಥ ವಡರಿ ಯೋಜನ । ಗಂಧಿಯಳನರಸುತ್ತ ನದಿ ಬಳಿಗಾಗಿ ನಡೆತಂದ ॥ ನಿಂದು ಸೂತನ ಕರೆದು ಶಂತನ । ನಂದನನು ಮೃದು ನುಡಿಯೊಳುಸುರಿದ । ಚಂದಿದಾಲಿಪುದು ನೀನೆನ್ನುತ್ತಲಿಂತೆಂದ ॥೧॥

ರಾಗ-ಮಧ್ಯಮಾವತಿ-ಏಕತಾಳ

ಎಲೆ ಸೂತ ಕೇಳು ನೀನೆನ್ನಯ ಮಾತ । ಚೆಲುವೆ ನಿನ್ನಯ ಸುತೆಯಳ ನೋಡಿತಾತ ॥ ಬಲು ಮೋಹದಿಂದಲೆ ವರಿಸಬೇಕೆಂದು । ಕಳವಳಗೊಂಡಿರ್ಪನಾಲಿಪುದಿಂದು ॥೧॥ ಆದರಿಂದಲೆನ್ನಯ ಜನಕನಿಗಿನ್ನು । ಮುದದಿ ಯೋಜನಗಂಧಿಯಳ ತೆತ್ತು ನೀನು ॥ ಚದುರ ಲಗ್ನವ ಗೈಯಬೇಕೆಂಬ ಬಗೆಗೆ। ಸದರದೊಳಿಂತೆಂದನಾತನ ನುಡಿಗೆ ॥೨॥ ವಸುಮತಿಪಾಲ ಶಂತನ ಜಾತ ಕೇಳು । ವಸುಧೆಯನಾಳುವ ಪುತ್ರ ನೀನಿರಲು ॥ ಕುಸುಮಗಂಧಿನಿಯಳ ತೆತ್ತಡೆ ನಾನು । ಬಸಿರೊಳು ಪುಟ್ಟಿದ ಮಕ್ಕಳಿಗೇನು ॥೩॥ ಅರಸುಗಳ್ ನೀವದರಿಂದಲಿಂದಿನಲಿ । ಸರಿಯಾಗದೀ ಕಾರ್ಯ ಬಂದ ದಾರಿಯಲಿ ॥ ತಿರುಗಿ ಪೋಗೆನ್ನುತ್ತ ಪೇಳಲಿಕಂದು । ತಿರುಹುತ್ತ ಮೀಸೆಯ ಭೀಷ್ಮನಿಂತೆಂದ ॥೪॥

ರಾಗ-ಸೌರಾಷ್ಟ್ರ-ತ್ರಿವ್ರಡೆತಾಳ

ಬಿಡುಬಿಡೆಲೊ ದುಗುಡವನು ಕೇಳೈ । ಹುಡುಗಿಯನು ನಮ್ಮಯ್ಯಗಿತ್ತಡೆ । ಪೊಡವಿ ಸತಿಯರ ಭೋಗ ವರ್ಜಿಪೆ । ಹಿಡಿಯೊ ಭಾಷೆ ॥೧॥ ಲೋಕ ದಿಕ್ಪಾಲಕರು ಮತ್ತವ । ನೇಕ ಮುನಿಗಳು ತ್ರಿಭುವನಂಗಳು । ಶ್ರೀಕರರು ಸರ್ವತ್ರ ಸಾಕ್ಷಿಯು । ಶೋಕ ಬೇಡೈ ॥೨॥ ಇತ್ತ ಭಾಷೆಗೆ ಬಂಜೆ ಬಂದಡೆ। ಪೆತ್ತ ಗಂಗಾದೇವಿಗೆರಡನು । ಇತ್ತೆ ಹರಿಹರ ಬೊಮ್ಮ ಚಂದ್ರಾ । ದಿತ್ಯರಾಣೆ ॥೩॥ ಎಂದೊಡಂಬಡಿಸುತ್ತಲಾತನ । ನಂದನೆಯ ಕರೆತರಿಸಿ ವರ ಪೊ । ನ್ನಂದಣದೊಳೇರಿಸುತ ಬಂದನು । ಚಂದದಿಂದ ॥೪॥

ವಾರ್ಧಿಕ

ಬಂದು ಪುರಸಿಂಗರಿಸಿ ತೋರಣಂಗಳ ರಚಿಸಿ । ಮುಂದೆ ಸರ್ವರ ಕರೆಸಿ ದಿಬ್ಬಣವ ಸರಿಗೊಳಿಸಿ। ಚಂದದಿಂ ಜನಕ ಶಂತಗೆ ಲಗ್ನಮಂ ಗೈಸಿ ಚೆಲುವೆ ಯೋಜನಗಂಧಿಯ ॥ ಮಂದಿ ಪ್ರಜೆ ಪರಿವಾರ ಮುಖ್ಯ ಸಂತಸ ಸಾರ । ದಿಂದೆಲ್ಲ ಬಲುತೋಷಮಂಗೊಳ್ಳೆ ಭೂಪೇಶ । ನೊಂದು ದಿನ ತಟನಿಜನ ಕರೆದೇಕಪ್ರೀತಗುಣನಿಂತೆಂದ ಶಂತರಾಯ ॥೧॥

ರಾಗ-ಕೇತಾರಗೌಳ-ಝಂಪೆತಾಳ

ಇಂದು ವಂಶಾಬ್ಧಿ ಚಂದ್ರ । ಕೇಳ್ ಮಾತ । ನಿಂದೆಂಬ ಸುಗುಣ ಸಾಂದ್ರ ॥ ಮಂದಗಮನೆಯನು

ನೀನು । ತನಗಿತ್ತ । ಚಂದ ಕಥೆ ಪೇಳ್ವುದಿನ್ನು ॥೧॥ ತವಪದಾನುಗ್ರಹದಲಿ । ಗುರುದಯದಿ । ಯುವತಿಯಳ ತಂದೆನಿಲ್ಲಿ ॥ ಬವರಮಿಲ್ಲದೆ ತಂದೆನು । ಲಾಲಿಪುದು । ಭವನಿರಾಶ್ರಿತನು ತಾನು ॥೨॥ ಧರೆ ತರುಣಿಯರಲಿ ಭೋಗ । ವರ್ಜಿಸುತೆ । ಪರಿಪರಿಯ ಶಪಥವಾಗ ॥ ವಿರಚಿಸಲ್ಕಿತ್ತಪೆಂದು । ಪೇಳಲ್ಕೆ । ಕರುಣದಿಂದೆಂದನಂದು ॥೩॥

ರಾಗ-ಬೇಗಡೆ-ಅಷ್ಟತಾಳ

ಚಂದವ್ಯಾತ್ಯೆ ಮುದ್ದು ಬಾಲಕನೆ । ನೀಗೈದ ಕಾರ್ಯಗಳಿಂದಲುಳಿದೆನು ಪೇಳಲೇನದನೆ ॥ ಮುಂದೆ ಶ್ರೀಕರ ಮಾಯು ಸ್ವದ್ಗುಣ ।ವೃಂದ ಹೆಚ್ಚಲಿವೀರನಾಗಲಿ । ಚಂದ್ರಕುಲ ನಿಧಿ ಚಂದ್ರಗಂಡರ। ಮುಂದೆ ಮೆರೆಸಿದೆ ಭಾಷೆ ಭಾಪುರೆ ॥೧॥ ಸೋತೆ ನಿನ್ನಯ ಸಹಸಕಿಂದಿನಲಿ । ಸಣ್ಣವನೆ ಬಲು ಸತ್ವಾತಿಶಯದಿಂ ಬಾಳು ಧಾತ್ರಿಯಲಿ ॥ ಪ್ರೀತಿ ಮಿಗೆ ನಿಜ ತಾತನಿಗೆ ಬಲು । ನೀತಿಯಲಿ ವೈವಾಹವೆಸಗಿದ। ರೀತಿಗಿಚ್ಛಾಮರಣಿಯಾಗೆಂ। ದಾತ ಪರಸಿದ ತೋಷದಿಂದಲಿ ॥೨॥ ಎಂದು ಮನ್ನಿಸಿ ಸುತನ ಸತಿ ಸಹಿತ। ಸಮ್ಮೇಳದಿಂದಿರೆ । ಬಂದು ಗರ್ಭವುದೋರಲವ ಮತ್ತ ॥ ಚಂದದಿಂ ವಿಪ್ರರನು ಕರೆಸುತ । ಲಂದು ಸೀಮಂತವನೆ ಗೈಯಲು । ಸಂದು ನವಮಾಸಂಗಳಂತ್ಯದಿ । ನೊಂದು ಸೊರಗುತ ಮರುಗುರ್ತಿದಳು ॥೩॥

ರಾಗ-ನೀಲಾಂಬರಿ-ಅಷ್ಟತಾಳ

ಎಂತು ತಾಳಲಯ್ಯೊ । ಈ ಪರಿಭವ । ವೆಂತು ತಾಳಲಯ್ಯೊ ॥ ಎಂತು ತಾಳಲಿ ಪರಿಚಿಂತೆಯಕ್ಷಣ ಮಾತ್ರ । ವಿಂತು ಸುಖಂಗಳಿಲ್ಲ । ಯಾರ್ಕೇಳ್ವರಿಲ್ಲ ॥೧॥ ಜಾನು ಕಟಿಗಳ ಕಾಣೆ । ಜಂಘೆಯು ನೋವು । ದೇನೆಂದು ಬಣ್ಣಿಪೆನೆ ॥ ಏನಪ್ಪುದೋ ಕುಕ್ಷಿಯೊಳಗೆ ಸಹಿಸಲಾರೆ । ಕಾಣೆ ನೀ ಕೇಳಿದೆಯ । ಸಂಕಷ್ಟ ಪರಿಯ ॥೨॥ ಊರುಗಳುದುರುವದು । ಕುಚಭಾರಮಾಯ್ತು । ಮೀರುತುದರ ಜರಿದು ॥ ಸಾರವುತೀರದಿದು ಯಾರು ಪರಿಹರಿಪರೆಂದು । ಧಾರಿಣಿಯಲಿ ಬಿದ್ದಳು । ಬಳಿಕೆದ್ದಳು ॥೩॥

ವಾರ್ಧಿಕ

ಧರೆಯೊಡೆಯ ಕೇಳಿತ್ತ ಮರುಗುತ್ತ ಸತಿಯತ್ತ । ವರ ಮುಹೂರ್ತದಿ ಪೆತ್ತಳೊಬ್ಬ ಸುತನನ್ನಿತ್ತ । ಧರಣಿ ಪತಿ ನೋಡಿ ನಲಿದಾಡಿ ಸಂತಸಗೂಡಿ ಸಕಲ ಕರ್ಮವಗೈಯುತ ॥ ಭರದಿಂದ ಗರ್ಭವಂ ಧರಿಸಿ ಮತ್ತೊಬ್ಬನಂ ।ತಿರುಗಿ ಪಡೆಯಲ್ ಭೂಪ ಕರೆಸಿ ವಿಪ್ರರನೋಪ । ಚರಣೆಯಿಂ ಧನವಿತ್ತು ಮಾಶೀರ್ವಮಂ ಧರಿಸಿ ಸಂತಸದೊಳಿರ್ದ ನಿರತ ॥೧॥

ಭಾಮಿನಿ

ಹಿರಿಯನಿಗೆ ಚಿತ್ರಾಂಗನೆನ್ನುತ । ಕಿರಿಯನಾದ ವಿಚಿತ್ರವೀರ್ಯಗೆ । ಕರುಣದಿಂ ಸಕಲಸ್ತ

ವಿದ್ಯಾದಿಗಳ ಕಲಿಸುತಲಿ ॥ ಮೆರೆವ ಸತ್ಕರ್ಮದಲಿ ರಂಜಿಸಿ । ಹರುಷವಾಂತಿರ ಲೊಂದು ದಿನ ಸದಿ । ತರಳನನು ಕರೆದೆಂದನೇಕಾಂತದಲಿ ಭೂಮೀಶ ॥೧॥

ರಾಗ-ಕಾಂಬೋದಿ-ಝಂಪೆತಾಳ

ಕಂದ ಕಲಿ ಭೀಷ್ಮ ಕೇಳ್ ಬಂದುದ್ಯೆ ವೃದ್ಧಾಪ್ಯ । ಮುಂದೆ ಧಾತ್ರಿಯ ಪಾಲಿಪಂದ ॥ ನಂದನನು ಚಿತ್ರಾಂಗನಿಂದ ನಡೆಸುವ ಭಾರ । ಬಂದುದ್ಯೆ ನಿನ್ನ ಮೇಲೆಂದ ॥೧॥ ಅರಿಯದವರಿಗೆ ನೀತಿಯೊರೆದವರ ಪಾಲಿಪುದು । ಪರಮ ಸದ್ಧರ್ಮಗಳ ಮೇಲೆ ॥ ವಿರಚಿಪುದು ಸರ್ವಸ್ವಮಂಯೆಂದು ಬುದ್ಧಿಗಳ । ನರುಹಿದನು ಭೂಪಗುಣಶೀಲ ॥೨॥ ಮತ್ತೆಲ್ಲರಿಂಗರುಹಿ ಚಿತ್ತಜಯ್ಯನ ಪಾದ । ಚಿತ್ತದಲಿ ಧ್ಯಾನಿಸುತ ಮುದದಿ ॥ ಉತ್ತಮದ ಸಾಯುಜ್ಯದತ್ತಲೈದಲಿಕಿತ್ತ । ಮತ್ತೂರ್ಧ್ವಕ್ರಿಯೆಗಳನು ಭರದಿ ॥೩॥ ವಿರಚಿಸುತ ಬಳಿಕ ನೃಪ ತರಳ ಚಿತ್ರಾಂಗನಿಗೆ । ಪುರದ ಪಟ್ಟಾಭಿಷೇಚಕವ ॥ ಹರುಷದಿಂ ಗೈಯಲ್ಕೆ ವರಕಪ್ಪ ಸರ್ವಜನ । ವೆರಸಿ ಕಾಣಿಕೆ ಕೊಟ್ಟರಾಗ ॥೪॥ ಎಲ್ಲ ಭೀಷ್ಮಾಜ್ಞೆಯೊಳಗೆಲ್ಲ ನಡೆಸುವ ವೀರ । ನೆಲ್ಲಜಾಹ್ನವಿಯ ನಂದನನ ॥ ಎಲ್ಲಕುಂ ದೈವದಂದದೊಳಿಟ್ಟು ಪಾಲಿಸಿದ । ಮಲ್ಲಚಿತ್ರಾಂಗನಾ ಮಹಿಯ ॥೫॥

ಭಾಮಿನಿ

ಇತ್ತಲೀತೆರದಿಂದಲಿರುತಿರ । ಲತ್ತಲುತ್ತರ ದೇಶಪಾಲಕ । ನಿತ್ತನೊಡ್ಡೋಲಗವ ಗಂಧರ್ವೇಶ ವೈಭವದಿ ॥ ಧಾತ್ರಿಪತಿ ಚಿತ್ರಾಂಗನೆನಿಸುತ । ಲತ್ಯಧಿಕ ಭಟರ್ವೆರಸಿ ಘನ ಸಭೆ । ವೆತ್ತು ಕುಳಿತೇಣ್ಣೆಸೆಯ ಪರಿಕಿಸುತೆಂದನಾಕ್ಷಣದಿ ॥೧॥

ರಾಗ-ಕಾಂಬೋದಿ-ಝಂಪೆತಾಳ

ಆಲಿಪುದು ನಮ್ಮ ಭಟಸ್ತೋಮಗಳು ಮೂಜಗದಿ । ಪೇಳಲೇನ್ ಬಾಹುಬಲರಿರ್ದ ॥ ಆಳ್ವಿಕೆಯರನ್ನು ಗೆಲಿದಾಳ್ದಂದ ಮಾಯ್ತುನೆಲ । ಪಾಲರಿನ್ನಾರುಂಟು ಧುರಕೆ ॥೧॥ ಧರೆಯೊಳಗೆ ಛಪ್ಪನ್ನ ಧರಣಿ ಪಾಲಕರೊಳಗೆ । ಧುರವೆಸಗುವವರುಂಟೆ ಭಳಿರೆ ॥ ನರರು ಹುಲು ಭಟರೆನ್ನ ಸರಿಯಾರು ಎನಲವನಿ । ಗೊರೆದನಾ ಸಚಿವಪದ್ಮಾಖ್ಯ ॥೨॥ ಕೇಳು ನಿನ್ನಯ್ಯನೊಡನಾಹವದಿ ಗಜಪುರದ। ಪಾಲಜೈಸುತ ತಿರುಗಿ ವೀರ ॥ ಬೀಳಹೊದನು ಶಂತನೆಂದೆಂಬ ನುಡಿ ಕೇಳಿ । ಕಾಲ ಭೈರವನಂತೆ ಧೀರ ॥೩॥

ರಾಗ-ಭೈರವಿ-ಏಕತಾಳ

ಕೇಳಿರಿ ಪಟುಭಟರೆಲ್ಲ । ನಾವ್ । ತಾಳಿರುವದುಚಿತಮಲ್ಲ ॥ ಸೀಳಲು ಬೇಕರಿಗಳನು । ಯಮನಾಲಯ ಪೊಗಿಸದೆ ಬಿಡೆನು ॥೧॥ ಬೊಪ್ಪನ ಮಡುಹಿದ ಭಟನ । ರಣ। ದರ್ಪವ ಪರಿಕಿಸಿ ಮುನ್ನ॥

ಅಪ್ಪಳಿಸುವೆನಿಳೆಗೆನುತ । ಸರಿ । ಯಪ್ಪರೊಳೆಂದನು ಮಾತ ॥೨॥ ರಂಗನೆ ಧುರಕೈತರಲಿ । ಭ । ಸ್ಮಾಂಗನೆ ನೆರೆ ಮಲೆತಿರಲಿ ॥ ಭಂಗಿಸುವೆನು ತಾನೆಂದು । ಭಟ । ವೃಂದದೊಳೊರೆಯುತಲಂದು ॥೩॥

ವಾರ್ಧಿಕ

ಕೇಳಿದ್ಯೆ ಮೂರ್ಧಾಭಿಷಿಕ್ತ ನುಡಿಗಳನತ್ತ । ಖೂಳಗಂಧರ್ವನುರೆ ಧಾಳಿಯಿಟ್ಟಿದನುಸುರೆ । ಪೇಳಲೇನ್ನೆವತ್ತು ಕೋಟಿಬಲದೊಳು ನಿತ್ತು ನಡುವಿರುಳು ಸಡಗರದೊಳು ॥ ಕಾಳಗಕೆ ನದಿಜಾತ ನಿಲ್ಲದಿರೆ ಪ್ರಖ್ಯಾತ । ಶೀಲ ಸಮಯದಿ ಮುತ್ತೆ ತಡೆಯೆ ಕೊಲುತಿರೆ ಮತ್ತೆ । ಶೂಲಿಬಲ ಚಿತ್ರಾಂಗ ಗೈದು ನಿದ್ರೆಯ ಭಂಗ ಗರ್ಜಿಸುತಲಿಂತೆಂದನು ॥೧॥

ರಾಗ-ಮಾರವಿ-ಏಕತಾಳ

ಏನಚ್ಚರಿಯಿದು ದಾನವ ಸುಮನಸ । ಮಾನವಾದ್ಯರೆಲ್ಲ ॥ ತಾನೆಂದರೆ ಬಹುಮಾನಿಸಿ ನಡುಗಿರ। ಲೇನಿದು ಪುರಮೆಲ್ಲ ॥೧॥ ಕೋಲಾಹಲದಳದಾ ಪದಂಗಳಿಂ । ದೇಳುಗು ಜೊಬ್ಬೆಗಳು ॥ ಕೀಳರು ತಾವೇಂ ಪಾಳಾಗಲು ಚಲ । ಕೇಳಿಯು ಕರಿಣಗಳು ॥೨॥ ಎಂದಾ ನೃಪಸುತ ನಿಂದಿರಲೋರುವ । ನೊಂದ್ಯೆತರುತವನ ॥ ಮುಂದೆಯೆ ಮಣಿಯುತಲೆಂದನು ಚರ ಭಯ । ದಿಂದಲಿ ಪುರಕಥನ ॥೩॥

ರಾಗ-ಮುಖಾರಿ-ಏಕತಾಳ

ಲಾಲಿಸಿ ಕೇಳು ನಮ್ಮ ಜೀಯ । ಭಯವಾಯ್ತುರಾಯ । ಲಾಲಿಸಿಕೇಳು ನಮ್ಮ ಜೀಯ ॥ಪ॥ ಉತ್ತರ ದೇಶ ದೊರೆಯಂತೆ । ಗಂಧರ್ವರಾಜ । ಚಿತ್ರಾಂಗನೆಂದು ಪೆಸರಂತೆ ॥ ಮತ್ತವ ಮಾರ್ಬಲವೆತ್ತುತ ರಾತ್ರಿಲಿ । ಮುತ್ತುತ ಪುರನುಗ್ಗೊತ್ತಿದರ್ಯೆನೃಪ । ಬಿತ್ತರಿಸುವದೇನ್ ಚಿತ್ತಕೆ ವೇದ್ಯವೆ । ನುತ್ತಲಿ ಪಾದದಿ ಸ್ತೌತ್ಯವಗ್ಯೆಯುತ ॥ ಲಾಲಿಸಿ ॥೧॥ ದುರುಳ ಸಚಿವ ಪದ್ಮನೆಂದು । ಸ್ಯೆನಿಕ ಕೂಡಿ । ಬರುತಲೆಮ್ಮೆಲ್ಲರೊಡನಂದು ॥ ಪರಿಪರಿಕೋಲಿನೊಳೊರಗಿಸಿ ಸಕಲರ । ನುರುಳಿಸಿ ನುಗ್ಗುತ ಮೆರೆವವರೆಂದೆನ । ಲುರಿದೇಳುತ ಬಲು ಶರತಾಪಂಗಳ । ಧರಿಸಿ ರೋಷದಿಂದರುಹಿದ ಮಾತ ॥ ಲಾಲಿಸಿ॥

ರಾಗ-ಭ್ಯೆರವಿ-ಅಷ್ಟತಾಳ

ಪಟುಭಟರೆಲ್ಲರ್ಕೇಳಿ । ಮುತ್ತಿದ ಪುರ । ದಿಟ ಪರಾಕ್ರಮನು ತಾಳಿ ॥ ಹಟದಿಂದ ಸಂಗರ ತಟದೊಳು ಮಲೆತ ಧೂ । ರ್ಜಟಿಯಾಗೆ ಭಂಗಿಸುವೆ ॥೧॥ ವಿಕ್ರಮರಾದಡೇನು । ಕಾದಲು ಬಂದ । ನಕ್ರಮದಿಂದ ತಾನು ॥ ಶಕ್ರಗಿಕ್ರಾದ್ಯರ ಬಗೆಯದ ನಮ್ಮ ಪ । ರಾಕ್ರಮಕೆಣೆಯುಹರೆ ॥೨॥ ಚೋರರ ತೆರದಿಂದಲಿ । ಮುತ್ತಿದರಿಪು । ವೀರನಾದಡೆ ಮೇಣಿಲ್ಲಿ ॥ ಸಾರಬೇಕದನರಿ ಮಾರಿಗೀವೆನೆನುತ್ತ । ವೀರನು ಹೊರವಂಟನು ॥೩॥

ಭಾಮಿನಿ

ಏರಿದನು ಹೊಂದೇರ ನೆರೆ ಕಾ । ಹೇರಿದನು ಕಿಡಿಯುಗುಳಿ ನೇತ್ರದಿ । ಮಾರಮರ್ದನನಂತೆ ಮಸಗುತ ಗಜರಿ ಖಾತಿಯಲಿ ॥ ವೀರ ರಿಪು ವಾರಿನಿಧಿ ವಡಬನ । ಮೀರಿಮಾರ್ಬಲ ದುಡುಕಿ ತಡೆಯಲು। ದಾರ ಭಟ ಪದ್ಮಾಖ್ಯ ತಡೆದಿಂತೆಂದ ರೋಷದಲಿ ॥೧॥

ರಾಗ-ಶಂಕರಾಭರಣ-ಮಟ್ಟೆತಾಳ

ಭಳಿರೆ ಭಾಪು ಮಝುರೆ ವೀರ । ನಳವಿಗಾದೆಯೈಸೆ ಶೂರ ಛಲಗಳೈಸೆ ಮಾರ ಬೇಡ । ತಲೆಯ ಸುಮ್ಮನೆ ॥ ಕಲಿತ ಸುಭಟನಾಳ್ದಗಿಂದು । ಲಲಿತ ಕರವನಿತ್ತು ಬದುಕೆ । ಫಲಗಳೆನುತ ಲೆಚ್ಚನಾಗ । ಮುಳಿದು ಭೂಪಗೆ ॥೧॥ ಧಿರುರೆ ಪೂತು ಮಝುರೆ ವೀರ । ನರಿಯೊ ರಾತ್ರಿಯಲ್ಲಿ ನಮ್ಮ । ಪುರವ ಮುತ್ತಿ ಬಾಯ್ಗೆ ಬಂದ । ತೆರದಿ ಗಳಹುತ ॥ ಮೆರೆವ ಛಲದ ದೊರೆಯ ಬರಿಸು । ತೆರನಿದಲ್ಲದಾಗೆ ನಿನ್ನ । ಶಿರವನೀಯದೆನುತಲೆಚ್ಚ । ನುರು ಸಿಳಿಮುರ್ಖಿ ॥೨॥ ಎಚ್ಚ ಶರವ ತರಿಯೆ ಬಳಿಕ । ಚಚ್ಚರದಲಿ ಕೋಲ ಮಳೆಯು । ಮುಚ್ಚೆ ಖಂಡಿಸಲ್ಕೆ ಸುಮನ । ರಚ್ಚರಿಸಲು ॥ ಕಿಚ್ಚಿನಂತೆ ಮಸಗಿರೋಷ । ಪೆರ್ಚಿ ಮುಸುಕಲಿಳೆಯೊಳೊರಗ । ಲುಚ್ಚರಿಸಲೇನು ಮುಂದೆ । ನಿಶ್ಚಯಂಗಳ ॥೩॥

ಭಾಮಿನಿ

ವಸುಧೆಪತಿ ಕೇಳಿಂತು ಸಚಿವನ । ವಸುಧೆಗೊರಗಿಸಿ ಮುತ್ತಿದರ ಭಂ। ಗಿಸುತ ರೌದ್ರಾವೇಶದಿಂ ಖಂಡಿಸಲು ಮಾರ್ಬಲವ ॥ ದೆಸೆಗಳೆಂಟರ ಕವಿಸಿ ಶರಮಳೆ । ಗೆಸೆವ ಗಂಧರ್ವೇಶ ಪರಿಕಿಸಿ । ವಿಷಗಳನ ಖತಿತಾಳ್ದು ಬೊಬ್ಬಿರಿದೆಂದನವನಿಪಗೆ ॥೧॥

ರಾಗ-ಭೈರವಿ-ಏಕತಾಳ

ಭಾಪು ಮಝುರೆ ಬಿಲ್ಲಾಳು । ಬಲ । ರೂಪನು ಗೆಡಿಸಿದೆ ತಾಳು ॥ ನೀ ಪರಿಕಿಸು ಶೌರ್ಯವನು। ನಿಜ । ಚಾಪ ಶರಂಗಳನಿನ್ನು ॥೧॥ ಆರೆಲೊ ಸುಭಟಾಗ್ರಣಿಯೆ । ಧುರ । ಧೀರ ನೀನಹುದೆಲ ಸರಿಯೆ॥ ಚೋರರ ತೆರದಿಂ ಪುರವ । ಕರೆ । ಬೀರದೆ ಮುತ್ತಿದೆಯಹಹ ॥೨॥ ಚೋರರುಗಳು ನಾವಲ್ಲ । ಬಲ। ವಾರಿಧಿಗೆಲ್ದಿಹ ಸೊಲ್ಲ ॥ ದೋರಿಗಳಹೆ ಮರ್ದಿಸುವೆ । ಹಂ । ಕಾರಗಳನು ನಿಲ್ಲಿಸುವೆ ॥೩॥ ಭ್ರಾಂತನೆ ನಿನಗೇನೆಂಬೆ । ಕೃ। ತಾಂತನ ಬಳಿ ನೀಕಾಂಬೆ ॥ ಸಂತಸಮಹುದೇ ಯುದ್ಧ । ಗಣ । ಸಂತತಿಗುಣಲಿದು ಬದ್ಧ ॥೪॥ ಏನೆಂದೆಯೊ ಫಡನೀನು । ತವ । ಜಾಣತನಂಗಳನಿನ್ನು ॥ ಕಾಣುವೆನೆಂದೆನುತವನು । ಬಲು। ಬಾಣವ ತುಂಬಿದ ತಾನು ॥೫॥ ಬರುವಸ್ತ್ರಂಗಳ ತರಿದು । ಕರಿ । ಧರಣಿಪನುರೆ ಬೊಬ್ಬಿರಿದು ॥ಧುರಕ್ಕೆ ತಂದೆಯೊ ನಿನ್ನ । ಪೆಸರರುಹುವದೆಲೊ ಸಂಪನ್ನ ॥೬॥

ರಾಗ-ಪಂತುವರಾಳಿ-ಮಟ್ಟೆತಾಳ

ಧಾರಿಣಿಯೊಳಗ್ಗಳೆಯಮಾದ ವೀರನುತ್ತರಾಧಿನಾಥ । ಶೂರರಿಪು ಮತಂಗಸಿಂಗ ಧೀರ ಚಿತ್ರ ನೇತ್ರ ತರಳ । ಭೂರಿ ಬಲ ಚಿತ್ರಾಂಗನರಿತು ಕೊ । ಎನ್ನೊಡನೆ ಯುದ್ಧ । ತೀರದಿದ್ದರ ಮನದಿಗ್ರಹಿಸಿಕೊ। ವ್ಯರ್ಥ ಶಿರವ । ಮಾರಬೇಡ ಸಾರು ಹಿಂದಕೊ । ಸತ್ವವಿರಲು । ಭಾರಿ ಗಣದಿ ತೋರಿ ಮೆರೆಸಿಕೊ । ಬಲುಹನರಿತುಕೊ ॥ ಯಾಕೆಲಾ ವಿಚಾರ ಸುಮ್ಮನೆ ॥೧॥ ಇತ್ತ ತಿರುಗಿ ಕೇಳು ಚೆಲ್ವ ಮತ್ತ ದ್ವಿಪ ಪುರೀಶ ವೈರಿ । ದೈತ್ಯಸಿಂಗ ಶರಭ ಚಕ್ರವರ್ತಿ ಶಂತಸೂನುಬಾಹು । ಜೋತ್ತಮನ್ನ ಕೇಳುಕೇಳೆಲ । ಚಿತ್ರಾಂಗನೆಂಬು। ದುತ್ತಮದ ಪೆಸರು ತಾಳೆಲ । ನಮ್ಮ ಧುರದೊಳತ್ತ ಪೋಪುದಾಸೆ ಬೇಡೆಲ । ಜವನ ಪುರಿಗೆ । ನಿತ್ತುಕಾದು ತೋರ್ಪ ಪಥಮೆಲ । ನಿಲ್ಲಲೇನ್ ಫಲ ॥ ಕೇಳೆಲಾ ಮದಾಂಧ ಸುಭಟನೆ ॥೨॥

ರಾಗ - ಸೌರಾಷ್ಟ್ರ - ತ್ರಿವುಡೆ ತಾಳ

ಎನಲು ಕೇಳುತಲೆಂದ ನಮ್ಮಯ । ಜನಕನನು ನಿನ್ನಯ್ಯ ಭಂಗಿಸಿ । ಧನಘಮತಿ ಸುತ ನಿನ್ನ ಸಮರದಿ । ಘನತೆ ನೋಳ್ಪೆ ॥೧॥ ಹಿರಿಯರೊಳು ನಡೆದಿರ್ಪಹಗೆತನ । ಕಿರಿಯರಾವ್ ಪೂರೈಸಬೇಕದ। ನರಿಯೊ ನಿನ್ನನು ಗೆಲ್ದು ಜಯಸಿರಿ । ತರುಣಿಗೆಳೆವೆ ॥೨॥ ನಿನ್ನ ಜನಕನ ತಾತ ಮಡುಹಿದ । ಕಿನ್ನು ನಿನ್ನಂಗವನು ಭಂಗಿಸ । ದಿನ್ನು ಬಿಟ್ಟರೆ ಹಾಸ್ಯಮೆನುತವ । ನನ್ನು ಪೊಯ್ದ ॥೩॥

ಭಾಮಿನಿ

ಪೊಡವಿಪತಿಕೇಳಿಂತು ಸಮರದಿ । ಬಿಡದೆ ಹೆಣಗಿದ ರೇಳುದಿನ ಕಂ ।ದೊಡನೆ ರೋಷಾವೇಶದಲಿ ರಿಪುಕರದ ಖಂಡೆಯವ ॥ ಕಡಿದು ಬಿಸುಡಲು ಪೊಸತು ಧರಿಸಲು । ಒಡನೆ ನೂರೆಂಭತ್ತು ಚಾಪವ । ಕಡಿಯಲಾಕ್ಷಣ ಕಂಡು ಕಿಡಿಕಿಡಿಯಾಗುತಿಂತೆಂದ ॥೧॥

ರಾಗ - ಭೈರವಿ - ಅಷ್ಟತಾಳ

ಪೂತು ಮಝರೆ ವೀರನೆ । ಸಂಗರ ಸತ್ವ । ರೀತಿಯ ಬಲ್ಲಿದನೆ ॥ ಖಾತಿಲಿ ಕಾರ್ಮುಕ ನೀತುಂಡರಿಸೆ ಬಿಡೆ । ಘಾತಿಪೆ ಶಿರವೆಂದನು ॥೧॥ ಪೊರೆವವರಾರ್ ನಿನ್ನನು । ಸಂಗ್ರಾಮದಿ । ಶಿರವನೆ ಖಂಡಿಪೆನು ॥ ಚರಣಕಾನತನಾಗಿ ಹರುಷದಿ ಬಾಳೆನೆ । ಕರಿಪುರೇಶನು ಕನಲಿ ॥೨॥ ಗಂಧರ್ವರೊಳಗೆ ನಿನ್ನ। ಪಾಡಿನ ಭಟ । ವೃಂದವ ಕಾಣೆ ಮುನ್ನ ॥ ಮಂದಮತಿಯೆ ಸತ್ವದಂದವ ನೋಡೆನು । ತಂದಿಟ್ಟ ಮುಷ್ಟಿಯಲಿ ॥೩॥ ಏರಿ ಕ್ರೋಧದೊಳು ಮತ್ತ । ದಿವ್ಯಾಸ್ತ್ರವ । ನೇರಿಸಿ ಪೊಡೆಯಲತ್ತ ॥ ಮೀರಿ ಭೂಪನ ಶಿರ ಹಾರಲು ಮೂಜಗ । ಭೂರಿ ಬೊಬ್ಬೆಯೊಳ್ಳೆದಿತು ॥೪॥

ವಾರ್ಧಿಕ

ಶರಧಿ ವಸನೇಶ್ವರನೆ ಸೆಣಸುತ್ತ ದೊರೆಯತ್ತ । ಧರೆಗುರುಳಲೊರಗುತಂ ಪೊರಳುತಂ ಸೊರಗುತಂ । ಚರರು ತಂದತ್ತ ಪೇಳುವೆ ಮೆಲ್ಲಮೆನ್ನುತ್ತ ಚಿತ್ರಾಂಗ ಜನಸಿಯತ್ತ ॥ ಮರುಗುತಂ ಮನದೊಳಗೆ ಕರಕರಿಸುತವ ಕಡೆಗೆ । ಧುರದ ಸಂಗತಿಯೆಲ್ಲ ಪೇಳೆ ಕೇಳುತಲೆಲ್ಲ । ಧರೆಗೊರಗಿ ಹಾಯೆಂದು ಮರುಗಿ ಮನಕರಗಿ ಬಿದ್ದೊರಲುತಲೆ ದುಃಖಿಸಿದಳು ॥೧॥

ಭಾಮಿನಿ

ಅಳಿದನೇ ಮತ್ಸುತ ಶಿರೋಮಣಿ । ಯಳಿದನೇ ಪಗೆ ವನದ ಶಿಖಿತಾ ।ನಳಿದನೇ ರಣಗಾರ ಗಂಡರ ಗಂಡ ದೋರ್ದಂಡ ॥ ಅಳಿದನೇ ಗರ್ಭಾಬ್ಜ ದಿನಮಣಿ । ಯಳಿದನೇ ಶಶಿವಂಶ ನಿಧಿ ವಿಧು। ವಳಿದನೇ ಹಾಯೆಂದು ಧೊಪ್ಪನೆ ಕೆಡೆದಳಬುಜಾಕ್ಷಿ ॥೧॥

ರಾಗ-ಯಮುನಾ ಕಲ್ಯಾಣಿ - ಝಂಪೆತಾಳ

ಹಾ ಮಗನೆ ರಣಧೀರ ಸಚ್ಚರಿತ ಶೀಲ । ಹಾಮಗನೆ ಮೊಗದೋರು ವೈರಿಕುಲ ಕಾಲ ॥ ಹಾ ಮಗನೆ ವಿಧು ತಿಲಕ ಸೌಭಾಗ್ಯ ಚಂದ್ರ । ಹಾಮಗನೆ ಶರಧಿಗಂಭೀರ ಗುಣಸಾಂದ್ರ ॥೧॥ ಹುಟ್ಟಿದಾರಭ್ಯ ನಿನ್ನುವನು ನೆರೆ ತಾನು । ಬಿಟ್ಟು ಅರೆಕ್ಷಣ ಮಾತ್ರ ವಿಲ್ಲದವಳಾನು ॥ ಭ್ರಷ್ಟಳಾಗುತ ನಿನ್ನ ತೊರೆದಿರಲಿಕೆಂತು। ಕೆಟ್ಟು ಪೋದುದು ಕಾರ್ಯವೇನೆನ್ನಲಿಂತು ॥೨॥ ತರಳ ಮನ್ಮಥ ರೂಪಕೀರ್ತಿ ಕಲಾಪ । ಧುರದೊಳಗೆ ಮಡಿದೆಯ್ಯೆ ಭೂಪಕುಲದೀಪ ॥ ಒರೆವುದಾರಿಗೆ ಭೀಷ್ಮನಿಲ್ಲದಾ ಪರಿಯು । ಹರಹರಾ ಎಂದಲ್ಲಿ ಮರುಗಿದಳು ಸತಿಯು ॥೩॥

ವಾರ್ಧಿಕ

ಮರುಗಿದಳ್ ಶೋಕದಿಂದೊರಗಿದಳ್ ಸೊರಗಿದಳ್ । ಪರಿಪರಿಯ ಬಣ್ಣಿಸುತ ನಣ್ಣಿಸುತ ಲೆಣ್ಣಿಸುತ । ಧರೆಯೊಳಗೆ ಬೀಳುತ್ತಲೇಳುತ್ತ ಕೇಳುತ್ತ ಪೇಳುತ್ತ ಮಗನ ಪರಿಯ ॥ ಕರಕರಿಸುತಿಂತಿರಲ್ ಚಿಂತೆಯೊಳು ಸೀಮಂತೆ । ಧರೆಗೊದ್ದು ಬಿದ್ದು ಬಳಿಕೆದ್ದು ಹಾಯೆಂದೊರಗೆ । ಧುರಧೀರನಿಧಿ ಸಾರ ಗಾಂಭೀರ್ಯಧರ ಭೀಷ್ಮ ಬಂದೆರಗೆ ಮಾತೆಯಡಿಗೆ ॥೧॥

ರಾಗ -ಕಾಂಬೋಡಿ - ಝಂಪೆತಾಳ

ಏನಮ್ಮ ದುಗುಡದ ನಿಧಾನವೇನದ ಪೇಳ್ಬು । ದಾನಿರಲು ಭಯವೇತಕೆನಲು ॥ ಮಾನಿನೀಮಣಿ ಯೆಂದಳೇನೆಂಬೆ ನಿಜಸೂನು । ತಾನೆ ಗಂಧರ್ವಸಮರದಲಿ ॥೧॥ ತೊರೆದನೀ ರಾಜ್ಯ ಭೋಗಂಗಳನು ಸಂತಸದಿ । ಸುರರ ಗದ್ದುಗೆಯನೇರಿದನು.॥ ಒರೆಯಲೇನಿನ್ನು ನೀನಿಲ್ಲದೀ ವಿಧಿ ಬಂದು ।

ಮರುಗಲಾಯ್ತೆನಲೆಂದನವನು ॥೨॥ ತಾಯೆ ಬಿಡು ಬಿಡು ದುಗುಡವಾಯತಾಂಬಕಿ ತಮ್ಮ । ನಾಯುವನು ಕೊಂಡ ಖಳನಸುವ ॥ ಪಾಯದಿಂ ಭಂಗಿಸುವೆ ಕಳುಹೆನ್ನರಣಕಿಂದು । ಪ್ರೀಯದಿಂ ಪರಸಿತೋಷದಲಿ ॥೩॥ ಅಪ್ಪಣೆಯ ನೀನಿತ್ತು ತಪ್ಪದುರೆ ಕಳುಹಲ್ಕೆ । ಕ್ಷಿಪ್ರದಿಂದಾತನನು ಬಗಿದು ॥ ಬಪ್ಪೆನೆಂದೆನ್ನಲದಕೊಪ್ಪಿಹರಸುತ ಮಗನ । ನಪ್ಪಿ ಸಂಗರಕೆ ಕಳುಹಿದಳು ॥೪॥ ಬಂದು ರಿಪು ವಾಹಿನಿಯ ನಿಂದು ಪರಿಕಿಸಿ ಧುರದೊಳಂದು ಮಾರ್ಬಲವ ಕತ್ತರಿಸೆ ॥ ಗಂಧರ್ವಪತಿರೋಷದಿಂದ ಲದ ಕಂಡು ನದಿ । ನಂದನಂಗೆಂದ ಕಿಡಿ ಸೂಸಿ ॥೫॥

ರಾಗ-ಮಾರವಿ-ಅಷ್ಟತಾಳ

ಆರೊ ವೀರ ನಮ್ಮ ದಳವ । ಮಾರಿಗಿತ್ತ ಸುಭಟ ನಿನ್ನ । ಹೀರದುಳಿಯೆ ತಿಳಿಯೆನುತ್ತ । ಭೋರನೆಚ್ಚನು ॥೧॥ ಚೋರಬಗುಳಬೇಡ ನಮ್ಮ । ಪೋರನನುಜನನ್ನು ಗೆಲ್ದ । ಕ್ರೂರ ಗರ್ವತರಿವೆನೆನುತು। ದ್ಧಾರನೆಸೆದನು ॥೨॥ ಅಣ್ಣನಹುದೆ ನೀನು ಭಳಿರೆ । ತನ್ನ ಪುಣ್ಯದಿಂದ ಬಂದೆ । ನಿನ್ನ ತಮ್ಮನೊಂದಿಗೀಗ। ಬಣ್ಣ ರಚಿಸುವೆ ॥೩॥ ಕುನ್ನಿಗಳಹ ಬೇಡವೆಲೆ ಸೂರ್ಯನ್ನ ತನಯನಲ್ಲಿ ಬೇಗ । ನಿನ್ನ ಕಳುಹಬೇಕೆನುತ್ತ। ಮಿಣ್ಣನೆಚ್ಚನು ॥೪॥

ಭಾಮಿನಿ

ಪರಶುಧರ ನಿತ್ತಂಬನಾಕ್ಷಣ। ತಿರುವಿಗೆಚ್ಚರಿಭಟನ ನೆಲದೊಳ । ಗುರುಳಿಸಿದ ಸುಮನಸರು ಮೆಚ್ಚುವ ತೆರದೊಳಾಭೀಷ್ಮ ॥ ಒರೆಯಲೇನೆಚ್ಚರಿತು ಭೀತಿಲಿ । ಚರಣಕಾನತನಾಗಿ ನಿಮ್ಮೊಳ । ಗೆರಡಗ್ಗೆದನು ಜೀಯ ಸಲಹೆಂದೆನುತಲಿಂತೆಂದ ॥೧॥

ರಾಗ ಬೇಗಡೆ ಅಷ್ಟ ತಾಳ

ಲಾಲಿಸೈ ರಾಜೇಂದ್ರ ನಿಧಿ ಚಂದ್ರ । ಎನ್ನರಿಕೆಯನು ಗುಣ । ಶೀಲ ಸಜ್ಜನ ವೃಂದ ಗುಣ ಸಾಂದ್ರ॥ ನೀಲ ವರ್ಣನ ಭಕುತ ಸಜ್ಜನ । ಪಾಲ ಖಳ ಕುಲ ಕಾಲ ನಿನ್ನಲಿ । ಪೇಳಲೇನ್ ತಪ್ಪುಗಳ ನಾಯದೆ। ಬಾಲನೆನ್ನ ದಯಾಳು ನೀ ಪೊರೆ ॥ಪ॥ ಇಂದು ಕುಲದೊಳಾನಂದ ಶಂತನ । ಕಂದ ವೀರ ನಿನ್ನ। ವಿಕ್ರಮ । ಎಂದು ತಿಳಿಯದೆ ಬಂದುತಾಗಿದೆ । ಮುಂದೆ ನೀಯೆನ್ನ ॥ ನಂದನರು ನಿಜ ತಂದೆಯಡಿಗೆ ಮದಾಂಧತನದೊಳು ಕುಂದುಗೈದರು । ಹಿಂದೆ ಬಿಡುವರೆ ಬಂದ ವೈರವ । ನಿಂದು ಮರೆಯುತ ಚಂದದಿಂ ಪೊರೆ ॥ ಲಾಲಿಸೈ ॥೧॥ ಸುರರು ತಾಕಿನ್ನರರು ಯಕ್ಷರೊಳಿರುವರೇನಯ್ಯ । ನಿನ್ನಯ । ಸರಿಗೆ ನಿಲ್ಲುವ ದುರುಳದಾನವ।ರುರಗರಿನ್ನಯ್ಯ ॥ ಧರೆಯೊಳೋರ್ವರ ತೆರಪದಲ್ಲಮ । ಭರಿತ ವೀರರೊಳರಸ ನೀದಯ । ವೆರಸಿ ತನ್ನನು ತರಳನಂದದಿ । ಸರಸದೋರುತ ನಿರತ ನೀಪೊರೆ ॥ ಲಾಲಿಸೈ ॥೨॥ ಎಂದು ಸನ್ನುತಿಯಿಂದ ಪೊರಳುವ । ನಂದನನ ಪಿಡಿದು । ನಿನಗಾ । ನಂದವೈಭಯ ವೃಂದ ಬೇಡಿನ್ನೆಂದು

ದೃಢಮಿಂದು ॥ ನಂದನರ ತೆರದಿಂದ ಪಾಲಿಪೆ ।ನೆಂದು ಮನ್ನಿಸಿ ಬಂದು ಪುರವನು । ಚಂದ ದಲಿ ಹೊಕ್ಕಂದು ಮಾತೆಯ । ನಂದು ಮನ್ನಿಸಿ ನಿಂದು ಮೆರೆದನು ॥ಲಾಲಿಸ್ಯೆ ॥೩॥

ರಾಗ - ಕಾಂಬೋದಿ - ಝಂಪೆ ತಾಳ

ಇತ್ತ ಕಾಶೀಶ ವೀರಾಖ್ಯನೊಂದಿವಸಾಪ್ತ । ಮಾತ್ಯವರ್ಯನ ಕರೆವುತೆಂದ ॥ ಪುತ್ರಿಯರು ಮೂವರಿಗೆ ವತ್ಸರಂ ಸರಿಯಾಯ್ತು । ಬಿತ್ತರಿಸಲೇನುಪೇಕ್ಷೆಂದ ॥೧॥ ಎಲೆಸುನೀತಿಯೆ ನಮ್ಮ ಸುತೆಯಂಬೆಯಂಬಾಲೆ। ಚೆಲುವೆಯಂಬಿಕೆಯ ಮೂವರಿಗೆ॥ ಇಳೆಯ ಪಾಲರನರಸಿ ಪರಿಣಯವಗೈವುದೆನೆ। ತಳುವದವನೊಪ್ಪಲಾಕಡೆಗೆ ॥೨॥ ಕರೆಸಿ ಜೋಯಿಸರಿಂದ ಪರಮಲಗ್ನವನಿರಿಸಿ । ಹರುಷದಿಂ ಬಹದಶಮಿದಿನದಿ॥ ವಿರಚಿಸುವದೆಂದೆನಲ್ಕಾಚೆಯಲಿ ಮೂವರುಂ। ತರುಣಿಯರು ಸಖಿಯರೊಡಮುದದಿ ॥೩॥ ಬಂದು ಜನಕಂಗೆ ವಂದಿಸಿ ವನದಿ ಕ್ರೀಡಿಸುವೆ ।ವೆಂದು ಬಿನ್ನೈಸೆ ಭೂಮಿಪನು ॥ ಚಂದದಿಂ ಕಳುಹಲ್ಕೆನಾರಿಯರು ವನಕ್ಕೈದಿ । ನಿಂದು ಕ್ರೀಡಿಸಿದರಂದವನು ॥೪॥

ಭಾಮಿನಿ

ಇತ್ತ ಸಾಲ್ವನು ಸಕಲ ವಿಭವದೊ।ಳಿತ್ತನೋಲಗ ಭಟರ ಮಧ್ಯದಿ। ಅತ್ತತಾರಾನಿವಹಚಂದಿರನಂತೆ ವೈಭವದಿ ॥ ಮತ್ತೆ ಪ್ರಜೆ ಪರಿವಾರ ಸಂತಸ ।ವೆತ್ತಿರಲು ವನಪಾಲಕರು ಜಯ । ವೆತ್ತ ಘೋಷದಿನಿಂದು ನುಡಿದರು ಮನದ ಭೀತಿಯನು ॥೧॥

ರಾಗ - ಮುಖಾರಿ - ಏಕತಾಳ

ಲಾಲಿಸಬೇಕು ಸಾಲ್ವ ಭೂಪ । ಕಡು ಸುಪ್ರತಾಪ । ಲಾಲಿಸಬೇಕು ಸಾಲ್ವಭೂಪ ॥ಪ ॥ ಒರೆಯಲೇನಿನ್ನು ವನದ ಪರಿಯ । ಮೃಗಗಳು ಕೂಡಿ । ಹರಿಸಿದರೆಲ್ಲವನ್ನು ಜೀಯ ॥ ಉರಿಗಣ್ಣನು ಹರಿ ಕರಡಿಗಜಂಗಳ ನೆರವಿ ಯುಭಂಗಿಸು ತಿರುವವು ತೋಷದಿ । ಕರುಣವ ಬೀರುತೆ ಪೊರೆಯಲಿಕೇಳ್ಳೆ । ಧುರವಿಕ್ರಮಹೇ ದೊರೆಯೆ ಪರಾಕು ॥ ಲಾಲಿಸ ॥೧॥

ಆರ್ಯ ಸವಾಯಿ

ಎಂದುದನಾಲಿಸಿ ಬಲು ಸನ್ನಾಹವ । ನಂದೊಡಗೂಡುತಲಿ ॥ ಬಂದಾವನದೊಳು ಬೇಟೆಯ ನಾಡಿದ । ನಂದು ವಿನೋದದಲಿ ॥೧॥

ರಾಗ - ಮುಖಾರಿ - ಆದಿತಾಳ

ಬಂದ ಸಾಲ್ವ ಬೇಟೆಯಾಡುತ್ತ । ಮುಂದ್ವರಿಯುತ್ತ । ಬಂದ ಸಾಲ್ವ ಬೇಟೆಯಾಡುತ್ತ ॥ಪ॥ ತಿರುಗಿ ಗಂಡಿಗಳನ್ನೆಲ್ಲ ಕಟ್ಟಿ।ಸಂಗರ ಜಟ್ಟಿ। ಶರಮಳೆ ಸುರಿಸಿ ಪಥ ಕಟ್ಟಿ॥ ಭರದಿ ಮೃಗಂಗಳ ನೆರವಿಯ

ಭಂಗಿಸಿ । ಹರುಷದಿ ಶಬರರಿಗಿರದೀಯುತ ಲವ । ಸರಸದಿ ವನದೊಳು ತಿರುಗುತ ಬಂದಾ । ವರಪುಷ್ಕರಮದನರಸಲಿಕೆನುತ ॥ ಬಂದ ॥೧॥

ರಾಗ -ಕಾಂಬೋದಿ - ಝಂಪೆತಾಳ

ಬರುತ ವನದೊಳು ಕಂಡ ವರ ಬಕುಳ ಮಂದಾರ । ಸುರಗಿ ಶ್ಯಾಮಂತಿಕಗಳಿಂದ ॥ ಪರಮ ಚಂಪಕ ಕರ್ನಿಕಾರ ಸುರ ಹೊನ್ನೆಯಿಂ । ಪರಿಮಳಿಪ ಸೌಗಂಧದಿಂದ ॥೧॥ ಜಂಬು ಮಾದಳಚೂತ ನಿಂಬೆ ಕಂಕೆಲ್ಲಿಯುಂ । ಜಂಬೀರ ದ್ರಾಕ್ಷೆ ಕದಳಿಗಳ ॥ ಸಂಭ್ರಮಕೆ ಮನಮೆಚ್ಚಿ ಮುಂಬರಲು ಶುಕ ಪಿಕಗ॥ಳೆಂ ಬಾಗಿ ರಂಜಿಸಿತು ಮುಂದಾ ॥೨॥ ಒರೆಯಲೇನ್ ಚಕ್ರ ಮಯ್ಯೂರಗಿಡುಗರ ಸಂಚಿ। ಮೆರೆವಟಿಟ್ಟಿಭ ಚಕೋರಗಳ ॥ ನೆರವಿಯನು ಕಂಡು ಹಿಗ್ಗುತ ಬಂದವನದೊಳಗೆ । ಸರಸಿಗರಸುತ ಮುಂದೆ ಭರದಿ ॥೩॥ ಬರಲು ಮುಂಭಾಗದೊಳು ತರುಣಿಯರ ಗುಂಪಿನೊಳ । ಗಿರುವಂಬೆ ಶೋಭೆಯನು ನೋಡಿ ॥ ಸರಸ ಸಂತೋಷದಿಂ ಚರಿತನಾಗುತ ಮತ್ತೆ । ಒರೆದ ತನ್ನೊಡನೆ ನಲಿದಾಡಿ ॥೪॥

ವಾರ್ಧಿಕ

ಸರಸಿರುಹನೇತ್ರದಿಂ ವರಚಂದ್ರನಾಸ್ಯದಿಂ । ಸ್ಫುರಿತಾರ್ಕ ಗಾತ್ರದಿಂ ಸಿಂಗಾರ ಪುರ್ಬಿನಿಂ । ದಿರೆ ಚಂಪನಾಸದಿಂ ವರರತುನ ಹಾರದಿಂ ದರ್ಪಣ ಕಪೋಲದಿಂದ ॥ ನೆರೆ ಕುಂದರದನದಿಂ ಪವಳ ಗುಣ ವಧರದಿಂ । ಸರಿಭ್ರಮರ ಕೇಶದಿಂದುರ ಪಯೋಧರಗಳಿಂ । ಸರಸನಳಿತೋಳ್ಗಳಿಂ ಕೇತಕಿ ಯುಗುರ್ಗಳಿಂ ಮೆರೆವಳಿವಳ್ಯಾವ ಸತಿಯೊ ॥೧॥

ಭಾಮಿನಿ

ಮತ್ತೆ ಸಿಂಗನ ಮಧ್ಯದಿಂ ನೆರೆ । ದುತ್ತಮದ ರಂಭಾಕದಂತಿರೆ । ಮತ್ತ ಗಜಗಾಮಿನಿಯು ಕೋಕಿಲ ವಾಣಿ ಶುಕವಾಣಿ ॥ ಬತ್ತಲೆಯೊಳಿರಲಂದು ದಿವ್ಯ ಸು । ವಸ್ತ್ರ ಭೂಷಿತರಾಗಿ ನಾಚುತ । ನಿತ್ತಿರಲು ತಟಕ್ಕೈದು ತಂಬೆಯೊಳೆಂದನೀ ತೆರದಿ ॥೧॥

ರಾಗ - ಕೇತಾರಗೌಳ - ಅಷ್ಟತಾಳ

ನಾರಿ ನಿನ್ನಯ್ಯನ ವಾರತೆಯೇನದ । ಮೀರುತ್ತಾಕಿಲ್ಲಿ ಬಂದು ॥ ಈ ರೀತಿಯೊಳಗಿರ್ಪೆ ಭೂರಿ ನಾಮವದೇನು । ನೀರಜಗಂಧಿಪೇಳೆ ॥೧॥ ವೀರ ಲಾಲಿಸು ಕಾಶಿ ವೀರಾಖ್ಯ ಪಿತನೆನ್ನ । ವಾರಿಯ ಕೇಳಿಗೆಂದು॥ ಭೋರನೆ ಬಂದೆವ್ಪೋಲ್ ಕರೆವರಂಬೆಯೆನುತ್ತ । ಧೀರ ಸುದ್ದಿಗಳೇಕಿಂತು ॥೨॥ ವರನಾರು ನಿನ್ನಯ ಧರಣಿಯಾವುದು ಪೇಳು । ಮರಿಯಾನೆ ನೀನೆನ್ನಲು ॥ ಶಿರವ ತಗ್ಗಿಸಲಾಗಲರಿತನೀ ಬಾಲೆಗೆ ।

ವರನಾಗಲಿಲ್ಲೆನುತ ॥೩॥ ಮನದೊಳು ಗ್ರಹಿಸುತ್ತ ವನಜಮುಖಿಯೊಳೆಂದ । ವಿನಯದೊಳೆನ್ನ ಕೂಡಿ॥ ಘನತೆಯೊಳಿಹುದೆಂಬವನ ಮಾತ ಕೇಳುತ್ತ । ಲನುಮಾನವಾಂತೆಂದಳು ॥೪॥

ವಾರ್ಧಿಕ

ಧೊರೆಯೆ ಚಿತ್ತವಿಸಿತ್ತ ಬಹ ದಶಮಿ ದಿನಕತ್ತ । ಭರಿತ ಸ್ವಯಂವರ ಗೈವ ನೆನ್ನ ಪಿತದು ಭರವ। ಸರಮಲ್ಲಿಗೈ ತರಲು ವರಿಪೆ ನಿನ್ನುವನೆನಲು ನಂಬಿಗನ್ನಾಗೆ ತಿರುಗೆ ॥ ಪುರಕೈಯ್ಯಲೀಚೆಯೊಳು ಸಚಿವ ಭೂಪಾಲರೊಳು । ಭರಿತ ದಿಗ್ದೇಶಕಂ ಪತ್ರನೀಯುತ್ತವಂ । ಚರರಿಂದ ನಡೆಸಲುಂ ಜನರ ಜಂಗುಳಿಗಳಿಂ ಮೆರೆದಿರ್ದರಾಸ್ಥಾನದಿ ॥೧॥

ಭಾಮಿನಿ

ಅನಿತರಲಿ ತಟನಿಜನು ತಾಕಿರಿ । ಜನನಿಯಿಂದಪ್ಪಣೆಯಗೊಂಡವ । ನನುಜನಿಗೆ ನಾರಿಯರ ಲೋಕದೊಳರಸಿಬರಲಲ್ಲಿ ॥ ಜನಪ ಮನ್ನಿಸೆ ಬಳಿಕ ಶಂತನ । ತನಯ ಯೋಚಿಸಿ ನೋಡಿಸತಿಯರ । ಮನದಿ ಹರುಷಿತನಾಗಿ ಮತ್ತಾ ಭೀಷ್ಮನಿಂತೆಂದ ॥೧॥

ಕಾಂಬೋದಿ - ಝಂಪೆ

ಧರೆಯರಸ ಕೇಳೆಮ್ಮ ಕಿರಿಯ ತಮ್ಮಗೆನುತ್ತ । ತರುಣಿಯರನರಸಿ ನಿನ್ನೆಡೆಗೆ ॥ ಪರಿಣಯದ ಸುದ್ದಿಯನ್ನರಿದು ಬಂದಿಹೆ ನಿನ್ನ । ತರಳೆಯರ ನೀವು ದ್ಯೆ ಕಡೆಗೆ ॥೧॥ ಎಂದೆನಲು ವೀರನಿವನೆಂದರಿವೆ ಮೊದಲೆ ನಾ । ವಿಂದೀಯದಿರಲೆಮ್ಮನುಳಿಸ ॥ ಎಂದು ಭಯದಿಂ ನಡುಗುತಂದು ಭೀಷ್ಮಂಗೆಂದ। ಚಂದದಿಂ ಹಿತದಿ ಕಾಶೀಶ ॥೨॥ ವರ ಸ್ವಯಂವರವೆಂದು ಕರೆಸಿದೆನು ಸರ್ವರನು । ಧುರಪರಾಕ್ರಮರೊಡನೆ ಕಾದಿ ॥ ಮೆರೆವಂದವೆಂತೆನಲು ಕಿರುನಗೆಯ ಸೂಸುತ್ತ । ಶರಧಿವಸನೇಶಂತೆಂದ ॥೩॥

ರಾಗ - ಮಾರವಿ - ಏಕತಾಳ

ಬಿಡುದುಗುಡವ ಕೇಳ್ ಪೊಡವಿಪ ಲೋಕದ । ಕಡುಗಲಿಗಳನೆಲ್ಲ ॥ ತಡೆಗಡಿದೀಕ್ಷಣ ಜಡಜಾಂಬಕಿಯರ । ಪಿಡಿದೊಯ್ಯುವೆನಲ್ಲ ॥೧॥ ಎಂದೆನೆ ಭೂಮಿಪನೆಂದನು ತವಮನ । ಬಂದ ತೆರದೊಳಿನ್ನು ॥ ಮುಂದರಿಸೆನಲವನಂದಾ ಪೆಣ್ ಸಭೆ ।ಯಂದು ಪೊಕ್ಕು ತಾನು ॥೨॥ ತರುಣಿಯ ರ್ಮೂವರ ಕರಪಿಡಿದಾಕ್ಷಣ । ವರರಥದೊಳಗಂದು ॥ ಹರುಷದಿ ನೆಗಹುತ್ತಿರಿಸುತ ತಿರುಗಿದ । ನುರೆ ಸಭೆಯಿಂದಂದು ॥೩॥

ವಾರ್ಧಿಕ

ಅವನಿಪತಿಯಂ ಕರ್ಬುರೆರೆಯ ಚಿತ್ತವಿಸಿತ್ತ । ಬವರಗಾರರ ದೇವ ಪೊರಡೆ ಸರ್ವರು ನೋಡೆ।

ತವಕಿಸುತ ಮುಂದೊತ್ತಿ ಗುಜುಗುಜಿಸುತಿರೆ ಮತ್ತೆ ಬೊಬ್ಬೆಯಿಂ ಸಭೆ ನಡುಗಿತು ॥ ಭುವಿಯಾಣ್ಮರೆಲ್ಲ ರೊಗ್ಗಾಗಿ ಕಿಡಿ ಕಿಡಿ ಮಸಗಿ । ಬವರಕಾನತರವರು ಮೇಲ್ವಾಯ್ದು ಮುತ್ತಿದರು । ವಿವರಿಸಲದೇನವರ ಝೇಂಕೃತಿಗೆ ಹೂಂಕೃತಿಗೆ ಭುವನತ್ರಯಂ ಬೆಚ್ಚಲು ॥೧॥

ರಾಗ - ಶಂಕರಾಭರಣ - ಮಟ್ಟೆತಾಳ

ಪೊಡವಿಪಾಲ ಕೇಳು ಮತ್ತೆ । ಬಿಡದೆ ಸುತ್ತಿ ಭೂಪರೆಲ್ಲ । ಕಡಹುತನಗಳಿಂದ ಬರಲು । ಬಡಿದು ಭೀಷ್ಮನು ॥ ತಡೆದು ಸಿಡಿದು ಬರುತ ಮುತ್ತ । ಲೊಡನೆ ಭಂಗಗೈಯಲಾಗ । ಕಡುಗಿ ಕಿಡಿಯಮಸಗಿ ನೃಪರ । ಗಡಣ ತುಂಬಿತು ॥೧॥

ಕಂದ

ಮುತ್ತುತ ದಳ ಪಿಂದೊತ್ತುತ । ಕತ್ತರಿಸುತ ರಿಪುವಾಹಿನಿ ಪೃಥ್ವಿಪಜಾತಂ ॥ ಕುತ್ತುತ ಕೊಲುತಿರಲಾಕ್ಷಣ । ಕತ್ತುಗ್ರದಿ ಮಗಧೇಶಂ ತಡೆವುತ್ತೆಂದಂ ॥೧॥

ರಾಗ - ಮಾರವಿ - ಏಕತಾಳ

ಬಲ್ಲಿದ ಭಟನೀನಾದೆಯೊ ನಮ್ಮವ । ರೆಲ್ಲರ ಸಂಗರದಿ ॥ ನಿಲ್ಲದೆ ಜೈಸಿದ ಗರ್ವವದೋರೆನು। ತಳ್ಳಿಗೆ ಶರಭರದಿ ॥೧॥ ಎಸೆಯಲು ತರಿಯುತ ಮಸಗುತಲೆಂದನು । ವಸುಮತಿ ಪಾಲಕನೆ ॥ ಕುಶಲವೆ ಸಂಗರದೆಸೆ ಬೇಡೆನ್ನುತ ॥ ಉಸುರುತೆ ತೆಗೆದೆಚ್ಚ ॥೨॥ ಬಿಡು ಡಂಭದ ನುಡಿ ನಡೆಯುಗೆ ನಮ್ಮಲಿ । ಕೆಡದಿರು ನಡೆಯುತ್ತ ॥ ಜಡಜಾಕ್ಷಿಯರನು ಬಿಡೆ ಹಿತಮಿಂತಿರೆ । ಕೊಡುವೆನು ಬಲಿಯತ್ತ ॥೩॥ ಪ್ರೌಢ ನೀನಿನಿಬರೊಳಾಡುವದೇನ್ ಫಲ । ನೋಡುವೆನೆಂದೆನುತ ॥ ಮೂಡಿಗೆಯಿಂ ಶರ ಗಾಢದಿ ತೆಗೆದಾ । ಜೋಡಿಗೆ ತೆಗೆದೆಚ್ಚ ॥೪॥ ಬರುವಸ್ತ್ರಂಗಳ ತರಿಯುತ ರೋಷದೊಳುರುತರ ಶರಗಳನು ॥ ಸುರಿಸಲು ಖಾತಿಲಿ ಕರದುರೆಗಂಗಾ । ತರಳನು ಕಿಡಿ ಮಸಗೆ ॥೫॥

ಭಾಮಿನಿ

ಅರಿಭಟನ ಸಾರಥಿ ವರೂಥವ । ತರಿದು ಭಂಗಿಸಿ ಮಗಧನನು ನೆರೆ । ವಿರಥನನು ಮಾಡಲ್ಕೆ ಮುತ್ತಿದಡಹಿತ ಮಾರ್ಬಲವ ॥ ಹರಿಸಿ ಮುಂದ್ವರಿಯಲ್ಕೆಸಾಲ್ವನು । ಪರಿಕಿಸುತ ಕಲ್ಪಾಂತಭೈರವ । ಸರಿಸನೆನೆ ಕಿಡಿಯುಗುಳಿ ತಡೆದಿಂತೆಂದ ಗರ್ಜಿಸುತ ॥೧॥

ರಾಗ - ಭೈರವಿ - ಅಷ್ಟತಾಳ

ಎಲ್ಲಿಗೈದುವೆ ಭೀಷ್ಮನೆ । ಬಾಲಕಿಯರ । ನೆಲ್ಲೊಯ್ವೆ ಪೇಳು ನೀನೆ ॥ ಬಲ್ಲಿದ ಭಟ ನೀನು ಕಳ್ಳರ ವಿದ್ಯವ । ನೆಲ್ಲಿ ಕಲಿತೆ ಪೇಳಯ್ಯ ॥೧॥ ಖುಲ್ಲ ಸಾಲ್ವನ ಕೇಳಿತ್ತ । ತಮ್ಮನಿಗೆಂದು । ಫುಲ್ಲಾಕ್ಷಿಯರನು

ಮತ್ತ ॥ ನಿಲ್ಲದೆ ಕೊಂಡೊಯ್ವೆ ಕಳ್ಳರಲ್ಲವು ಸತ್ವ । ವೆಲ್ಲವ ತೋರ್ಪುದಿಂದು ॥೨॥ ಮಾತಿಲಿ ಚಪಳ ನೀನು । ಸಾಹಸವಿರ । ಲೀತೆರ ತೋರ್ಪುದಿನ್ನು ॥ ಭೀತಿಯಾದರೆ ಹೆಣ್ಣು ಜಾತಿಯ ಒಡುಯೆನೆ । ಖಾತಿಯೊಳಿಂತೆಂದನು ॥೩॥ ಹೆಣ್ಣನು ಬಿಡಲು ತಾಳು । ನಪುಂಸಕ । ರಿನ್ನಲ್ಲನಾವು ಕೇಳು ॥ ಇನ್ನಾ ಭೀತಿಗಳುಂಟೆ ನಿನ್ನ ಮಾಗಧ ಬಿದ್ದು । ದನ್ನಿತ್ತ ನೋಡಿ ಬಾರೈ ॥೪॥ ಧುರದಲಿ ಮಗಧನನು ಗೆಲ್ಲಿದ ಗರ್ವ । ಗಿರಿಗಾನು ಕುಲಿಶವಿನ್ನು ॥ ಪರಿಕಿಪುದೆಂದೆಚ್ಚ ಶರವೃಂದ ಖಂಡಿಸಿ । ಕಿರು ಕಿಡಿ ಸೂಸುತೆಂದ ॥೧॥

ಭಾಮಿನಿ

ಮರುಳೆ ಕೇಳಿಂದೆಮ್ಮ ಸಂಗರ । ಹುರಿಗೆಣೆಯ ತಾಳುವಡೆ ಸತ್ವಗ । ಳಿರುವದೇ ನೋಡೆನುತಲೆಂಭತ್ತೆಂಟು ಮಾರ್ಗಣದಿ ॥ ಉರವ ಕೀಲಿಸಲೊರಗುತೆದ್ದವ । ಭರದಿ ನಾಚುತ ತೆರಳಲಿತ್ತಲು । ನೆರೆದ ಸುಭಟರು ಕಾದಿ ಮೈ ಮರೆದೊರಗಿದರು ಧುರದಿ ॥೧॥

ವಾರ್ಧಿಕ

ದೊರೆ ಸಾಲ್ವನುಂ ತಿರುಗಲಂಗವಂಗಕಳಿಂಗ ।ದರಸರೆಲ್ಲರ ಜೈಸಿ ನೃಪಗೆ ಸಂತಸಪಡಿಸಿ ಹರುಷದಿಂ ಕರಕೊಂಡು ತರುಣಿಯರನೊಡಗೊಂಡು ದ್ವಿಪನಗರಮಂ ಸಾರುತ ॥ ಧುರದ ವೃತ್ತಾಂತಮಂ ಮಾತೆಯೊಡನರುಹುತಂ ॥ ತರುಣಿಯರ ತೋರುತಂ ಸರ್ವರಂ ಕರೆಸುತಂ । ಬರಿಸುತಂ ವಿಪ್ರರನ್ನಿರಿಸುತಂ ಲಗ್ನಮಂ ಶುಭಮುಹೂರ್ತವನರಸಿದ ॥೧॥

ಆರ್ಯ ಸವಾಯಿ

ಇರಿಸುತ ಲಗ್ನವ ಕರೆಸುತಲೆಲ್ಲರ ಕಿರಿಯಗೆ ಪರಿಣಯ ವಿರಚಿಸಲು ॥ ನೆರೆದಿರಲೆಲ್ಲ ರುವರ ಭೀಷ್ಮನ ಪದ । ಕೆರಗುತಲಂಬೆಯ ಪೊಗಳಿದರು ॥೧॥

ರಾಗ - ಸುರುಟ - ಏಕತಾಳ

ಮಾತಲಾಲಿಸಿತ್ತ । ಶಂತನ । ಜಾತ ಸುಗುಣವಂತ ॥ ಭೂತಳ ಪತಿಗಳಧಾತ್ತಮರಸಿ ಬಲು । ಪ್ರೀತಿಲಿ ತಂದಿಹೆನೀತದೊಳೊರಿಪುದು ॥೧॥

ರಾಗ - ಕೇತಾರಗೌಳ - ಝಂಪೆ ತಾಳ

ಪ್ರೀತಿಯಲಿ ತಂದೆ ನಿನ್ನ । ತಮ್ಮನಿಂ । ಗೋತು ವರಿಸಲ್ಕೆ ಮುನ್ನ ॥ ಮಾತಾಡಬೇಡವೆನ್ನ । ಒಲ್ಲೆನೆನೆ । ಖಾತಿ ತಳೆದೆಂದಳಣ್ಣ ॥೧॥

ರಾಗ - ಸುರುಟಿ - ಏಕತಾಳ

ವೀರ ನಿನ್ನ ಬಿಟ್ಟು । ತಮ್ಮಗೀ । ಸಾರಿಯೊರಿಸೆ ಗುಟ್ಟು ॥ ಬೇರಿನ್ನುಡಿಯದೆ ಭೋರನೆ ತನ್ನ ವಿ। ಚಾರದಿ ಲಗ್ನದಿ ಧೀರನೀನೊಲಿಸೈ ॥೧॥ ನಾರಿ ಕೇಳು ಮಾತ । ಎನ್ನನು । ಸೇರುವೆಂದರೀತ ॥ ಮೂರು ಜಗವು ಬೊಬ್ಬೇರಲು ನಿನ್ನನು । ಸೇರುವನಲ್ಲೈಕೀರಸುವಾಣಿ ॥೨॥

ರಾಗ - ನಾದನಾಮಕ್ರಿಯೆ - ಅಷ್ಟತಾಳ

ವಿಮಲಕಾಯ ಕೇಳು ಮಾತ । ಭ್ರಮಿತಳಾದೆ ಮಮತೆಯಿಂದ । ಕಮಲಶರನತಾಪತಾಳೆ । ಸಮದಿ ಕೂಡಯ್ಯ ॥೧॥ ಕಮಲನೇತ್ರೆ ನಾನು ನಿನ್ನೊ।ಳಮಿತ ಭೋಗಕೊದಗ್ಗನಲ್ಲ । ಭ್ರಮಿಸಬೇಡಪೋಗೆನುತ್ತ । ಕ್ಷಮಲಿ ತಿರುಗಿದ ॥೨॥

ಭಾಮಿನಿ

ಎಲ್ಲಿ ತಿರುಗುವೆ ವೀರ ಸಭೆಯಿಂ । ಮಲ್ಲರನು ಭಂಗಿಸುತ ತಂದಿಹೆ । ಇಲ್ಲಿ ವರಿಸೆಂದೆನುತ ಗೋಳಿಟ್ಟಳಲಲೀ ಪರಿಯ ॥ ಫುಲ್ಲಮುಖಿಭಾಗೀರಥಿಯು ತಿಳಿ ।ದಲ್ಲಿಗೈತಂದಾಗ ಸತಿಯರು । ಪಲ್ಲದೋರುತ ನಿಂದು ತನಯನೊಳೆಂದಳವಳಂದು ॥೧॥

ರಾಗ - ಮಧ್ಯಮಾವತಿ - ತ್ರಿವುಡೆ ತಾಳ

ಬಾಲಕೇಳ್ ನೀ ತಿಳಿಯದವನೇ । ಬಾಲಕಿಯ ತಂದಿಂತು ಭಂಗಿಪ । ಲೀಲೆ ಚಂದವೆ ವರಿಪುದಿವಳನು । ಜಾಲವಲ್ಲಿದನಾಲಿಸಿ । ಕೇಳು ಮಗನೆ ॥೧॥ ನಿನ್ನನೇ ನೆರೆನಂಬಿ ಬಂದಿಹ । ಪನ್ನಗ ಸುವೇಣಿಯಳನೀಪರಿ । ಬನ್ನಬಡಿಪುದು ಹಿತವೆ ಪೇಳೆಲೆ । ಚಿಣ್ಣ ನೀನೆಂದೆನ್ನುತ । ಪೇಳ್ದಳಾಗ ॥೨॥ ಆಗ ಯೋಜನಗಂಧಿನುಡಿದಳು । ನೀಗುವದು ತರವಲ್ಲ ಸತಿಯಳ । ಬೇಗ ವರಿಪುದು ಹಿತಮಿದೆನ್ನಲು । ನಾಗವೇಣಿಗೆ ಮಣಿಯುತ । ನುಡಿದ ಭೀಷ್ಮ ॥೩॥

ರಾಗ - ಬೇಹಾಗ್ - ರೂಪಕ ತಾಳ

ತಾಯೆ ಕೇಳವ್ವ । ತಮ್ಮಗೋಸುಗ । ಪ್ರೀಯದಿಂದಲಿ । ನೆರೆದ ಸುಭಟರ ॥ ಬೀಯಗೈಯುತ। ತಂದೆನಿವಳನು । ತೋಯಜಾಂಬಕಿ । ಏನಿದಪ್ಪಣೆ ॥೧॥ ಮುನ್ನ ಜನಕಗೆ । ಲಗ್ನ ವಿರಚಿಸೆ । ತನ್ನ ಭಾಷೆಯ। ಕೇಳ್ದು ತಿಳಿಯೆಯ ॥ ಇನ್ನು ಸತಿಯಳ । ಧಾತ್ರಿಯನ್ನು ನಾ । ನಿನ್ನುವರಿಪೆನೆ । ಮಾತಿದೇತಕೆ ॥೨॥ ಹರಿಹರಾದ್ಯರು । ಮುನಿದರಾದರು । ತರುಣಿಗೊಲಿಯೆನು । ಕ್ಷೋಣಿಯಾಳೆನು ॥ ಅರುಹಬಾರದೀ । ಮಾತನೆನುತಲಿ । ಒರೆಯಲಾಕ್ಷಣ । ತಿರುಗಿ ಪೋದರು ॥೩॥

ವಾರ್ಧಿಕ

ಅರಸ ಕೇಳುಭಯರುಂ ತಿರುಗಲ್ಕೆ ಬಸವಳಿದು । ಮರುಗಿ ಮನಕರಗಿ ತಾನೇಂಗೈವೆನೆಂದೆನುತ। ದೊರೆ ಸಾಲ್ವನಂ ನೆನೆದು ಪೋಗಿ ವರಿಸುವೆನೆಂದು ಪುರವ ಪೊರಮಡಲು ಭೀಷ್ಮ ॥ ತರುಣಿಯಳ ಬೆಂಬಳಿಗೆ ಜನವಿತ್ತು ಕಳುಹುತಂ । ಕಿರಿಯನಿಗೆ ಲಗ್ನಮಂ ಗೈದಿಬ್ಬರಂತೋಷ । ವೆರದೀರ್ದು ಸಂತಸದ ವೈಭವದೊಳಿರುತಿರ್ದನೇನೆಂಬೆ ಭೂಮಿಪಾಲ ॥೧॥

ಭಾಮಿನಿ

ಮತ್ತೆ ದೊರೆತನವಿತ್ತು ಪೊರೆಯುತ । ಲತ್ತಲಾಚೆಯೊಳಾಗಲಂಬೆಯು । ಧಾತ್ರಿ ಪತಿ ಕಲಿಸಾಲ್ವನರಮನೆಗೈದಿ ಚರರೊಡನೆ ॥ ಬಿತ್ತರಿಸುತೊಳಪೊಕ್ಕು ಗದ್ದುಗೆ । ಪತ್ತರಂಜಿತ ನೃಪನ ಪದಕೆರ। ಗುತ್ತ ಕಣ್ಣೀರಿಂದ ಮರುಗಲಿಕೆಂದನವಳೊಡನೆ ॥೧॥

ರಾಗ ಕೇತಾರಗೌಳ ಅಷ್ಟತಾಳ

ವಾರಿಜಗಂಧಿನಿ ಧೀರೆ ಬಂದಿರುತಿರ್ಪ । ಕಾರಣವೇನು ಪೇಳೆ ॥ ವೀರ ಭೀಷ್ಮನ ಸತಿ ಭೋರನೆ ಬಂದೆ ಕ । ಣ್ಣೀರಿಂದಲೇನು ಬಾಲೆ ॥೧॥

ರಾಗ ನವರೋಜ ಏಕತಾಳ

ಲಾಲಿಸೆನ್ನಯ ಮಾತ । ಜನ । ಪಾಲತಾಗುಣಧಾತ ॥ ಪೇಳುವದೇನ್ ಭೂ ಪಾಲರ ಭಂಗಿಸಿ । ಖೂಳತನದಿ ಸೆಳೆದಾಲಯ ಸೇರಲು ॥೧॥ ನಿನ್ನನೇನೆನಸುತ್ತ । ಬಲು ಖಿನ್ನಳಾಗುತಲಿತ್ತ ॥ ನಿನ್ನನೊಲಿಸೆ ಸಂಪನ್ನನೆ ಬಂದಿಹೆ । ನೆನ್ನುವ ಸಲಹೆನೆ ಮುನ್ನಿಂತೆಂದನು ॥೨॥

ರಾಗ ಕೇತಾರ ಗೌಳ ಅಷ್ಟತಾಳ

ಹರಿಣಾಂಕವದನೆ ಕೇಳ್ ತರಮಲ್ಲ ತನ್ನೊಡ । ನೊರೆದ ಮಾತುಗಳ ನೀನು ॥ ತೆರಳತ್ತ ಹಿತವಿಂದು ಕರಕರಿಸಲು ಬೇಡೆಂ । ದೊರೆಯಲಿಕಿಂತೆಂದಳು ॥೧॥

ರಾಗ ನವರೋಜು ಏಕತಾಳ

ಬೇಡುವೆನಾ ನಿನ್ನಡಿಯ । ದಯ । ಮಾಡುತೆನ್ನನು ಪೊರೆಯ ॥ ಕಾಡುವೆನೀ ಪರಿ ಕೂಡೆನ್ನುವನೆನ। ಲಾಡಿದ ನುಡಿಗವ ನೋಡುತಲುಸುರಿದ ॥೨॥

ರಾಗ ಕೇತಾರಗೌಳ ಅಷ್ಟತಾಳ

ಭ್ರಾಂತೆ ನೀಗಳಹದೆ ನಡೆಯತ್ತವೆನುತವ । ನಿಂತಲ್ಲಿ ಮಸಗಿ ಮತ್ತ ॥ ಅಂತಕನಂದದಿ ಗಜರಿ

ದೂಡಿಸಲು ಸೀ । ಮಂತಿನಿ ಪೊರಟಳಿತ್ತ ॥೧॥

ರಾಗ ಸಾಂಗತ್ಯ ರೂಪಕ ತಾಳ

ಮರುಗುತ್ತ ಸೊರಗುತ್ತಲೊರಗುತ್ತ ಕರಗುತ್ತ । ಅರಸಿ ನೋಡುವೆ ಪುನರಪಿಯು ॥ ದೊರೆ ಭೀಷ್ಮಗೆನ್ನುತ್ತ ಬಂದತ್ತ ಗಾಂಗೇಯ । ಗಿರದೆಂದಳಾಗಲಾ ಸತಿಯು ॥೧॥ ಮಾತಲಾಲಿಸು ಶಂತ ಜಾತ ಸದ್ಗುಣವಂತ । ಖಾತಿಗಳೇಕಿನ್ನು ಬರಿದೆ ॥ ಪ್ರೀತೆಯೆಂದೆನ್ನುವಾನೀತದೊಳೊರಿಸೆನೆ । ಆತನಿಂತೆಂದ ಗರ್ಜಿಸುತ ॥೨॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಗಳಹದಿರು ಘಡ ಪುಂಶ್ಚಲಿಯೆ ನೀ । ತೊಲಗು ಮತ್ತೀ ರಾಷ್ಟ್ರದಿಂದಲೆ । ಬಳಲ ಬೇಡೆಂದೆನುತ ಗಜರಿದ । ಖಲಿತ ಭೀಷ್ಮ ॥೧॥ ಮತ್ತೆ ಕಣ್ಣೀರಿಂದಲೊರಸುತ । ಚಿತ್ತದಲಿ ಮರುಗುತ್ತ ಪೊರಡುತ। ಬಿತ್ತರಿಸುತಿರುತಿರ್ದಳಂದಿಲಿ । ಪೃಥ್ವಿಪಾಲ ॥೨॥

ರಾಗ ನೀಲಾಂಬರಿ ಆದಿತಾಳ

ಆರಿಗೆಂಬೆ ತನ್ನ ಪರಿಯ । ನಾರು ಕೇಳ್ವರೆನ್ನ ॥ ವೀರ ಭೀಷ್ಮ ಸಾಲ್ವರಿಂಗೆ । ದೂರಳಾದೆ ತನ್ನ ॥೧॥ ತೊರೆದರಿನ್ನು ಪಥಗಳೇನು । ತೆರನ ಕಾಣೆನಯ್ಯೊ ॥ ಅರಸನಾರು ತನಗೆನುತ್ತ । ಸೊರಗುತಾಗ ಸತಿಯು ॥೨॥ ಬಿತ್ತರಿಪುದೇನು ತನ್ನ । ಪೆತ್ತವನನಿದಿರು ॥ ಮತ್ತೆ ತೊರೆದ ಕಾವನ್ಯಾರೆ । ನುತ್ತ ಪೊರಳಿದಳು ॥೩॥

ಭಾಮಿನಿ

ಅರಸ ಕೇಳೀ ತೆರದಿ ದುಃಖಿಪ । ತರಳೆಯೆಡೆಗೈ ತಂದನಾ ಮುನಿ । ವರನು ನಾರದನಂದು ಹರಿಹರರುಗಳ ಕೀರ್ತಿಸುತ ॥ ಬರವ ಪರಿಕಿಸುತೆದ್ದು ವಂದಿಸಿ । ಚರಣದೊಳಗೆರಗಲ್ಕೆ ವ್ರತಿಕುಲ । ಶರಧಿ ಚಂದ್ರಮ ನೆತ್ತಿ ತಳ್ಕಿಸುತೆಂದನವಳೊಡನೆ ॥೧॥

ರಾಗ ಜಂಜೂಟಿ ಆದಿತಾಳ

ನಾರಿ ಘನ ಶೃಂಗಾರಿ ಮದನ ಕಠಾರಿನಿ ವೈಯ್ಯಾರಿ ॥ ಸಾರಸಲೋಚನೆ ಭಾರಿ ನೀ ಚಿಂತಿಪ । ಕಾರಣವೇನದ ಭೋರನೆ ತಿಳುಹೆಲೆ ॥೧॥ ನಿನ್ನ ಪೆತ್ತವನನ್ನು ನೀನೆನ್ನೊಳೆಂಬೆಯ ಸಂಪೂರ್ಣ ॥ ಪನ್ನಗವೇಣಿಯೆ ನಿನ್ನ ನಾಮಸಂ । ಪನ್ನವರನ ಪೆಸರನ್ನರುಹೆಲೆನೀ ॥೨॥ ಎಂದಾ ಸದ್ಗುಣ ವೃಂದ ಮೌನಿಪನೆಂದುದರಿಯುತಂದ ॥ ಕಂದಿದ ಕಾಂತಿಗೆ ಮಂದಗಮನೆ ಪೂ । ರ್ಣೇಂದು ವದನೆ ಸುಮಗಂಧಿನಿ ನುಡಿದಳು ॥೩॥

ರಾಗ ನೀಲಾಂಬರಿ ತ್ರಿವುಡೆ ತಾಳ

ಇಂದು ಲಾಲಿಪುದೆನ್ನ ಮಾತನು । ಭಟ । ವೃಂದವ ಪಾಲಿಸಿ ತಾತನು ॥ ಚಂದದಿ ಕಾಶಿಯೊಳಿರುತಿರೆ। ಪ್ರಾಯ । ಬಂದು ಮೂವರು ನಾವು ಮೆರೆದಿರೆ ॥೧॥ ಪಿತ ವೀರ ಸೇನನು ನಮ್ಮನು । ಬಲು । ಹಿತದಿ ಸ್ವಯಂವರವನು ತಾನು ॥ ಪೃಥಿವೀಯೊಳ್ಗೈಯುವೆನೆಂದಿರೆ । ಧೀರ । ಮತಿವಂತ ಕಲಿ ಭೀಷ್ಮನೈತರೆ ॥೨॥ ಎಲ್ಲರ ಗೆಲಿದೆಮ್ಮ ಕೊಂಡೊದ । ತಮ್ಮ ।ಗಲ್ಲಿಬ್ಬರನು ಲಗ್ನವನುಗೈದ ॥ ನಿಲ್ಲದೆನ್ನನು ಬಿಟ್ಟನದರಿಂದ ।ಕಾವ್ಯ । ರಿಲ್ಲವು ಗತಿಯಾರು ಎನಲೆಂದ ॥೩॥

ರಾಗ ದೇಶಿ ಅಷ್ಟತಾಳ

ಕೇಳಮ್ಮಾ । ಧೈರ್ಯ । ತಾಳಮ್ಮ ।ಪ । ಕೇಳಮ್ಮ ತನ್ನಯ ಮಾತ ನೀನಿಂದು । ಕಾಳಗದೊಳು ಭೀಷ್ಮಗಿದಿರಾಗಿನಿಂದು ॥ ಬಾಳುವರಾರು ಮೂಜಗದೊಳಗಂಬಾ । ಪೇಳುವೆ ಬಲಶಾಲಿಯಿರುತಿರ್ಪನೊಬ್ಬ॥ ಕೇಳಮ್ಮಾ ॥೧॥ ಧುರಧೀರ ಭೀಷ್ಮಂಗೆ ಗುರುವಾಗುತಿರುವ । ಧರಣಿಪಾಲರನೆಲ್ಲ ಭಂಗಿಸಿ ಮೆರೆವ ॥ ಹರ ಸುರಪಾದ್ಯರ್ಗೆ ಬೆದರನು ತಾನು । ಪರಶುರಾಮನೆನುತ್ತ ಕರೆವರಾತನನು ॥ ಕೇಳಮ್ಮಾ ॥೨॥ ಇತ್ತಲುಕೇಳಮ್ಮ ತುಹಿನಾದ್ರಿಯೊಳಗೆ । ನಿತ್ಯವು ತಪದಿಂದಲಿರುವಾತನಡಿಗೆ ॥ ಸ್ತೋತ್ರದಿಂ ವಂದಿಸಿ ದೂರಲು ನಿನ್ನ । ಎತ್ತಿ ವಾಂಛಿತವನು ಸಲಿಸುವ ಮುನ್ನ ॥ ಕೇಳಮ್ಮಾ ॥೩॥ ಇನ್ನು ನೀ ಪೋಗೆಂದು ತಿರುಗಲು ಮುನಿಯು । ಪನ್ನಗ ವೇಣಿಯು ಬರುತಲಾ ಸಿರಿಯು ॥ ಕಣ್ಣಿಗೆ ಕೌತುಕ ಮಾದರಣ್ಯವನು । ಮುನ್ನ ಮುಂದಕೆ ದಾಟಿ ಬರುತಿರೆ ತಾನು ॥ ಕೇಳಮ್ಮಾ ॥೪॥

ವಾರ್ಧಿಕ

ಬರಬರುತ ಗಹ್ವರವ ಕಳೆಕಳೆದು ಕಾನನವ । ಗಿರಿಗಿರಿಯ ದಾಟುತಂ ಬಲು ಭೀತಿ ತಾಳುತಂ । ಬರೆ ತುಹಿನ ನಗತಟದಿ ಮೌನಿಜನರಿಂ ಮುದದಿ ಗಾಂಭೀರ್ಯತರವೇಷದಿ ॥ ಮೆರೆವ ರುದ್ರಾಕ್ಷಿಯಿಂತ್ರೈಪುಂಡ್ರ ಭಸ್ಮದಿಂ । ವರ ಶಾರ್ಜಕೊಡಲಿಯಿಂ ಪದ್ಮ ಮಾಲಿಕೆಗಳಿಂ । ಪರಶು ಬತ್ತಳಿಕೆಯಿಂ ದಿನಕೋಟಿ ತೇಜದಿಂ ಭೃಗುರಾಮನೆಸೆದಿರ್ದನು ॥೧॥

ಭಾಮಿನಿ

ಸರಸಿರುಹ ಮುಖಿ ಕಂಡು ಭಕ್ತಿಲಿ । ಕರುಣ ವಾರಿಧಿ ಮುನಿಕುಲ್ಯಾರ್ಣವ । ವರ ಕಲಾನಿಧಿ ಪಾಹಿ ಸಲಹೈ ರಿಪುಭಯಂಕರನೆ ॥ ಶರಣವತ್ಸಲ ದೀನನಾಥರ । ಪೊರೆಯೊ ತ್ರಿಗುಣಾಕರನೆ ಕ್ಷತ್ರಿಯ । ಹರನೆ ಶ್ರೀಕರ ಜಯತು ಜಯ ಜಯಮೆಂದಳಬುಜಾಕ್ಷಿ ॥೧॥

ಆರ್ಯ ಸವಾ

ಭೋರನೆ ನುತಿಸುತ ನಾರೀ ಮಣಿ ಕ । ಣ್ಣೀರಿನೊಳೆರಗಲು ಕಂಡಂದಾ ॥ ವೀರನು ಭೂಪ ಕುಠಾರನು ನಿಧಿ ಗಂ । ಭೀರನು ಝೇಂಕೃತಿದೋರ್ದಂದ ॥೧॥

ರಾಗ ಭೈರವಿ ಝಂಪೆತಾಳ

ಆರಿಂದ ಬಂತು ನಿನ । ಗೀರೀತಿ ಚಿಂತಿಸಲು । ಕಾರಣಂಗಳ ಪೇಳೆ । ವಾರಿಜದಳಾಕ್ಷಿ ॥೧॥ಧಾತ್ರಿ ಯಾವುದು ನಿನ್ನ । ಪೆತ್ತವನ ಪೆಸರೇನು । ಬಿತ್ತರಿಸು ಧವನಾರು । ಮತ್ತಗಜಗಮನೆ ॥೨॥ ಏಕಾಂಗಿಯಾಗಿ ನೀ । ನೀಕಾಡ ಮಧ್ಯದೊಳ । ಗ್ಯಾಕೆ ಬಂದಿಹೆ ಬಾಲೆ । ಕೋಕನದಯಾನೆ ॥೩॥ ಎಂದು ಕೇಳಲ್ಕೆ ಮುನಿ। ವೃಂದವಂದಿತನಡಿಗೆ । ನಿಂದೆರಗಿ ತಿರುಗಿ ಜಯ । ವೆಂದು ಪೇಳಿದಳು ॥೪॥

ರಾಗ ತೋಡಿ ತ್ರಿವುಡೆತಾಳ

ಚಿತ್ತವಿಸೆನ್ನ ಮಾತ । ಮೌನಿಪ ಕುಲ । ಸ್ತೌತ್ಯ ಪಾಲಿಪುದು ಖ್ಯಾತ ॥ ಪೇಳುವೆನೆನ್ನ । ಪೆತ್ತ ಭೂಪಾಲವಾರ್ತೆ । ಕಾಶೀಶ್ವರ । ಮತ್ತಾ ವೀರಾಖ್ಯನತ್ತ । ಜವ್ವನದೊಳಿರುತ ॥ ಹಸ್ತಿನಾವತಿ ಪಾಲ ಶಂತನು । ಪುತ್ರನಾಗಿಹ ಭೀಷ್ಮನೆಂಬವ । ಧಾತ್ರಿಪರ ಭಂಗಿಸುತಲೆಮ್ಮುವ । ನೆತ್ತಿ ಕೊಂಡ್ಯೊದತ್ತ ಕಿರಿಯಗೆ । ಯಿತ್ತು ತಂಗಿಯರಿಬ್ಬರನು ಛಲ । ದತ್ತಲೆನ್ನನ್ನೊರಿಸೆನೆನುತವ । ಮತ್ತೆ ಭಂಗಿಸಿ ದುಃಖಿ ಕೆಳಸಿದ । ಬಿತ್ತರಿಪುದೇನಿತ್ತ ಲಾಲಿಸು ॥೧॥ ಇಂದು ನಾರದನಿಂದಿತ್ತ । ತಿಳಿದು ದೇವ । ಬಂದೆ ನೀ ಗತಿಯೆನ್ನುತ । ನಿನ್ನಡಿಯಲ್ಲ । ದಿಂದಾರಿಗೊರವೆ ಮತ್ತ । ಅನಾಥರ್ಗೆ । ಬಂಧುವೆ ಪೊರೆಯೆನ್ನುತ। ಅಡಿಗೆಡದು ಮತ್ತ ॥ ಇಂದು ಭೀಷ್ಮಗೆ ನೀತಿಮಾರ್ಗಗಳಿಂದ ಬೋಧಿಸಿ ತನ್ನನೊರಿಸುವ । ದೆಂದ ಮಾತನು ಕೇಳದಿರ್ದಡೆ । ಕೊಂದು ಕಳೆಯಲು ಬೇಕೆನುತ ನಲ । ವಿಂದ ನುತಿಸುತ ಪೊರಳುತಿರುತಿಹ। ಇಂದು ವದನೆಯನೆತ್ತಿ ಸಂತಸ । ದಿಂದ ಕಿರುನಗೆ ಸೂಸಿ ಸುರನರ । ವೃಂದವಂದಿತನೆಂದ ತೋಷದಿ॥೨॥

ರಾಗ ಕಾಬೋದಿ ಝಂಪೆತಾಳ

ಕಾಮಿನೀ ಮಣಿಕೇಳು ಭೂಮಿ ಪತಿ ಶಂತಸುತ । ತಾಮನದಿ ಯೋಚಿಸಿದನೇನೊ ॥ ಸಾಮಜ ಪುರಾಧೀಶ ಸೋಮವಂಶಜನೆಂದು । ಭೀಮಬಲ ಬಂತಿಂದಿದೇನೊ ॥೧॥ ತರುಣಿ ಮರುಗದಿರೆನ್ನ ಪರಮ ವಚನದೊಳೊಪ್ಪಿ । ಕರವಿಡಿವ ನಿನ್ನನಿದು ನೋಡ ॥ ಗರುವ ದೋರಿದರರಿಯ ಶಿರಗೊಂಬೆ ತಾನೆಂದು । ಸರುವ ಶಿಷ್ಯರೊಳಂದು ಪೊರಟ ॥೨॥ ಬರುತ ಯೋಚಿಸಿದ ಶಿಷ್ಯರೊಳೆಂತು ಕಾದುವೆನೆ । ತರುಣಿಯನು ಬಿಡುವದಿನ್ನೆತ್ತ ॥ ಹರಹರಾಯೆಂದು ನೆರೆ ಪರಶುಧರ ನೀತಿಯಲಿ । ಸರಿಗೈವೆನೆನುತ ನಡೆತಂದ ॥೩॥

ಭಾಮಿನಿ

ಬಂದ ರಾಮನ ಬರವನರಿತಾ । ನಂದದಿಂದಿದಿರ್ಗೊಂಡು ಬಹುವಿಧ । ದಿಂದ ಲರ್ಚಿಸುತೆತ್ತುತಾರತಿ ಭಕ್ತಿ ಭಾವದಲಿ ॥ ಮುಂದೆ ಮುನಿಪೋತ್ತಮರ ಮನ್ನಿಸು । ತಂದು ಜಯ ಜಯವೆನಲು ರೇಣುಕೆ । ನಂದನನು ತೆಗೆದಪ್ಪಿ ತಡವರಿಸುತ್ತಲಿಂತೆದ ॥೧॥

ರಾಗ ಕೇತರಾಗೌಳ ಝಂಪೆತಾಳ

ಮಗನೆ ಕಲಿ ಭೀಷ್ಮ ಕೇಳು । ಸರ್ವಜನ । ರುಗಳು ಕ್ಷೇಮಿಗಳೆ ಪೇಳು ॥ ಜಗತಿಯೊಳು ನಿನಗೆಣೆಯನು । ಕಾಣೆ ನೆರೆ । ಯಗಜೇಶನಾಣೆ ತಾನು ॥೧॥ ತವ ಪದಾನುಗ್ರಹದಲಿ । ಸುಕ್ಷೇಮ । ವಿವರಿಸಲಿಕೆಲ್ಲರಿಲ್ಲಿ ॥ ಅವಸರದೊಳಪರೂಪದಿ । ದಯಗೈದೆ । ವಿವರಿಪುದು ಸೇವೆ ಮುದದಿ ॥೨॥ ಬಾಲೆಯಂಬೆಯನು ನೀನು । ವರ್ಜಿಸದೆ । ಲೀಲೆಮಿಗೆ ವರಿಪುದಿನ್ನು॥ ಶೀಲೆ ಪಾತಿವ್ರತ್ಯಳು । ನಿರ್ದೋಷಿ ಬಾಲನೀವರಿಸೆನ್ನಲು ॥೩॥ ಪೆತ್ತಯ್ಯನಿಗೆ ಲಗ್ನವ । ಗೈಯಲ್ಕೆ । ಧಾತ್ರಿ ಪತಿ ಸಮ್ಮೇಳವ ॥ ಮತ್ತೆ ತೊರೆದಂದಗಳನು । ನೀನರಿತು । ಬಿತ್ತರಿಪುದೇನಿದಿನ್ನು ॥೪॥ ಗುರುಗಳ ನಿರೂಪದಿಂದ । ವರ್ತಿಸಲಿ । ಕರಿಯೊ ತಿಲ ಮಾತ್ರದಿಂದ ॥ ಬರುವುದೇ ದೋಷವೆನುತ । ಪೇಳಲ್ಕೆ । ಕರಮುಗಿದು ನುಡಿನಾತ ॥೫॥

ಭಾಮಿನಿ

ಧರಣಿ ತಲೆಕೆಳಗಾಗಲ ಭ್ರಮೆ । ಜರಿಯಲ್ಕೆ ಶರಧಿಗಳು ಬತ್ತಲಿ । ಹರಿಹರಾದ್ಯರು ಮುನಿಯಲಿಂದಿಲಿ ಗುರುವೆ ಮಲೆತಿರಲಿ ॥ ಸರುವಥಾ ನಾನಂಬೆಯಳ ಮಿಗೆ । ಪರಿಗ್ರಹಿಸೆನೆನ್ನುತ್ತ ನುಡಿಯಲು । ಪರಶುರಾಮನು ಕೇಳ್ದು ಕಿರು ಕಿಡಿ ಸೂಸುತಿಂತೆಂದ ॥೧॥

ಕಂದ

ಎನ್ನಯ ನುಡಿಯಂ ದೂಷಿಸ । ಲೆನ್ನಯ ಧುರಕನು ವಾಗೈ ನೀನೆನೆ ಕೇಳ್ದಂ ॥ ಉನ್ನತ ಹುರಷದಿ ಶರಸಂ । ಪನ್ನರು ಪೊರಟು ರಣಕ್ಕೈತಂದರು ಭರದಿಂ ॥೧॥

ವಾರ್ಧಿಕ

ಧುರ ಭೂಮಿಗೈತಂದು ಮಾರ್ಬಲವ ನೆರೆ ತಂದು । ಗುರು ಭಾರ್ಗವನ ಪಾದಕೊಂದಿಸುತ ಪೂಜಿಸುತ । ಶರಚಾಪಝೇಂಕರಿಸಿ ಹೂಂಕರಿಸುವಬ್ಬರಕೆ ಸಚರಾಚರಂ ಬೆಚ್ಚಲು ॥ ಹರಗಿರಿಜೆ ಬೊಮ್ಮ ಸರಸ್ವತಿ ಶಕ್ರ ಶಚಿ ಮುಖ್ಯ । ರ್ಗುರು ಶಿಷ್ಯರಳವಿಗಳ ನೋಳ್ಪೆವೆಂದಯ್ತಂದು । ಮೆರೆವಭ್ರದಿಂ ನೋಡಲು ಭಯ ಭಟರಿದಿರಾಗಿ ಕಾದಿದರದೇವೇಳ್ವೆನು ॥೧॥

ರಾಗ ಭೈರವಿ ಏಕತಾಳ

ಎಲವೋ ಶಂತನ ಸುತನೆ । ನಿ । ಕಲಹದೊಳತಿ ಸಹಸಿಗನೆ ॥ ತಲೆಯನು ಮಾರದೆ ನಿನ್ನ । ವರ। ಪೊಳಲನು ಸೇರುವದಿನ್ನ ॥೧॥ ನಿತ್ಯಲು ಗುರುವೆಂದೆನುತ । ಬಲು । ಸ್ತೋತ್ರದಿ ಪೂಜಿಸೆ ಮತ್ತ ॥ ಪೆತ್ತವ ಮೂಜಗವೆಂದು । ಧುರ । ಕೆತ್ತಿದೆ ಶಾರ್ಜವನಿಂದು ॥೨॥ ಮಾತೆಯ ನುಡಿಯನು ತೊರೆದು । ಗುರು । ಮಾತನು ತುಚ್ಛೀಕರಿದು ॥ ಪಾತಕಿ ಛಲವೇಕೆಂದು । ಬಲು । ಖಾತಿಯೊಳುಸುರಿದ ನಂದು ॥೩॥ ಫಡ ಫಡ ಕೇಳ್ । ದರೆ ಸುರನೆ । ಬಿಡು । ಬಿಡು ಸಾಕೆಲ ತನ್ನೊಡನೆ ॥ ಕಡುಗಲಿಯೆಂಬಬ್ಬರವು । ಎ । ನ್ನೊಡ ಸಲ್ಲದು ಕೇಳ್ ನಿಜವು ॥೪॥ ನಿನ್ನ ಪದವೆ ಗತಿಯೆನುತ । ಸತಿ । ನಿನ್ನನೆ ಬಯಸಲು ಮತ್ತ । ಕುನ್ನಿಯ ತೆರದಿಂ ತೊರೆದು । ನೀ । ನೆನ್ನೊಳಗೊದಗಿದೆ ಮುಳಿದು ॥೫॥ ಪರ ಸತಿ ಸರಿದಿಹಳಸ್ನು । ದಿಟ್ಟ । ವರಿಸಲಿಕೊರೆದೆಯ ನೀನು । ಪರಿಕಿಸೆ ಧರ್ಮಗಳಹುದೆ । ಪಗೆ । ವೆರಸುತ ಸಮರಕೆ ಬಹುದೆ ॥೬॥ ಎನೆಕೇಳುತ ಕಿಡಿಯಿಡುತ । ಆ । ಜನಪಾರಿಯು ಗರ್ಜಿಸುತ ॥ ಕಣೆಮಯದೊಳು ತುಂಬುತ್ತ । ನೃಪ । ತನಯನ ಮುಸಕಲಿಕತ್ತ ॥೭॥

ಭಾಮಿನಿ

ಮತ್ತೆ ಮುನ್ನೂರೈದು ರಥಗಳ । ಕತ್ತರಿಸಿ ಶರಮಳೆಯ ಸುರಿಸುತ । ನಿತ್ತು ಸಾರಥಿ ಶಿರವ ಚೆಂಡಾಡಿದನು ರೋಷದಲಿ ॥ ಇತ್ತ ಪೊಸರಥ ವಡರಿ ಸೂತನೊ। ಳೊತ್ತಿ ಶರಮಳೆಸೂಸಿ ತಡಿ ನಿಜ । ಚಿತ್ತಜಾರಿಯ ತೆರದಿ ಹೂಂಕರಿಸುತ್ತಲಿಂತೆಂದ ॥೧॥

ರಾಗ - ಭೈರವಿ - ಅಷ್ಟತಾಳ

ಭಲರೆ ಧಾತ್ರೀಸುರನೆ । ಮುನಿದು ಭಂಗ ।ಗೊಳಿಸಲಿಕಂಜುವೆನೆ ॥ ಬಲವಂತನೆಂದು ನೀ ಹುಲು ಭೂಪರನು ಕೊಂದ । ಕಲಿತನವನು ನಿಲಿಪೆ ॥೧॥ ಧೀರ ಕಾಶೀಶನಲ್ಲಿ । ಬಲಹೀನರ । ಭೋರನೆ ಜೈಸುತ್ತಲಿ ॥ ಹಾರಬೇಡೆಲವೊ ಹುಂಕಾರವೇರಿತೆ ಯಮ । ಗಾರಕ್ಕೆ ಕಳುಹುವೆನು ॥೨॥ ಅರಿತಿಹೆ ಶ್ರೀ ರಾಮನ । ಅಂಬಿಲಿಸೋತ । ಪರಿಗಳನೆಲ್ಲವನ ॥ ದುರುಳ ಬಾಯಿಗೆ ಬಂದ ತೆರವೇಕೆ ಗಳಹುವೆ । ಧುರಸಮರ್ಥಿಕೆಯದೋರು ॥೩॥ ಶಂತನವರದಿಂದಲಿ । ಸಾಯುವದಿಟ್ಟೆ । ಬಂತೆಂದು ಖಚರನಲ್ಲಿ । ನಿಂತು ಗೆಲ್ದಿಹ ಗರ್ವವಾಂತುಬ್ಬಬೇಡೆನು । ತೆಂತಿತ್ತ ಖಾತಿಯಲಿ ॥೪॥ ಮಾತೆಯ ಮರ್ದಿಸಿದ । ಪಾತಕಿ ನಿನ್ನ। ರೀತಿಯನರಿವೆ ಪಿಂದಾ ॥ ನೀತಿಯನರುಹಲಿಕೈತಂದೆ ಭಾಪೆಂದು । ಖಾತಿಲಿ ತೆಗೆದೆಚ್ಚನು ॥೫॥ ಬಲ್ಲೆ ನಿನ್ನಾದಿಯೊಳು । ಧೇನುವಪೊಯ್ಯು । ಮುಳ್ಳುಗೊಂಚೆಯೊಳು ಪೇಳು ॥ ಖುಲ್ಲ ನಿನ್ನುವನೀಗ ಕೊಲ್ಲದೆ ಬಿಡೆನೆಂದು । ಘಲ್ಲಿಸುತೆಚ್ಚನಾಗ ॥೬॥

ವಾರ್ಧಿಕ

ಸಾರಥಿಗೆ ಶರಹತ್ತು ಧ್ವಜದ ಮೇಲಿಪ್ಪತ್ತು । ವಾರುಹಕೆ ಮೂವತ್ತು ಚಕ್ರಕಂ ನಲುವತ್ತು । ಭಾರಿರಥಕರುವತ್ತು ಕಲಿಭೀಷ್ಮಗೆಂಭತ್ತು ಶರವೆಚ್ಚು ಕೀಲಿಸಿದನು ॥ ಪರಿಕೋಪದೊಳರಿಯ ಸೂತನಿಂಗೈವತ್ತು । ಮೀರಿರಥ ಚಕ್ರಕಂ ತೊಂಭತ್ತು ಕುದುರೆಗಂ । ನೂರೆರಡು ಭೃಗುರಾಮಗಿನ್ನೂರು ಮಾರ್ಗಣವ ತೆಗೆದೆಚ್ಚು ಬೊಬ್ಬಿರಿದನು ॥೧॥

ಭಾಮಿನಿ

ತಿರುಗಿ ರೋಷದಿ ರೇಣುಕಾತ್ಮಜ । ನರಿಯ ರಥ ತೆಗೆದೆಚ್ಚ ಭರಕದು । ಒರೆಯಲೇನ್ ದಶಯೋಜನಾಂತ್ರದಿ ಘುರ್ರೆನುತ ತಿರುಗೆ ॥ ಪರಿಕಿಸುತಲಾ ಭೀಷ್ಮ ರಾಮನ । ವರಮಹಾಮಣಿ ರಥವ ನೆಚ್ಚಡೆ । ತಿರುಗಿ ಯೋಜನದೈದು ಧಿರ್ರನೆ ತಿರುಗಲಿಂತೆಂದ ॥೧॥

ರಾಗ - ಮಾರವಿ - ಏಕತಾಳ

ಘಡ ಘಡ ಶಂತನ ಹುಡುಗನೆ ನಿಲು ನಿಲು । ಕಡುಹನು ದೋರಿತ್ತ ॥ ಬಿಡದೀ ಸರಿರಣ ಬೆಡಗಿನ ಗಿರಿಯನು । ಪುಡಿಗೈಯುವೆನತ್ತ ॥೧॥ ಪೊಡವಿಸುರನೆ ತವ ಕಡುಹನು ತರಿಯದೆ । ಬಿಡುವವನಲ್ಲೆನುತ॥ ಕಿಡಿ ಮಸಗುತ ಶರಗಡಣವ ಸುರಿದಡೆ । ಕಡಿದವ ನಿಂತೆಂದ ॥೨॥ ಪೂತುರೆ ಗಂಗಾಜಾತನೆ ಸತ್ವದ । ರೀತಿಯ ನರಿಯುವಡೆ ॥ ನೀತಿಲಿ ತಾಳೆಂದೋತೆಚ್ಚಡೆ ಪುರು । ಹೂತಾದ್ಯರು ನೋಡೆ ॥೩॥

ವಾರ್ಧಿಕ

ಹರಿ ಮಘವನಾ ಕಾಲ ನಿಋುತಿ ವನಮಂ ವಾಯು । ಗಿರಿಯುರಗ ಜೀಮೂತ ವರ ಧನಪನೀಶಾದಿ । ಸರಸಿಜೋದ್ಭವ ಗರುಡ ಮಧು ಮಂತ್ರ ಮಾರ್ಗಣವ ತೆಗೆದೆಚ್ಚು ಬೊಬ್ಬಿರಿದನು ॥ ಹರಿ ಶಚಿಯ ಹರಿ ಶಿವಂ ಮರುತನಾಗಂಬಿನಿಂ । ವರಕಪರ್ದಿಯ ಕುಲಿಶಧರನು ದ್ವಪರಾಜನಿಂ । ಧರೆ ಪ್ರಾಣರೂಪ ಪಿಪಿಲಿಕ ಬೊಮ್ಮ ವೈಷ್ಣವ ಶರಂಗಳಿಂ ಖಂಡಿಸಿದನು ॥೧॥

ಭಾಮಿನಿ

ವರ ಮಹಾ ಮಂತ್ರಾಸ್ತ್ರಗಳ ಸಂ । ಹರಿಸೆ ರೋಮಾಂಚನದಿ ಗಣಪನ । ಪರಮ ಶಕ್ತಿಯನೆಚ್ಚು ಭಾರ್ಗವರಾಮ ಹೂಂಕರಿಸಿ ॥ ಒರೆಯಲೇನ್ ಬ್ರಹ್ಮಾಂಡ ಘಟ ಬಿರಿ । ದಿರಲಿಳೆಯೊಳೊರಗಲ್ಕೆ ಭೀಷ್ಮನು । ಪರಶುರಾಮನು ಪಗೆಯ ಸೂತನ ನೋಡುತಿಂತೆಂದ ॥೧॥

ರಾಗ - ಕೇತಾರಗೌಳ - ಝಂಪೆ ತಾಳ

ಕೇಳು ಸಾರಥಿಯೆ ನೀನು । ನಿನ್ನಾಳ್ದ । ಗೇಳಿಸೈ ಬೇಗವಿನ್ನು ॥ ಕಾಳಗದೊಳತಿ ಸಮರ್ಥ ।

ಎಣೆಗಾಣೆ । ಮೂಲೋಕದೊಳಗೆ ಧಾರ್ತ ॥೧॥ ಅಂಬಗಾಯದೊಳು ಸೋತ । ಧಾತ್ರಿಯೊಳ । ಗಿಂಬಾಗಿಮಲಗಲಿತ್ತ ॥ ರಂಭ ಸೌರಂಭವೆಂತು । ರಿಪುವಪಿ । ಜಂಭತನ ನೋಳ್ಪೆನೆಂತು ॥೨॥ ಎಬ್ಬಿಸಲಿಕೀತನೊಡನೆ । ಸಂಗರದ । ಹಬ್ಬಿತೆರಮಿಹುದು ನೀನೆ ॥ ಎಬ್ಬಿಸೆನಲಾತನಾಗ । ಕರ ವಿಕ್ಕಿ । ಕಿಬ್ಬದಿಯನೆತ್ತಿ ಬೇಗ ॥೩॥

ಭಾಮಿನಿ

ಶರದ ಗಾಯಕ್ಕೌಷಧವ ನೆರೆ । ವಿರಚಿಸುತ ಕಲಶೋದಕಂಗಳ । ನೆರೆದು ಬೀಸುತಲಿಂತು ಪಾಲಿತನಾಗಿ ಎಚ್ಚರಿತ ॥ ಭರದ ಶರಚಾಪವನು ಗೊಂಡವ । ಪರಶುಧರಗಿದಿರಾಂತು ಮತ್ತಡೆ । ಸುರನದಿಜಗಿಂತೆಂದು ನೀತಿಯನೊರೆದ ನಾ ರಾಮ ॥೧॥

ರಾಗ - ಕಾಂಬೋದಿ - ಝಂಪೆ ತಾಳ

ಇಂದು ವಂಶಾಬ್ಧಿ ಪೂರ್ಣೇಂದು ವಾಲಿಸಿ ಕೇಳ್ಸು । ದಿಂದು ಧುರಬೇಡ ತನ್ನೊಡನೆ ॥ ಎಂದಿಗಾದರು ಶಿಷ್ಯ ಕಂದನಂತಲ್ಲವೇ । ಮುಂದೆ ಕೊಲೆಗೈಸೆ ಮನಕಾಣೆ ॥೧॥ ಮೂರು ಜಗತಿಯೊಳುಂಟೆ ಭೂರಿ ವಿಕ್ರಮದಿ ನಿನ । ಗಾರಾದರಿದಿರಪ್ಪ ಭಟರು ॥ ವೀರಧೀರೋದ್ಧಾರ ಶೂರರಿಪು ಕರಿಯಕಂ । ಠೀರವನೆ ಛಲವೇತಕುಸುರು ॥೨॥ ಅದರಿಂದ ರಣಕೊದಗುವುದ ಬಿಟ್ಟು ತೋಷದಿಂ । ವಿಧು ಮುಖಿಯ ವರಿಸು ನೀನೆನುತ ॥ ಚದುರ ಭಾರ್ಗವರಾಮ ಮುದದೊಳೊರೆಯಲು ಕೇಳ್ದು । ಕದನ ಕಂಠೀರವನು ನುಡಿದ ॥೩॥

ಭಾಮಿನಿ

ತರಣಿ ನಿಶಿಯೊಳು ಮೂಡೆ ನಿಶಿಯಲಿ । ಸರಸಿಜವೆ ಮೊಳೆದೋರೆ ಸುರಗಿರಿ । ಜರಿಯಲಾ ಸುಮನಸರು ಬೊಬ್ಬಿಡಲಿಂತು ವಾರಿನಿಧಿ ॥ ಧರೆಯನೀಗಲಿ ಧುರದೊಳಲಿಯಲಿ । ಮರೆಯುಹೊಗುವೆನೆ ನಾರಿಯಳ ನೆರೆ । ಕರವಿಡಿದು ಬಾಳುವೆನೆ ನಿಲುರಣಕೆಂದು ಬೊಬ್ಬಿರಿದ ॥೧॥

ಕಂದ

ಎನೆ ಕೇಳುತ ರೋಷದೊಳುಂ । ಘನವಿಕ್ರಮಿ ಚಾಪವನ್ನು ಝೇಂಕರಿಸುತ್ತಂ ॥ ಕನಲುತ ಶರವರ್ಷವನುಂ । ಕಿನಿಸಿಂದಾರ್ದೆಚ್ಚುತೆ ಜರೆದವನಿಂತೆಂದಂ ॥೧॥

ರಾಗ - ಮಾರವಿ -ಅಷ್ಟತಾಳ

ಧೀರನಹುದೊ ಪೂತು ಮಝರೆ । ಮಾರಬೇಡ ಶಿರವಗರ್ವ । ವೇರಿತೇನೊ ನಿಲಿಪೆನೆನಲು । ವೀರನೆಂದನು ॥೧॥ ಹಾರುವವನೆ ಹಾರಬೇಡ । ಕೂರಲಗುವಿನಿಂದ ನಿನ್ನ । ಮಾರಿಗೀವೆನೆನಲಿಕೆಂದ ।

ವೀರ ರಾಮನು ॥೨॥ ಮರುಳೆ ಕೇಳು ಕಾಳಕೂಟ । ಸರಸಿಜಕ್ಕೆ ಗರುಡ ಭ್ರಮರ । ಸರಸನಾಗಿ ಪಥ್ಯಗೈವ। ತೆರಳು ತೆರಳತ್ತ ॥೩॥ ಏರಿ ಕೋಪದಿಂದ ಮತ್ತೆ । ಭಾರಿ ವಿಶಿಖಗಳನು ರಾಮ । ನೂರುಗಾಣದಂತೆ ಎಚ್ಚ। ನಾರುಭಟಿಸುತ ॥೪॥ ಭೂರಿ ಶರವತರಿದು ರೋಷ । ವೇರಿ ವಡಭ ವೈಷ್ಣವನ್ನ ॥ ಭಾರಿ ಶಕ್ತಿಯಿಂದ ತೆಗೆದ। ವೀರ ಭೀಷ್ಮನು ॥೫॥

ವಾರ್ಧಿಕ

ಒರೆಯಲೇನ್ ತ್ರಿಭುವನಂ ಪೊಗೆ ಮುಸುಕೆ ಕಂಪಿಸುತ । ಕೊರಳತಗ್ಗಿಸಲಾಯ್ತು ಗಜ ಕಮಠ ಶೇಷರ್ಗೆ । ಸುರನಾಥ ಮುಖರು ಭಯದಿಂದೋಡುತರಮನೆಯ ಪೊಕ್ಕರತಿಭೀತಿಯಿಂದ ॥ ಒರೆದುದಶರೀರ ಕೇಳಿಂದು ಗುರುವಧೆಗೈಸಿ । ಪರಮ ಪಂಚಕಪಾಪಿಯಾಗಬೇಡೆಂದೆನುತ । ತಿರುಗಲದನಾಲಿಸುತಲಾ ಭೀಷ್ಮನೇಂಗೈವೆನೆಂದಿರಲು ರಾಮ ನುಡಿದ ॥೧॥

ಭಾಮಿನಿ

ದಿವಸವಿಪ್ಪತ್ತೊಂದು ಸಮರದಿ । ಸವನಿಸುವದಾಯ್ತಿವನ ನೆರೆಪರಿ । ಭವಿಸತೀರದೆನುತ್ತ ಖಂಡೆಯವಿಳುಹಿ ಭೃಗುರಾಮ ॥ ಬವರವನೆ ಬಿಟ್ಟತ್ತ ರಿಪುವದ । ನವನೆ ನೋಡುತ ಶಾಂತ ಭಾವದಿ । ವಿವರಿಸುತ ಭೀಷ್ಮನನು ಪೊಗಳುತ ಲೆಂದನೆಡೆಬಿಡದೆ ॥೧॥

ರಾಗ - ಮುಖಾರಿ - ಏಕತಾಳ

ಓಹೋ ಮೆಚ್ಚಿದೆ ಮೆಚ್ಚಿದೆ ಧುರಕೆ । ಸಾಹಸ ಗುಣಕೆ । ಓಹೋ ಮೆಚ್ಚಿದೆ ಮೆಚ್ಚಿದೆ ಧುರಕೆ ॥ಪ॥ ನಿನ್ನ ತೆರದ ಭುಜದ ಸಿರಿಯ । ಕಾಣೆನು ಧರೆ । ಗನ್ಯಥ ಪೇಳೆನಿಂಥಾ ಪರಿಯ ॥ ಪನ್ನಗವೇಣಿಯು ತನ್ನೊಳು ದೂರಲು । ನಿನ್ನಯ ವಿಕ್ರಮವೆನ್ನೊಳು ಪರಿಕಿಸೆ ॥ ಓಹೋ ॥೧॥ ಬಂದು ನಿನ್ನಲಿಸೆಣಸಿದೆನು ಸೋತೆನು ಸತ್ಯ । ವಿಂದು ಶರಧಿಯಂದವಿನ್ನು ॥ ಮುಂದಿವಳನು ಮನ ಬಂದಂದದಿ ನಡೆಸೆಂದೆನು ತಲಿತಾನೆಂದನು ಭೀಷ್ಮಗೆ ॥ ಓಹೋ ॥೨॥

ವಾರ್ಧಿಕ

ಪರಶುಧರನೆಂದಂ ಕಲಿಭೀಷ್ಮ ಕೇಳುತಂ । ಶರಚಾಪವೆಲ್ಲವಂ ಗುರುವಿನಡಿಗಿಕ್ಕುತಂ । ಚರಣದೊಳಗೊರಳುತಂ ತರತರದಿ ನುತಿಸುತಂ ಕಣ್ಣೀರ ಸುರಿಸುತೆಂದ ॥ ಗುರುವಿನಲಿ ಸೆಣಸುತಂ ನರಕಗತಿಗುರುಳೆನೆಂ । ದುರುತರದ ದುಃಖದಿಂ ಪೊರಳುತಿರೆ ಭಾರ್ಗವಂ । ಶಿರವೆತ್ತಿ ಕರುಣದಿಂ ಮೈದಡವಿತೋಷದಿಂ ಪರಸುತ್ತನೊಂದು ಪೇಳ್ದ ॥೧॥

ರಾಗ -ಬೇಗಡೆ -ಅಷ್ಟತಾಳ

ಧೀರ ವೀರೋದ್ಧಾರ ಗಾಂಗೇಯ । ಭಯವೇತಕ್ಕೆಸೆಲೆ । ವಾರಿನಿಧಿ ಗಂಭೀರ ಕೇಳಯ್ಯ ॥ ಮೂರು ಭುವನದಿ ನಿನ್ನ ಪೋಲುವ । ಶೂರ ಭೂಭುಜವಾರವಿರುವುದೆ । ವೀರ ನೀಸಲೆ ಮೆಚ್ಚಿದೆನು ಧುರ। ಧೀರ ಮಝು ಬಿಲ್ಲಾಳು ಬಾಪುರೆ ॥೧॥ ಕ್ಷತ್ರಿ ಪಂಥಕೆ ಕಾದಲಿಂದಿನಲಿ । ದೋಷಂಗಳುಂಟೇ । ವ್ಯರ್ಥ ಯೋಚಿಸಿ ಮರುಗಬೇಡಿಲ್ಲಿ ॥ ಧಾತ್ರಿಯೊಳು ನಿನ್ನಂಥ ಶಿಷ್ಯರೊ ।ಉತ್ತಮರ ನಾ ಕಾಣೆ ಸಜ್ಜನ। ಸತ್ಯ ಧಾರ್ಮಿಕ ಧರ್ಮ ನಿಷ್ಟನೆ । ನುತ್ತ ಪೊಗಳುತಲೆತ್ತಿರಾಮನು ॥೨॥ ಕ್ಷೇಮದಿಂದಿರುಯೆಂದು ಪರಸುತ್ತ । ತಿರುಗಲ್ಕೆ ಮುನಿಪನ । ಕೋಮಲಾಂಘ್ರಿಯ ತೊಳೆದು ನೆರೆ ಮತ್ತ ॥ ಸೋಮವಂಶಜ ಪೂಜಿಸುತ ಮ। ತ್ತಾಮ ಹಿಮನನು ಮನ್ನಿಸಲ್ಕಾ । ಭೀಮಬಲನನು ಬೀಳುಗೊಟ್ಟಾ। ರಾಮನಂಬೆಯೊಳೆಂದ ನುಡಿಯನು ॥೩॥

ಭಾಮಿನಿ

ಎನ್ನ ಮಾತನು ತೊರೆದು ಧುರದೊಳ । ಗೆನ್ನ ಜೈಸಿದ ವೀರ ನಿವನೊಳ । ಗಿನ್ನ ಸಾಧ್ಯವು ನಿನ್ನ ಮನಬಂದಂತೆ ನೋಡೆನುತ ॥ ಕನ್ನೆಯಳ ಮನ್ನಿಸುತ ಭೃಗುರಾ । ಮನ್ನು ತನ್ನಾಶ್ರಮಕೆ ಸರಿಯಲು । ಇನ್ನು ಕಾವರದಾರು ಸುದತಿಯ ಕೇಳು ಭೂಪಾಲ ॥೧॥

ದ್ವಿಪದಿ

ಅವನಿಪತಿ ಕೇಳಂಬೆ ಬಳಿಕಬಲುನೊಂದು । ಭುವನೇಶ ಪದಪದ್ಮವೊಲಿಪೆ ತಾನೆಂದು ॥೧॥ ಬಂದು ಯಮುನಾ ನದಿಯ ದಡದಿ ವನದೊಳಗೆ । ಇಂದು ಶೇಖರನಡಿಯ ಭಜಿಸಿದಳು ಹೀಗೆ ॥೨॥ ದೇವಮನದಿಚ್ಛೆಗಳನಿತ್ತು ಪೊರೆಯೆನುತ । ಭಾವೆಸನ್ನುತಿಗೈದಳೇನೆಂಬೆನತ್ತ ॥೩॥

ವಾರ್ಧಿಕ

ಜಯ ಜಯತು ಖಳಕಾಲ ಸುರಜಾಲ ಪರಿಪಾಲ । ಜಯತು ಜಾಹ್ನವಿ ಲೋಲ ಜಯ ನಿಗಮ ತತಿ ಮೂಲ । ಜಯ ರುಂಡಮಾಲತ್ರಿಶೂಲ ಹಸ್ತವಿಶಾಲ ಜಯಕಾಲಕೀಲ ಶೀಲ ॥ ಜಯ ಪಾಹಿ ಮಾಂ ರುದ್ರ ಜಯ ಜಯತು ಭವ ಭಿದ್ರ । ಜಯತು ಕರುಣ ಸಮುದ್ರ ಜಯ ವೈರಿ ದಾರಿದ್ರ । ಜಯತ್ರಾಹಿ ದೇಹಿ ಜಯ ಜಯಮೆಂದು ಸಲಹೆಂದು ನುತಿಸಿದಳು ಭಕ್ತಿಯಿಂದ ॥೧॥

ರಾಗ-ಕೇತಾರಗೌಳ-ಅಷ್ಟತಾಳ

ಇಂತು ಸಂಸ್ತುತಿಗೈಯಲರಿತಂತಕಾಂತಕ । ಕಾಂತೆಯೊಳೆಂದ ಚಿನ್ನ ॥ ಎಂತಿದು ಛಲವು ಸೀಮಂತಿನಿಯರಿಗದ । ನಿಂತುದೋರುವೆ ಬಾರಿನ್ನ ॥೧॥ ಏಣಾಂಕಧರನೆ ಕೇಳೇನಿದು ಚೋದ್ಯ ನೀ ।

ನೇನೆಂದು ಯೋಚಿಸುತ್ತ ॥ ಮಾನಿನಿಯರನು ನಿಧಾನದಿ ಹೀನಿಸಿ । ತಾನಿಪ್ಪ ಬಗೆ ಕೇಳಿತ್ತ ॥೨॥ ಅಂಬುಜದಳನೇತ್ರ ಕುಂಭಿನಿಯೊಳಗೆನ್ನ । ನಂಬೆಯೆಂಬವಳೋರ್ವಳು ॥ ಸಂಭ್ರಮವಾಂತಿವಳೆಂಬಿಗೆ ನುಡಿಪಳು । ನಂಬಲೀ ಪರಿಯಾಯಿತು ॥೩॥

ಭಾಮಿನಿ

ಎನ್ನಲವಳಿಂತೆಂದಳೆಲೆವೋ । ಹನ್ನ ತನಗಿಂದಿನೊಳಗಾ ಸತಿ । ಯನ್ನು ನೋಡುವೆನೆನಲು ದಂಪತಿಯುತ್ತರವರಂದ ॥ ಕನ್ನೆಯಳು ತಪಗೈಯಲಿದಿರಿಗೆ । ಪನ್ನಗೇಶ್ವರ ಭೂಪನೈತಂ । ದಿನ್ನು ಸಂಶಯಬೇಡ ಮನದಿಚ್ಛೆಗಳ ಪೇಳೆಂದ ॥೧॥

ಕಂದ

ಕಂಡಾಪುರಹರನಡಿಗಂ। ಪುಂಡರಿಕಾಂಬಕಿ ಬಾಗುತಲತಿ ಭಕ್ತಿಯೊಳಂ॥ ದಿಂಡಂಗೆಡವುತಲಾಗಂ। ಕೊಂಡಾಡುತ ನಿಂದು ಜಯಜಯಮೆನ್ನುತೆಂದಳ್ ॥೧॥

ರಾಗ-ಕಾಂಬೋದಿ-ತ್ರಿವುಡೆತಾಳ

ಪಾಲಯ ಗಿರಿಜಾಲೋಲ । ಕಲಿಧೌತಧರನಗ ।ದಾಲಯ ಸುಮನಪಾಲ ॥ ಶೀಲ ಸಚ್ಚಿದನಂತ ಖಳ ಕುಲ । ಕಾಲ ಮೂಜಗ ಪಾಲ ವರ ಶಿರ । ಮಾಲ ರಂಜಿತ ವರದ ಶ್ರೀ ಕರು।ಣಾಲವಾಲಕ ಪಾಲಿಚಿನ್ಮಯ ॥ಪ॥ ದೊರೆ ಕಾಶೀರಾಯನಲ್ಲಿ । ಪುಟ್ಟಿದೆ ನಾವು । ತರುಣಿಯರ್ಮೂವರಲ್ಲಿ । ಯೌವ್ವನದಿಂದ । ಲಿರಲೆಮ್ಮ ಮದುವೆಗಲ್ಲಿ । ಶಂತನ ಸುತ । ಧುರಧೀರ ಭೀಷ್ಮನಲ್ಲಿ । ಭೂಭುಜರ ಸಂ।ಗರದಲ್ಲಿ ಜೈಸುತಲಿ । ನಮ್ಮುವನತ್ತ । ಕರೆದೊಯ್ದು ಹಿತದಿಂದಲಿ । ತಮ್ಮನಿಗಂದು । ಕಿರಿಯರನಿಬ್ಬರಲ್ಲಿ । ಲಗ್ನಗೈದಲ್ಲಿ ॥ ಇರುತಲೆನ್ನನು ಬಿಡಲು ನೀನೆ ।ನ್ನರಸನಾಗೆನೆ ತನ್ನ ನೂಕಲು । ಸುರಮುನಿಪನೆಂದಂತೆ ತೋಷದಿ । ಪರಶುದರನಿಂಗೊರೆದೆನಿದರನು ॥ ಪಾಲಯ ॥೧॥ ಅಂದೆನ್ನ ನುಡಿ ಕೇಳುತ್ತ । ಬರುತ ಭೀಷ್ಮ।ಗೆಂದ ನೀತಿಯನು ಮತ್ತ । ಕೇಳದಿರಲ್ಕೆ । ನಿಂದು ಕಾದಿದಡೆ ಮತ್ತ । ಭಾರ್ಗವ ಸೋತು । ಎಂದೆ ತಿರುಗಲಾನಿತ್ತ । ನಿನ್ನಡಿ ಗತಿ । ಯೆಂದು ನಂಬಿಹೆನು ನಿತ್ಯ । ಪಾಲಿಪುದೆನ । ಗಿಂದು ಭೀಷ್ಮನ ಕೊಲ್ಲುತ್ತ। ಚಂದದೊಳಿರು । ಯೆಂದ್ವರವನು ಈಯುತ್ತ । ಪೊರೆಯುವದೆನುತ್ತ ॥ ಅಂದೆರಗಿದಳನೆತ್ತಿ ಗಿರಿವರ । ನಂದನೆಯ ಮೊಗ ನೋಡಿ ಭಾಪಿವ। ಳೆಂದು ಬೋಧಿಸಿ ಮುಂಗಥೆಯತಾ। ನಂದು ಸತಿಯೊಡನು ಸುರುತೆಂದನು ॥ಪಾಲಯ॥೨॥

ರಾಗ-ಸುರುಟಿ-ಏಕತಾಳ

ಸರಸಿಜದಳನೇತ್ರೆ । ಕೋಮಲೆ । ಸ್ಪರಿತ ಕನಕಗಾತ್ರೆ ॥ ಧುರದಲಿ ಭೀಷ್ಮನ । ತರುಣಿಯ

ಜನ್ಮದಿ।ಹರಿಸುವದೆಂತೆಲೆ। ಕರಿಮದಗಾಮಿನಿ ॥೧॥ಧರಣಿಪ ದ್ರುಪದನಲಿ। ನೀನುರೆ। ತರಳನೆನಿಸುತಲ್ಲಿ॥ ಮೆರೆವ ನಪುಂಸಕ। ತೆರದೊಳುಬೆಳೆ ಸಂ।ಗರದೊಳು ಭೀಷ್ಮ। ಗರಿಯವನರಿವುದು ॥೨॥ ಕರುಣಿಸಿದನು ನಿನ್ನ। ಮನದೊಳ।ಗಿರುವ ಛಲವ ಮುನ್ನ॥ ಹರುಷದಿ ಪೋಗೆಂ। ದರುಹುತ ಸತಿಸಹ।ಪುರಹರಗಿರಿಯರ। ಮನೆಯನು ಸೇರಿದ ॥೩॥

ವಾರ್ಧಿಕ

ಪರಮೇಶ ಗಿರಿಜೆ ಸಹ ನಿಜ ನಿವಾಸವ ಪೊದ್ದೆ। ತರುಣಿ ಬಲುಕಾಷ್ಟಂಗಳನ್ನಿರಿಸಿ ವಹ್ನಿಯಂ ಸರಿಗೊಳಿಸಿ ಚಿನ್ಮಯನ ಪಾದಮಂ ನೆನನೆನದು ಭೋಂಕೆನುತ ಹಾಯ್ದಳಂದು ॥ ಪರಿಯರಿತು ಮುನಿವರರು ಕರಕರಿಸುತಿರಲತ್ತ । ದೊರೆ ದ್ರುಪದನರಸಿ ಗರ್ಭದಿ ಪುಟ್ಟಿ ಬೆಳೆದು ಸಂ।ಗರ ಪರಾಕ್ರಮನೆನಿಸುತಿರಲಿತ್ತ ಚಿತ್ರವಿಸಿಯಾಲಿಪುದು ಮುಂಗಥೆಯನು ॥೧॥

ಭಾಮಿನಿ

ಚಿತ್ತವಿಸು ಭೂಮಿಶನಿತ್ತ ವಿಚಿತ್ರವೀರ್ಯಂ ಪಲವುಗಾಲವ । ಧಾತ್ರಿಯನು ಪಾಲಿಸುತ ಮಿಥ್ಯದ ಪಾತಂಕಗಳನು ॥ ಹೊತ್ತು ಗಿರಿಯಿಂದುರುಳಿ ಬರ್ದಿಲ । ದತ್ತ ಗದ್ದುಗೆಯಡರಲಿತ್ತಲು । ಚಿತ್ತದಲಿ ಕರಗುತಲೆ ಯೋಜನಗಂಧಿ ಮರುಗಿದಳು ॥೧॥

ರಾಗ-ನೀಲಾಂಬರಿ-ಏಕತಾಳ

ಏನ ಮಾಡಲಿ ಶಿವನೇ। ಎನ್ನಯ ಮುದ್ದು। ಸೂನುವಳಿದು ಪೋದನೆ॥ ಜಾಣ ಚಂದಿರ ಕುಲದ। ಸೌಭಾಗ್ಯ ನಿಧಿ । ಏಣಾಂಕನಲ್ಲೊ ಕೇಳದ ॥೧॥ ವೀರ ಚಿತ್ರಾಂಗನೊಬ್ಬನು । ಗಂಧರ್ವ ಯುದ್ಧ । ದೋರಲಳಿದು ಪೋದನು ॥ ಪೋರ ವಿಚಿತ್ರ ವೀರ್ಯನು । ಸುರಸಭೆ ಸೇರ್ದ । ನಾರು ಕೇಳ್ವರು ತನ್ನನು॥೨॥ ಇಂದು ವಂಶಜ ಸಿರಿಯ । ಕುಂದಿದುದಲ್ಲೋ । ಮುಂದೆ ಪೆರ್ಚುವ ಪರಿಯ । ಇಂದಿರೆಯರಸಬಲ್ಲ। ಯೆನ್ನುತ್ತ ತಟಿನಿ । ಕಂದಗಿಂತೆಂದಳೆಲ್ಲ ॥೩॥

ಭಾಮಿನಿ

ಭೂಮಿಪರ ಕುಲಚಂದ್ರಕೇಳ್‌ನಿ। ರ್ನಾಮವಾದುದು ಶಶಿಕುಲದ ಬೆಳೆ। ಭೀಮ ವಿಕ್ರಮ ನಿನ್ನ ಸೋದರರಳಿಯಲಿಂದಿನಲಿ ॥ ಸೋಮವಂಶವು ಕೋಳು ಹೋದುದು । ನೀ ಮನವ ಮಾಡದಿರೆ ಧಾತ್ರಿಯ । ಸಾಮದಲಿ ಪಾಲಿಪರದಾರುಂಟೆಂದಳಬುಜಾಕ್ಷಿ ॥೧॥

ಮತ್ತೇಭವಿಕ್ರೀಡಿತ

ಧರೆಯಂ ಪಾಲಿಸುತಿಂದು ವಂಶನಿಧಿಯನ್ನುರೆ ಪೆರ್ಚಿ ಸದ್ವೈರ್ಯದಿಂ। ಪೊರೆಯೈ ಭೂಭುಜ

ಗಂಡನೆಂಬಧಟಿನಿಂ ಕರುಣಾರಸಂ ಬೀರುತೆ ॥ ಕರಗಲ್ಪೇಡಮೆನುತ್ತ ಭೀಷ್ಮನ ಶಿರಂ ಪರಸುತ್ತ ಚಿಂತಾಬ್ಧಿಯೋಳ್ । ಸೆರೆಯಾಂ ಬಿದ್ದಳದೆತ್ತಿ ಕಾಯೊ ಮಗನೀಂ ಕೈಕೊಳ್ಳರಾ ಭಾರಮಂ ॥೧॥

ಕಂದ

ಆರ್‌ಗತಿ ನೀನಲ್ಲದದಾನ್ನಾರೀ ಧರೆ ಪಾಲಿಸುತ್ತ ಮೆರೆವವರಾರುಂ । ದೋರೆನೆ ಬಾಗುತ ನಿಧಿಗಂ। ಭೀರಕ ಶಂತನ ಕುಮಾರ ತಾನಿಂತೆಂದಂ ॥೧॥

ಶಾರ್ದೂಲ ವಿಕ್ರೀಡಿತ

ಮೇರುಂ ಧಾತ್ರಿಗೆ ಜರಿದು ಬೀಳೆ ತುಹಿನಂ ಪ್ರಜ್ವಲಿಸುತಲೆ ಸುಟ್ಟೊಡಂ । ಸೂರಂ ಪಶ್ಚಿಮ ಭಾಗವಾಂತು ಬರುತಂ ಮಿಂದಗ್ನಿ ಶೈತ್ಯಾಗಲುಂ ॥ ನಾರೀ ಧಾತ್ರಿಯನೊಲ್ಲೆ ನೆಂತೊರೆದೊಡಂ ಮೂಲೋರ್ಕ ಬೊಬ್ಬಿಕ್ಕಲುಂ । ನಾರೀ ಗಂಗೆಯ ಜಾತ ಶಂತಕುವರಂ ತಾನಾಗುತ್ತಿಳೆಯಾಳೆನೆ ॥೧॥

ವಾರ್ಧಿಕ

ಒರೆದ ನುಡಿಕೇಳುತಂ ಮರುಗಲದ ನೋಡುತಂ । ಎರಡುಂಟೆ ಜಿಹ್ವೆಯೆಂದರುಹುತಿಹ ಬಯಸುತಂ । ನರಕಗತಿಗುರುಳುತಂ ಪರಗತಿಯ ಕೆಡಿಸುತಂ ಮೆರೆವವನೆ ಹೇಳೆಂದನು ॥ ತರುಣಿ ಮಣಿಕರಗುತಂ ಎರಡು ದಿನ ನಿಶಿಯೊಳಂ । ವರ ಭರತನನ್ವಯವನುದ್ಧರಿಪೆನೆನ್ನುತಂ । ಪಿರಿಯ ಸುತ ವ್ಯಾಸನಂ ಕರುಣಾರ್ಕ ಭಾಸನಂ ನೆನನೆನದು ದುಃಖಿಸಿದಳು ॥೧॥

ಭಾಮಿನಿ

ಕಂಜರಿಪುಕುಲತಿಲಕನಾಲಿಸು । ಕಂಜ ಮುಖಿನೆನೆಯಲ್ಕೆ ತಿಳಿಯುತ । ಕಂಜಲೋಚನ ಕಮಲಭವಭಯ ಮುಖರ ಗುಣವಾಂತು ॥ ಕೆಂಜೆಡೆಯ ಕೃಷ್ಣಾಜಿನಂಗಳ । ಮುಂಜೆರಗ ಧರಿಸುತಲಿ ಸೂರ್ಯನ । ರಂಜಿಸುವ ಕಾಂತಿಯಲಿ ಬಂದೆರಗಿದನು ದೈನ್ಯದಲಿ ॥೧।

ರಾಗ - ಕಾಂಬೋದಿ - ಝಂಪೆತಾಳ

ಬಂದೆರಗುತೆಂದ ಕೇಳಿಂದೆನ್ನ ನೆನಸೀರ್ಪು । ದಂದವನೆ ಪೇಳೆನಲಿಕೆತ್ತಿ ॥ಕಂದಕೇಳೇನೆಂಬೆನಿಂದು ಭರತನ ವಂಶ । ಸಿಂಧು ಬರಿದಾಯ್ತು ನೆರೆ ಬತ್ತಿ ॥೧॥ ಪರಮರೂಪನೆ ನಮ್ಮ ಕರುಣಾಮಿಗೆ ಸಲಹೆನಲು। ಒರೆದ ಮರುಗದಿರಿನ್ನು ಮಾತೆ॥ ತರಳನಾದ ವಿಚಿತ್ರ ವೀರ್ಯಕ್ಷೇತ್ರದೊಳೆನ್ನ । ಪರಮಂಶನಿರಿಸುತುದ್ಧರಿಪೆ ॥೨॥ ಕರೆಸು ನಿನ್ನಯ ಸೊಸೆಯರಿರದೆ ಬರಲೆನೆ ಕಳುಹೆ । ಭರದಿಂದಲೊಬ್ಬೊಬ್ಬರಂದು । ಪರಿಕಿಸಲು ಗರ್ಭಮಂ ಧರಿಸಿ ತಿರುಗಲು ಮಾತೆ । ಗೊರೆದನಾ ಮುನಿತಿಲಕನಂದು ॥೩॥ ಮಾತೆ ಕೇಳಂಬಿಕೆಗೆ ದೃಷ್ಟಿಹೀನನು ಮಗನು । ಭೀತಿಯಿಂ ಕಣ್ಮುಚ್ಚಲಿಂದು ॥ ಖ್ಯಾತೆಯಂಬಾಲೆ ಮೊಗ ಬೆಳ್ಪೇರಿತ್ತೈಪಾಂಡು।

ಜಾತನಾಗುವ ಸಿದ್ಧ ವಿಂದು ॥೪॥ ದೂತಿ ಸಂತೋಷದಿಂದಿರಲು ಸಂಜನಿಸುವನು । ಪ್ರೀತಿಯೊಳಗುತ್ತಮನು ಮಗನು ॥ ಭೀತಿ ಬೇಡೆನುತತ್ತ ಗಮಿಸಲಿತ್ತಲು ಗರ್ಭ । ರೀತಿ ಮುಂದ್ವರಿದು ಪೆತ್ತವರು ॥೫॥

ವಾರ್ಧಿಕ

ಹರುಷದಿಂ ಮೂವರುಂ ಜನಿಸೆ ಗಂಗಾಜಾತ । ಕರೆಸಿ ವಿಬುಧೋತ್ತಮರ ನಾಮಕರಣವಗೈದು। ಹಿರಿಯಂಗೆ ಧೃತರಾಷ್ಟ್ರನೆರಡನೆಯ ಪಾಂಡು ದೂತಿಯ ಸುತಗೆ ವಿದುರನೆಂದು ॥ ಕರೆದು ಪೆಸರಿಡಲಂದು ಪುರಲಕ್ಷ್ಮಿ ಥಳಥಳಿಸೆ। ಸರಸದಿಂ ಚವಲೋಪನಯನಾದಿ ವಿರಚಿಸುತ । ಲಿರದೆ ದಶವರುಷದಾದಿಯೊಳೆಲ್ಲ ಕಲಿಸಿದಂ ಸರ್ವ ವಿದ್ಯೆಗಳನಂದು ॥೧॥

ರಾಗ - ಭೈರವಿ - ತ್ರಿವುಡೆ ತಾಳ

ಇತ್ತಲೀತೆರದಿಂದಲಿರುತಿರ । ಲತ್ತಗಾಂಧಾರದಲಿ ಸೌಬಲ । ಧಾತ್ರಿಪತಿಯೋಲಗದಿ ರಂಜಿಸಿ। ಮತ್ತೆ ಮಂತ್ರಿಯ ಕರೆದು ಸುತೆಯಳಿ । ಗುತ್ತಮದ ವರನಾಗಬೇಕೆನು । ತತ್ತಯೋಚಿಸಿ ಜೋಯಿಸರ ಕರೆ। ಸುತ್ತಲಗ್ನವ ಕೇಳೆ ಜಾತಕ । ನಿತ್ತು ಗುಣಿಸುತಲೆಂದರಾಕ್ಷಣ ॥ ಕೇಳು ಮಾತ ॥೧॥ ಪರಿಕಿಸಲು ವಿಧವತ್ವವ ಹುದೆಂ । ದೊರೆಯೆ ಪರಿಹಾರವನು ಕೇಳಲಿ । ಕೊರೆದರೈ ಹೋತಂಗೆ ಧಾರೆಯ ।ನೆರೆದು ಮತ್ತಾಲೋಕಪಾಲರ। ಕರೆಸು ನಾಡದು ಸಪ್ತಮಿಯ ದಿನ । ವರ ಮುಹೂರ್ತಮೆನುತ್ತ ನುಡಿಯಲು । ವಿರಚಿಸುತ ಜೋಯಿಸರ ನುಡಿಗಳ । ಕರೆಸಿ ಭೂಪಾಲಕರ ಮೆರೆದನು ॥ ಏನ ಪೇಳ್ವೆ ॥೨॥ ಅರಿತನಾ ಕಲಿಭೀಷ್ಮನದರನು । ತೆರಳಿ ಗಾಂಧಾರವನು ಪೊಗ್ಗಲು । ಪರಮಹಿತದಿಂ ಮನ್ನಿಸಲ್ಕಾ । ತರಳೆಯನು ನೋಡುತ್ತ ನೃಪನೊಡ । ನೊರೆದ ನಮ್ಮಯ ಬಾಲಗೀವುದು । ಹರುಷದಿಂದೆನಲಾ ಸ್ವಯಂವರ । ವಿರಚಿಸುವೆ ಬಾಲಕನು ಬಂದಡೆ। ತರುಣಿಯೊಲಿಸಲಿ ಪ್ರೇಮದಿಂದಲಿ । ಎಂದನಾಗ ॥೩॥

ಭಾಮಿನಿ

ಎಂದ ಮಾತನು ಕೇಳಿ ತಿರುಗುತ । ಲಂದು ಧೃತರಾಷ್ಟ್ರನನು ಸಹಿತಲಿ । ಬಂದು ಕರೆದೊಯ್ಯಲ್ಕೆ ಸೌಬಲರಾಯ ಪರಿಕಿಸುತ ॥ ಇಂದು ಕುರುಡಗೆ ಬಾಲಕಿಯನೀ । ವಂದ ಪೇಳಿದ ಭಾಪು ಮಝರೇ । ಎಂದು ಪರಿಹಾಸಿಸಲು ಕೇಳ್ದಿಂತೆಂದನಾ ಭೀಷ್ಮ ॥೧॥

ವಾರ್ಧಿಕ

ಧರಣಿಪತಿ ಕೇಳಿತ್ತ ಪರಿಹಾಸ್ಯ ಸಲದಿತ್ತ । ತರಳೆಯಳನೀಯುತ್ತ ಕಳುಹೆಂಬ ನುಡಿಗತ್ತ । ಉರಿಮಸಗಿ ಭೂನಾಥ ಗರ್ಜಿಸಲು ನೃಪವ್ರಾತದರೆಯಂತೆ ಮೇಲ್ವಾಯ್ದುದು ॥ ಪರಿಕಿಸುವ ದೇನತ್ತ ನೂಕಿರಿವಗೆನ್ನುತ್ತ । ಲೊರೆಯೆ ಮುಂದ್ವರಿದತ್ತ ಗಜರಿಹಾಯಲ್ಕಿತ್ತ । ಸರಿಬಲವದರಿದಿತ್ತ ನೃಪರ ಭಂಗಿಸುತಿತ್ತ ಭೂಪಾಲತಡೆದೆಂದನು ॥೧॥

ರಾಗ -ದ್ವಿಜಾವಂತು - ಏಕತಾಳ

ಪೂತು ಮಝುರೆ ರಣಧೀರ। ಭಟ। ವ್ರಾತವಗೆಲ್ದುದಡದೋರ॥ ನೀತಿಯೆ ಕುರುಡಗೆಜಾತೆಯ ನೀಯುವ। ಮಾತುಸುರಿದೆ ಘಡ ಘಾತಕಿ ನಿಲುನಿಲು ॥೧॥ ಏನೆಂದೆಯೊ ಘಡ ನೀನು। ತ। ನ್ನೇನುವ ಜರೆದೆಯೊ ನೀನು॥ ಜಾಣನ ಬಾಲನ ಹೀನಿಸಿ ಒದರಿದೆ। ಕಾಣುವೆ ಹಂಕೃತಿದಾನಪರಾಕ್ರಮ ॥೨॥ ಹಾರದಿರೆಲವೋ ವೀರ। ಮದ। ವೇರಿತೆ ಗರ್ವವದೋರ॥ ಭೋರನೆ ನಿನ್ನನುದಾರವ ಭಂಗಿಸಿ। ಮಾರಿಗೆ ಔತಣ ಮೀರಿದರೀವೆನು ॥೩॥ ಬಗುಳದಿರೆಲವೋ ನಿನ್ನ। ಎದೆ। ಬಗಿಯುತ ಶಾಕಿನಿಗಿನ್ನ॥ ಒಗುಮಿಗೆಯುಣಿಸುವೆ ಬಗೆವೆನೆ ನೋಡೆಂ। ಧಗ ಧಗಿಸುವ ಶರಯುಗಳವನೆಚ್ಚನು ॥೪॥

ರಾಗ - ಮಾರವಿ - ಏಕತಾಳ

ತಿರುಗುತ ಭೂವರನುರಗಾಸ್ತ್ರವ ಬಿಡೆ। ಗರುಡಶರದಿ ನೆರೆ ತರಿಯಲ್ಕಾಣುತ। ಮರುತನ ಬಾಣವ ಸರಿಸಲು ಪಾಪಿಲಿ। ಹರಿಸಲು ಪರ್ವತ ಕುಲಿಶದಿ ತರಿಯೆ॥ ಶೌರ್ಯದಿಂದ ॥೧॥ ಮತ್ತೆಯೆ ಕ್ರೋಧದೊಳಿತ್ತನು ವಹ್ನಿಯ। ದುತ್ತಮಕೋಲನು ಕತ್ತರಿಸಲು ಜಲ। ಮುತ್ತಿದ ತಿಮಿರದಿ ಮತ್ತದು ಬರಲಾ। ದಿತ್ಯನ ವಿಶಿಖದಿ ಕತ್ತರಿಸಿದನು॥ ಕೇಳು ಭೂಪ ॥೨॥

ಭಾಮಿನಿ

ವಸುಧೆಪತಿಕೇಳಿಂತು ಸಮರದಿ। ಬಸವಳಿದು ಬಿದ್ದೆದ್ದು ಸೌಬಲ। ದೆಸೆಗಳೀಕ್ಷಿಸಲೆಲ್ಲ ಮೈಮರೆದಿರಲು ರಣದೊಳಗೆ॥ ಅಸಮಬಲನಿವನೆಂದು ನೆರೆ ವಂ। ದಿಸುತ ಸುತೆಯಳನಿತ್ತು ಮನ್ನಿಸೆ। ಕುಶಲದಿಂ ನಡೆತಂದ ಕರಿಪುರಕಂದು ವೈಭವದಿ ॥೧॥

ವಾರ್ಧಿಕ

ಅರಸಕೇಳಯ್ತಂದು ಧೃತರಾಷ್ಟ್ರನಿಂಗಂದು। ತರುಣಿಗಾಂಧಾರಿಯಂ ಲಗ್ನಗೈದಿರಲವಂ। ಪರಮಮುನಿದೂರ್ವಾಸ ಶಿಷ್ಯ ಜನರಿಂತೋಷವೆರದು ಕುಂತೀ ಭೋಜನ॥ ಅರಮನೆಗೆ ಬರಲತ್ತ ದೊರೆಯರಿಯದಿರೆ ಮತ್ತ। ತರಳೆ ಕುಂತಿಯು ತನ್ನ ಮನೆಗೆ ಕರೆದೊಯ್ದವನ। ಪರಿಪರಿಯ ಭಕ್ತಿಯಿಂ ಭೋಜನದಿ ತೃಪ್ತಿಯಂ ಬರಿಸೆ ಮೆಚ್ಚುತಲೆಂದನು ॥೧॥

ರಾಗ - ದೇಶಿ - ಅಷ್ಟತಾಳ

ಕೇಳಮ್ಮ। ಮಾತ। ಕೇಳಮ್ಮ ॥ಪ॥ ಕೇಳಮ್ಮ ಭಕ್ತಿಗುಣಕ್ಕೆ ಮೆಚ್ಚಿದೆನು। ಬಾಲಕರಾಗಲು ಕೊಡುವೆ ಮಂತ್ರವನು॥ ಲೀಲೆಯೊಳ್ ಕೈಕೊಳ್ಳುದೆಂದಯ್ದನಿತ್ತ। ಬಾಲಕಿಯೊಡನೆಂದ ಮುನಿನಾಥ ಮತ್ತ॥ ಕೇಳಮ್ಮ ॥೧॥ ಹರುಷದೊಳಿಚ್ಛೆ ಬಂದನ ನೋಡಿ ನೆನೆಯೆ। ಸರಿ ರೂಪ ತರಳನಾಗುವನಿದು

ಸತಿಯೆ ॥ ಹರಿಹರದಯದಿಂದ ಬಾಳಿರುಯೆಂದು । ಹರಸುತ್ತ ಯತಿರಾಯ ತಿರುಗಿದನಂದು ॥ ಕೇಳಮ್ಮ ॥೨॥

ಭಾಮಿನಿ

ಇತ್ತ ಋಷಿಗಮಿಸಲ್ಕೆ ಯೋಚಿಸಿ । ಮತ್ತೆನಗೆ ಸುತನೋರ್ವ ನಾಟಕೆ । ನುತ್ತ ಬೇಕೆಂದೈದಿಗಂಗಾತಟದಿ ದಿನ ಮಣಿಯ ॥ ಪ್ರಾರ್ಥಿಸುತ ಮಂತ್ರವನು ನೆರೆ ಜಪಿ । ಸುತ್ತಿರುವ ಸತಿಯೆಡೆಗೆ ದ್ಯುಮಣಿಯು । ನಿತ್ತು ಬಂದರುಹಿದನು ಸುಪ್ರೀತಿಯಲಿ ಮೃದು ನುಡಿಯ ॥೧॥

ರಾಗ - ಕೇತಾರ ಗೌಳ - ಝಂಪೆ ತಾಳ

ಮತ್ತೇ ಭಗಮನೆ ಬಾಲೆ । ತನ್ನ ಬಲು । ಸೌತ್ರ್ಯವೇನ್ನದೆ ಸುಶೀಲೆ ॥ ಬಿತ್ತರಿಸು ನೀನೆನಲ್ಕೆ । ನಸುನಾಚು । ತತ್ತೆಂದಳ್ ಹಿತದ ಬಯಕೆ ॥೧॥ ಸರುವ ಚೈತನ್ಯಾತ್ಮನು । ನೀನಾಗಿ । ಮೆರೆಯುತಿರೆ ತನ್ನೊಳಿನ್ನು ॥ ಅರುಹೆಂಬ ಮಾತಿದ್ಯಾಕೆ । ಬಾಲಕನ । ಕರುಣಿಪುದು ಮನದ ಹಿತಕೆ ॥೨॥ ಫುಲ್ಲಾಕ್ಷಿ ಕೇಳ್ಳುದಿನ್ನು । ತನ್ನಂಥ । ಚೆಲ್ವ ಮಗನಹನು ನೀನು ॥ ನಲ್ಲೆ ಬಾರೆನ್ನುತವಳ । ಒಡಗೂಡಿ । ಫುಲ್ಲ ಸಖನೆಂದ ಕೇಳಾ ॥೩॥ ನಿನ್ನ ಕನ್ಯತ್ವವೆಂದು । ಕೆಡಲಾರ । ದೆನ್ನುತಲೆ ಒರೆದನಂದು ॥ ಮುನ್ನ ಪಾಲಿಸಿ ತೆರಳಲು । ಬಳಿಕ ಸಂ । ಪನ್ನೆ ಗರ್ಭವ ತಾಳ್ದಳು ॥೪॥

ಭಾಮಿನಿ

ಅರಸ ಕೇಳ್ ಪಡೆದೊಬ್ಬ ಕುವರನ । ತರಣಿಯಂದದಿ ತೊಳಲಿ ಬೆಳಗುವ । ತರಳನನು ಕಂಡಂದು ಲಜ್ಜಿಸಿ ಗಂಗೆಯೊಳಗಿಕ್ಕಿ ॥ ಪೊರೆವರಾದರೆ ಪೊರೆಯಲಿಂದಿಲಿ । ತರಿವುದಾದಡೆ ಮಡುಹಲೆನ್ನುತ । ಲೊರೆದು ತಿರುಗಿದಳಿತ್ತ ಬಂದಳು ತನ್ನ ಪುರವರಕೆ ॥೧॥

ರಾಗ - ಕಾಂಬೋದಿ - ಝಂಪೆ ತಾಳ

ಇರುತಿರಲು ಕರಿಪುರದೊಳಧಿರಥನು ಕರಗಿದನು । ತರಳರಿನ್ನಿಲ್ಲದಾಯ್ತೆನಗೆ ॥ ಹರಹರಾ ಪೂರ್ವದಲಿ ವಿರಚಿಸಿದ ದುಷ್ಕರ್ಮ । ತೆರನಿದಲ್ಲದೆ ಬೇರೆಯುಂಟೆ ॥೧॥ ಯಾರ ತಪಕೆಡಿಸಿದೆನು ಯಾರ ಭಾಗ್ಯವ ಸೆಳೆದೆ । ನಾರ ಪುತ್ರಾದಿಗಳ ತರಿದೆ ॥ ಘೋರ ನರಕಾರ್ಣವದಿ ಸಾರಲಾದುದೆನುತ್ತ । ನಾರಿ ರಾಧೆಯ ಕರೆವುತೆಂದ ॥೨॥ ಯಾತಕೀ ಸುಭಟ ಧನವೇತಕೀ ಸಾಮ್ರಾಜ್ಯ । ವೇತಕೀ ಬಾಹುಶೌರ್ಯಗಳು॥ ಜಾತನಿಲ್ಲದೆ ಸುರರ ವ್ರಾತಸೇರದೆನುತ್ತ । ಸೂತವಂಶಜ ಮರುಗಿ ನುಡಿದ ॥೩॥

ವಾರ್ಧಿಕ

ಮೆರೆವ ಪುಷ್ಕರಕೆ ಪುಷ್ಕರ ಮಂಬರಕೆ ಚೆಲ್ವ । ಹರಿದಶ್ವನುಡು ಮಧ್ಯ ವಿಧು ಜವ್ವನೆಯಳಾದ।

ತರುಣಿಗೆರೆಯಂ ಲತೆಗೆ ವೃಕ್ಷಮದು ಧಾತ್ರಿಗಂ ರಾಜ ನರನಿಗೆ ಸೂತನು ॥ ಇರದಿದ್ದಡೇನು ಫಲ ಕಾನನದಿ ಜನಿಸಿರುವ । ತರು ಶಿಲೆಗಳಂತಾಯ್ತು ಪಥಮೇನಿದಿದಕೆಂದು । ಮರುಗುತಿರಲಾತಸರ್ಧಾಂಗಿ ಪದಕಭಿನಮಿಸಿಯಿಂತೆಂದಳಾಗ ಮುದದಿ ॥೧॥

ಭಾಮಿನಿ

ಮರುಗಲೇಕೀ ತೆರದಿ ಸುಮ್ಮನೆ । ತರಳರಪ್ಪರೆ ಮುನ್ನ ಕಮಲಜ । ಬರೆದುದನು ಮೀರುವಡೆ ಸಾಧ್ಯವೆ ಲೋಕ ಜನರಿಂಗೆ ॥ ಧರೆಯೊಳಗೆ ನಮ್ಮಂಥ ಪಾಪಿಗ । ಳಿರುವರೇನೀಶನ ಪದಾಬ್ಜವ । ಸ್ಮರಿಸುತಿರುತಿಹುದೆಂದು ನುಡಿಯುತಲಿರ್ದರಾ ತೆರದಿ ॥೧॥

ರಾಗ -ಮೋಹನ - ಝಂಪೆ ತಾಳ

ಎಂದಿರುತಲೊಂದಿವಸ ಚಂದದಿಂದಾ ನದಿಯೊ। ಳಂದು ಬಲೆ ಬೀಸಿ ಬರೆ ಮುಂದೆ ಗಂಗೆಯೊಳು ॥ ಕಂದನೋರ್ವನಕಾಣುತಂದೆತ್ತಿತೋಷದಿಂ । ಬಂದು ಭೀಷ್ಮಂಗೀಯುತಂದೆರಗಲೆಂದ ॥೧॥ ಹರುಷ ವ್ಯಾತೀಶದಯವೆರಸಿದನೆ ಭಾಪೆನಲು । ವರನದಿಯ ಬಳಿಯೊಳಗೆ ಪರಿಕಿಸಲು ತಂದೆ ॥ ಒರೆವುದಿರರಂದ ಮೆನಲರುಹಿದನು ಧುರಧೀರ । ಪರಮ ಪಿಂಡೋದ್ಭವನು ಸರಸದಲಿ ಸಲಹು ॥೨॥ ಎಂದೆನಲು ತೋಷದಿಂ ಬಂದು ಸುದತಿಗೆ ತೋರಿ । ಮುಂದೆ ವಿಪ್ರೋತ್ತಮರ ವೃಂದ ಕರೆಸುತಲಿ ॥ ಅಂದು ಕರ್ಣನೆನುತ್ತ ನಿಂದು ಪೆಸರಿಟ್ಟು ಧನ ।ದಿಂದ ಮನ್ನಿಸೆ ವಿಬುಧರಂದು ಪರಸಿದರು ॥೩॥

ರಾಗ - ಭೈರವಿ - ತ್ರಿವುಡೆ ತಾಳ

ಧರಣಿಯರಸನೆಕೇಳು ಮತ್ತವ । ತರಣಿನಂದನನಿಂಗೆ ವಿದ್ಯವ । ಹರುಷದಿಂ ಕಲಿಸಲ್ಕೆ ಜನರೊಡ । ನರಿತು ಭಾರ್ಗವ ರಾಮನಡಿಯಹ । ಸರಸಿಜವ ನೆರೆಸಾರ್ದು ಕಾರ್ಮುಕ । ಶರದ ಸೂತ್ರವನರಿವೆನೆನುತಲೆ । ಧರೆಸುರರ ರೂಪವನೆಗೊಂಡವ । ಪರಶುಧರನಡಿಸಾರ್ದು ಮಣಿದನು ॥ ವೀರ ಕರ್ಣ ॥೧॥ ಎರಗಿದನನೆತ್ತುತಲೆ ಬಂದಿಹ । ಪರಿಯದೇನೆನೆ ಸರ್ವ ವಿದ್ಯವ । ಕರುಣಿಪುದು ತನಗೆನಲು ಪ್ರೀಯದೊ । ಳರುಹುತಿರಲೊಂದಿವಸಮೊದಗಿದು । ದೊರೆಯಲೇನ್ ಸಾಹಸ್ರಕವಚನ । ದುರುಳ ಸಚಿವನಳರ್ಕನೆಂಬವ। ಹರಿಯ ನುಡಿಯಲಿ ಮುನಿವಸಿಷ್ಟನೊಳಿರದೆ ಶಾಪವನಂದು ಪಡೆಯಲು॥ ಭ್ರಮರವಾದ ॥೨॥ ತಿರುಗಿ ಬೇಡಲು ನಿನ್ನ ದೊರೆ ಬಂ । ದಿರದೆ ಜನಿಸಿದ ಕರ್ಣನೆನಿಸುತೆ। ಭರದೊಳಾತನ ರಕ್ತ ಸೇವಿಸೆ । ಹರಿಗು ಶಾಪಮೆನುತ್ತ ಪೇಳಲು । ಎರಗಿ ಬರುತಿರಲಿತ್ತ ಭಾರ್ಗವ । ಭರದಿನಿದ್ರಿಸೆ ಕರ್ಣನಂಕದಿ । ಶಿರವನಿಟ್ಟಿರೆ ಕಂಡು ಜಂಘೆಯ। ನುರಿಮಸಗಿ ಕೊರೆಯುತ್ತಲಿರುತಿರೆ ॥ ಏನನೆಂಬೆ ॥೩॥

ವಾರ್ಧಿಕ

ಅರಸಕೇಳ್ ಶೋಣಿತಂ ಮಡುಗಟ್ಟಿ ಸರಿಯಲುಂ । ವರಕರ್ಣನಂಕ ಟೊಳ್ಳಾಗ ಲೆಚ್ಚರ್ತೆದ್ದು।

ಪರಿಕಿಸುತ ಕಿಡಿ ಮಸಗಿ ರೋಷದಿಂ ಒರೆದನೆಲೆ ಕಪಟರೂಪಿಲಿ ವಿದ್ಯವ ॥ ಸರಿಯೆನಿಸಿ ಕಲಿತೆಯದು ನಿಷ್ಪಲದೊಳರಿಯೊಡನೆ । ಧುರದೊಳಗೆ ರಥ ಹೂಳಿ ಭಂಗದಿಂದೊರಗೆಂದು । ಹಿರಿದು ಕ್ರೋಧದಿ ಶಾಪಿಸಲ್ಕವನ ಪದಕೆರಗಿ ಸನ್ನುತಿಸುತಿಂತೆಂದನು ॥೧॥

ಭಾಮಿನಿ

ಗುರುಪೆ ನೀನೇ ತಂದೆ ತಾಯಿಯು । ತರಳನೆನ್ನನು ಮಡುಹುವಂದವೆ । ಹೊರತು ಕಾವರದಾರು ದೇವನೆನಲ್ಕೆ ಪಿಡಿದೆತ್ತಿ ॥ ಧುರದಿ ಹೂಳಿದ ರಥವನೆತ್ತಲು । ಹರಿಹರರು ನಿನಗಂಜವೆಂದವರಿರದೆ ಪರಸಲು ಮಣಿದು ತಿರುಗಿದನಾಗ ಕಲಿಕರ್ಣ ॥೧॥

ರಾಗ - ಕಾಂಬೋದಿ - ಝಂಪೆ ತಾಳ

ಪರಶುಧರಗೆರಗುತ್ತ ತಿರುಗಿ ಬರುತಿರಲಿತ್ತ । ಉರಗೇಶಧರಣಿದೇವತೆಯು ॥ ದುರುಳ ಕರ್ಣನ ಗರ್ವ ತರಿಯಲುರೆ ಯೋಚಿಸುತ । ಮರುತಾರಿಯೆಂದನವಳೊಡನೆ ॥೧॥ ಹಿಂದೆ ಸಾಹಸ್ರ ಕವಚನು ತನ್ನ ಫಣೆಯಿಂದ । ಲಂದೊಯ್ದು ಮಾಣಿಕವದುರುಳ ॥ ಇಂದೀಗ ಕರ್ಣನೆನುತಿಂದು ಸಿಕ್ಕಿದನೆನುತ । ಲಂದು ತೈಲವ ಪೊತ್ತು ಬಂದ ॥೨॥ ನರರೂಪದಿಂದವನು ತೈಲ ಶಿರದಿಂ ಪೊತ್ತು । ಬರಲಿದಿರು ತಿರುಗಿ ಬೀಳುತ್ತ॥ ದೊರೆಯೆ ನೀ ಕಲಿಕರ್ಣ ಪೊರೆಯೊ ತನ್ನುವನೆನುತ । ಮೊರೆಯಿಡಲು ಖಿತಿ ತಾಳ್ದನಾತ ॥೩॥

ಭಾಮಿನಿ

ಶೋಕವೇಕೆಲೆ ನಿನ್ನ ಗರಿಬನ । ಶೋಕಕಳೆಸಲಿಕಿಂದು ಧರಣಿಯ । ಶೋಕಿಸುವೆ ನೋಡೆನುತ ಗರ್ಜಿಸಿ ಗಜರಿ ಖಾತಿಯಲಿ ॥ ಏಕ ವೀರಾಗ್ರದ ಸುಶಕ್ತಿಯ । ಲೋಕ ನೋಡಲು ಬಿಡಲು ಭೂಸತಿ । ಲೋಕಹರನಂದದಲಿ ಮಸಗುತ ಬಂದಳಿದಿರಿನಲಿ ॥೧॥

ವಾರ್ಧಿಕ

ಬಂದುಭಯರಂ ನೋಡಿ ರೋಷಮಯದಿಂದಾಡಿ। ಮಂದಮತಿ ಕರ್ಣಕೇಳಿಂದೆನ್ನ ಭಂಗಿಸಲು। ಬಂದೆ ನಿನ್ನರಿಯೊಡನೆ ಕಾದೆ ರಥಮಂ ಸೆಳೆದು ಭಂಗಕೀಯುವೆನೆನ್ನುತ ॥ ಅಂದು ಶಾಪಿಸು ತುಭಯರಿರದೆ ಗಮಿಸಲು ಕರ್ಣ । ಬಂದು ಬಲುದುಗುಡದಿಂದಿರುತಿರ್ದನತ್ತಲುಂ । ತಂದು ಕುಂತಿಯ ಮಾದ್ರಿಯರನು ಪಾಂಡುಗೆ ಲಗ್ನ ಗೈಯು ತಲೆ ಶಂತಜಾತ ॥೧॥

ಭಾಮಿನಿ

ಸೃಷ್ಟಿಯೊಡೆತನ ಪಿರಿಯಗಾ ಧೃತ । ರಾಷ್ಟ್ರ ಪಾಲಿಸಲೆಂತು ಹರಹರ । ಹುಟ್ಟು ಕುರುಡಂಗ್ಯಾಕೆ ನೀನಾಳೆನುತ ಭೂತಳವ । ಪಟ್ಟವನು ರಚಿಸುತ್ತ ಪಾಂಡುಗೆ । ಶಿಷ್ಟ ನೃಪರಂ ಮಾಡಿ ವಿಭವದೊ। ಳೊಟ್ಟಿರಲು ಕೇಳ್ ಬಂದ ಪರಿಭವವನ್ನು ಭೂಪಾಲ ॥೧॥

ಆರ್ಯ ಸವ್ಸಾ

ಪೃಥ್ವಿಪ ಪಾಂಡುಗೆ ಚಕ್ರವರ್ತಿತ್ವದಿ । ಧಾತ್ರಿಯ ಪಾಲಿಸಲೊಂದು ದಿನ । ಮತ್ತಾ ಮೃಗಹತಿಗಿತ್ತಾ ಚಾರರು । ಬಿತ್ತರಿಸಿದರಿಂತಾ ವ್ಯಸನ ॥೧॥

ರಾಗ - ಮುಖಾರಿ - ಏಕತಾಳ

ಚಿತ್ತಾವಧಾನ ಪಾಂಡು ಭೂಪ । ಕಡು ಸುಪ್ರತಾಪ । ಚಿತ್ತಾವಧಾನ ಪಾಂಡು ಭೂಪ ॥ ಮತ್ತಾವನದಲಿ ನಿತ್ತು ಮೃಗಂಗಳು । ಒತ್ತುತ ಫಲಗಿಡದತ್ತಲೆ ಲತೆ ಪೂ ।ಗೊತ್ತಿದುದೇನದ ಬಿತ್ತರಿಪೆವು ದಯ । ವಿತ್ತೇಳ್ಕೆ ದೊರೆಯತ್ತ ಪರಾಕು ॥೧॥

ಭಾಮಿನಿ

ಚಾರಕರ ನುಡಿ ಕೇಳುತಭಯವ । ದೋರಿ ಶಬರರ ಕರೆಸಿ ಬಲೆಗಳ । ಸೇರಿಸುತ ರಥವಡರಿ ಶರಚಾಪವನೆ ಕೈಗೊಂಡು ॥ ಭೂರಿ ವಿಕ್ರಮಿ ಚಕ್ರವರ್ತಿಯು । ದಾರತನದಿಂದಿರದೆ ಮುತ್ತುತ । ವೀರ ಝೇಂಕೃತಿದೋರಿ ಬೇಟೆಯನಾಡುತಯ್ತಂದ ॥೧॥

ರಾಗ -ಮುಖಾರಿ - ಏಕತಾಳ

ಬೇಟೆಯಾಡುತ್ತ ಬಂದನಂದು । ವನದೊಳು ಮುಂದು । ಬೇಟೆಯಾಡುತ್ತ ಬಂದನಂದು ॥ಪ॥ ಅಲ್ಲಿಗಲ್ಲಿಗೆ ಬಲೆ ಬೀಸಿ । ರೂಪವ ಮರೆಸಿ । ಮೆಲ್ಲಮೆಲ್ಲನೆ ಗಂಡಿನಡೆಸಿ ॥ ಖುಲ್ಲ ಮೃಗಂಗಳನೆಲ್ಲವ ಸವರುತ । ಮಲ್ಲನು ಬರುತಿರಲಲ್ಲಿಯೆ ಕಂಡ ॥ ಬೇಟೆ ॥೧॥

ವಾರ್ಧಿಕ

ಮುಂದೊತ್ತಿ ಬರಲಾಗ ಮೃಗ ಮಿಥುನ ರೂಪಿನೊಳು । ಒಂದು ಠಾಣದೊಳು ಸಂಭೋಗದಿಂದಿರುತಿರಲು । ಕೊಂದು ಕಳೆವೆನೆನುತ್ತ ಮಾರ್ಗಣವ ತೆಗೆದೆಚ್ಚ ಮುನಿಯೆಂಬುದರಿಯದವನು॥ ಅಂದು ನೋವಿಂದ ನಿಜರೂಪದಿಂದಿರುತ ಬರ । ಲಂದು ಮಣಿದೆಂದ ನೀ ತೇಜ ಪಲ್ಲಟಗೈದ । ಕಿಂದು ನೀತಿಯ ಮರೆಸಿದಂದವರಿಯದೆ ಪ್ಪೊದೆನಪರಾಧ ಕ್ಷಮಿಸೆಂದನು ॥೧॥

ಭಾಮಿನಿ

ಹೊತ್ತು ಹೊತ್ತಿಗೆ ತಾಪವೆಗ್ಗಳಿ । ಸುತ್ತಲೆಂದಾವ್ ನೀತಿ ರಹಿತವೋ । ಉತ್ತಮನೆ ಕೇಳೆಲವೊ ರಾಜಾಧಮನೆ ನಿನ್ನರಸಿ ॥ ಹತ್ತಿರಕೆ ಗಮಿಸುತ್ತ ಭೋಗಿಸೆ । ಮತ್ತೆ ಸಾಯೆಂದೆನುತ ಶಪಿಸಲು । ಧಾತ್ರಿಪತಿ ತಿರುಗಿದನು ಹಸ್ತಿನಪುರಕೆ ದುಗುಡದಲಿ ॥೧॥

ರಾಗ - ಕಾಂಬೋದಿ -ಝಂಪೆ ತಾಳ

ಬಂದು ಭೀಷ್ಮಂಗೆ ಮುದದಿಂದೆರಗಿ ಧೃತರಾಷ್ಟ್ರ । ಗೆಂದ ಬೇಟೆಗೆಸುತ್ತಲಯ್ಯ ॥ ಕೊಂದು ಮೃಗ ತತಿಯು ಬರಲೊಂದು ಕಡೆ ಮೃಗರೂಪ । ದಿಂದ ಮುನಿಕ್ರೀಡಿಸುತ್ತಿರಲು ॥೧॥ ಅರಿಯದೆಚ್ಚಂಬಿನೊಳಗುರೆನೊಂದು ಶಾಪಿಸಿದ । ತರುಣಿಯಳ ಕೂಡೆ ಮರಣವನು ॥ ಭರದಿ ಪೊದ್ದೆಂದೊರೆವನಾದ ಕಾರಣ ಧಾತ್ರಿ । ಪರಿವಾರ ಪ್ರಜೆಗಳನು ನೀನು ॥೨॥ ದೊರೆಯಾಗಿ ಪಾಲಿಸುವದೆಂದೊರೆದು ಮಣಿದಂದು । ವರಭೀಷ್ಮಗೆರಗಿ ಸುದತಿಯರ ॥ ಕರಕೊಂಡು ಶತಶೃಂಗ ಗಿರಿಯೊಳಗೆ ಚಿನುಮಯನ । ಚರಣ ನುತಿಸುತ್ತಿರ್ಪನೆನುತ ॥೩॥ ಬಂದರಸಿಯರಿಗರುಹುತಂದು ಚಿಂತಿಸಿ ಪೊರಟ । ನಂದು ಪರಿಜನರು ಮೊದಲಾದ ॥ ವೃಂದವಯ್ತರುತಿರಲು ನಿಲಿಸಿ ಶತಶೃಂಗಗಿರಿ । ಯಂದೇರುತಯ್ತಂದ ಮುಂದೆ ॥೪॥ ಬರಲು ಸರಿ ಪುಷ್ಪದಿಂ ತರುಗಳಿಂ ಲತೆಗಳಿಂ । ಮೆರೆವ ಫಲದಿಂದ ಶೋಭಿಸುವ ॥ ಪರಮ ಸ್ಥಳ ವಹುದೆಂದು ಶುಚಿಯಾಗಿ ಹರಿಯಪದ । ಸರಸಿಜವನುತಿ ಸುತಿರುತಿರ್ದ ॥೫॥

ವಾರ್ಧಿಕ

ಇರಲತ್ತ ಕರಿಪುರದಿ ವರವ್ಯಾಸ ಮುನಿಭರದಿ । ತರುಣಿಗಾಂಧಾರಿಗಂ ಮಂಗಳನ್ನೀಯಲುಂ । ಧರಿಸಲುಂ ಗರ್ಭಮುನ್ನರಿತು ಕುಂತಿಯು ಕಾಂತಗೆಂದಳೆಮಗಿಪರೆಸುತರು ॥ ತರಳರಾಗಲು ಶಾಪಮಿಹುದಕ್ಕೆ ಏನಾಯ್ತು ॥ ಒರೆಯಲೇನ್ ಸಂತಾನವೆನಗಿತ್ತ ದೂರ್ವಾಸ । ಪರಮ ಮಂತ್ರಗಳಿಂದ ಸುತರ ಪಡೆವೆನೆನಲ್ಕೆ ಕಳುಹೆ ನದಿ ಬಳಿಗಯ್ದಳು ॥೧॥

ಆರ್ಯ ಸವ್ಯಾ

ಬಂದಾ ನದಿಯಲಿ ಸ್ನಾನವ ರಚಿಸುತ । ಚಂದದಿ ಮಂತ್ರವ ಜಪಿಸಲ್ಕೆ ॥ ಬಂದಾ ಕಾಲನು ಮುದ್ದಿಸಿ ಕೊಡುತ ।ಲೆಂದನು ಕುಂತಿಗೆ ಹಿತಗೃಹಿಕೆ ॥೧॥ ಧಾರಿಣಿಯೊಳು ಸತ್ಯಾತ್ಮಕ ಚಾರು ಕು । ಮಾರಕ ವಿಕ್ರಮನಹನೆನುತ ॥ ಘೋರನೆ ತೆರಳಲು ನವ ಮಾಸಾಂತ್ಯದಿ । ನಾರಿ ವನದಿ ಪೆತ್ತಳು ಮತ್ತ ॥೨॥ ಅರಿಯುತ ಸುದ್ದಿಯ ಮತ್ಸರವೆರಸುತ । ತರುಣಿ ಗಾಂಧಾರಿಯು ಗರ್ಭವನು ॥ ಭರದೊಳು ಪೊಯ್ಯುತ ಹೊರಳುತ ಉದುರಿಸೆ । ಒರೆಯುವದೇನದ ನೆರೆ ತಾನು ॥೩॥

ಭಾಮಿನಿ

ಉಚ್ಚಳಿಸಿ, ಖಂಡಗಳು ಧರೆಯಲಿ । ನುಚ್ಚುನೂರಾಗುತ್ತ ಬೀಳಲು । ಹುಚ್ಚು ಕೆಡಿಸಿದೆಯೆಂದು ವ್ಯಾಸನು ಘೃತವ ಮಂತ್ರಿಸುತ ॥ ರಚ್ಚಿನಲಿ ಕೊಪ್ಪರಿಗೆಯೊಳಗದ । ಮುಚ್ಚಿ ಮುನಿಪತಿ ಸರಿಯಲಿತ್ತಲು। ಸಚ್ಚರಿತೆಯಾಕುಂತಿ ಶುಚಿಯಲಿ ಮರುತನನು ನೆನೆಯೆ ॥೧॥

ರಾಗ -ಮಾರವಿ -ಏಕತಾಳ

ನಾರಿಯು ನುತಿಸುವ ವಾರತೆ ತಿಳಿಯುತ । ಮಾರುತ ನಡೆತಂದು ॥ಭೋರನೆ ನುಡಿದನು ಸತಿಯೊಳಗಿಚ್ಛೆಯ । ನೀರೆನಾ ಸಲಿಸುವೆನು ॥೧॥ ಎಂದಾಸುದತಿಯ ನಂದದಿ ಕೂಡುತ । ಮುಂದಕೆ ಸಾಗಿನ್ನು ॥ ಚಂದದಿ ವಿಕ್ರಮ ಕಂದ ಜನಿಸುವನು । ಎಂದೆನುತಲಿ ತಾನು ॥೨॥ ವರವೀಯುತ ಹರಿ ತೆರಳಲಿಕಿತ್ತಲು । ಧರಿಸುತ ಗರ್ಭವನು ॥ ಹರುಷದಿ ಪಡೆದಳನಿತರೋಳ್ ತರಳನ । ನರುಹುವೆನನಿತರೊಳು ॥೩॥

ಭಾಮಿನಿ

ಅಂದು ಮುನಿ ಮಂತ್ರೋಪದೇಶದೊ । ಳಂಧಕಗೆ ನೂರೊಂದು ಖಂಡದಿ । ಮುಂದೆ ಪುಟ್ಟಿಹುದಿದರ ಪಿರಿದಹ ಖಂಡವೀಕ್ಷಿಸುತ ॥ ಹಂದೆ ಶಶಿಕುಲ ಕಂಟಕನ ತೆಗೆ । ದಿಂದು ಬೀಸಾಡೆನಲು ಕೇಳದೆ । ಚಂದ ದಿಂದಹ ಜಾತಕರ್ಮಾದಿಗಳ ಮಾಡಿಸಿದ ॥೧॥

ವಾರ್ಧಿಕ

ಧಾತ್ರಿಪತಿ ಕೇಳು ದುರ್ಯೋಧನಂ ದುಶ್ಯಾಸ । ನೊತ್ತಿಗೆ ವಿಕರ್ಣ ಸೌಬಾಹು ದುಸ್ಸಹನವನಿ। ಗೊತ್ತಿನವ ಕನಕ ಕವಚಂ ಜೀರ್ಣಧರ ಸುವೇಣಂ ಜಯಂ ವಿಜಯನೆಂದು ॥ ಮತ್ತಾ ಮಹೋದರಂ ಜಲ ಸಂಧ ಧೃಡವಾಹ। ನೊತ್ತಿನವನಾ ವಿವಿಂಶಕ ಕುಂಡಧಾರ ದು । ರ್ಮತ್ತ ದುರ್ಗುಣಿ ದುಶ್ಯಕುನಿ ದುರ್ಧರಂ ಧೃವಂ ದುರ್ಭಾಹು ದುಃಶ್ಚಟೇಶ ॥೧। ದುರ್ಬುದ್ಧಿ ಪವಿಕರ್ಣ ದುರ್ಮಾರಿ ಸಂವರಣ । ದುರ್ಭಕಂ ದೃಷ್ಟ ದ್ರುಮನಂ ದುರಾಚರ ಕೃಪಣಿ । ದುರ್ಭೀರ್ಯ ದುಷವೃತ್ತಿದುರ್ಮಾರ್ಗಿ ಶಾಂತಿಹರ ದುರ್ಧೇನು ದುರ್ಭಾಷಿತ ॥ ದುಭ್ರಮಣ ದುಷ್ಟಮತಿ ದೃವಿಣ ಪವಿಕರ್ಣ ಸಮ । ದುಭ್ರಮರ ದುಶ್ಚಲಂಕು ಮತಿ ಕುಹಕಂ ಸಮಕೆ । ಗಭೋ೯ದ್ಭವರೊಳು ದುಶ್ಯಳೆಯೆಂಬ ಪೆಣ್ಣೊಂದ ಪಾಲಿಸುತಲಿರುತಿರ್ದನು ॥೧॥

ರಾಗ -ಭೈರವಿ - ಅಷ್ಟತಾಳ

ಇತ್ತಲೀ ತೆರದೊಳಿರೆ । ಕುಂತಿಯು ಮಿಂದು । ಸ್ತೌತ್ರ್ಯವ ರಚಿಸುತಿರೆ ॥ ಉತ್ತಮ ಸುರನಾಥನಯ್ತಂದು ವರವದ । ನಿತ್ತೆಂದ ದಯದಿಂದಲಿ ॥೧॥ ಅರಸಿ ತನ್ನಂದದಿಂದ । ರಂಜಿಸುತಿಹ। ತರಳನು ಜನಿಪ ಮುಂದ ॥ ಹರುಷದಿಂದಿರುಯೆಂದು ಸರಸದಿಂದೊಡಗೂಡಿ । ಸರಿದನು ಮೈಗಣ್ಣನು ॥೨॥ ಮತ್ತಿಂದು ಮುಖಿಯು ತಾನು । ಗರ್ಭವ ಧರಿ । ಸುತ್ತಲಿ ಬಾಲನನು ॥ ಉತ್ತಮನನು ಪೆತ್ತು ಮಾದ್ರಿಗೆ ಮಂತ್ರವ । ನಿತ್ತಳೊಂದನು ಮುದದಿ ॥೩॥

ಭಾಮಿನಿ

ವರಮಹಾ ಮಂತ್ರೋಪದೇಶವ । ತರುಣಿ ಮಾದ್ರಾದೇವಿ ಗೊಂಡುರೆ । ಹರುಷದಿಂ ಶುಚಿಯಾಗು ತಶ್ವಿನಿದೇವರಿಂಗೊಲಿಸೆ । ಭರದಿ ಬಂದೊರವಿತ್ತು ಕೂಡುತ । ಸರಿಯಲಿತ್ತಲು ಪಡೆದರಿಬ್ಬರ। ತರಳರನು ಸಂತಸದಿ ಸಲಹುತ ಲಿರ್ದನಾ ಭೂಪ ॥೧॥

ವಾರ್ಧಿಕ

ವರುಷಕೊಬ್ಬೊಬ್ಬರುಂ ಕಿರಿಯರಾಗಿರುತಿರಲು । ಪರಮ ಮುನಿಕಾಶ್ಯಪನ ಮತದಿಂದಲಯ್ವರಿಗೆ। ವಿರಚಿಸುತ ಜಾತ ಕರ್ಮಾದಿಗಳ ವಿಪ್ರ ಜನರಿಂಗಿತ್ತು ಬಹುಧನವನು ॥ ಪಿರಿಯಂ ಯುಧಿಷ್ಠಿರಂ ಎರಡನೆಯ ಭೀಮನುಂ । ನರನು ಮೂರನೆ ಮತ್ತೆ ನಾಲ್ಕೈದ ಬಾಲರಿಗೆ । ವರ ನಕುಲ ಸಹದೇವರೆಂದಿತ್ತು ನಾಮವಂ ಪಾಲಿಸುತಲಿರುತಿರ್ದನು ॥೧॥

ಭಾಮಿನಿ

ಮತ್ತೆ ಪೃಥ್ವಿಯನಾಳೆ ಕರಿಪುರ । ದತ್ತಲಿಹ ನಾರಿಯನು ಸಹಿತಲೆ । ಪುತ್ರರೈವರ ಸ್ವರ್ಣ ತೊಟ್ಟಿಲೊಳಿಟ್ಟು ಹರುಷದಲಿ ॥ ನಿತ್ಯಗಾನವ ಪಾಡಿ ಜೋಗುಳ । ದೆತ್ತಿ ಸುಸ್ವರದಿಂದ ಲಾಡುತ । ಧಾತ್ರಿಪರ ತೂಗಿದರದೇನೆಂದೊರೆವೆ ಭೂಪಾಲ ॥೧॥

ರಾಗ - ಮಧ್ಯಮಾವತಿ - ಅಷ್ಟತಾಳ

ಜೋಜೋ ವಿಧುವಂಶ ಕೀರ್ತಿ ಕಲಾಪ । ಜೋಜೋ ಕಾಮನ ರೂಪ ಪ್ರತಾಪ ॥ ಜೋಜೋ ಧರ್ಮೋದ್ಧಾರಕ ಗುಣ ಪೂರ್ಣ। ಜೋಜೋ ಮಾಧವ ಭಕ್ತ ಸಂಪನ್ನ ॥ ಜೋಜೋ ॥೧॥ ತೃ ವಿ ತೃವಿ ಮಾರುತ ನಂದನ ಭೀಮ । ತೃವಿ ತೃವಿ ಸಂಗರ ಧೀರ ನಿಸ್ಸೀಮ ॥ ತೃವಿತೃವಿ ಕೌರವ ವಂಶ ಕುಠಾರ । ತೃವಿ ತೃವಿ ನಿರ್ದೋಷಿ ಹರ ಬಲಧಾರ । ಜೋ ಜೋ ॥೨॥ ಜೋ ಜೋ ಪಾರ್ಥಿವ ಕುಲ ವಾರ್ಧಿ ಚಂದ್ರ। ಜೋ ಜೋ ಸದ್ಗುಣ ಸಾಂದ್ರ ಮುಪೇಂದ್ರ ॥ ಜೋ ಜೋ ರತ್ನಾಕರ ಗಂಭೀರ ನಂಗ ॥ ಜೋ ಜೋ ಮುರವೈರಿ ಪದ ಪದ್ಮ ಭೃಂಗ ॥ ಜೋ ಜೋ ॥೩॥ ತೃವಿತೃವಿ ಸುಂದರ ಸತ್ಯಾತ್ಮ ನನುಜ । ತೃವಿತೃವಿದಿನ ಮಣಿ ರಂಜಿತ ತೇಜ ॥ ತೃವಿತೃವಿ ಮೋಹಿತ ಮಹಿಮ ಕಲಾಪ । ತೃವಿ ತೃವಿ ಸಜ್ಜನ ಮಣಿ ಕೀರ್ತಿ ದೀಪ॥ ಜೋ ಜೋ ॥೪॥ ಜೋ ಜೋ ಸುಜ್ಞಾನಿ ಸಹದೇವ ಜೋ ಜೋ । ಜೋ ಜೋ ಸದಾಚಾರ ಸದ್ಧರ್ಮಿ ಜೋ ಜೋ ॥ ಜೋ ಜೋ ವೈಷ್ಣವ ಭಕ್ತ ಮಣಿಹಾರ ಜೋ ಜೋ । ಜೋ ಜೋ ಸಜ್ಜನ ಪಾಲಕ ಜೋ ಜೋ ॥ ಜೋ ಜೋ ॥೫॥

ಭಾಮಿನಿ

ಅರಸ ಕೇಳಿಂತವರು ಪಾಲಿಸು । ತಿರಲು ಚಂದಿರನಂತೆ ತೊಳಗುತ । ಮೆರೆದಿರಲು ನರನಿಂದ

ತಿಂಗಳು ಮೂರರಿಂ ಓರಿಯ ॥ ಮುರ ಮಥನ ಜನಿಸಿದನು ಖೂಳರ । ತರಿದು ಸುಮನಸರುಗಳ ಪಾಲಿಸೆ॥ ಗುರು ಮಹಾ ಶ್ರೀ ವಿಷ್ಣು ಮೂರುತಿಯಡಿಗೆ ಜಯವೆಂಬೆ ॥೧॥

ವಾರ್ಧಿಕ

ಚಿತ್ತವಿಸು ಭೂಪೇಂದ್ರ ಸಕಲ ಸದ್ಗುಣ ಸಾಂದ್ರ । ನಿತ್ತರಿವರಿರುತಿರಲು ಅತ್ತಲಾ ಗಿರಿಯೊಳಗೆ। ದೈತ್ಯಪತಿ ಧೇನುಕಂ ಗುಹೆಯೊಳಗೆ ಪಟ್ಟಣವ ರಚಿಸಿ ಖಳ ತಿಂಥಿಣಿಯಲಿ ॥ ಮತ್ತೆ ಬಲು ಹಮ್ಮಿನಿಂ ಮೆರೆದು ಮುನಿಗಳ ಯಜ್ಞ । ಕತ್ತ ಕಂಟಕರಾಗೆ ಭೀತಿಯಿಂ ನಡುಗಿ ಬಂ।ದತ್ತ ನೃಪ ಪಾಂಡುವಿಗೆ ದೂರಿದರು ಬೇರ್ಬೇರೆ ಖಳನ ಹತಿ ವಿಸ್ತರದಲಿ ॥೧॥

ರಾ - ಸೌರಾಷ್ಟ್ರ - ಏಕತಾಳ

ಚಿತ್ತವಿಸಯ್ಯ ಭೂಪ । ದೈತ್ಯರದಟ ಸುಪ್ರತಾಪ ॥ ಬಿತ್ತರಿಸಲೇನುಯಜ್ಞ । ಸೂತ್ರ ಹರಿದರು ॥೧॥ ಧಾರಿಣೀಶ ಕೇಳು ಮತ್ತ । ಕ್ರೂರ ಖಳರು ಜವಗೆಡಿಸಿ ॥ ಸೂರೆಗೊಂಡರೆಮ್ಮ ಕರ್ಮ ವೀರ ಹರಿಸಯ್ಯ ॥೨॥ ದುರುಳಧೇನುಕಾಖ್ಯನೆಂಬ ದುರುಳ ಭಂಗಗೈದನಿಂದು ॥ ದುರುಳನನ್ನು ತರಿದು ನಮ್ಮ। ಪೊರೆಯೊಯೆಂದರು ॥೩॥

ಭಾಮಿನಿ

ಎಂದ ಮಾತನು ಕೇಳಿ ಕನಲುತ । ಲೆಂದ ನಿರ್ಭೀತಿಯನು ದೋರುವೆ । ನಿಂದು ಪರಿಯಂತರವ ನೋಡೆಂದೆನುತ ಪೊರಮಟ್ಟ ॥ ಅಂದು ಕರಿಪುರದಿಂದ ರಿಪುಭಟ । ವೃಂದವನೆ ತರಿಸುತ್ತ ಕೂಡುತ । ಬಂದು ಖಳಕಾನನವ ತಿರುಗುತ ವೀರ ನಡೆತಂದ ॥೧॥

ಕಂದ

ವೀರಂಬಂದುದನರಿತುಂ । ಚಾರರು ಭೀತಿಲಿ ಧೇನುಕನಿಂಗೆರಗುತ್ತಂ ॥ ದೂರಿದರೀ ಪರಿಯೆಲ್ಲಂ। ಭೋರನೆ ಕೇಳ್ದುರೆ ಗರ್ಜಿಸುತವನಿಂತೆಂದಂ ॥೧॥

ರಾಗ - ಭೈರವಿ - ಏಕತಾಳ

ಏನಚ್ಚರಿಯಿದು ಭಳಿರೆ । ಹುಲು । ಮಾನವರಯ್ತಂದರರೆ ॥ ಪ್ರಾಣವ ತೊರೆಯಲಿಕೆಂದು । ವನ। ಹಾನಿಯ ಗೈದರೇನಿಂದು ॥೧॥ ಇಷ್ಟು ದಿವಸವೀವನಕೆ । ಬರೆ । ದಿಟ್ಟರಂಜುವರು ಕ್ಷಣಕೆ ॥ ಸೃಷ್ಟಿಪ ಬಂದ ಶಭಾಸು ।ಎನ್ನಿಷ್ಟವು ಸೇರ್ಗತಿ ಲೇಸು ॥೨॥ ನರಮಾಂಸವ ಮೆಲದಿಂದು । ಮನ । ಹರುಷಗಳಿಲ್ಲವು ಮುಂದು ॥ ಸರಿಯಾದುದು ಮತವೆನುತ । ಆ । ದುರುಳನು ಬಲು ಗರ್ಜಿಸುತ ॥೩॥ ಕೂಡಿದ ಖಳತಿಂಥಿಣಿಯ । ನಲಿ । ದಾಡುತ ಪೊರೆಯಲು ರಾಯ ॥ ಕೂಡಲೆ ಜಗ ಬೆಚ್ಚಿದುದು । ಕುದಿ। ದಾಡುತ ನಿಧಿಯುಕ್ಕಿದುದು ॥೪॥

ವಾರ್ಧಿಕ

ದುರುಳನೀಪರಿಯತ್ತ ಬಲಗಳಂ ನೆರಹುತ್ತ । ಭರದಿಂದ ವನದತ್ತ ಬರೆ ಭೂಪನಿರಲಿತ್ತ । ಉರಿ ಮಸಗಿ ಖಳರಂದು ನೃಪನ ಮೇಲ್ವಾಯ್ದಂದು ಮುತ್ತಿದರು ಖಾತಿಯಿಂದ ॥ ಎರಡು ಬಲ ಸೆಣಸುತ್ತ ಧರೆಗೊರಗುತಿರಲಿತ್ತ । ಪರಿಕಿಸುತ ಖಳನತ್ತ ಕಿಡಿಗೆದರುತಲೆ ಮತ್ತ । ಹರನಂತೆ ಝೇಂಕರಿಸಿ ಹೂಂಕರಿಸಿ ಗರ್ಜಿಸುತ ಭೂಪಾಲಗಿಂತೆಂದನು ॥೧॥

ರಾಗ - ಮಾರವಿ - ಅಷ್ಟತಾಳ

ಆರೊ ಮನುಜ ಕೇಳು ನಮ್ಮ । ಭೂರಿ ಬಲವ ತರಿದು ಗರ್ವ । ವೇರಿತೇನೊ ನಿಲಿಪೆನೆನಲು । ವೀರನೆಂದನು ।೧॥ ಕ್ರೂರದನುಜ ಕೇಳು ಮತ್ತೆ । ಮಾರಿಗಿತ್ತೆ ದಳವು ತಡೆಯೆ । ಹಾರಿಸುವೆನು ಶಿರಮೆನುತ್ತ । ಘೋರನುಸುರಿದ ॥೨॥ ಎಲವೊ ಮನುಜ ನಮ್ಮ ವನವ । ಚಲಿಸಿ ಹಾನಿ ಗೈದೆಯಲ್ಲೊ। ತಲೆಯ ಬರಹವಡಗಿತೆನುತ । ಘುಳಿಲನೆಚ್ಚನು ॥೩॥ ಮುಳಿದು ಬರ್ಪ ಕೋಲ ತರಿದು । ಖಳನೊಳೆಂದ ನಿನ್ನ ಕಾವ । ಬಲು ಪರಾಕ್ರಮಿಗಳ ಕರೆಸೆಂ । ದಲಸದೆಚ್ಚನು ॥೪॥ ನರರೊಳಧಮ ಕೇಳು ನಿನ್ನ । ತರಿದು ಭೂತಕಿತ್ತು ಮುನ್ನ । ಸರಿವೆನೆನುತ ಗಜರಲೆಂದ । ಧರಣಿ ಪಾಲನು ॥೫॥ ದುರುಳಕೇಳು ಬಾಯ್ಗೆ ಬಂದ। ತೆರದಿ ಗಳಹಬೇಡ ನಿನ್ನ । ಶಿರವ ತರಿಯದಾಗಲೆನುತ । ಭರದೊಳೆಚ್ಚನು ॥೬॥

ರಾಗ - ಭೈರವಿ - ಏಕತಾಳ

ಎಸೆದಸ್ತ್ರಂಗಳತರಿದು । ಆ । ವಸುಧಾಧಿಪ ಬೊಬ್ಬಿರಿದು ॥ ಮಸಗುತ ಖಳನಂಗವನು । ಶರ। ಕುಸುರುತ ಮುತ್ತಲಿಕವನು ॥೧॥ ಫಡಮಾನವ ಕೇಳೆಲವೋ । ಶರ । ಗಡಣದಿ ಜೈಸುವ ಬಲವೋ ॥ ಬೆಡಗನು ತೋರದಿರೆನುತ । ಕಿಡಿ ॥ ಕಿಡಿ ಮಸಗುತ ಝೇಂಪಿಸುತ ॥೨॥ ಮುಂದ್ವರಿಯಲು ಖಳನಾಗ। ಶರ । ವೃಂದವ ತೊಡಿಸುತ ಬೇಗ ॥ ಮಂದಮತಿಯೆ ನಿನ್ನಸುವ । ಬಗಿ ।ದಿಂದೆಳೆವೆನು ಜಯ ವಧುವ ॥೩॥ ಎನಲಾಕ್ಷಣ ಬೊಬ್ಬಿರಿದು । ಬಲು । ಘನತರ ಶಕ್ತಿಯ ತೆಗೆದು ॥ ಜನಪಗೆ ಬಿಡಲದ ತರಿದ । ದನು। ಜನ ಬೆನ್ನಟ್ಟುತ ಪೊಯ್ದ ॥೪॥ ತಿರುಗುತ ಖಳ ಮಾಯಕದಿ । ಧರೆ । ಯರಸನ ಮುತ್ತಲು ಭರದಿ ॥ ಹರಿಯನೆ ನೆನೆಯುತಲೆಸೆದ । ಆ। ದುರುಳನ ಮಾಯವ ತರಿದ ॥೫॥ ಮತ್ತಾ ಭೂಮಿಪ ಭರದಿ । ಮಾ। ರುತ್ತನ ಶರದಿಂ ಮುದದಿ ॥ ಧೂರ್ತನ ಹೂರಿಸಲವನು । ಬಿದ್ದತ್ತೋಡಿದ ದಾನವನು ॥೬॥

ಭಾಮಿನಿ

ಮರುತ ಶರದಿಂದೆಚ್ಚ ಭರಕವ। ತಿರುಗಿ ಖಳ ಕಾಳಿಕೆಯ ಪುರವನು। ಸರಿಯೆ ಭೀತಿಯೊಳತ್ತಲಿತ್ತಲು ಮುನಿಗಳೆಜ್ಞವನು ॥ ಹರುಷದಲಿ ಗೈಸುತ್ತ ತಿರುಗಲು । ಪರಸೆ ಭೂಪಗೆ ಬಂದು ಸತಿಯರಿ। ಗರುಹಿ ಶ್ರೀ ಗುರು ವಿಷ್ಣುಮೂರ್ತಿಯ ನೆನಸುತಿರುತಿರ್ದ ॥೧॥

ರಾಗ - ಭೈರವಿ -ಝಂಪೆ ತಾಳ

ಈ ಚರಿತವಿಂದು ಸಚ । ರಾಚರಿತ ಭರಿತ ದಯ । ವೀಚಿಯಿಂ ಕನ್ನಡದಿ । ಸೂಚಿಸಿದೆ ನಯ್ಯ ॥೧॥ ತರಳ ರಚಿಸಿರ್ದನಿದು । ತರವೆ ನೂತನವೆನುತ । ಬರಿದೀರ್ಷೆಗಳ ಬಿಟ್ಟು । ಮೆರೆಸುವುದು ಧರೆಗೆ ॥೨॥ ಕಂಡು ತೋಷದಲಿ ಭೂ । ಮಂಡಲದಿ ಪೆರ್ಚಿಸಲು । ಪುಂಡರೀಕಾಕ್ಷ ಮುಂ । ಕೊಂಡು ಪಾಲಿಪನು ॥೩॥

ಭಾಮಿನಿ

ಲಕ್ಷ್ಮಿರಮಣನೆ ದೇವ ಸುಮನಸ । ಪಕ್ಷನಘ ಸಂಹಾರ ದಾನವ । ಶಿಕ್ಷ ಮಾಯಾ ಮಹಿಮ ಶ್ರೀ ಗುರು ವಿಷ್ಣು ಮೂರುತಿಯೆ ॥ ಪಕ್ಷಿವಾಹನ ಸರ್ವ ಭಾಗ್ಯಗ ।ಳಕ್ಷಯದಿ ಮೆರೆವಂತೆ ಪಾಲಿಸಿ । ರಕ್ಷಿಸುಗೆ ನಿತ್ಯದಲಿ ನಿತ್ಯಾನಂದ ಮಂಗಲವ ॥೧॥

ರಾಗ - ಮೋಹನ - ಏಕತಾಳ

ವಾರಿಜದಳಂಬಕಾಯ ಜಯ ಮಂಗಲಂ । ಸರ್ವ। ಸೂರ್ಯಕೋಟಿ ತೇಜಿತಾಯ ಶುಭ ಮಂಗಲಂ ॥ಪ॥ ನಂದಗೋಪಬಾಲಕಾಯ । ಚಂದ್ರಧರ ಪ್ರೀಯಕಾಯ । ಮಂದರಾ ಚಲಧಾರಕಾಯ ಶುಭ ಮಂಗಲಂ ॥ ಎಂದು ಸಿಂಧು ವಾಸಿತಾಯ । ವೃಂದ ದೈತ್ಯನಾಶಕಾಯ । ಸುಂದರಾಂಗ ಶೋಭಿತಾಯ ಜಯ ಮಂಗಲಂ ॥೧॥ ಮತ್ಸ್ಯ ಕೂರ್ಮರೂಪಿತಾಯ । ಮತ್ತ ಸೂಕರಾದಿತಾಯ । ಸ್ತೌತ್ಯಪಾಲ ನರಸಿಂಹಾಯ ಶುಭ ಮಂಗಲಂ ॥ ನಿತ್ಯನಿಗಮೋದ್ಧಾರಿತಾಯ । ಸತ್ಯವಿಪ್ರವೇಶಿತಾಯ । ನುತ್ತಮತ್ರಿವಿಕ್ರಮಾಯ ಜಯ ಮಂಗಲಂ ॥೨॥ ರಾಮಕೃಷ್ಣರೂಪಿತಾಯ । ಕಾಮಕೋಟಿ ಸುಂದರಾಯ। ಸೋಮಸೂರ್ಯೋದ್ಧಾರಿತಾಯ ಶುಭ ಮಂಗಲಂ ॥ ಹೇಮ ಬೌದ್ಧ ಕಲ್ಕಿತಾಯ । ಭೀಮ ಬಲನೆ ಯದುರಾಯ । ಪ್ರೇಮವಿತ್ತು ಸಲಹುಜೀಯ ಜಯ ಮಂಗಲಂ ॥೩॥ ಚನ್ನಕೃಷ್ಣ ಕೇಶವಾಯ । ಕುಂತಿ ಕುಜನ ನಾಶಿತಾಯ । ಪನ್ನಗಾರಿವರೂಥಾಯ ಶುಭಮಂಗಲಂ ॥ ರತ್ನ ತುಳಸಿ ಮಾಲಿತಾಯ । ಸನ್ನುತಜನೋದ್ಧಾರಿತಾಯ । ತನ್ನ ಕಾಯೊ ನಿತ್ಯಜೀಯ ಜಯ ಮಂಗಲಂ ॥೪॥ ಸೃಷ್ಟಿಸ್ಥಿತಿ ಲಯದಾಯ। ಶ್ರೇಷ್ಟ ಸುಮನಪಾಲಿತಾಯ । ಇಷ್ಟವೀಯೊ ಪ್ರೀಯ ಶ್ರೀಯ ಶುಭಮಂಗಲಂ ॥ ವಿಷ್ಣು ಮೂರ್ತಿ ಗುರು ರಾಯ । ಶಿಷ್ಟರಘುವ ಖಂಡನಾಯ । ವೈಷ್ಣವರಧಿನಾಥರಾಯ ಜಯ ಮಂಗಲಂ ॥೫॥

ಜುಮ್ಲಾ ಪದ ಸಂಖ್ಯೆ ೪೪೪ ಮಾತ್ರ

- ಮಂಗಲಂ-

||ಶ್ರೀ ದುರ್ಗಾಪರಮೇಶ್ವರೀ ಪ್ರಸನ್ನಾ||

ವಿದ್ಯುನ್ಮತೀ ಕಲ್ಯಾಣ

ವಾರ್ಧಿಕ

ಶ್ರೀ ಮದಚ್ಯುತ ಜಗನ್ಮಯ ದಯಾ ಶರನಿ ಗುಣ। ಧಾಮ ನಿತ್ಯಾನಂದನೆಗ ಮಾರ್ಚಿತ ಚರಣ। ತಾಮರಸಭವ ದಿವೌಕಸ ಭೂಮಿಸುರನಮಿತ ಸಚ್ಚರಿತ ನಾರಾಯಣ । ಸಾಮಜಾಧಿಪವರದ ಕೇಶವ ಮುಕುಂದ ಹರಿ । ಶ್ರೀ ಮನೋಹರ ಜನಾರ್ದನ ಕೃಷ್ಣಗೋವಿಂದ । ಕಾಮಪಿತ ಕ್ಷೀರಾಬ್ಧಿ ಶಯನ ನೀ ಮನ್ಮನಾಭೀಷ್ಟಿತವನಿತ್ತು ಸಲಹೈ ||೧||

ಶಾರ್ದೂಲ ವಿಕ್ರೀಡಿತ

ಶುಂಭಾರಾತಿ ಸಮಗ್ರ ಧ್ವಂಸೆ ತನಯಂ ಶುಂಡಾಲ ಮಾಭಾನನಂ । ಅಂಬೋಜಾನನ ಸೇವಿತಾಂಘ್ರಿಯುಗಳಂ ರಂಭಂ ಗಣಾಧೀಶ್ವರಂ ॥ ಜಂಬೋದ್ವಾಸನ ದೇವತಾಳಿ ವಿನುತಂ ವಿಘಾಬ್ಧಿ ಕುಂಭೋದ್ಭವಂ । ಶಂಭೋರ್ಜಾತ ದಯಾಘನಂ ಗುಣನಿಧಿಂ ಲಂಬೋದರಂ ಪಾಹಿಮಾಂ ||೧||

ರಾಗ ನಾಟಿ ಝಂಪೆತಾಳ

ಜಯತು ಶ್ರೀ ಮಹದೇವ । ಜಯತು ನೀಲಗ್ರೀವ । ಜಯ ಸುಜನ ಸಂಜೀವ । ಜಯ ವಾಮದೇವ । ಜಯತು ಜಗದಧ್ಯಕ್ಷ । ಜಯತು ವಿಘ್ನವಿಪಕ್ಷ । ಜಯತು ಶಿವ ನಿಟಿಲಾಕ್ಷ । ಜಯ ವಿರೂಪಾಕ್ಷ ||೧|| ಅಂಧಕಾಖ್ಯ ವಿಭಾಡ । ಮಂದಾಕಿನೀ ಚೂಡ । ಅಂದ ವೃಷಭಾರೂಢ । ಚಂದ್ರಧರ ಪ್ರೌಢ ॥ ಇಂದೀವರಾದಿಸುರ । ವೃಂದವರ ಪಾದಾರ । ವಿಂದ ವಾಸುಕಿಹಾರ । ಸ್ಕಂಧ ಪಿತಧೀರ ||೨|| ರಾಜ ಶೇಖರ ಭೂತ । ರಾಜಗಿರಿಜಾ ಪ್ರೀತ । ರಾಜೀವಶರಘಾತ । ರಾಜತತಿ ವಿನುತ ರಾಜ ರವಿವರ್ಮನರ। ಸಿಂಹ ವಂದಿತ ಪದಾಂ ॥ ಭೋಜ ವಿಠಲ ಪುರೇಶ । ಪಂಚಲಿಂಗೇಶ ||೩||

ಕಂದ

ಸ್ವರ್ಗಾಧೀಶ ದಿವೌಕನ । ವರ್ಗಾರ್ಚಿತೆ ಶ್ರೀ ಮದ್ವಿಟ್ಠಲಪುರ ನಿಲಯೇ । ಭರ್ಗ ಮನೋಹರಿ ಶಂಕರಿ । ದುರ್ಗಾಪರಮೇಶ್ವರಿ ಪಾಲಿಸೆನಗೆ ಮತಿಯಂ ॥೧॥

ವಾರ್ಧಿಕ

ಅಂಜನಾ ಜಠರಾಬ್ಧಿ ಚಂದ್ರನ ರಿಪು ವನಧ । ನಂಜಯ ವನೌಕಸಕುಲೇಂದ್ರನಂ ಶ್ರೀ ವಾಯು। ಸಂಜಾತ ಚಾರುಗುಣ ಸಾಂದ್ರನಂ ದಿವ್ಯಕುಲಿಶಾಂಗನಂ ಭವಭಂಗನಂ ॥ ಮಂಜುಳ ಸುಭಾಸ ಸಂಗರ ಸುಪ್ರವೀಣನಂ । ಕುಂಜರೋದ್ಧಾರಿ ಸತ್ಕಾರಿಯ ಧುರೀಣನಂ । ಕಂಜಭವ ಸುರವಿನುತ ಶ್ರೀ ಮುಖ್ಯ ಪ್ರಾಣನಂ ಸ್ಮರಿಸಿ ಮತಿಯಂ ಪಡೆವೆನು ॥೧॥

ಭಾಮಿನಿ

ಚತುರೆ ವೀಣಾಪಾಣಿ ಸುರನರ । ತತಿ ಪುರಸ್ಕೃತೆ ಶಾರದಾಂಬಿಕೆ । ಪ್ರಥುಳ ಮಹಿಮೆ ಸರೋಜ ಸಂಭವ ರಾಣಿ ಫಣಿವೇಣಿ ॥ ಹಿತದಿ ವಿದ್ಯುನ್ಮತಿ ವಿವಾಹದ । ಕಥನವನು ವಿರಚಿ ಪಡೆ ಎನಗುರೇ । ಮತಿಯ ಪಾಲಿಸೆನುತ್ತ ನಿನ್ನಡಿಯುಗಕೆ ವಂದಿಸುವೆನು ॥೧॥

ಕಂದ

ಕಾಮಿತ ಫಲವನ್ನೀಯುವ । ಭೀಮ ಷಡಾನನ ವರಕಾರ್ತಿಕೇಯ ಸುಗುಣಂ ॥ ಶ್ರೀ ಮಹಿಮಾನ್ವಿತ ಸ್ಕಂದ । ಸ್ವಾಮಿ ಶ್ರೀ ಸುಬ್ರಮಣ್ಯ ಪಾಲಿಸು ಮತಿಯಂ ॥೧॥.

ದ್ವಿಪದಿ

ತಾತ ಮಾತೆಯರಡಿಯ ಸ್ಮರಣೆಯಂ ನೆನಸಿ । ಧಾತಗೊಂದಿಸುತ ಶ್ರೀ ಲಕ್ಷ್ಮಿಪತಿಗೆರಗಿ ॥೧॥ ಗುರು ಹಿರಿಯರನ್ನಧಿಕ ಭಕ್ತಿಯಲಿ ಸ್ತುತಿಸಿ । ಪರಮ ಕವಿ ಸಂಕುಲವ ವಿನಯದಿಂ ಸ್ಮರಿಸಿ ॥೨॥ ಶ್ರೀ ಮದದ್ಭುತ ನಾಮ ರಾಮಾಯಣದಲಿ । ಭೀಮಬಲ ಚಿತ್ರಕೇತನು ಸಾಹಸದಲಿ ॥೩॥ ತರುಣಿ ವಿದ್ಯುನ್ಮತಿಯ ವರಿಸಿದಂದವನು । ಅರಿತಂತೆ ಯಕ್ಷಗಾನದಲಿ ಬಣ್ಣಿಪೆನು ॥೪॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಆ ಮಹಾ ರಜತಾಚಲದಿ ಶ್ರೀ । ವಾಮದೇವನು ಗಿರಿಜೆಗದ್ಭುತ ನಾಮ ರಾಮಾಯಣವ ಪೇಳ್ತಿರೇ ಪ್ರೇಮದಿಂದ ॥೧॥ ಪುಂಡರೀಕಾಂಬಕಿಯು ಸಂತಸ । ಗೊಂಡು ರಮಣನ ಚಾರು ಪದಕರ । ದಂಡಕೆರಗುತ ವಿನಯದಲಿ ಬೆಸ । ಗೊಂಡಳಾಗ ॥೨॥ ಲಾಲಿಸರಸನೆ ಚಿತ್ರಕೇತನು । ಬಾಲೆ ವಿದ್ಯುನ್ಮತಿಯ

ವರಿಸಿದ । ಮೇಲುಕಥನವನರು ಹೆನಲು ಪೊ । ಗೋಲ ವೈರಿ ॥೩॥ ಕುಸುಮ ಮುಖಿಯನು ಮುದದೊಳಾಲಿಂ। ಗಿಸುತ ತತ್ಕಥನಾಮೃತವನೆರೆ । ನಸುನಗುತ ಬಿತ್ತರಿಸೆ ಪ್ರಾರಂ । ಭಿಸಿದನಾಗ ॥೪॥

ಭಾಮಿನಿ

ಶಶಿವದನೆ ಕೇಳ್ ರಾಮನೇಕಾ । ದಶದ ಸಾವಿರ ವರುಷ ಭೂಮಿಯ । ಕುಶಲದಲಿ ಪರಿ ಪಾಲಿಸುತ ಬಳಿಕವನಿ ಸುತೆ ಸಹಿತ ॥ ಕುಶಗೆ ರಾಜ್ಯವನಿತ್ತು ಪಯಣವ । ನೆಸಗಿದನು ವೈಕುಂಠ ನಗರಕೆ । ವಸುಮತಿಯ ಮತ್ತಾಳುತಿರ್ದರು ಜನಕಜಾತ್ಮಜರು ॥೧॥

ವಾರ್ಧಿಕ

ಸುತ್ರಾಮ ಲೋಕದಿಂ ಮೇಲೆ ನಿಪ ಕೋಸಲ ಧ । ರಿತ್ರಿಯಂ ಕುಶಧರಾಧೀಶ್ವರಂ ತನ್ನು ಭಯ। ಮಿತ್ರನಂತೆಸೆವ ಸುತರ ತಿಥಿ ಶಶಕರ ಮೇಣು ಸಹಜ ಲವ ಮತ್ತಾತನ ಪುತ್ರರಹ ಚಿತ್ರ

ಕೇತಂ ಚಿತ್ರವಾಹನರ । ಚಿತ್ರದಿಂ ವೈಭವದಿ ಪೊರೆವುತಿರಲೊಂದು ದಿನ । ಧಾತ್ರಿಪತಿ ರತುನ ಸಿಂಹಾಸನವನೇರ್ದು ಸಹಭವನನಪ್ಪುತಲೆಂದನು ॥೧॥

ರಾಗ ಭೈರವಿ ಝಂಪೆತಾಳ

ಸಹಜಾತ ಲವಕೇಳು । ಮಹಿಳೆ ಸಹಿತೆಮ್ಮೈಯ್ಯ । ಮಹಿಯನುಳಿದ್ವೈಕುಂಠ । ಮಹಿಗೆ ಮೈಯಾಂತ॥೧॥ ಅಹಹ ಬೆಡಗೇನೆಂಬೆ । ಸಹಸದಿಂದೀ ಧರೆಯ । ಮಹದೇವನೊಲವಿನಲಿ । ವಹಿಲದಿಂದಾಳಿ ॥೨॥ ಬರುವ ವೈರಿಪುವರ್ಗ । ಚರಣಕಾನತರಾಗಿ । ಶಿರವ ಕಾಯೆಂಬರಿದು । ಸರಿಯೆ ಸಹಜಾತ ॥೩॥ ತಪ್ಪಗ್ರಜನ ನುಡಿ । ಒಪ್ಪುವದು ಇದಿರಾಗಿ । ಬಪ್ಪರಿಪುಗಳನು ನೆಲ । ಕಪ್ಪಳಿಸದಿರೆನು ॥೪॥ ಎಂಬನಿತರೊಳು ಗುಣ ಕ । ದಂಬ ವಿಶ್ವಾಮಿತ್ರ । ಕುಂಭಿನಿಪನೆಡೆಗೈದ । ಸಂಭ್ರಮದೊಳಾಗ ॥೫॥

ರಾಗ ಸಾಂಗತ್ಯ ರೂಪಕತಾಳ

ಋಷಿ ಕುಲೋತ್ತುಂಗನ ಕುಶಭೂಪ ಕಂಡು ಸಂ । ತಸದಿಂದ ಚರಣಕೊಂದಿಸುತ ॥ ಎಸೆವ ವಿಷ್ಟರವನೇರಿಸುತ ನಮ್ರತೆಯಿಂದ । ಬೆಸಗೊಂಡ ಮಿಗೆ ನಸುನಗುತ ॥೧॥ ಯಮಿಯೆ ಕೇಳಪ ರೂಪ ಗಮನವೇನಿದು ಪಾದ । ಕಮಲದರ್ಶನದಿಂದ ನಿಜದಿ ॥ ಅಮಿತ ಸಂತಸವಾಯ್ತು ಮಮತೆಯಿಂದುಸುರೀಗ। ವಿಮಲ ನೀನಯ್ತಂದ ಹದನ ॥೨॥ ಎನಲೆಂದ ಕುಶಿಕ ಹೇ ಜನಪಲಾಲಿಸು ನಿನ್ನ । ತನಯರ ಸಹಿತ ಗೋಮಿನಿಯ । ಅನುರಾಗದಿಂದಾಳ್ವುದನು ನೋಡಲೈತಂದೆ । ಘನ ಕ್ಷೇಮ ಪೊಂದಿ ನೀನಿಹೆಯ ॥೩॥ ನಿನ್ನಂಥ ಭಾಗ್ಯಸಂಪನ್ನರೂರ್ವಿಯೊಳು ಕೇಳಿನ್ನಾರಿರ್ಪರು ಗುಣನಿಧಿಯೆ ॥ ಪನ್ನಂಗಾಭರಣ ತಾನುನ್ನತ ವಿಭವದಿ । ನಿನ್ನ ಪಾಲಿಸಲೆಂದ ।೪।

ರಾಗ ಕಾಂಬೋಧಿ   ಝಂಪೆತಾಳ

ಪ್ರತಿಯೆ ಚಿತ್ತ ವಿಸುಮಾ ಪತಿಯ ಕರುಣದಲಿ ನಾ । ಸುತರ ಸಹಿತಧಿಕ ವೈಭವದಿ । ಕ್ಷಿತಿಯ ನಾಳಿಹೆನು ಮತಿಯುತನೆ ಕೇಳೊಂದು ವಿಧ । ವ್ಯಥೆಯು ಎನಗಿರ್ಪುದದನೊರೆವೆ ॥೧॥ ಸುತರು ತನಗೀರ್ವರ್ರೈಯತಿಥಿ ಶಶಕರ ಸುಗುಣ । ಯುತರನುಜ ಲವಗೆ ಬಾಲಕರು ॥ ಮತಿವಂತ ಚಿತ್ರವಾಹನ ಚಿತ್ರಕೇತರ್ರೈ । ಶ್ರುತಿಗೊಳಿಪೆ ನಿಮಗೆ ಹದನವನು ॥೨॥ ಪರಿಮಳವಿರಹಿತವಾಗಿರುವ ಪುಷ್ಪಗಳಂತೆ । ಪರಮ ವಿದ್ಯಾಹೀನರಾದ ॥ ತರುಣ ಕಿಮೆಗಿಹರವರ ಪೊರೆಯಬೇಕೆ ನುತ ಪದ । ಕೆರಗಲ್ಕೆ ನುಡಿದ ಕೌಶಿಕನು ॥೩॥

ರಾಗ ಕಾಂಬೋದಿ   ಝಂಪೆತಾಳ

ಪ್ರತಿಯೆ ಚಿತ್ತವಿಸುಮಾ ಪತಿಯ ಕರುಣದಲಿ ನಾ । ಸುತರ ಸಹಿತಧಿಕ ವೈಭವದಿ ॥ ಕ್ಷಿತಿಯನಾಳಿಹೆನು ಮತಿಯುತನೆ ಕೇಳೊಂದು ವಿಧ । ವ್ಯಥೆಯು ಎನಗಿರ್ಪುದದ ನೊರೆವೆ ॥೧॥ ಸುತರು ತನಗೀರ್ವರ್ರೈಯುತಿಥಿ ಶಶಕರ ಸುಗುಣ । ಯುತರನುಜ ಲವಣೆ ಬಾಲಕರು ॥ ಮತಿವಂತ ಚಿತ್ರವಾಹನ ಚಿತ್ರಕೇತರ್ರೈ । ಶ್ರುತಿಗೊಳಿಪೆ ನಿಮಗೆ ಹದನವನು ॥೨॥ ಪರಿಮಳವಿರಹಿತವಾಗಿರುವ ಪುಷ್ಪಗಳಂತೆ । ಪರಮ ವಿದ್ಯಾಹೀನರಾದ॥ ತರುಣರೆಮಗಿಹರವರ ಪೊರೆಯ ಬೇಕೆನುತ ಪದ । ಕೆರಗಲ್ಕೆ ನುಡಿದ ಕೌಶಿಕನು ॥೩॥

ರಾಗ ಸುರಟಿ   ಏಕತಾಳ

ಬೆದರಲೇಕೆ ದೊರೆಯೆ । ಹೇ ದೊರೆಯೇ ಬೆದರಲೇಕೆ ದೊರೆಯೆ ॥ಪ॥ ಬೆದರಲೇಕೆ ನೀ । ನಿದಕೋಸುಗ ಬಿಡು । ಹೃದಯ ವ್ಯಸನವ । ಚದುರಧರಾಧಿಪ ॥ ಬೆದರಲೇಕೆ ॥೧॥ ಕರೆಸೈ ನಿಮ್ಮಯ । ತರಳರ ನೀಕ್ಷಣ । ಕರೆದೊಯ್ವೆನುನಾ । ನಿರದೆನ್ನೆಡೆಗೆ ಬೆದರಲೇಕೆ ॥೨॥ ಸುಖನಿಧಿ ನಿನ್ನಯ । ಸುಕುಮಾರಕರನು । ಸಕಲವಿದ್ಯಸಂ । ಪನ್ನರೆನಿಸುವೆನು ಬೆದರಲೇಕೆ ॥೩॥

ಕಂದ

ಮುನಿಪನ ನುಡಿಯಂ ಕೇಳುತ । ಜನಪತಿ ಕುಶತಾ ಮಹಾಂತ ತೋಷದೊಳಾಗಂ ॥ ತನಯರ ಚಾರರ ಮುಖದಿಂ । ದನುನಯದಲಿ ಕರಸುತೆಂದ ಋತ್ವಿಜನಿದಿರೊಳ್ ॥೧॥

ರಾಗ ಕೇತಾರಗೌಳ   ಝಂಪೆ ತಾಳ

ತನಯ ಬಾಚಿತ್ರಕೇತ । ಚಿತ್ರವಾ । ಹನ ರತಿಥಿ ಶಶಕರಿತ್ತ ಮುನಿಪ ಕೌಶಿಕ ನಿಮ್ಮನು ತನ್ನೆಡೆಗೆ ಯನುರಾಗದಿಂದೊಯ್ವನು ॥೧॥ ಚಕಿತ ಮನರಾಗದೀಗ । ತೆರಳುತಲಿ । ಸುಖದಿ ಬಂದ ಪುದು ಬೇಗ ॥೨॥ ಎನುತ ತನ್ನಾತ್ಮಜರನು । ಕೌಶಿಕಗೆ । ವಿನಯದಿಂದೊಪ್ಪಿಸಿದನು ॥ ಮುನಿಪ ಮತ್ತವರ ತನ್ನ ಆಶ್ರಮಕೆ।

ಸನುಮತದೊಳೊಯ್ದು ಸುಗುಣ ॥೩॥

ಭಾಮಿನಿ

ಕೋಕನದ ಮುಖಿ ಕೇಳು ಕೌಶಿಕ । ನಾಕುಮಾರಕರೆಲ್ಲರಿಗೆಯ । ನೇಕ ವಿದ್ಯವನಾಶ್ರಮದಿ ಸಂತಸದಿ ಕಲಿಸುತಿರೆ ॥ ಪಾಕಶಾಸನನಿತ್ತ ದಿವಿಜಾ । ನೀಕ ದೊಡನುಲ್ಲಾಸದಿಂದಲಿ । ನಾಕ ಲೋಕದೊಳಿತ್ತನೋಡ್ಡೋಲಗವ ವೈಭವದಿ ॥೧॥

ರಾಗ ಭೈರವಿ ಝಂಪೆತಾಳ

ಸುರರು ಕಿನ್ನರರು ಕಿಂ । ಪುರುಷಾದ್ಯರೊಡನೆ ತತ್ । ಪುರುಹೂತ ಸಭೆಯೊಳಗೆ । ಮೆರೆದಿರ್ದ ಮುಸದಿ ॥೧॥ರಮಣಿ ಮೇನಕೆ ತಿಲೋತ್ತಮೆ ರಂಭೆಯೂರ್ವಶಿಯ । ರಮಿತತೋಷದಿ ಶಚೀ । ರಮಣನಿದಿರಿನಲಿ ॥೨॥ ಪರಿಪರಿಯ ಗಾಯನದಿ ।ಹರುಷದಿಂ ಪಾಡುತಲಿ । ಸುರಪತಿಯ ಪೊಗಳಿದರು । ತರುಣಿಮಣಿ ಕೇಳು ॥೩॥

ರಾಗ ಕಮಾಚು ಏಕತಾಳ

ಪಾಲಯ ಬಲಪು ನಾಕೇಶ । ಸುವಿ । ಶಾಲ ಮಹಿಮ ಜಯ ॥ ಪಾಲಯ ॥ಪ॥ ಪಾಲಯ ವರಪೂಗೋಲ ಸಮಾಮರ । ಜಾಲವಿನುತ ಕೀಲಾಲಜ ಲೋಚನ ॥ ಪಾಲಯ ॥ ಅ. ಪ. ಕಾಮಿನಿ ಶುಚಿಮುಖಿ ತಾಮರ ಸೌಳಿ ದಿನೇಂದ್ರ । ಇಂದ್ರ । ಸೋಮಾನನ ಸುತ್ರಾಮ ವಿಮಲ ಗುಣ ಸಾಂದ್ರ ॥ ಕೋಮಲವಪು ಗಿರಿ ಸ್ತೋಮಹರಣ ನಿಸ್ಸೀಮ ಪುರಂದರ । ಕಾಮಿತದಾಯಕ ॥ ಪಾಲಾಯ ॥೧॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಸುರಸತಿಯರೀ ತೆರದಿ ನಟಿಸುತ । ವರವಸಂತಾಗಮವ ವರ್ಣಿಸೆ । ಸುರಪನತ್ಯಾನಂದನಾಗುತ। ಲೊರೆದ ಬಳಿಕ ॥೧॥ ಚಂದದಲಿ ಸುರ ಸಮುದಯವು ವರ । ನಂದನದ ವನಕಾಗಿ ಸತಿಯರ । ವೃಂದ ಸಹಿತಲಿ ಪೊರಮಡುವುದಾ । ನಂದದಿಂದ ॥೨॥ ಸುರಪನಾಜ್ಞೆಯ ಕೇಳುತ್ರಿದಶರು । ತರುಣಿಯರ ಪರಿವಾರ ಸಹಿತಲಿ । ಪೊರಟರ್ನೆನಂದನವನಕೆ ಮಿಗೆ ತ್ವರಿತದಿಂದ ॥೩॥

ವಾರ್ಧಿಕ

ಇಂದು ಮುಖಿ ಚಿತ್ತವಿಸು ಪುರುಹೊತ ನೊಡನ ಮರ । ವೃಂದ ದುಂಭಿಬಿ ಮೊಳಗಿಸುತ ನಂದನವನಕೆ ಬಂದು ಸರಸಿಯೊಳು ತರುಣಿಯರೊಡನೆ ಜಲಕೇಳಿಯಂ ಗೈದು ಬಳಿಕ ಮುದದಿ । ಸುಂದರ ಸರೋವರದ ಪತ್ತರದಿ ಭೋಜನವ । ಚಂದದಿಂದೆಸಗಿ ತಾಂಬೂಲ ವಂ ಸವಿದು ಮುದ । ದಿಂದ ಸತಿಯರ ಸಹಿತ ಪರಿ ಪರಿಯ ಫಲ ಫಣ್ಣುಗಳನು ಕ್ರೊವುತಲಿರ್ದರು ॥೧॥

ಭಾಮಿನಿ

ನೀರೆ ನೀ ಚಿತ್ತವಿಸು ಸಂಗರ । ಧೀರ ಖಚರ ಸುಲೋಚನನ ಸುಕು । ಮಾರಿ ಸ್ಮರನರ್ಧಾಂಗಿಯಂ ತಾಪೋಲ್ವ ಸುಂದರಿಯು॥ ನಾರಿಮಣಿ ವಿದ್ಯುನ್ಮತಿಯು ಸತಿ । ವಾರದೊಡನೆ ಸರೋವರದ ಬಳಿ । ಚಾರು ಮುಖಿ ಸಂಚರಿಸುವುದನು ಕಂಡನು ಸುರೇಂದ್ರಸುತ ॥೧॥

ಕಂದ

ಸುರಪಕುಮಾರ ಜಯಂತಂ । ವರ ಷೋಡಭರಿತ ಯವ್ವನದಿ ಮೆರೆಯುತ್ತಿಹ ॥ ತರುಣಿಯ ಮಹ ಸೊಬಗಂ ಕಂ । ಡರೆರೆ ಸುದತಿಯಿವಳ್ಯಾರೆಂದಚ್ಚರಿಗೊಂಡ ॥೧॥

ರಾಗ ಯಮುನಾಕಲ್ಯಾಣಿ ಅಷ್ಟತಾಳ

ಯಾರಿವಳಮಮ ಸುಂದರಿ ನಾರಿ । ಗುಣ । ಸಾರೆ ಸಚ್ಚರಿತ ಮಾರಮಯೂರಿ ॥ಪ॥ ವದನವೂ ಪೂರ್ಣ ಚಂದಿರನಂತೆ । ಮತ್ತಾ ರದನಂಗಳ ಮಲ ಬಜ್ಜರದಂತೆ । ಇದುವರೆ ಗಿಂದಾ ನಾರಿಯರನ್ನು । ನಾ ಕಂ । ಡುದುದಿಲ್ಲ ನೆರೆ ತೋಷವಾಯ್ತಿನ್ನು ಯಾರಿವಳ ಮಮ ॥೧॥ ನೇತ್ರಂಗಳೆರಡು ಸಾರಸದಂತೆ। ಈಕೆ ಗಾತ್ರೆಯಂಗಜನ ಕಾದಲೆಯಂತೆ ಧಾತ್ರಿಯೆಳೀ ನೀರೆಗೆಣೆಗಾಣೇ ಸುಪ । ವಿತ್ರೆಯಾರಿವಳು ಕೋಕಿಲಗಾನೆ , ಯಾರಿವಳು ॥೨॥ಮದಗಜಗಮನೆ ಕಾಮಿನಿಯನ್ನಾ । ಪೆತ್ತ । ಚದುರರ್ಶಾರರಿಯೆ ತೋವದೊಳಿನ್ನಾ । ಒದಗಲಿ ಬೆಸಗೊಂಬೆನೆನುತಂದು ।ಚಂದ್ರ । ವದನೆಯ ಬಳಿಗೆ ಸಾರಿದನಂದ ॥ ಯಾರಿವಳಮಮ ॥೩॥

ರಾಗ ಕಲ್ಯಾಣಿ ಏಕತಾಳ

ಕನ್ನೆ ವಿಮಲೆ ಮೋಹನ್ನೆಯೆ ನೀನಾ । ರುನ್ನತ ರೂಪವತಿ । ನನ್ನಿಯಿಂದ ಸಂಪನ್ನೆ ಭಿತಿ ಗೊಳ। ದೆನ್ನೊಳೀಗ ಪೇಳೇ ವಾರ್ತೆಗಳ । ಪ। ಗೋಮಿನಿ । ಮೂರೊಳು ನಿನಗಾರೆಣೆ । ಕಾಮಿನಿ । ಮದಕಂಠೀರವ ಸಮಗಾಮಿನಿ । ಮೃದುತರ ಸಂಭಾಷಿಣಿ ಭಾಮಿನಿ । ಕಲ್ಯಾಣಿ ॥ ಕೋಮಲಾಂಗಿ ನಿನ್ನ ಜನಕನ । ನಾಮಧೇಯವನ್ನು ಪ್ರೇಮದಿಂದಲೊರೆ । ಕಾಮನಾನೆವರ । ಸೋಮ ತೇಜ ಮುಖಿ । ತಾಮರಸಾಕ್ಷಿಯೆ। ಕನ್ನೆ ॥೧॥ ಕ್ರೂರನು ನಿಷ್ಕರುಣಿ ಕಠಿಣ ಮನ । ಮಾರನು । ಇನಿತೆನ್ನೊಳು ಕನಿಕರ । ಬೀರನು । ತನು । ತಾಪವ ಸೈರಿಸಲಾರೆನು । ತಡವೇಮ ॥ ಚಾರು ಭೃಂಗಚಿಕುರೆ । ಸತಿ ನಿ ನ್ನಾರು ಎನ್ನೊಳುಸುರೆ ॥ ನೀರೆ ಧೀರೆ ಶೃಂ। ಗಾರಿ ಶೀಘ್ರಮಮ । ಕೋರಿಕೆಯನು ನೆರ । ವೇರಿಸುಲಲಿತೆ ॥ ಕನ್ನೆ ॥೨॥

ರಾಗ ಸಾಂಗತ್ಯ ರೂಪಕತಾಳ

ಗಂಧರ್ವಾಧಿಪ ಗುಣ ಸಿಂಧು ಸುಲೋಚನ। ಸಿಂಧು ಸುಲೋಚನ। ನಂದನೆ ನಾ ವಿದ್ಯುನ್ಮತಿಯು॥

ಸುಂದರಾಂಗನೆ ನೀನಾರೆಂದು ಪೇಳುವದೆನ । ಲೆಂದನು ಸುರಪಾತ್ಮಭವನು ॥೧॥ ಸುರನರ ಗಂಧರ್ವರರಸನಾಗಿಹ ಧೀರ ಪುರುಹೊತನಣುಗುನಾನದೆನು ॥ ಕರೆ ವರೆನ್ನುವನು ಜಯಂತನೆಂದೆನುತೆನ್ನ॥ ವರಿಸಬೇಕೆನಲೆಂದಳ ಬಲೆ ॥೨॥ ಸುರರಿಂಗೆ ಖಚರರ್ಗೆ ಪರಿಣಯವಪ್ಪುದೇ ಅರಿಯೆನಾ ಹದನವ ನಿಜದಿ॥ ಧುರಧೀರ ಪಿತನ ನೀನಿರದೆ ವಿಚಾರಿಸಿ । ವರಿಸೆನ್ನನೆಲೆಂದನಾಗ ॥೩॥ಪದುಮಾಕ್ಷಿ ಕೇಳ್ ನಾಳಿನುದಯದಿ ನಿನ್ನಯ । ಸದನ ಕೈತಹೆನೆನಲಂದು ಮದ ಗಜೋಪಮಯಾನೆ ಸುಹತಿ ವಿದ್ಯುನ್ಮತಿ । ಮುದದಿ ತನ್ನೆಡೆಗೆ ಸಾರಿದಳು ॥೪॥

ವಾರ್ಧಿಕ

ಕಾಮಿನೀ ಮಣಿಯೆ ಕೇಳೊರವೆ ಮುಂದಣ ಕಥೆಯು । ಧ್ಯಾಮನಿಧಿಯು ದಯಾದ್ರಿ ಗಡರಿ ಬಂದುದಿಸೆ ಸು । ತ್ರಾಮ ನಂದನನು ಖಚರಾಗ್ರಣಿ ಸುಲೋಚನ ಸದನಕೈತರೆ ನೋಡುತ । ಪ್ರೇಮದಿ ಜಯಂತಂಗೆ ಮಣಿದು ವಂದನೆಗೈದು। ಹೇಮಖಚಿತಾಸನದಿ ಕುಳ್ಳಿರಿಸಿ ನಸು ನಗುತ। ಕ್ಷೇಮ ವಾರತೆಯ ಬೆಸಗೊಂಡ ಗಂಧರ್ವ ಪತಿಯಧಿಕ ಸಂತೋಷದಿಂದ ॥೧॥

ರಾಗ ಮಧ್ಯಮಾವತಿ ಏಕತಾಳ

ಏನಿದೇನಪರೂಪ ಸ್ವಾರಿಯೆನ್ನೆಡೆಗೆ । ಸಾನುರಾಗದಿ ಪೇಳಬೇಕು ನೀನೆನಗೆ ।೧॥ ಮಿಗೆ ತೋಷವಾಯಿತು ನಿನ್ನ ದರ್ಶನದಿ। ಸುಗುಣ ನೀ ಬಂದ ಕಾರ್ಯವ ಪೇಳು ಜವದಿ ॥೨॥ ತಾತಮಾತೆಯರು ಶ್ರೀ ಹರಿಯನು ಗ್ರಹದಿ । ವೊತು ಕ್ಷೇಮವನು ಪೊಂದಿಹರೆ ಸದ್ವಢದಿ ॥೩॥

ರಾಗ ದ್ವಿಜಾವಂತು ಝಂಪೆ ತಾಳ

ಚಿತ್ತವಿಸು ಧೀರ ಖಚರೋತ್ತಮನೆ ಮುದದಿ । ಬಿತ್ತರಿಪೆ ನಾ ಬಂದ ವೃತ್ತಾಂತ ಜವದಿ ॥ಪ॥ ನಿನ್ನಾತ್ಮಭವೆ ಸುಗುಣರನ್ನೇ ವಿದ್ಯುನ್ಮತಿಯ । ನಿನ್ನೇ ನಂದನವನಕೆ ಕನ್ನೆರು ಸಹಿತ । ನನ್ನಿಯಲಿ ಬರಲಾಕೆಯನ್ನು ನಾನೀಕ್ಷಿಸುತ । ಮುನ್ನ ಕಾಮಿಸಿದೆ ಸಂಪನ್ನ ಕೇಳಿದನು ಚಿತ್ತವಿಸು ॥೧॥ ಚಂದದಿಂ ವರಿಸೆನ್ನನೆಂದು ನಾನವಳೊಡನೇ ನಂದನವನದಿ ಪೇಳೆ ಸಂದರಾಂಗಿಯಳು। ತಂದೆಯಾಗಿಹ ನಿನ್ನೊಳೊಂದು ವಚನವನು ಕೇಳೆಂದಳಾದುದರಿಂದ ಬಂದೆ ನಿನ್ನೆಡೆಗೆ ಚಿತ್ತವಿಸು ॥೨॥ ಪ್ರೀತಿಯಲಿ ನಿನ್ನಾತ್ಮ ಜಾತೆಯನ್ನೆನಗಿತ್ತು । ನೀತಿಯಿಂದೆನ್ನ ಜಾಮಾತನೆಂದೆನಿಸಿ ॥ ಖ್ಯಾತ ಸಲಹೆನೆ ಸುಗುಣಾತೀತ ಖಚರೇಂದ್ರ ಪುರುಹೂತಸುತಗೆಂದನಿರ್ಭೀತಿಯಿಂದಾಗ ॥ ಚಿತ್ತವಿಸು ॥೩॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಶಚಿಕು ಮಾರಕ ಕೇಳು ಸುರರಿಗೆ । ಖಚರ ಸತಿಯನ್ನೀಯರೆಂದಿಗು । ವಚನವಿದು ಸರಿಯಲ್ಲ

ಪೋಗ್ಯೆ ಖಚಿತದಿಂದ ॥೧॥ ಬರಿದೆಯೆನ್ನ ಕುಮಾರಿಯನು ನೀ ವರಿಸಲಿಚ್ಛಿಪುದಚಿತವಲ್ಲೈ । ತೆರಳು ನೀ ಬಂದಂತೆ ಎನ್ನೋಳು । ಕರುಣವಿರಿಸಿ ॥೨॥ ಇಂತೆನಲು ಕೇಳ್ವಾಗಲೊಮ್ಮೆ ಜಯಂತನುಗ್ರವಗೊಂಡು ಸದ್ಗುಣ ವಂತ ಖಚರಾಧೀಶನೊಳು ಮ । ತ್ತಿಂತುಸುರ್ದ ॥೩॥

ರಾಗ ಮಾರವಿ ಏಕತಾಳ

ಏನೆಲವೊ ಮತಿಹೀನ ಸುಲೋಚನ । ಜ್ಞಾನರಹಿತನಾಗಿ ॥ ತಾನ ನಿಮಿಷರನು ಹೀನೈಸುವೆ ನೀ ನ್ನಾನನ ಸುಡಲೆಂದ ॥೧॥ ವೃಂದಾರಕರಿಗೆ ಗಂಧರ್ವರ ಸಂ । ಬಂಧವಿಹುದೆ ಮೂಢ ॥ ಮಂದಮತಿಯೆ ಮನ ಬಂದತೆರದಿ ಮದ । ದಿಂದ ನುಡಿಯಬೇಡ ॥೨॥ ಸಾಕೆಲವೊ ಘಡ ಪಾಕಾಂತಕ ಸುತ । ಜೋಕೆಯೊಳುಸುರೀಗ ॥ ಪೋಕನೆ ನಿನ್ನ ಕಾ ಕು ತನಂಗಳ । ನೇಕೆನ್ನೊಳು ತೋರ್ಪೆ ॥೪॥

ರಾಗ ಪಂಚಾಗತಿ ಮಟ್ಟೆತಾಳ

ಭಲರೆ ಖೇಚರೇಂದ್ರ ನಿನ್ನ । ನಿಳಯ ಕಿರದೆ ಬಂದೆನೆನುತ । ಸಲೆ ಮಂದಾಂಧನಾದೆಯಲ್ಲ । ಹುಲು ಸುಲೋಚನ । ಕಲಹ ಮುಖದಿ ನಿನ್ನ ಗೆಲ್ದು । ಲಲನೆ ವಿದ್ಯುನ್ಮತಿಯನೊಯ್ದು । ಭಲದಿ ವರಿಸದಿರೆನು ಬರಿದೆ । ಗಳಹಲ್ಯಾತಕೊ ॥೧॥ ಧಿರುರೆಲಾ ಜಯಂತ ನಿನ್ನ । ಬಿರಿಸಿಗಳು ಕಲಾರೆನೆನ್ನ । ತರಳೆ ವಿದ್ಯುನ್ಮತಿಯ ನೊಮ್ಮೆ । ಪುರವಿರೋಧಿಯು ॥ ಬರಲು ದಿಟದೊಳೊಯ್ಯ ಬಿಡೆನು । ತರವಿದಲ್ಲ ವ್ಯರ್ಥ ಛಲವು । ಹರಿಬವೆಸಗಿ ಕೆಡದಿರೆಲವೊ ಸುರಪನಂದನ ॥೨॥ ನೀತಿಯಿಂದ ಲೆನಗೆತವಸು । ಜಾತೆಯನ್ನು ಕರುಣಿಸಲ್ಕೆ । ಘಾತಿಸೆನು ಸುಲೋಚನಾಖ್ಯ । ಮಾತಲಾಲಿಸು॥ ಖ್ಯಾತನೆನುತ ಹಮ್ಮ ತೋರ । ಲೀತತೂಕ್ಷಣದಲಿ ನಿನ್ನ ಭೀತಿಯಿರದೆ ಬಡಿವೆ ಖಚರನಾಥ ಕೇಳೆಲ ॥೩॥ ಮಾನಿನಿಯರ ಭ್ರಾಂತು ಸುರಪ ಸೂನು ನಿನ್ನ ತಲೆಗಡರ್ದು ಜ್ಞಾನ ರಹಿತ ನಾದೆಯಲ್ಲ । ಮಾನರಹಿತನೆ ॥ ಕಾಣಿಸಘಟನೆನುತ ಶರವೀ ತಾನವನ್ನೆ ಸೂಸಲಾಗ । ತಾನೆ ಖಂಡಿಸಿದ ಜಯಂತ । ನೂನದಿಂದಲಿ ॥೪॥ ಘಡ ಸುಲೋಚನಾಖ್ಯ ನಿನ್ನ ಕೆಡಹದಿರೆನೆ ನುತ್ತ ಗದೆಯ ಪಿಡಿಯ ತಿರುಹಲದನು ಖಚರ ರೊಡೆಯ ಸೆಳೆಯಲು ॥ ಸಡಗರದಿ ಡ ಜಯಂತನಾಗ । ಖಡುಗ ಝಳಪಿಸಲ್ಕೆಯದನು । ಕಡಿದು ಸುರಪ ಸುತನ ಸೆರೆಯ । ಪಿಡಿದ ಖೇಚರ ॥೫॥

ಭಾಮಿನಿ

ಇಂದ್ರಸುತನನು ಖಚರ ಕಾರಾ । ಮಂದಿರದೊಳಿಡಲಾಗ ಕಮಲಜ ನಂದನನು ವೀಣೆಯನು ನುಡಿಸುತ ವಾಯು ವೇಗದವಲಿ । ಇಂದಿರಾಧವ ಕೃಷ್ಣ ಮುರಹರ । ಸಿಂಧು ಶಾಯಿಯಂನಂಗ ಪಿತ ಗೋವಿಂದ ರಕ್ಷಿಪುದೆನುತ ಸುರಪನ ಸಭೆಗೆ ನಡೆದಂದ ॥೧॥

ರಾಗ ಕೇತಾರ ಗೌಳ ಅಷ್ಟತಾಳ

ಶೇಷಶಯನ ಇಂದಿರೇಶ ಮಾಧವ ಕೃಷ್ಣ । ಕೇಶವ ನಾರಾಯಣ ದೋಷ ಮರ್ದನ ಕೋಸಲೇಶ ಸಜ್ಜನ ।ಜನ ಪೋಷ ಸರ್ವಂತರ್ಯಾಮಿ ॥೧। ಮಂದರಧರ ಪಾಲಿಸೆಂದು ನಾರದ ಮುನಿ। ಬಂದುದನೀಕ್ಷಿಸುತ। ವಂದಿಸುತೊಡನೆ ಪುರಂದರ ಪೀಠವ । ಚಂದ ದೊಳಿರಿಸುತೆಂದ ॥೨॥ ಮೂರು ಲೋಕವನು ಸಂಚಾರಗೈಯುವ ಮೌನಿ। ಸ್ವಾರಿಯವಲ್ಲಿಗಿಂದು ॥ ಧೀರನೀಬಂದಿಹ ಕಾರಣವೇನ್ ಪೊಸ। ವಾರತೆ ಪೇಳೆನಲು ॥೩॥

ರಾಗ ದೇಶಿ ಅಷ್ಟತಾಳ

ಲಾಲಿಸು । ಮಾತ । ಲಾಲಿಸು । ಪ॥ ಲಾಲಿಸು ಕಾರಣದಿಂದ ನಿಮಿಷರೊಡೆಯ । ಲೀಲೆಯಿಂದೊರೆವೆ ನಾನರಿತ ಸಂಗತಿಯ ॥ ಲಾಲಿಸು ॥ ಅಪ ॥ ಮಂದಗಾಮಿನಿ ನಾರಿಮಣಿ ವಿದ್ಯುನ್ಮತಿಯು । ಗಂಧರ್ವಾಧಿಪ ಸುಲೋಚನನಾತ್ಮಭವೆಯು ॥ ನಂದನವನಕೆ ಬಂದಿರೆ ಕಂಡು ನಿನ್ನ ಕಂದ ಜಯಂತ ನೀಕ್ಷಿಸುತಾಕೆಯನ್ನ॥ ಲಾಲಿಸು ॥೧॥ ಮನಸೋತು ಗಂಧರ್ವ ನಗರಕೆ ತೆರಳಿ । ಘನಸುಲೋಚನನ ಕಂಡಧಿಕ ದೈನ್ಯದಲಿ ॥ ತನಯೆಯನೆನಗಿತ್ತು ಪರಿಣಯವನ್ನ ಸನುಮತದಲಿ ವಿರಚಿಪುದೆಂದ ಸುಗುಣ ॥ ಲಾಲಿಸು ॥೨॥ ಉಗ್ರದಿ ಖಚರೇಂದ್ರ ನಿನ್ನಾತ್ಮ ಜನನು । ವಿಗ್ರಹದಲಿ ಪರಿಭವಿಸಿ ಮತ್ತವನು, ವ್ಯಗ್ರದಿ ಸೆರೆಯೊಳಗಿಟ್ಟಿಹನೆನುತ। ಶೀಘ್ರದಿಂತೆರಳಿದ ಸುರಮೌನಿನಾಥ ॥ ಲಾಲಿಸು ॥೩॥

ರಾಗ ಕೇತಾರ ಗೌಳ ಝಂಪೆತಾಳ

ನಾರದನ ನುಡಿಯ ಕೇಳಿ । ಪುರುಹೂತ । ಭೂರಿ ಕ್ರೋಧವನು ತಾಳಿ ॥ ಆರುಭಟೆಯನುಗೈವುತ। ತ್ರಿದಶ ಪರಿ । ವಾರವನು ಕರೆದ ಮತ್ತ ॥೧॥ ಕೇಳಿದರೆ ದಿಬುಧರೆಲ್ಲ ।ನಾರದ ದ। ಯಾಳು ಮುನಿ ಪೇಳ್ದ ಸೊಲ್ಲ ॥ ಬಂದಿಸಿಹನಂತೆ ಖಚರ । ಪೊರಮಡಲಿ ಚಂದದಲಿ ದಿವಿಜನಿಕರ ॥ ಕೊಂಡಿಗ ಖೇಚರನನು। ಬಾಲಕನ । ತಂದಪೆದೀ ಜವದೊಳಿನ್ನು ॥೩॥

ರಾಗ ಮಾರವಿ ಏಕತಾಳ

ಖಿಡಿಯುಗುಳುತ ಸುರರೊಡೆಯ ಪುರಂದರ । ಕಡೆಗಾಲದ ಶ್ರೀ ಮೃಡನಂತ ನಿಮಿಷ । ಪಡೆಯೊಡಗೂಡುತ ಮಿಡುಕದೆ ರಥವ । ನ್ನಡರುತ ಸಮರಕೆ ನಡೆದನು ಕ್ಷಿಪ್ರದಿ ॥ ಏನನೆಂಬೆ ॥೧॥ ವರ ಖಚರೇಂದ್ರನ ಪುರದೆಡೆಗೈದನು । ಚರರನು ಪಿಡಿದಬ್ಬರದಿಂ ಬಡಿವುತ । ದೊರೆಗುಸುರೆನ್ನಲು ತ್ವರಿತದಿ ಚಾರರು । ತೆರಳಿ ಸುಲೋಚನಗರು ಹಿದರೊಂದಿಸಿ ॥ ಏನನೆಂಬೆ ॥೨॥

ರಾಗ ಸಾರಂಗ ಅಷ್ಟತಾಳ

ಲಾಲಿಸು ಖೇಚರೇಂದ್ರ । ಬಿನ್ನಪವಿದ । ನಾಲಿಸು ಸುಗುಣಸಾಂದ್ರ ॥ ಪೇಳಲೇನೆನುತ ವಿಶಾಲದಿವೌಕಸ । ಜಾಲಬಂದಿರ್ಪುದು ಕಾಳಗ ಕನುವಾಗು ॥೧॥ ದಿಟ್ಟ ಜಯಂತನನು । ನೀ ಸೆರೆಯೊಳ। ಗಿಟ್ಟ ಕಾರಣ ಶಕ್ರನು ॥ ತಟ್ಟಸೈತಂದೆಮ್ಮ ನಟ್ಟಿ ಸಾಹಸದಿಂದ । ರಟ್ಟೆಯ ಬಿಗಿಯುತ ಪೆಟ್ಟನಿತ್ತರು ಜೀಯ॥೨॥ ಒಡೆಯನ ಬಳಿಗಯ್ಯುತ। ಯುದ್ಧಕೆ ಪೊರ। ಮಡುವದುತ್ತಮವೆಸುತ ॥ ನುಡಿಯಬೇಕೆನುತೆಮ್ಮ ದೃಢಧಿಂದಟ್ಟಿದರೀಗ । ತಡವ್ಯಾತಕನುವಾಗು ಮಿಡುಕದಾಹವಾಕಾಗಿ ॥೩॥

ರಾಗ ಭೈರವಿ ಏಕತಾಳ

ಆ ಚಾರರ ನುಡಿ ಕೇಳಿ ಶಿಖಿ । ಲೋಚನನೋಲ್ ಖತಿ ತಾಳಿ ॥ ಖೇಚರ ಸಮುದಯದೊಡನೇ ಸಾ। ಲೋಚನ ನಡೆದನು ಭರದೆ ॥೧॥ ಹರಿನಾದವ ಗೈವುತ್ತ। ಝೇಂಕರಿಸುತ ಧನುವನು ಮತ್ತ ॥ ಸುರಪತಿಯನು ಸೆಣಸುತ್ತ । ಧರೆ। ಗುರುಳಿಸದಿರೆನೆಂದೆನುತ ॥೨॥ ಖಿಡಿಯುಗುಳುತ ಶೀಘ್ರದಲಿ । ಸುರ। ರೊಡೆಯನ ಬಳಿಗುಗ್ರದಲಿ । ನಡೆತರೆ ಕಂಡಾಕ್ಷಣದಿ ತಾ । ನುಡಿದ ಮಘವ ನಿರ್ಭಯದಿ ॥೩॥

ರಾಗ ಭೈರವಿ ಅಷ್ಟತಾಳ

ಘಡ ಸುಲೋಚನ ಖೇಚರ । ತ್ರೈಜಗದಿ ನೀ । ಕಡುಗಲಿಯಹುದುಧೀರ ॥ ದೃಢದಿ ಬಾಲನ ಸೆರೆವಿಡಿದ ಗರ್ವವು ಶಿರ । ಕದರಿಹುದೇನೊ ಚೋರ ॥೧। ಬರಿದೆ ನಿನ್ನಣುಗನನು ಸೆರೆಯೊಳಿಟ್ಟ। ಪರಿಯಲ್ಲ ಕೇಳಿದನು ॥ ತರಳೆಯ ನೀವುದೆಂ ದೊರೆಯೆ ನಾ ಖತಿಗೊಂಡು । ಪರಿಭವಿಸಿದೆ ಧುರದಿ॥೨॥ ಕ್ರೂರ ವೃತ್ರಾದ್ಯರನು ಗೆಲ್ದಿಹೆನೆನ್ನ । ಭೂರಿ ಸಾಮರ್ಥ್ಯವನು ॥ ಧೀರ ನೀನ ರಿಯೆ ಕಾಸಾರವೆಂದೆಂದಿಗು । ವಾರಿಧಿಯನು ಪೋಲ್ವುದೆ ॥೩॥ ಬಲ್ಲೆ ನೀ ಸಹಿಸಿಯೆಂದು । ಜೋಕೆಯೊಳೆನ್ನೊಳ್ । ಸೊಲ್ಲಿಸು ಸುರಪನಿಂದು ॥ ಪುಲಭವಾನಂಗಡಲ್ಲಣರೈತರೆ । ಗೆಲ್ಲದಿರೆನು ನಿನ್ನನು ॥೪॥ ಧಡಿಗ ಗಂಧರ್ವಾಧಮ । ತೋರೆನ್ನೊಳು । ದೃಢದಿ ನಿನ್ನಯ ವಿಕ್ರಮ । ತಡೆಕೊಳ್ಳೆಂದೆನುತ ಪಲ್ಗಡಿದು ವಜ್ರದೊಳೆಚ್ಚ । ಕಡುಗಲಿ ಖಚರೇಂದ್ರಗೆ ॥೫॥ ಕುಲಿಶ ಹತಿಯ ತಪ್ಪಿಸಿ । ಗಂಧರ್ವೇಶ । ನಳಿನಾಕ್ಷನೋಲ್ ಗರ್ಜಿಸಿ ॥ ಸಲೆ ಕರಿಣಾಸ್ತ್ರವ ಕಲಿತ ಕೋಪದೊಳೆಚ್ಚ। ಬಲುಮೆಯಿಂದ ಪುರುಹೂತಗೆ ॥೬ ॥ ಲಕ್ಷ್ಮಿಸದಾ ಶರವ । ದೇವಾಧೀಶ । ಅಕ್ಷಯಧಿಕ ಬಾಣವ॥ ಅಕ್ಷಿಯೊಳ್ ಖಿಡಿಸೂಸು ತಾಕ್ಷಣ ಖೇಚರ । ಧ್ಯಕ್ಷನಿಗೆಚ್ಚನಾಗ ॥೭॥

ವಾರ್ಧಿಕ

ಹೇ ಚಂಚಲಾಕ್ಷಿ ಕೇಳ್ ಚಿತ್ತವಿಸು ಪರಿಯನಾ। ರಾಚ ಸರಿ ಮುಖದಿ ಪೌರಂಧರಂ ಗರ್ವದಲಿ। ಖೇಚರಾಧೀಶನೊಳು ಬಲು ಭಯಂಕರ ರಣಾಗ್ರವನೆಸಗುತಿರಲಿತ್ತಲು ॥ ನೀಚ ಮೂಲಕ ಖಳನ ಸುತ

ಕಾಲ ಜಂಘ ವಿಂ । ಧ್ಯಾಚಲದಿ ಮೆರೆವ ಮಾಯಾಪುರವನಾಳುತಿರೇ ಶ್ರೀ ಚಕ್ರ ಪಾಣಿಯಂ ನೆನೆದು ನಾರದನು ನಡೆತಂದ ದಾನವನ ಸಭೆಗೆ ॥೧॥

ಭಾಮಿನಿ

ಬಂದ ನಾರದ ಋತ್ವಿಜೇಂದ್ರನಿ । ಗೊಂದಿಸುತ ದಾನವನು ಮಣಿಮಯ । ಸುಂದರಾಸನವಿತ್ತು ಪರಿಪರಿಯಿಂದಲುಪಚರಿಸಿ ॥ ಚಂದದಲಿಯೆನ್ನೆಡೆಗೆ ನೀನೈ । ತಂದ ಕಾರ್ಯವಿದೇನೆನಲು ಗುಣ । ವೃಂದ ದ್ರುಹಿಣ ಕುಮಾರನುಸುರಿದ ನಿಂತು ಹರುಷದಲಿ ॥೧॥

ರಾಗ ಯರಕಲ ಕಾಂಬೋದಿ ಅಷ್ಟತಾಳ

ಧಿರುರೆ ಶಭಾಸು ಕರ್ಬುರ ಕುಲೋತ್ತುಂಗ । ಧರೆಯೊಳು ನಿನಗಾರು ಸರಿಕಾಲ ಜಂಘ ॥ಪ॥ ಹರಪದಾಂಬುಜ ಭೃಂಗ ಧುರಧೀರ ನಿನ್ನಯ ನೆರೆ ಪರಾಕ್ರಮಗಳನರಿತು ಬಣ್ಣಿಸಲೊಮ್ಮೆ । ಉರಗೇಂದ್ರಗಳವೆ ಕೇಳು । ಸಕಲೈಶ್ವರ್ಯ ಭರಿತ ನೀನೂರ್ವಿಯೊಳು । ನಿನ್ನೋಲ್ ಶಿಷ್ಯ । ರಿರುವರಾರೆನಗೆ ಪೇಳು । ನಾನುಲ್ಲಸ । ಶರಧಿಯೊಳದ್ದಿದೆ ಭಲರೆ ತ್ರೈ ಜಗದೊಳು ॥ ಧಿರುರೆ ॥೧॥ ದಿತಿಸುತಾಗ್ರಣಿ ಶೌರ್ಯಾನ್ವಿತನೆ ಕೇಳಾದರ । ನೃತವಲ್ಲ ನಿನಗೋರ್ವಳತಿಹಿತವಾಗಿರ್ಪ । ಸತಿಯಲ್ಲದಿರ್ಪುದೊಂದು । ಅಪವಾದವು । ಮತಿವಂತ ಸುಗುಣ ಸಿಂಧು । ಕೇಳಿದ ಕೇನ । ಚತುರ ನೀಗೈವೆಯೆಂದು । ಪೇಳೆದರಾಗ । ವ್ಯಥೆಯಿಂದಲೊರೆದ ನಾರದನೊಡನಂದು ॥ ಧಿರುರೆ ॥೨॥

ರಾಗ ಭೈರವಿ ಝಂಪೆತಾಳ

ಜಡಜಭವ ತನಯ ನೀ । ನುಡಿದುದಹುದಹುದೆನಗೆ । ಪೊಡವಿಯೊಳು ಸರಿಯಾದ । ಮಡದಿಯೆಲ್ಲಿಹಳ್ಕೆ ॥೧॥ ಪರಿಪರಿಯ ಸೌಭಾಗ್ಯ ಭರಿತನಾನಹನೆನಗೆ । ಸರಿಯಾದ ಸತಿಯಿರದ । ಕೊರತೆಯೊಂದಿಹುದು ॥೨॥ ಲಲನೆಮಣಿಯೆಲ್ಲಿಹಳು ॥ ನಲವಿನಿಂದು ಸುರೆನಗೆ । ಭಲದಿ ನಾ ತಹೆನೆನಲು। ಚೆಲುವ ಮುನಿ ನುಡಿದ ॥೩॥

ರಾಗ ಬೇಗಡೆ ಅಷ್ಟತಾಳ

ಕಾಲಜಂಘನೆ ಲಾಲಿಸೈ ನುಡಿಯ । ಖೇಚರ ಸುಲೋಚನ । ಬಾಲೆಯಳ ಸುವಿಶಾಲ ಸೌಂದರಿಯ॥ ಪೇಳಲೇನು ಕಿಲಾಲರುಹ ಶರ । ಲೋಲೆ ರತಿಯಳ ಪೋಲುತಿಹತದ್ । ಬಾಲೆ ಮುಕುರಕ ಪೋಲೆಯನು ಗುಣ ಶೀಲ ಸುರಪನ ಬಾಲನೀಕ್ಷಿಸಿ ॥೧॥ ಮಂದಗಾಮಿನಿ ಸುಂದರಾಂಗಿಯನು ತನಗಿತ್ತು ಪರಿಣಯ । ಚಂದದಿಂದೆಸಗೆಂದು ಸುರಪಜನು ॥ ಮಂದಮತಿ ಖಚರೇಂದ್ರ ಗರುಹಿ ಮ । ದಾಂದ ಖೇಚರ ನಿಂದ್ರಸುತ ನೊಡ । ನಂದು ಸೆಣಸುತ ಬಂಧಿಸಲು ಪೌ । ರಂಧರೆಗೆ ನಾನೆಂದೆ ಹದನವ ॥೨॥ ಮತ್ತೆ

ಕೋಪದಿ ವೃತ್ರ ಮರ್ದನನು । ಸಾಹಸ ದಿವೌಕಸ । ವೊತ್ತದೊಡಗೂಡುತ್ತ ಸುರವರನು ॥ ತತ್ತರಿಸುದುನ್ಮತ್ತ ಖಚರನ । ಪತ್ತನಕೆ ತೆರಳುತ್ತಲವನೊಳು । ನಿತ್ಯ ರಣಗೈವುತ್ತಲಿರ್ಪನು । ಚಿತ್ತವಿಪುದೀ ವರ್ತಮಾನವ ॥೩॥

ಭಾಮಿನಿ

ಗಿರಿಜೆ ರಮೆ ವಾಣಿಯರ ಪೋಲುವ । ತರಳೆ ವಿದ್ಯುನ್ಮತಿಯವಳನೀ । ನಿರದೆ ಮಾಯದೊಳ ಪರಿಹರಿಸಿ ನಿನ್ನಾಲಯಕೆ ತಂದು ॥ ಪರಿಣಯವನೆಸುಗುತ್ತ ಶೌರ್ಯದಿ । ಮೆರೆಯದಿರೆ ಹೀ ಮೂಲಕಾತ್ಮಜ। ಬರಿದೆ ನಿನ್ನಯ ಬಾಳುಯೆಂದೆನೆ ನುಡಿದನಸುರೇಂದ್ರ ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಲೇಸನಾಡಿದೆ ಸುರಮುನಿಪ ಶಾ । ಭಾಸುಸತಿ ವಿದ್ಯುನ್ಮತಿಯ ನಾ । ಮೋಸದಲಿ ತಂದಪೆನು ನೋಡೈ । ತ್ರಾಸವಿರದೆ ॥೧॥ ಇಂದ್ರ ಸುರಖೇಚರರ ಪಡೆಯೈ । ತಂದೊಡಳು ಕುವ ಭಟನು ನಾನೇ । ಕಂದು ಗೊರಳನಿಗೊಮ್ಮೆ ಬೀತಿಯ । ಪೊಂದೆನೆನಲು ॥೨॥ತೋಷವಾಯ್ತು ಸುರೇಂದ್ರ ನೀನಾ । ಯೋಶೆಯಳ ತಹುದೆನುತ ಸುರಮುನಿ । ಕೇಶವನೆ ಸಲಹೆಂದು ತೆರಳಿದ । ವಾಶಿಯಿಂದ ॥೩॥

ವಾರ್ಧಿಕ

ಕುವಲಯಾಂಬಕಿಯೆ ಕೇಳುಮರ ಮುನಿ ತೆರಳೆ ದಾ। ನವ ಕಾಲ ಜಂಘ ಮಾಯಕದಿಂದ ಗುಪ್ತದಲಿ । ತವಕದಿಂ ಖೇಚರ ಸುಲೋಚನನ ಸುರುಚಿರಾಲಯವ ನಿಶೆಯೊಳು ಪೊಕ್ಕುತಾ ॥ ನವರತುನ ಖಚಿತ ಪಲ್ಲಂಗದೊಳು ಸುಖಗಿಂದ । ಪವಡಿಸಿಹ ಮದನನೊಲ್ಲಭೆಗೆ ಮಿಗಿಲೆಂದೆ ನಿಪ । ಯುವತಿ ವಿದ್ಯುನ್ಮತಿಯ ಕಂಡಸುರವರ್ಯ ಬೆರಗಾಗಿ ಮತ್ತುಣ್ಯವೆನುತ ॥೧॥

ರಾಗ ಕಾಪಿ ಅಷ್ಟ ತಾಳ

ಏನ ಬಣ್ಣಿಸಲೀ ಕಾಮಿನಿಯ । ಮಂದ । ಯಾನೆ ಕಮಲೆ ವಿಧ್ಯುನ್ಮತಿಯ ॥ ಮೀನಕೇತನ ಮದದಾನೆಯಂತಿಹಳಿಂಥ । ಮಾನಿನಿಯನೂರ್ವಿತ್ರಯದಿ ನಾ । ಕಾಣಲಿಲ್ಲೈ ಭಾಪುರೆ ॥೧॥ ಪುಸಿಯಲ್ಲ ಮುನಿಪ ವಚನ । ಈ ಶಶಿ ಮುಖಿ ದೊರಕಿದಳಿನ್ನಾ ॥ ಉಸುರಲೇನೆನ್ನ ಸಂತಸವನ್ನ ವಿವರಿಸೆ । ಯಸದಳವು ಫಣಿ ರಾಜಗೊಮ್ಮೆಗೆ । ವಸುಮತಿಯೊಳೆನ ಗಾರೆಣೆ ॥೨॥ ಮದನ ನೊಲ್ಲಭೆ ಮತ್ತಾಶಚಿಯ । ಇನ್ನೀ । ಸುದತಿಗೆ ಸರಿಯಲ್ಲ ಖರೆಯು । ಮದಗಜ ಗಮನೆಯ ಸದನಕೊಯ್ಯುತ ಮತ್ತೆ ಮದುವೆಯಾಗುವೆನಧಿಕ ವಿಭವದಿ । ಬೆದರೆನಾರಡ್ಡವಿಸಲು ॥೩॥

ಭಾಮಿನಿ

ನಿಶಿಚರನು ಮಾಯಕವ ಮುಸುಕುತ । ಶಶಿವದನೆ ಮಲಗಿರ್ಪ ಮಂಚವ । ಕುಶಲದಿಂ

ಕದ್ದೊಯ್ದು ಗುಪ್ತದಿ ಗಗನ ಮಾರ್ಗದಲಿ ॥ ಅನುಮ ವೇಗದಿ ತೆರಳುತಿರಲಾ । ಜಿಸಜ ಮುಖಿಯೆಚ್ಚರಿತು ದಿಗಿಲಿಂ । ದನುಜನನು ಕಂಡಧಿಕ ಭಯದಲಿ ಮರುಗಿದಳು ಸುದತಿ ॥೧॥

ರಾಗ - ನೀಲಾಂಬರಿ ರೂಪಕ ತಾಳ

ಹರಹರ ನೋಜಿಗವೇನಿದು । ದುರುಳದನುಜನಿವನಾರೈ । ದೊರಕಿದೆ ನಾನೆಂತೀತನ । ಕರದೊಳು ಹಾ ವಿಧಿಯೆ ॥ ಪ॥ ಸೊಲ್ಲಿಸಲಿದ ನಿನ್ಯಾರಿಗೆ । ಎಲ್ಲಿಹರೆಮ್ಮಯ ಖಚರರು । ಖುಲ್ಲ ನಿಶಾಚರನೆನ್ನನು। ನಿಲ್ಲದೆ ಪಿಡಿದೊಯ್ದ ॥ ಬಲ್ಲಿದನೆನ್ನಯ ಪಿತತಾ । ನೆಲ್ಲಿರುವವನೊ ಏನೆಸಗಲಿ । ಖುಲ್ಲ ಖಳಾಧಮನೆನ್ನನು। ಮೆಲ್ಲದೆ ಬಿಡನಕಟ ॥ ಹರಹರ ॥೧॥ ಯಾತಕೆ ಖಚರ ಸುಲೋಚನ । ಜಾತೆಯೆನಿಸಿ ಜನಿಸಿದೆ ಪಿತ । ನ್ಯಾತಕೆ ಧಿಕ್ಕರಿಸಿದ ಪುರು । ಹೂತ ಕುಮಾರನನು ॥ ಪಾತಕಿ ರಾತ್ರಿಂಚರನೆನ । ಗೇತರ ಕಷ್ಟವನೀವನೊ । ಪ್ರೀತಿಯೊಳೆನ್ನನು ಪಾಲಿಪ । ಧಾತರ ಕಾಣೆನಲಾ ॥ ಹರಿಹರ ॥೨॥

ಭಾಮಿನಿ

ಸಾರಸಾಕ್ಷ ಮುಕುಂದ ಕೃಷ್ಣ ಸು । ರಾರಿ ಕರದಿಂದೆನ್ನ ಬಿಡಿಸುತ । ಶ್ರೀ ರಮಣ ಸಲಹೆಂದು ತರಳೆಯು ಮೊರೆಯಿಡಲು ಖಳನು ॥ಸೇರಿ ತನ್ನಾಲಯದಿ ಸೆರೆಯೊಳು । ನಾರಿ ಮಣಿಯಳನಿಡಲು ಮತ್ತೆ ಬ । ಲಾರಿ ಖಚರಾಧೀಶರಾಹವ ಪರಿಯ ಕೇಳರಸಿ ॥೧॥

ರಾಗ - ಭೈರವಿ ಏಕತಾಳ

ತಿಮಿರಾಸ್ತ್ರವ ಖೇಚರನು । ಶಚಿ । ರಮಣನಿಗೆಸೆಯೆ ಸುರಪನು । ದ್ಯುಮಣಿ ಶರವ ಬಿಡುತಾಗ। ಅರೆ । ನಿಮಿಷದಿ ತರಿಯಲು ಬೇಗ ॥೧॥ ಗಂಧರ್ವನು ಫಣಿ ಶರವ । ಪೌ । ರಂಧರಗೆಸೆಯಲು ಮಘವ॥ ಸುಂದರ ಗರುಡಾಸ್ತ್ರದಲಿ । ಭಯ । ಪೊಂದದೆ ಕಡಿದುಗ್ರದಲಿ ॥೨॥ ಗರ್ವದೊಳಗ್ನಿ ಶರವನು । ಗಂ । ಧರ್ವನೆಸೆಯೆ ಶಚಿವರನು ॥ ಪರ್ವತವ್ಯೆರಿಯು ಜಲದಿ । ತಾ । ನೋರ್ವನೆ ತರಿದಾ ಕ್ಷಣದಿ ॥೩॥

ಕಂದ

ಪರಿಪರಿ ಶಸ್ತ್ರಾಸ್ತ್ರಗಳಿಂ । ಸುರಪತಿ ಮತ್ತಾ ಸುಲೋಚನಾಖ್ಯರು ತಮ್ಮೊಳ್ ॥ ಹರಿಬವಗೈವುತ ಲಿರೆ ಶ್ರೀ । ಹರಿಸಲ ಹೆಂದಮರ ಮೌನಿ ತಾನಡೆ ತಂದಂ ॥೧॥

ರಾಗ - ಮಧ್ಯಮಾವತಿ ತ್ರಿವುಡೆ ತಾಳ

ಏನಿದೈ ನಿಮ್ಮಲ್ಲಿ ಕದನ ಪ॥ದೇನು ತಡೆಯಿರಿ ಸಾಕು ಸಾಕೈ। ಮಾನರಹಿತರ ತೆರದಿ ಸೆಣಸೆ ನೀ ದಾನವೇನೆಂದರಿಯೆನು । ಪೇಳಿರೆನಗೆ ॥೧॥ ಸುರವರರು ಖೇಚರರು ತಮ್ಮೊಳ । ಗೆರಕವಾಗಿರದಿಂತು ಕ್ರೋಧದಿ । ಬರಿದೆ ಕಾದಾಡುವುದು ನೀತಿಯೆ । ಧುರನಿಪುಣರೆಂದೆನ್ನುತ । ಪೇಳಿರೆನಗೆ ॥೨॥ ಆದೊಡಾಲಿಸಿ

ನಿಮ್ಮೊಳಿರುವ ವಿ। ವಾದಗಳನೆನಗುಸುರಬೇಕೈ । ಕ್ರೋಧವಿರೆ ನೀಡಾಡಿರೆನೆ ಮುನಿ । ಪಾದಕೆರಗಿದರೀರ್ವರು। ದೈನ್ಯದಿಂದ ॥೩॥

ರಾಗ - ಕೇತಾರ ಗೌಳ - ಅಷ್ಟಗೌಳ

ಮುನಿಕುಲೋತ್ತಮನೆ ಕೇಳ್ ಬಿನುಗು ಖೇಚರರೆನ್ನ । ತನಯ ಜಯಂತನನು. ಘನ ಹೆಮ್ಮೆಯಲಿ ಸೆರೆಮನೆಗಿಟ್ಟ ಖೂಳನ । ಹನನಗೈಯುವೆನೀಕ್ಷಣ ॥೧॥ ಎನಲು ಖೇಚರನೆಂದ ಮುನಿಪ ಕೇಳೆನ್ನಯ । ತನುಜೆಯ ಕೊಡದುದಕೆ ॥ ರಣರಂಗವೆಸಗಿದ ಬಿನುಗು ಜಯಂತನ । ಮುನಿದು ಸೆರೆಯೊಳಿಟ್ಟಿಹೆ ॥೨॥ ಅಮರೇಂದ್ರನೆಂದ ಮುನಿಪ ಕೇಳು ಖೇಚರಾ । ಧಮನನ್ನು ಬೆದರದೀಗ. ನಿಮಿಷದಿ ತರಿವೆನು ಕಮಲಜ ಬರಲೊಮ್ಮೆ । ಸಮರದಿ ಹಿಂಜರಿಯೆ ॥೩॥ ಗಂಧರ್ವಾಧೀಶ ಮತ್ತೆಂದ ಕೇಳೀತನ । ನಂದನನೊಡನೀಕ್ಷಣ. ವೊಂದಿರಿಸುವೆ ಕಾರಾ ಮಂದಿರವೆನಲು ಮು । ನೀಂದ್ರತಾ ನಗುತೆಂದನು ॥೪॥

ರಾಗ - ಕಮಾಚು - ಏಕತಾಳ

ಭಲಾಭಲಾ ಬಲ್ ಸಾಹಸಿಗಳು ಖರೆ । ಕಲಹವು ಸಾಕೈತಡಿತಡಿರಿ ॥ ತಿಳಿದೆನು ನಿಮ್ಮ ವಿವಾದ ವನಕಿಕ್ಷಣ । ದಲಿ ತೀರಿಸುವೆನು ಖತಿಬಿಡಿರಿ ॥೧॥ ಸುರನರಗಂಧರ್ವರೊಳು ದಿವೌಕಸ । ರುರೆಶ್ರೇಷ್ಠರು ಕೇಳ್ ಖಚರೇಂದ್ರ ॥ ಬರಿದ್ಯಾತಕೆ ಧಿಕ್ಕರಿಪೆ ಜಯಂತನ । ಸ್ಮರಸಮ ಸುಂದರ ಗುಣ ಸಾಂದ್ರ ॥೨॥ ಸೆರೆಮನೆಯೊಳಗಿಟ್ಟಿರುವ ಜಯಂತನ । ಪೊರಡಿಸಿ ನಿನ್ನ ಕುಮಾರಿಯನು ॥ ಹರುಷದೊಳೀವುತ ಪರಿಣಯವೆಸಗೈ । ಬರಿದ್ಯಾತಕೆ ತಡಬೇಡಿನ್ನು ॥೩॥

ರಾಗ - ಸಾಂಗತ್ಯ - ರೂಪಕ ತಾಳ

ಮುನಿಕುಲೋತ್ತುಂಗನಿಂತೆನಲು ಸುಲೋಚನ । ಮುನಿಸ ನೀಡಾಡುತ ಮುದದಿ ॥ ಅನುಮೋದದಲಿ ನೆರೆಮನೆಯೊಳಿಟ್ಟಿಹ ಜಯಂ । ತನ ಬಿಡಿಸುತ ಸಂತೋಷದಲಿ ॥೧॥ ಖತಿಗೊಳ್ಳಬೇಡವ್ಮೆ ಶತಯಾಗ ಮನದಿ ಮತ್ । ಸುತೆಯ ನೀವೆನು ನಿನ್ನಾತ್ಮಜಗೆ ॥ ಹಿತದಿ ನಾವಿನ್ನೇಕ ಮತದಿಂದಿರ್ಪುದು ಮಂದ । ಮತಿಯಾದೆನ್ನನು ಕ್ಷಮಿಸುವದೈ ॥೨॥ ತೆರಳುವದೆನ್ನ ಮಂದಿರಕೆಯೆಂದೆನುತಾಗ । ಸುರಪನ ಮೇಣ್ ಮುನಿ ಸಹಿತ ॥ ಧುರಧೀರ ಖಚಕೀಂದ್ರ ಕರೆದೊಯ್ದ ಗೃಹಕಾಗ । ಹರುಷಾಂಬುನಿಧಿಯೊಳಗದ್ದಿ ॥೩॥

ಆರ್ಯಸವಾಯಿ

ವರಸೌಧವ ಖೇಚರನು ಪ್ರವೇಶಿಸಿ । ತರಳೆಯು ಕಾಣದಿರಲು ಮನದಿ ॥ ಬೆರಗಾಗುತ ಬಲುತರ ಶೋಕದಿ ತಾ । ಮರುಗಿದ ಖಚರನು ಮಿಗೆ ಭಯದಿ ॥೧॥

ರಾಗ - ಆನಂದ ಭೈರವಿ - ಏಕತಾಳ

ಹರಹರಾ ವಿಸ್ಮಯ ವಿದೇನು । ತರಳೆ ತಾನೇನಾದಳಯ್ಯೊ । ಶಂಕರ । ರಿಪುಭಯಂಕರ ॥೧॥ ಎತ್ತ ಪೋದೆಯೆಲೆ ಕುಮಾರಿ । ವ್ಯರ್ಥವೆನ್ನ ಕರಗಿಸದಿರು । ಸುಂದರಿ । ಕಂಬುಕಂಧರಿ ॥೨॥ ಕೋಪವೇನೆನ್ನೊಡನೆ ಪೇಳೌ । ತಾಪವಿದನು ಸಹಿಸಲಾರೆ । ನೀತಿಯೇ । ಮುದ್ದು ಜಾತೆಯೇ ॥೩॥ ಒಮ್ಮೆಗೆನ್ನ ಬಳಿಗೆ ಬಾರೌ। ಉಮ್ಮಳಿಸುತಲಿಹೆನು ನಾನು । ಬಾಲೆಯೇ ಚಾರು ಶೀಲೆಯೇ ॥೪॥

ಭಾಮಿನಿ

ಶಿವಶಿವಾ ಸೋಜಿಗ ವಿದೇನ್ನೈ। ಕುವರಿ ಗಮಿಸಿದಳೆತ್ತ ತಿಳಿಯೆನು। ದಿವಿಜಪತಿನಂದನನ ವರಿಸಲು ಪೇಕ್ಷೆಗೈದಿಹಳೊ ॥ ವಿವರವಿದನೇನರಿಯೆ ಹಾಹಾ । ಯುವತಿಯಳನೆಂತಿನ್ನು ನಾನರ । ಸುವದೆನುತ ಚಿಂತಿಸಲುಸುರಮುನಿಪಾಲನಿಂತೆಂದ॥೧॥

ರಾಗ - ತೋಡಿ - ರೂಪಕ ತಾಳ

ಲಾಲಿಸು ಗಂಧರ್ವಪಾಲ ವಿಂಧ್ಯಾದ್ರಿಯ । ಮೂಲದೊಳಿಹ ಮಾಯಾಪುರದಿ ॥ ಮೂಲಕ ಖಳಪುತ್ರ ಕಾಲಜಂಘಾಖ್ಯ ಕ । ರಾಳ ದಾನವನೋರ್ವನಿಹನು ॥೧॥ ಕಳೆದ ರಾತ್ರಿಯೊಳುತತ್ ಖಳನು ನಿನ್ನಣುಗೆಯ । ಕಳವಿನಿಂದೊಯ್ಯ ವೇಳ್ಯದಲಿ ॥ ಲಲನೆಯು ಪರಿಪರಿಕಳವಳಗೊಳುತ ತಾ । ನಳುವ ಧ್ವನಿಯ ನಾ ಕೇಳಿದೆನು ॥೨॥ ಅತಿ ಪರಾಕ್ರಮಿ ಶೌರ್ಯಾನ್ವಿತ ಸುಲೋಚನಗಾನು । ಸುತೆಯಾಗಿ ಎನ್ನನಿಂದಿನಲಿ ॥ ದಿತಿಜಾತನೊಯ್ಯನು ಗತಿಯೆನಗಾರಿನ್ನು । ಹಿತದಿ ಪಾಲಿಪ ರಿಲ್ಲೆಂದೆನುತ ॥೩॥ ಮರುಗುತ್ತಲಿರ್ದಳಾ ತರುಣಿಯು ನಿನ್ನಯ । ತರಳೆಯೊ ಹರಹರ ವಿಧಿಯೆ ॥ ದುರುಳನ ವಶದಿಂದ ತರುವದೆಂತಣುಗೆಯ । ಧುರ ಪರಾಕ್ರಮಿಯಾ ದಾನವನು ॥೪॥

ಭಾಮಿನಿ

ನಾರದನ ನುಡಿ ಕೇಳ್ದು ಖಚರನು । ಭೂರಿ ಶೋಕಾರ್ಣವದಿ ಮುಳುಗುತ । ಲಾರಿಗೊರೆ ಯುವದೆನುತ ಚಿಂತಿಸಲಾಗಪುರುಹೂತ ॥ ಮಾರವೈರಿಯ ತೆರದಿ ಕೋಪದೋಳಾರುಭಟಿಸುತಲೆಂದ ಖೇಚರ । ವೀರ ಬಿಡುಭೀತಿಯನು ನಿನ್ನಯ ಸುತೆಯ ತಹೆನೆಂದ ॥೧॥

ರಾಗ - ಮಧ್ಯಮಾವತಿ - ಅಷ್ಟತಾಳ

ಯಾಕೆ ಚಿಂತಿಸುವೆ । ಖೇಚರರಾಯ । ನ್ಯಾಕೆ ಚಿಂತಿಸುವೆ ॥ಪ॥ ಶೋಕಿಸಿ ಫಲವೇನು ಸಾಕು ಭೀತಿಯ ಬಿಡು ॥ ಯಾಕೆ ॥ ಅ. ಪ. ॥ ನಳಿನ ಸಂಭವನೊಮ್ಮೆ ಬರಲಿ । ಕಂಬು । ಗಳ ಮಹದೇವನ್ನೈತರಲಿ॥ ಅಳುಕಲಾರೆನು ಖೂಳ ಖಳ ಕಾಲ ಜಂಘನ । ಕೊಳುಗುಳ ಪರಿಮುಖದಿ । ಸಂಹರಿಸುವೆ । ಬಳಲದೆ

ನಿಮಿಷಾರ್ಧದಿ । ನಿನ್ನಾತ್ಮಜೆ ।ಯಳನು ತಂದಪೆಜವದಿ । ಖೇಚರರಾಯ । ನ್ಯಾಕೆ ಚಿಂತಿಸುವೆ ॥೧॥ ಪೊರಡಿರೊತ್ರಿದಶರೀಕ್ಷಣದಿ । ವಿಂಧ್ಯ । ಗಿರಿಗಾಗಿ ಬೆದರದೆ ದೃಢದಿ । ತರುಣಿ ಚೋರನ ನಿಂದು ತರಿವರೆ ಸಕಲರು । ಹರಿಬಸನ್ನದ್ಧರಾಗಿ । ಖೇಚರರೆಲ್ಲ । ತ್ವರಿತದಿ ಭಯವ ನೀಗಿ । ಎನ್ನೊಡನೀಗ । ಬರಲಿ ಸದ್ಧೈರ್ಯರಾಗಿ ॥ಯಾಕೆ ॥೨॥

ಕಂದ

ಖಚರಗೆ ಧೈರ್ಯವ ನಿತ್ತುಂ । ಶಚಿವರನಾಗಲ್ ಮುನೀಂದ್ರನಡಿಗೆರಗುತ್ತಂ ॥ ಪ್ರಚುರ ಖಳನ ನಗರದ ಪಥ । ಖಚಿತದಿ ಪೇಳೆನಗೆನಲ್ಕೆ ಮುನಿಪನು ಸುರ್ದಂ॥೧॥

ವಾರ್ಧಿಕ

ಲಾಲಿನೆಲೆ ಸುರಸಾರ್ವಭೌಮ ವಿಂಧ್ಯಾಚಲದ । ಮೂಲದೊಳಗಿರ್ಪ ಗುಹೆಯೊಳಗೊಂದು ಯೋಜನದಿ । ಏಳು ಸುತ್ತಿನ ಕೋಟೆ ಏಳುದ್ವಾರಗಳಿರ್ಪ ಮಾಯಾಪುರವ ನಿರತದಿ ॥ ಕಾಲ ನಂತಿರ್ಪ ನೈಶಾಚರಾವಳಿಯೊಡನೆ । ಮೂಲಕಾತ್ಮಜ ಕಾಲ ಜಂಘನಿಹನವನೆಡೆಗೆ । ಶೂಲಿಗೈದಲು ಸಾಧ್ಯವಹುದೆ ಎನ್ನೊಡನೆ ಬರಲಾಪುರವ ತೋರ್ಪೆನೆಂದ ॥೧॥

ರಾಗ - ಭೈರವಿ - ತ್ರಿವುಡೆತಾಳ

ಪೊರಟನಾಗ । ಸಮರಕೆ । ಪೊರಟನಾಗ ॥ಪ॥ ಪೊರಟನಾಗಬ್ಬರದಿ ಪುರಹರ । ನುರೆ ಪ್ರಮಥಗಣನೆರವಿಯಂದದ । ಧುರಪರಾಕ್ರಮಿ ಸುರರ ಮೇಣ್ಖೇ।ಚರ ನಿರಕದೊಡನಿರದೆ ಶೌರ್ಯದಿ।ಸರಸಿಜೋದ್ಭವ ತರುಣ ಸಹಿತಲಿ । ದುರುಳದೈತ್ಯನ ಪುರದ ಮಾರ್ಗದಿ । ಹರಿಬವೆಸಗಲು ಪರುಠವಿಸಿ ಶಚಿ । ಯರಸನುಗ್ರದಿ ಮರುತವೇಗದಿ ॥ ಪೊರಟನಾಗ ॥೧॥ ವಿಂಧ್ಯಗಿರಿಯ ಸುರೇಂದ್ರ ಕಂಡು ಮುನೀಂದ್ರ ತೋರಿದ ರಂಧ್ರದೊಳು ಸುರ । ವೃಂದ ಸಹಿ ತಲಿ ಮುಂದ್ವರಿದು ಪವಿ । ಯಿಂದ ಕಾಪಿನ ಮಂದಮತಿ ಖಳ । ವೃಂದವನು ಧೃತಿ ಗುಂದಿಸುತ ಬಾಲ್ಪಿಂದ ಬಡಿಯಲಿ ಕಂದು ಭೀತಿಯ । ಪೊಂದಿ ಚರರೈತಂದು ದನುಜನಿ । ಗೊಂದಿಸುತ ಜವದಿಂದ ಪೇಳ್ದರು ॥ ಏನನೆಂಬೆ । ಕಥ ನವ ।ನೇನ ನೆಂಬೆ ॥೨॥

ರಾಗ - ಮುಖಾರಿ - ಏಕತಾಳ

ಲಾಲಿಸೈ ಯಾತುಧಾನಾ ಗ್ರಣಿಯೆ । ಕಾರುಣ್ಯ ನಿಧಿಯೆ । ಲಾಲಿಸೈಯಾತುಧಾನಾಗ್ರಣಿಯೆ ॥ಪ॥ ಗಂಧರ್ವ ಜಾತೆವಿದ್ಯುನ್ಮತಿಯ । ನೀ ಕೃತ್ರಿಮ ವೆಸಗಿ । ತಂದುದಕಾಗಿ ತ್ರಿದಶರಾಯ ॥ ಇಂದು ಧರನ ಗುಣ ವೃಂದ ಸಮಾನ ಮ । ದಾಂಧ ಸುರರ ಪಡೆಯೊಂದಿಗೆ ಧೀರವು । ರಂದರ ನಾಖಚರೇಂದ್ರನ ಸಹಿತೈ । ತಂದಿಹನ್ನೆ ಜವದಿಂದಲಿ ಪೊರಮಡು ॥ ಲಾಲಿಸೈ ॥೧॥ ಸಿಟ್ಟಿನಿಂದೆಮ್ಮ ಪುರವನೀಗ । ಮುತ್ತಿಹರಯ್ಯ ।

ದಿಟ್ಟ ನೀನೇಳು ರಣಕೆ ಬೇಗ ॥ ಗುಟ್ಟ್ಯಾತಕೆ ವರ ಬೆಟ್ಟರಿಪುವುತಾ । ಥಟ್ಟನೆ ಎಮ್ಮಯ ರಟ್ಟೆಗಳನು ಬಿಗಿ। ದಿಟ್ಟು ಕಪಾಲಕೆ ಕುಟ್ಟುತ ನಿನ್ನೆಡೆ । ಗಟ್ಟಿದರ್ರೆ ದಯವಿಟ್ಟನು ವಾಗು ॥ ಲಾಲಿಸೈ ॥೨॥

ರಾಗ - ಸೌರಾಷ್ಟ್ರ - ತ್ರಿವುಡೆ ತಾಳ

ಚಾರರೆಂದುದ ನುಡಿಯ ಕೇಳ್ದ ಮ।ರಾರಿ ಪ್ರಳಯದ ರುದ್ರನಂದದಿ। ಭೂರಿ ಕೋಪವ ಗೊಂಡು ಪೇಳಿದ । ನಾರುಭಟಿಸಿ ॥೧॥ ಷಂಢ ಖೇಚರ ತ್ರಿದಶ ಸಮಿತಿಯ । ರುಂಡಗಳ ಚೆಂಡಾಡಿ ಗಣಗಳ । ತಂಡ ಕೌತಣವೀಯದಿರೆನ್ನೈ । ಖಂಡಿತವಿದು ॥೨॥ ಕೇಳಿದಿರೆ ನಮ್ಮ ಸುರರೆಲ್ಲರು । ಕೀಳು ಸುರಪತಿ ನಮ್ಮ ನಗರವ। ಧಾಳಿಗೊಂಡಿಹನಂತೆ ಕೊಳುಗುಳ । ಕೇಳಿರೀಗ ॥೩॥ ಎಂದಮಿತ ಸಾಹಸಿ ನಿಶಾಚರ । ವೃಂದ ಸಹಿತಲಿ ರಥವನಡರುತ । ಬಂದನಾಹವ ಸಿದ್ಧನಾಗಿ ಸು।ರೇಂದ್ರನಿದಿರು ॥೪॥

ಕಂದ

ಪೇರ್ಬಡೆ ಸಹಿತಂ ಕ್ಷಿಪದಿ । ಕರ್ಬುರ ಪತಿ ಕಾಲ ಜಂಘ ಕಿಡಿಯುಗುಳುತ್ತಂ ॥ಅ॥ಉರ್ಬಿಯು ನಡುಗುವ ತೆರದಿಂ । ದಾರ್ಭಟಿಸುತಬಂದು ಖಚರ ಪತಿಗಿದಿರಾದಂ ॥೧॥

ರಾಗ - ಘಂಟಾರವ - ಏಕತಾಳ

ಧಡಿಗ ಖೇಚರರಾಯ ಸುಲೋಚನ । ದೃಢದಿ ನಿನ್ನುವನೀಗ ಸಮರದಿ । ಪುಡಿಯಗೈವೆನು ನೋಡೆಲ ॥೧॥ ಸಾಕು ಸಾಕೆಲೊ ನಾರೀಚೋರನೆ ನಿನ್ನ । ಪೋಕತನಕಳುಕುವೆನೆ ಫಡ ಫಡ । ಜೋಕೆಯಲಿ ಮಾತಾಡೆಲ ॥೨॥ ಗಂಧರ್ವಾಧಿಪ ಬಾಯ ಮುಚ್ಚೆಲೊನಾನಿನ್ನ । ಕೊಂದು ನಿಮಿಷದಿ ಭೂತಗಣಗಳ । ವೃಂದಕೌತಣವೀವೆನು ॥೩॥ ಮುಚ್ಚು ಬಾಯನುಂಡದಾನವ ವ್ಯರ್ಥ । ಹುಚ್ಚರಂದದಿಗಳಹಲೇಕೆಂ । ದೆಚ್ಚ ಮಾರ್ಗಣ ವ್ರಾತವ ॥೪॥ ಶೀಘ್ರ ಮಾರ್ಗಣಗಳನು ತಾ ತುಂಡಿಸಿ। ಉಗ್ರ ದಿವ್ಯಾಸ್ತ್ರವನೆಸೆಯೆ ಖಚ। ರಾಗ್ರಣಿಯು ಮೈ ಮರೆದನು ॥೫॥

ಕಂದ

ಗಂಧರ್ವಂ ಮೈ ಮರೆಯೆಪು ।ರಂದರ ತನುಭವ ಜಯಂತನಾಗಲ್ ಜವದಿಂ ॥ ದಿಂದು ಧರನತೆರದುಗ್ರದಿ । ಪೊಂದೇರಡರುತ ನಿಶಾಚರನಿಗಿದಿರಾದಂ ॥೧॥

ರಾಗ -ಮುಚ್ಚುಗೌಳ -ಅಷ್ಟತಾಳ

ಫಡ ನಿಶಾಚರ ಕಾಲ ಜಂಘನೇ ನಿನ್ನ । ಕಡುಹ ತೋರೆನ್ನೊಳುಧೂರ್ತನೆ ॥ ಮಡದಿಯ ಕಳ ವಿನಿಂದ್ಯೊದೆಯ । ಸುಡು । ಸುಡು ಚೋರಮಣಿ ನಿನ್ನ ಮೋರೆಯ ॥೧॥ ಭಲರೆ ಬಾಲಕ ಬಾಯ ಮುಚ್ಚೆಲಾ ॥ ನಿನ್ನ । ತಲೆಯ ಗೊಂಬುವೆನೀಗ ನೋಡೆಲಾ ॥ ಛಲವಿದೆನ್ನೊಳು ವ್ಯರ್ಥನಾಕೀಗ । ನಿನ್ನ।

ಸಲಹಿದಾತನ ನಟ್ಟು ನೀ ಬೇಗ ॥೨॥ ಷಂಡದಾನವ ವ್ಯರ್ಥಗಳಹುವೆ । ನಿನ್ನ । ರುಂಡವ ನಿಮಿಷದಿ ತರಿಯುವೆ॥ ಭಂಡ ನಿನ್ನ ಧಟಿಗೆ ಬೆದರೆನು । ಕರ । ದಂಡಜ ಬರಲು ಹಿಂಜರಿಯೆನು ॥ ೩॥ ಧೀರನಹುದು ಶಾಭಾಸುರೆ । ಶಿರ । ಕೇಳಿದುದತಿಗರ್ವ ಭಾಪುರೆ ॥ ತೋರುವೆನೆನ್ನ ಸಾಹಸವೆಂದು । ಶರ । ವಾರವ ನೆಸೆದ ದಾನವನಂದು ॥೪॥ ರಾಕ್ಷಸನಸ್ತ್ರಸಂತತಿಯನು । ಸಹ । ಸ್ರಾಕ್ಷಜ ತುಂಡಿನೆ ದನುಜನು । ತೀಕ್ಷ್ಣಬಾಣವನೊಂದನೆಚ್ಚನು । ಬಾಲ । ನಾಕ್ಷಣ ಮೂರ್ಛಿಸಿ ಬಿದ್ದನು ॥೫॥

ಕಂದ

ದುರುಳ ನಿಶಾಚರವರ್ಯಂ । ಸುರಪ ಸುಲೋಚನ ಜಯಂತರನು ಸಾಹಸದಿಂ ॥ ಪರಿಭವಿಸಲ್ ಕಂಡಾಕ್ಷಣ । ಧರಿಸುತ ಕುಲಿಶವ ಬಿಡೌಜ ತಾ ನಡತಂದಂ॥೧॥

ರಾಗ - ಶಂಕರಾಭರಣ - ಮಟ್ಟೆತಾಳ

ಯಾರೆಲಾ ನಿಶಾಚರೇಂದ್ರ । ಚೋರತನದಿ ಖಚರಸುತೆಯ । ಘೋರ ನಿಶಿಯೊಳ್ಳೊದ ಸಮರ।ಧೀರ ನೀನೆಯಾ ॥ ಭೂರಿ ಬಿಗುಹ ಎನ್ನೊಳೀಗ । ತೋರುತೋರೆನುತ್ತ ಬಾಣ । ವಾರವೆಸೆದ ನಸುರ ವರ್ಯ । ಗಾರುಭಟಿಸುತ ॥೧॥ ಕುಲಿಶಪಾಣಿಯೆಚ್ಚ ಶರದ ಕುಲವತರಿವುತಸುರನೆಂದ । ಭಲರೆ ಶಕ್ರ ಖಚರವರನ । ಲಲನೆಗೋಸುಗ ॥ ಬಲು ಸಮರ್ಥನೆಂಬ ಗರ್ವ । ತಲೆಗಡರ್ದು ಎನ್ನೊಳಿವಿತು । ಕಲಹಗೈಯಲೆನುತ ಬಂದೆ । ಕೊಲುವೆ ನಿನ್ನನು ॥೨॥ ಷಂಡ ದನುಜ ಬಾಯ ಮುಚ್ಚು । ಪುಂಡರೀಕ ಮುಖಿಯನೆಮಗೆ । ಖಂಡಿತದಲಿ ಕೊಡುವದುಚಿತ । ಭಂಡ ಕೇಳೆಲ । ಪುಂಡುತನವ ದೋರೆ ನಿನ್ನ । ರುಂಡವನ್ನೆ ತರಿವುತೀಗ । ದಂಡಧರಗೆ ಸೆರೆಯ ಮಾಳ್ಪೆ । ದಿಂಡೆ ನೋಡೆಲ ॥೩॥ ಗಳಹಲೇಕೊ ಶಕ್ರಪತ್ತು। ಗಳ ನಿಶಾಚರಾದಿ ಭಟರಿ । ಗಳುಕಿ ಪಿಂತೆ ನೀನು ಹರಿಯ । ಬಳಿಗೆ ತೆರಳುತ ॥ ಚಳಕತನದೊಳೆಮ್ಮ ದನುಜ। ಬುಳಗವನ್ನೆ ಕೊಲಿಸಿದಧಮ । ಕೊಳುಗುಳದಲಿ ನಿನ್ನ ತರಿಯ । ದುಳಿಯೆ ನೋಡೆಲ ॥೪॥ದಾನವೇಂದ್ರ ಲಾಲಿಸೈದ । ಶಾನನಾಖ್ಯ ಖಳನು ಪಿಂತೇ ಜಾನಕಿಯನು ಚೋರತನದಿ । ಹೀನನೊಯ್ಯುತ ॥ ಭಾನುಕುಲಜನಿಂದರಣದಿ । ತಾನೆ ಮಡಿದ ಹದನವರಿತು । ಮಾನಿನಿಯ ಕದ್ದೊಯ್ದೆ ತರವಿ । ದೇನೊದುರ್ಮತಿ ॥೫॥ ಹರಿಹರಾಬ್ಜ ಜಾತರೊಮ್ಮೆ । ಬರಲು ಸತಿಯ ನೀಯೆ ಖಚಿತ । ಧುರಕೆ ಸಿದ್ಧನಾಗೆನುತ್ತ । ದುರುಳ ದೈತ್ಯನು ॥ ಸರಳ ಮಳೆಯಗರೆಯಲಾಗ । ಸುರಪ ಪುಡಿಯ ಗೈಯೆ ಕಂಡು । ದುರುಳ ಕಾಲ ಜಂಘ ಬಳಿಕ । ಭರಿತ ಕೋಪದಿ ॥೬॥

ವಾರ್ಧಿಕ

ಧಡಿಗ ಖಳಕಾಲಜಂಘಂ ಬಳಿಕ ಮಾಯಕದಿ ಬಿಡದೊಂದು ಪರ್ವತವ ತಂದಾ ಗುಹಾದ್ವಾರ। ಕಿಡುತ ಗಾಡಾಂಧಕಾರವ ಮುಸುಕಿಯಡಗಿರಲ್ ಸುರರು ಪಥಗಳ ಕಾಣದೆ ॥ ಮಿಡುಕುತಿರೆ ಬಳಿಕ

ಭಯಗೊಳುತಿಂದ್ರ ವಜ್ರದಿಂ ಪೊಡವಿಯಂ ಕೊರೆವುತ ಸುರಂಗ ಮಾರ್ಗವ ಗೈದು । ಕಡುಗಲಿ ಸುಲೋಚನ ಜಯಂತರಂ ಚೇತರಿಸಿ ಸಕಲಸುರ ನಿಕರ ಸಹಿತ ॥೧॥

ಭಾಮಿನಿ

ಉರಗ ಲೋಕವ ವೊಂದಿತಮ್ಮ ಯ । ಪುರವ ಸೇರುತ ನಾರಿ ಮಣಿಯಳ । ತರಲುಪಾಯಗಳೇನೆನುತ ಚಿಂತಾರ್ಣವದೊಳಿರಲು ॥ ಧರಣಿಪತಿಕುಶಲವರ ಸುತರನು । ಪರಮ ಕೌಶಿಕನಖಿಲ ವಿದ್ಯಾ । ಭರಿತರನ್ನೆಸಗುತ್ತ ಕೋಸಲ ಪುರಕೆ ನಡೆತಂದ ॥೧॥

ರಾಗ - ಶಂಕಾಭರಣ - ಏಕತಾಳ

ಭಾನುವಂಶೋತ್ತಮರೆ ನಿಮ್ಮ । ಸೂನುಗಳ ತಂದಿಹೆನು ನೋಡಿ । ಮಾನಸದಿ ವ್ಯಾಕುಲವಿನ್ನೇಕೆ। ಸಾನುರಾಗದಿ ॥೧॥ ಇಷ್ಟದಿಂದಾನೀರ್ವರಿಗೆ ಚೌಷಷ್ಟಿ ವಿದ್ಯೆಗಳ ನಿತ್ತಿಹೆನು । ಶಿಷ್ಟವೈಭವದಿ ನೀವಿನ್ನು । ಸೃಷ್ಟಿಯನಾಳಿ ॥೨॥ ಭೂಲೋಕದೊಳು ನಿನ್ನ ಸುತರ । ಪೋಲುವ ಸಾಹಸಿಗಳಿದರೆ । ಶೂಲಿ ಬರಲು ಬೆದರದಾಕೆ । ವಾಳರು ಕಾಣ್ಣೆ ॥೩॥

ಕಂದ

ಕಂದರನಾಲಿಂಗಿಸುತವ । ನೀಂದ್ರರು ಮಹದುಲ್ಲಾಸದಿಯ ಮಿಪಾಲಕನಡಿ ॥ ದ್ವಂದಕೆ ವಿನಯದಿ ಮಣಿದಿಂ । ತೆಂದರು ಮುನಿಪನ ಮಹೋಪಕಾರವನೆನೆದುಂ ॥೧॥

ರಾಗ - ಕಾಂಬೋದಿ -ಝಂಪೆತಾಳ

ಮುನಿವರೇಣ್ಯನೆ ನಿನ್ನ ಘನಸಹಾಯಂಗಳಿದ । ನನುದಿನದಿ ನಾ ಮರೆವುದುಂಟೆ ॥ ತನಯರೆಲ್ಲರ ಪೂರ್ಣಮನದಿ ವಿದ್ವಜ್ಞರೆಂ । ದೆನಿಸಿದೆ ದಯಾಭರಿತನಾಗಿ ॥೧॥ ಗುರುದಕ್ಷಿಣೆಯನೀವೆ ಪರಮಯಮಿಪಾಲಸ್ವೀ । ಕರಿಸುತೆಮ್ಮಾತ್ಮಭವರಿಂಗೆ ॥ ಭರದೊಳಾಶೀರ್ವಾದ ಕರುಣಿಸುವದೆನಲೆಂದ। ಧರಣೀಶನೊಡನೆ ಕೌಶಿಕನು ॥೨॥ ಮೇದಿನೀವರನೆ ಬೇಕಾದಾಗ ನಿನ್ನೊಡನೆ । ನಾ ದಕ್ಷಿಣೆಯ ನಪೇಕ್ಷಿಸುವೆ ॥ ಮೋದದಿಂದಣುಗರೊಡನೀಧರೆಯನಾಳಿಸುವಿ । ನೋದದಿಂ ಬಾಳ್ವುದನವರತ ॥೩॥

ವಾರ್ಧಿಕ

ಇಂದುಮುಖಿಕೇಳು ಮುನಿವರ್ಯತಾ ತೆರಳಲು ವ । ಸುಂಧರೆಯ ಪೌತ್ರರಾತ್ಮಜರೊಡನೆ ವೈರಿಗಳ । ವೃಂದವಂ ಸದೆಬಡಿದು ಕಪ್ಪಕಾಣಿಕೆಯ ಪಡೆದವನಿಯಂ ಸದ್ಧರ್ಮದಿ ॥ ಚಂದದಿಂದಾಳುತಿರೆ ಲವ ಕುಮಾರರೀರ್ವ । ರೊಂದುದಿನ ಮೃಗಬೇಟೆಯಾಡಲಿಚ್ಛಿಸುತ ಮಿಗೆ । ತಂದೆಯ ಪದಾಂಬುಜಕೆ ಪೊಡಮಡುತ ತವಕದಿಂದಿಂತುಸುರ್ದರು ವಿನಯದಿ ॥೧॥

ರಾಗ -ಸೌರಾಷ್ಟ್ರ - ಏಕತಾಳ

ಜನಕ ಲಾಲಿಪುದೆಮ್ಮ । ಮನದಕಾಂಕ್ಷೆಗಳನ್ನ । ವನಕೆ ಬೇಟೆಯನಾಡ । ಲೆನುತಪೋಗು ವೆವು ॥೧॥ ಶೀಘ್ರದಿನಾವಿಂದು । ವ್ಯಗ್ರದಿಂ ತೆರಳುತ । ಉಗ್ರದಿಂ ಮೃಗಗಳ । ನಿಗ್ರಹಿಸುವೆವು ॥೨॥ ಪಾಲಿಸಪ್ಪನೆಯ ವಿಶಾಲ ಕಿರಾತರ । ಜಾಲವ ಕರೆಸುವೆ । ಲೀಲೆಯಿಂದೀಗ ॥೩॥

ರಾಗ -ಕೇತಾರಗೌಳ - ಅಷ್ಟತಾಳ

ಮಕ್ಕಳೀರ್ವರು ನೀವು ಚಿಕ್ಕವರಲ್ಲವೆ । ಯಕ್ಕಜವ್ವೆ ಬೇಟೆಯು ॥ ಲೆಕ್ಕವಿಲ್ಲದ ಕ್ರೂರಸೊಕ್ಕಿದ ಮೃಗಗಳ । ತಿಕ್ಕಿಕೊಲ್ಲಲು ಸಾಧ್ಯವೆ ॥೧॥ ಬೊಪ್ಪಚಿಂತಿಸದೆಮಗಪ್ಪಣೆ ಕೊಡಲೀಗ । ತಪ್ಪದೆ ತೆರಳುತಲಿ। ಬೆಪ್ಪು ಮೃಗಂಗಳನಪ್ಪಳಿಸುತ ಬೇಗ । ಬಪ್ಪೆವು ಸಹಜವಿದು ॥೨॥ ಬೇಡ ಮಕ್ಕಳೆ ಬೇಟೆಯಾಡುವಕಾಂಕ್ಷೆಯು। ಕಾಡಿನ ಮೃಗಗಳನು ॥ ಆಡುವರ್ಭಕರು ನೀವ್ ನೋಡಲಂಜುವಿರಿ ನೀ । ಡಾಡಿರಿ ಪಂಥವನು ॥೩॥ ಗುರು ವಿಶ್ವಾಮಿತ್ರನು ಕರುಣಿಸಿರುವ ವಿದ್ಯ । ಪರಿಮುಖದಿಂದಲಾವು ॥ ದುರುಳ ಮೃಗಂಗಳ ನೆರವಿಯ ಸಿಂಗನೋಲ್ । ತರಿವೆವು ಹಿಡಿನಂಬುಗೆ ॥೪॥ ಬಿಸಿಲೊಳು ಕಲ್ಮುಳ್ಳು ವಿಸರದಿ ಸುತ್ತುತೆ । ಹಶುತೃಷೆಗಳನು ನೀಗಿ ॥ ಎಸೆವ ಫಲಗಳ ಸೇವಿಸಲಾರಣ್ಯದಿ ನಿಮ । ಗಸದಳವಲ್ಲವೇನ್ನೆ ॥೫॥ ಮುನಿಕೌಶಿಕನ ಪರ್ಣಮನೆಯೊಳು ಫಲಭೋಜ್ಯ । ವನಚರಣೆಯ ಬಲ್ಲೆವು ॥ ಅನುಮಾನಿಸದೆಯೆಮ್ಮ ಜನಕ ನೀ ಕಳುಹುವ ದನುರಾಗದಿಂದೀಕ್ಷಣ ॥೬॥ ಜೋಕೆ ಬಾಲಕರಿರ ಆಕಾನನದಿ ಧೃಷ್ಟ । ನೇಕ ಮೃಗಂಗಳನು ॥ ತಾ ಕೊಲ್ಲುವಡೆ ಜಾಗರೂಕತೆ ಮಾಳ್ಪುದು । ಶ್ರೀಕಾಂತನನು ಸ್ಮರಿ ॥೭॥

ಭಾಮಿನಿ

ತಾತನಿಂತಾತ್ಮಜರಿಗಾಜ್ಞೆಯ । ಪ್ರೀತಿಯಲಿ ಪಾಲಿಸಲು ತನ್ನನು । ಜಾತನಹ ವರ ಚಿತ್ರವಾಹನ ನೊಡನೆ ಶೀಘ್ರದಲಿ ॥ ಆತತ್ತೂಕ್ಷಣ ಸಾಹಸಿಗ ಕೈ । ರಾತ ನಿಕರವ ಬರಿಸಿ ಚಿತ್ರನು । ಕೇತ ತೆರಳಿದ ಪರಿಪರಿಯ ಶಸ್ತ್ರಾಸ್ತ್ರಗಳ ಧರಿಸಿ ॥೧॥

ರಾಗ - ಮುಖಾರಿ - ಏಕತಾಳ

ಬೇಟೆಗೈತಂದ ಚಿತ್ರಕೇತ । ಬಲು ಠೀವಿಯಿಂದ । ಬೇಟೆಗೈ ತಂದ ಚಿತ್ರಕೇತ ॥ ಪ ॥ ಕಾಟು ಮೃಗಂಗಳ । ಕೂಟವ ನೆರಹಿನಿ । ಶಾಟರ ಸಹಿತ ಮ । ಹಾಟ ವಿ ಮಧ್ಯದಿ ॥ ಬೇಟೆ ॥೧॥ ಮದಕರಿ ನಿಕರವ। ಸದೆ ಬಡಿವುತ ಸೊಕ್ಕಿದ ವ್ಯಾಘ್ರಂಗಳ । ವಧಿಸುತ ಬೆದರದೆ ॥ ಬೇಟೆ ॥೩॥

ವಾರ್ಧಿಕ

ಬಳಿಕೊಂದು ಮೃಗವ ಬೆನ್ನಟ್ಟಿ ಸೈನ್ಯವನಗಲಿ । ಛಲದಿ ವರಚಿತ್ರ ಕೇತಾಖ್ಯ ವಿಪಿನಾಂತರದಿ ।

ಯಳುಕದೋರ್ವನೆ ತೆರಳಿ ತರಣಿಯಸ್ತಮಿಸೆ ಧೃತಿಗುಂದಿ ಚಿಂತೆಯ ತಾಳುತ ॥ ಇಳೆಯಿಂದ ಗಗನಕಡರಿಹ ತರುಗಳಿಂದ ಕೋ। ಕಿಲ ಚಕೋರಾದಿ ಪಕ್ಷಿಗಳ ನಾದದಿ ನರರ। ಬಳಗ ಚರಿಸದ ದುಷ್ಟ ಮೃಗಭರಿತ ವನವ ಸೇರುತ ಸರಸಿಯೊಂದ ಕಂಡ ॥೧॥

ರಾಗ - ಕಾಂಬೋದಿ - ಝಂಪೆ ತಾಳ

ಸರಸಿಯ ಸಮೀಪಕೈತರುತಲವನಾತ್ಮಭವ । ಕರದ ಧನು ಶರಗಳನ್ನಿಳುಹಿ ॥ ಕರ ಚರಣಗಳ ತೊಳೆದು ತರಣಿಗರ್ಘ್ಯವನ್ನಿತ್ತು ಭರದಿ ಮಂತ್ರಾಕ್ಷರವ ಜಪಿಸಿ ॥೧॥ ವರ ಸರೋವರ ಬದಿಯೊಳಿರುವ ಭೂಜಕೆ ತನ್ನ । ತುರಗವಂ ಬಿಗಿದು ರಾತ್ರಿಯಲಿ ॥ ಪರಮಸ್ಥಳವಂ ಕಂಡು ಭರದಿ ಪವಡಿಸೆ ಶ್ರಮದಿ । ಶಿರಕೇರಿತ್ತೆ ನಿದ್ರೆಯಧಿಕ ॥೨॥ ಮೂಲಕಾಸುರ ವರನ ಬಾಲನಾಗಿಹ ದುಷ್ಟ । ಕಾಲಜಂಘನ ಸಹೋದರಿಯು॥ ಕಾಲಮೃತ್ಯುವ ದೃಢದಿ ಪೋಲುತಿಹ ವರವೃತ್ರ । ಜ್ವಾಲೆಯಯ್ತಂದಳಾವನಕೆ ॥೩॥ ವನದಿ ಸರಸಿಯ ಬದಿಯ ಘನನಿದ್ರೆಯಂಗೈವ । ವನಜ ಚಾಪನಿಗೆ ಮಿಗಿಲೆಂಬ ॥ ತನಯನನು ಕಂಡಾಗ ದನುಜೆ ಸೋಜಿಗಗೊಂಡು । ಮನದಿ ಯೋಚಿಸುತೆಂದಳಾಗ ॥೪॥

ರಾಗ - ಕಾಫಿ - ಅಷ್ಟ ತಾಳ

ಯಾರಿವನಮಮ ಭಾಸ್ಕರನೋ । ಶಂಬ । ರಾರಿಯೊ ಸುರಪಜಯಂತ ಚಂದಿರನೊ ॥ ಮಾರನಂತಸೆವ ಸುಂದರನು । ಇಂಥಾ । ಘೋರಾರಣ್ಯವಸೇರ್ದನ್ಯಾತಕೀ ಭಟನು ॥೧॥ ಹೆಣ್ಣು ಜನ್ಮ ವಿದ್ಯಾಕೆ ಬರಿದೆ । ಸೋತು । ದೆನ್ನ ಮಾನಸ ವೀ ಸುಂದರಗೆ ನಿಶ್ಚಯದೆ ॥ ಮಿಣ್ಣನೊಯ್ಯುವೆನೀಧೀರನನು। ಎನ್ನ । ಪುಣ್ಯವಿದೇನೆಂಬೆ ಹರುಷವಾಯ್ತಿನ್ನು ॥೨॥ ಸೃಷ್ಟಿಯೊಳಿಗೆಣೆಗಾಣೆ । ಎನ್ನ । ಪಟ್ಟದೊಲ್ಲಭನಾಗಿ ಗೈವೆನೀ ತನನೆ ॥ ದಿಟ್ಟನಗ್ರಜನುಗ್ರಗೊಳಲು । ಈ । ಶ್ರೇಷ್ಠನ ಬಿಡದೊಯ್ವೆ ಗಿರಿ ಶಿಖರದೊಳು ॥೩॥

ವಾರ್ಧಿಕ

ಅಧಿಕ ಪ್ರಯಾಸದಿಂದೀ ಸುಂದರಾಂಗನಂ । ಮುದದಿ ಕೊಡುತ ಸ್ಮರನ ಜೈಸದಿರೆನೆನು ತೊಡನೆ। ಕ್ಷುಧೆಗೋಸುಗಶ್ವಮಂ ಬಿಟ್ಟಿ ಭುಂಜಿಸಿ ಚಿತ್ರಕೇತನೆಚ್ಚರಿಸದಂತೆ ॥ ಮದನ ನನ್ನಿಭನ ಮುದ್ದಿಡುತ ಮತ್ತಾತನಂ । ಸದನಕತಿ ಜತನದಿಂದೊಯ್ದು ವಿದ್ಯುನ್ಮತಿಯು । ಮೊದಲೆ ಸೇರಿರ್ಪ ಕಾರಾಗೃಹದಿ ಮಲಗಿಸುತ ಭೂರಿಸಂತಸದೊಳಿರಲು ॥೧॥

ಭಾಮಿನಿ

ಸೆರೆಮನೆಯ ಪೊಂದಿರ್ಪ ಖಚರನ । ತರಳೆ ವಿದ್ಯುನ್ಮತಿಯು ಸಾರಸ । ಶರಸಮಾನ ಮಹಾಂತ ಸುಂದರ ಚಿತ್ರಕೇತನನು ॥ ಪರಿಕಿಸುತಲಿವನ್ಯಾರು ಪೌರಂಧರನೊ ರವಿಯೊ ಜಯಂತ ಮದನನೊ । ಧರೆಯೊಳಿವಗೆಣೆಗಾಣೆನೆಂದೆನುತಧಿಕ ತೋಷದಲಿ ॥೧॥

ರಾಗ - ಕುರುಂಜಿ - ರೂಪಕತಾಳ

ಅರ । ವಿಂದ ಶರಾಕಾರನ್ನಾರೀ । ಸುಂದರಾಂಗನು ॥ ಶರ । ದೇಂದುವಂತೆ ಹಾಸಿಸುವನು ಕುಂದರದನನು ॥೧॥ ಸುರ । ರಾಜನೋಜಯಂತ ಭಗಣ । ರಾಜ ನೀತನೊ ॥ಪ। ರೋಜನೇತ್ರ ನಾವಪುರದ । ರಾಜತಿಲಕನೊ ॥೨॥ ಗುಣವಂತನಿವಗೆ ಸೋತೆ ನಾ ಹಾ । ಕಂತುವೆನ್ನನು ॥ ಛಲ ।ವಾಂತು ಬಾಧಿಸುವನಮಮ । ಭ್ರಾಂತಳಾದೆನು ॥೩॥

ವಾರ್ಧಿಕ

ಸುದತಿ ವಿದ್ಯುನ್ಮತಿಯು ನೃಪಕುವರನಂ ಕಂಡು । ಮದನಶರದುರಿಯ ಸೈರಿಸದೆ ಲವ ಸಂಭವನ। ವದನವನು ವಿಧ ವಿಧದಿ ಚುಂಬಿಸುತಲಧರ ಸುಧೆಯಂ ಸವಿದು ಸಂತೋಷದಿ । ಮದುಮಾಕ್ಷಿಯೆಂತಿವನ ಕೂಡಿರಮಿಸುವೆನೆಂದು । ಚದುರೆ ಕುತೂಹಲದೊಳಿರಲನಿತರೊಳು ಸುಗುಣ। ನಿಧಿ ಚಿತ್ರಕೇತ ಮೈ ಮುರಿದೆದ್ದು ಸೆರೆಮನೆಯ ಕಂಡು ಸೋಜಿಗಗೊಂಡನು ॥೧॥

ರಾಗ - ಸೌರಾಷ್ಟ್ರ - ಅಷ್ಟತಾಳ

ಹರಹರ ಏನಿದಚ್ಚರಿಯ ಸಂಗತಿ ಹಾ ಹಾ । ಏನಿದೇನು ॥ ವನಾಂ । ತರದಿ ನಾ ಮಲಗಿರ್ದೆನರಿಯೆನೀ ಘಟಣೆಯ । ನೇನಿದೇನು ॥೧॥ ಕಾರಾಲಯವನೆಂತು ಸೇರಿದೆ ನರರೆಯ। ದೇನು ಚೋದ್ಯ ॥ ಎನ್ನ । ಚಾರು ಸುಂದರ ವಾಜಿ ತೋರದು ಶಿವ ಶಿವ । ಏನು ಚೋದ್ಯ ॥೨॥ ಯಾರೆನ್ನನೊಯ್ದರೀ ಕಾರಮಂದಿರಕಾಗಿ । ಏನಿದಯ್ಯ । ರಾಜ । ನಾರೀ ಪಟ್ಟಣಕೆ ಮಾರಾರಿಯೋರ್ವನೆಬಲ್ಲ । ನೇನಿದಯ್ಯ ॥೩॥

ಕಂದ

ಗಿರಿಸುತೆ ಕೇಳು ನೃಪಾತ್ಮಜ । ಸುರುತರ ಸೋಜಿಗದಿಂ ದಿಗಿಲುಗೊಂಡು ಭಯದಿಂ ॥ ನೆರೆ ಚಿಂತಿಸುತಿರೆ ಖಚರನ । ತರಳೆಯ ಮತ್ತೀಕ್ಷಿಸುತಿಂತೆಂದಂ ಭರದಿಂ ॥೧॥

ರಾಗ - ಸುರುಟಿ - ಏಕತಾಳ

ಯಾರು ನೀನು ಲಲನೆ । ಬಲ್‌ಕೀರಗಾನೆ । ಯಾರು ನೀನು ಲಲನೆ । ಪ ॥ ಯಾರು ನೀನು ಮದವಾರಣಗಮನೆಯೆ । ಭೋರನೆನಗೆದಯ । ಬೀರುತಲುಸುರೆ ॥ಅ ಪ ॥ ಅನಿಮಿಷರಂಗನೆಯೊ । ಗಂಧರ್ವರ ಸತಿಯೊ । ದನುಜರ ಕಾಮಿನಿಯೊ ॥ ಮನುಜರ ಸುದತಿಯೆ । ವನರುಹ ಮುಖಿ ನೀ । ಘನಮಾಯದ ಕಾಮಿನಿಯೋ ವಿವರಿಸು ॥ ಯಾರು ॥೧॥ ಯಾರು ಎನ್ನನಿಂದು । ಸೆರೆಮನೆಯೊಳು । ಸೇರಿಸಿದವನೆಂದು ॥ ವಾರತೆಯರಿಯೆನು । ಚಾರುವದನೆ ಸುಕು । ಮಾರಿಯೆ ಪೇಳದ । ನಾರಿ ಶಿಖಾಮಣಿ॥ ಯಾರು ॥೨॥

ರಾಗ -ತೋಡಿ - ಏಕತಾಳ

ಬೆದರಲ್ಯಾಕೆ ಚದುರ ನೀನೀ ವಿಧದೊಳಿಂತು ಮನದಿ । ಸುದತಿಯೆನ್ನ ಹದನವೆಲ್ಲ ಮುದದಿ ಪೇಳ್ವೆದಿಟದಿ ॥೧॥ ಸಖಿಯೆ ಪೇಳು ಪೇಳು ನಿನ್ನ ಸಕಲ ವಾರ್ತೆಯನ್ನಾ । ಚಕಿತ ಚಿತ್ತನಾಗಿರುವೆನು ಸುಕುಮಾರಿ ಪೇಳಿದನಾ ॥೨॥ ಗಂಧರ್ವೇಶ ಸುಲೋಚನನ ನಂದನೆ ತಾನಹೆನು । ಮಂದ ಬುದ್ಧಿ ಕಾಲಜಂಘ ತಂದಕದ್ದೆನ್ನುವನು ॥೩॥ ನಾರಿ ಕೇಳ್ವಾ ಕಾಲ ಜಂಘನಾರು ಪೇಳು ಜವದಿ । ಈ ರಾಜ್ಯವ ನಾಳ್ವ ನಿರ್ಜರಾರಿಯೋ ನಿಶ್ಚಯದಿ ॥೪॥ ದನುಜಕಾಲಜಂಘನೀ ಪಟ್ಟಣಕೆ ಸಾರ್ವಭೌಮ । ವನಿತೆಯೆನ್ನ ವರಿಸೆ ಕಾರ ಮನೆಯೊಳಿಟ್ಟನಧಮ ॥೫॥

ರಾಗ - ಕೇತಾರಗೌಳ - ಝಂಪೆ ತಾಳ

ಕಂಠೀರವಾಭಗಮನೆ । ಹೇ ಕಂಬು । ಕಂಠಿ ವಿಧುಬಿಂಬ ವದನೆ । ಕಂಟಕಿ ನಿಶಾಚರನನು । ಬಡಿವೆ ಶಿತಿ । ಕಂಠನೊಲುಮೆಯೊಳು ನಾನು ॥೧॥ ಆನಂದವಾಯ್ತು ಸುಗುಣ । ಹರಿದಯದಿ । ದಾನವನ ವಧಿಸು ನಿಪುಣ । ಮೀನಕೇತನು ಎನ್ನನು । ದಹಿಪನಿದ । ಕೇನುಪಾಯವ ಕಾಣೆನು ॥೨॥ ಕಂಜಮುಖಿ ಭ್ರಮರ ವೇಣಿ । ಕೇಳಿತ್ತ । ಮಂಜುಳ ಸುಕೀರ ವಾಣಿ ॥ಅಂಜುತಂಗಜಗೆಗಾಢ । ಎನಗೀಗ । ಜಂಜಾಟವೀಯಬೇಡ ॥೩॥ ನವಮೋಹನಾಂಗ ಕೇಳು । ಸ್ಮರನುಮದ್ರವಸಹಿಸಲಾರೆ ತಾಳು ॥ ಕುವಲಯಾಂಬಕನೆ ಮುದದಿ । ಮಮತಾಪ । ನಿವಹರಿಸು ಕರುಣಶರಧಿ ॥೪॥ ಆಗದಾಗದು ಕಾಮಿನಿ । ಛಲವಿದನು । ನೀಗು ನೀನೆಲೆ ಭಾಮಿನಿ ॥ ಪೂಗೋಲ ಕೇಳಿಗೆನ್ನ । ಕಾಡದಿರು । ಪೋಗತ್ತ ದಯದೊಳಿನ್ನ ॥೫॥ ಬಿಡೆಬಿಡೆನು ಸಮರಧೀರ । ಸ್ಮರನೆನ್ನ । ಸುಡುವನುಳಿಯದು ಶರೀರ ॥ ಕಡುದಯಾ ಹೀನನೋಲು । ಮನದಿಷ್ಟ । ಕೊಡುದಿಹುದು ತರವೆ ವೇಳು ॥೬॥

ವಾರ್ಧಿಕ

ಮಡದಿ ವಿದ್ಯುನ್ಮತಿಯ ಚಿತ್ರಕೇತಂ ಬಳಿಕ । ಪಿಡಿದಪ್ಪಿ ವಿಧ ವಿಧದಿ ಮದನಕೇಳಿಯಗೈದು ಕಡುತೋಷದಿಂದಿರಲ್ಕಿತ್ತ ವಿಪಿನಾಂತರದಿ ಕೈರಾತನಿಕರದೊಡನೆ ॥ ಪೊಡವೀಂದ್ರನಣುಗ ಸಹಭವಚಿತ್ರವಾಹನಂ । ದೃಢದಿ ಜೇಷ್ಟನ ಕಾಣದರಸುತವನಂ ಸರಸಿ । ಯೆಡೆಗೆ ಬರಲಗ್ರ ಜನ ಹಯದ ಮಾಂಸಾಹಾರಗೈದ ಕುರುಹಂ ಕಂಡನು ॥೧॥

ರಾಗ - ದೇಶಿ- ಏಕತಾಳ

ಎತ್ತ ಪೋದೆಯೆನ್ನ ಮುದ್ದು । ಅಣ್ಣ ದೇವ । ಅಧಿಕ । ಚಿತ್ತ ಚಂಚಲಿಸುತಲಿಹುದು । ಅಣ್ಣದೇವ॥ ಸುತ್ತುತಾರಣ್ಯದಿ ನಾನಿಹೆನು । ಅಣ್ಣ ದೇವ । ಕರುಣ । ವೆತ್ತುತೆನಗೆ ಮೈದೋರೀಗ । ಅಣ್ಣದೇವ ॥೧॥ ತಾತ ಮಾತೆಯರು ಮಂದಿರದಿ । ಅಣ್ಣದೇವ । ಅಗ್ರ । ಜಾತನೆತ್ತ ಪೋದನೆನಲು। ಅಣ್ಣದೇವ॥

ಮಾತನಾಡಲೇನನಕಟ। ಅಣ್ಣದೇವ । ನಿನ್ನ । ಪ್ರೀತಿಯನುಜನಲ್ಲವೆನಾ । ನಣ್ಣದೇವ ॥೨॥ ದುಷ್ಟ ಮೃಗಗಳಡಿವಿಯೊಳಗೆ । ಅಣ್ಣದೇವ । ನಿನ್ನ । ಕಷ್ಟವಿತ್ತು ಭುಂಜಿಸಿದವೊ । ಅಣ್ಣ ದೇವ ॥ ಭ್ರಷ್ಟ ಖಳರು ವನದಿ ನಿನ್ನ । ಅಣ್ಣದೇವ । ಕಂಡು । ಥಟ್ಟನೆ ಕೊಂಡೊಯ್ದರೇನೊ । ಅಣ್ಣದೇವ ॥೩॥

ಭಾಮಿನಿ

ಇನಿತು ಶೋಕಾಕ್ರಾಂತನಾಗುತ । ಜನಪನಂದನಚಿತ್ರ ವಾಹನ । ವನದ ಮಧ್ಯದಿಯಗ್ರಜಾತನನರಸಿ ಸಿಕ್ಕದಿರೆ ॥ ಘನಕಿರಾತರ ಪಡೆಯ ಸಹಿತಲಿ । ಮನೆಗೆ ತೆರಳುತ ಖಿನ್ನನಾಗುತ । ಜನಕನಂಘ್ರಿಗೆ ಬಾಗಿ ಬಿನ್ನಹಗೈದನೀ ತೆರದಿ ॥೧॥

ರಾಗ - ಸಾಂಗತ್ಯ - ರೂಪಕತಾಳ

ತಾತ ಬಿನ್ನಪವಿದ ಪ್ರೀತಿಯಿಂ ಕೇಳಗ್ರ । ಜಾತ ಘೋರಾರಣ್ಯಾಂತರದಿ ॥ ಖಾತಿಯಿಂದೊಡ ನೊಂದು ಮೃಗವನಟ್ಟುತ ಗರ್ವ । ವಾಂತು ತಾನೋರ್ವ ಮುಂದ್ಯರಿದು ॥೧॥ ಪಿಂದೆ ಬಾರದಿರೆ ನಾ ಮುಂದ್ಯೆದಿ ಪುಡುಕಿ ಮತ್ತೊಂದು ಕಾನನದ ಮಧ್ಯದಲಿ ॥ ಸುಂದರ ಸರಸಿಯ ಬಳಿಯ ವಾಜಿಯ ರಕ್ತ। ಬಿಂದುಗಳನು ಕಂಡೆ ಜನಕ ॥೨॥ ಅಡವಿಯನೆಲ್ಲವ ಪುಡುಕಿಯಗ್ರಜನನ್ನು । ದೃಢದಿಕಾಣದೆ ಖಿನ್ನನಾಗಿ॥ ಕಡುಗಲಿ ಶಬರರ ಪಡೆಯೊಡನಯ್ತಂದೆ । ನುಡಿಯಲೇನೆನುತೀ ಚೋದ್ಯವನು ॥೩॥

ಕಂದ

ಜಾತನ ನುಡಿಯನು ಕೇಳುತ । ಸೀತಾನಂದನ ಮಹಾಂತ ಶೋಕದೊಳಾಗಂ ॥ ಭೂತಳಕೊರಗುತ ಭಯದಿಂ । ದೀತೆರ ಮರುಗಿದ ಕುಮಾರಕನನೆನೆಯುತ್ತಂ ॥೧॥

ರಾಗ - ತೋಡಿ - ಆದಿತಾಳ

ಹಾಕುವರಗುಣ ಸದನ । ಕೋಕನದಾಯತ ನಯನ ॥ ಶೋಕವ ಸೈರಿಸೆನಕಟ । ಬಾಕ್ಯಪೆ ದೋರುತ ಸುಭಟ ॥೧॥ ಮುನ್ನವೆ ಬೇಟೆಯು ನಿಮಗೆ ಬೇ । ಡೆನ್ನುತ ಪೇಳಲುಯೆನಗೆ ॥ ಖಿನ್ನತೆ ನೀಗೆನುತೊರೆದು ॥ಪಂ॥ ಪನ್ನನೆ ಸಾರಿದೆಯಿಂದು ।೨। ಮಗನೆ ಗುಣಾಢ್ಯನೆ ನಿನ್ನ । ನಾ । ನಗಲುವ ದೆಂತಲೆ ರನ್ನ ॥ ಜಗದೊಳು ಬಾಳ್ವೆನೆದಿಟದಿ । ಈ । ಮೊಗವನು ತೋರೆನು ಭರದಿ ॥೩॥

ಆರ್ಯಸವ್ಯಾ

ಪರಿಪರಿಯಿಂದಲಿ ಕರಗುತ ಭೂಮಿಪ । ವರಲವ ಚಿಂತಿಸುತಿರಲಾಗ ॥ ಹರಿನಾರಾಯಣ ಪೊರೆಯೆನುತಲಿ ಮುನಿ । ವರನಾರದ ಬಂದನು ಬೇಗ ॥೧॥

ಭಾಮಿನಿ

ನಾರದಾಂಕನ ಕಂಡಲವನು ಪ । ದಾರವಿಂದದಿ ಮಣಿದು ವಿನಯದಿ । ಚಾರು ಸಿಂಹಾಸನವ ನೇರಿಸಿ ಕಂದಿದಾನನದಿ ॥ ಸ್ವಾರಿಯಾವಲ್ಲಿಂದ ಪೋಸತಹ । ವಾರತೆಗಳೇನೆನಲು ದ್ರುಹಿಣ ಕು । ಮಾರ ಮತ್ತಿಂತೆಂದ ಲವಭೂಪಾಲನೊಡನಂದು ॥೧॥

ರಾಗ - ಕಾಂಬೋದಿ - ಝಂಪೆ ತಾಳ

ಧಾರಿಣೀಪತಿ ನಿನ್ನ ಚಾರು ಮುಖ ಕಂದಿರುವ । ಕಾರಣವದೇನು ಪೇಳೀಗ ॥ ಭೂರಿ ಶೋಕವಿದೇನು ಭೋರನೆನಗುಸುರೆನಲು । ಶೂರಲವನೆಂದ ಚಿಂತಿಸುತ ॥೧॥ ಏನಪೇಳಲಿ ಮುನಿಪ ಮಾನಸದ ಶೋಕಗಳ ಕಾನನದಿ ಮೃಗ ಬೇಟೆಗೆನುತ ॥ ಸಾನುರಾಗದಿ ಪೋದ ಸೂನರೀರ್ವರೊಳೋರ್ವ। ನಾನಿಪುಣ ಚಿತ್ರಕೇತಾಖ್ಯ ॥೨॥ ಮತ್ತೊಂದು ಮೃಗವ ಬೆಂಬತ್ತಿ ನಡೆದವನು ತಾ । ನೆತ್ತ ಪೋದನೊ ಕಾಣೆನವನ ॥ ವೃತ್ತಾಂತವಿದು ನಿನಗೆ ಗೊತ್ತಿರಲು ಪೇಳೆನಲು । ಬಿತ್ತರಿಸಿದರ್ಮ ಮುನಿಪಾಲ ॥೩॥

ರಾಗ - ಪಂತುವರಾಳಿ - ಏಕತಾಳ

ಹೋ ಹೋ ಜನಪಾಲ ನೀನ್ಯಾಕೆ ಚಿಂತಿಸುವೆ ॥ಪ॥ ಮೂಲಕಾಸುರನ । ಬಾಲಕ ಕಠಿಣ ॥ ಕಾಲಜಂಘಗೆ ವೃತಜ್ವಾಲೆ ಸೋದರಿಯು ॥ ಹೋ ಹೋ ॥೧॥ ವನದೊಳು ನಿನ್ನ । ತನುಭವ ಮುನ್ನ ॥ ಘನನಿದ್ರೆಯಿಂದಿರೆ । ದನುಜೆ ನೋಡುತಲಿ । ಹೋ ಹೋ ॥೨॥ ವರಿಸುವೆನೆಂದು । ತರಳನನೊಯ್ದು॥ ಸೆರೆಯೊಳಿಟ್ಟಿಹಳು ನೀ । ಮರುಗಲ್ಯಾಕಿಂದು ॥ ಹೋ ಹೋ ॥೩॥

ಗಂಧರ್ವ ಪತಿ ಸುಲೋಚನನಣುಗೆ ರತಿಗೆ ಮಿಗಿಲೆಂದೆನಿಪ ವಿದ್ಯುನ್ಮತಿಯ ಚೋರತನದಿದನು। ಜೇಂದ್ರ ಮುನ್ನವೆ ತಂದು ಕಾರಾಗೃಹದೊಳಿಟ್ಟಿರುವನು ತನ್ನಾರಿಮಣಿಯು ॥ ಸುಂದರನೆ ನಿನ್ನಾತ್ಮಜಾಕೆಯಂ ವರಿಸಿ ಜತೆ । ಯಿಂದಲಿಹನೆನೆ ಕೇಳಿ ಲವಧರಾಧಿಪನುಗ್ರ । ದಿಂದ ಧನು ಝೇಂಕಾರವಂಗೈದು ನೇತ್ರದೊಳು ಐತಿಯುಗುಳುಂತೆಂದನು ॥೧॥

ರಾಗ - ಸೌರಾಷ್ಟ್ರ - ತ್ರಿವುಡೆ ತಾಳ

ತಾಮರಸ ಭವ ತನಯ ಕೇಳಾ । ಯಾಮಿನೀಚರ ವರ್ಯನನು ನಿರ್ನಾಮಗೈಯುವೆ ನೀಕ್ಷಣದಿ ಸಂಗ್ರಾಮವೆಸಗಿ ॥೧॥ ಕರ್ಬುರೇಂದ್ರನ ಸಂಹರಿಸಿಯೆ ।ನ್ನರ್ಭಕನ ನಾಜವದಿ ತರದಿರೆ । ಯುರ್ಬಿನಂದನೆ ಸೀತೆವನಿತೆಯ । ಗರ್ಭಭವನೆ ॥೩॥ ಕ್ರೂರದನುಜಾಧಮನ ನಗರದ । ದಾರಿ ಯಾವುದು ಪೇಳೆನಗೆ ಬಲ। ವಾರದೊಡನೈದುವೆನೆನಲು ಮುನಿ । ಭೋರನೆಂದ ॥೩॥

ಭಾಮಿನಿ

ಕೇಳು ಲವ ವಿಂಧ್ಯಾದ್ರಿ ಮೂಲ ದೊ । ಳೇಳು ಸುತ್ತಿನ ಕೋಟೆಯೊಳಗೆ ಕ । ರಾಳರಹದಶ ಕೋಟಿ ಸೇನೆಯ ಕೂಡಿ ಖಳನಿಹನು ॥ ಕಾಳಗದಿ ಬಲು ಶೂರನೈ ಕರುಣಾಳು ನೀನೆನ್ನೊಡನೆ ಬರಲಾ । ಖೂಳದಿತಿಜವಪುರದ ಪಥವನು ತೋರ್ಪೆ ಪೇಳೆನಲು ॥೧॥

ರಾಗ - ಮಾರವಿ - ಏಕತಾಳ

ವೃತಿಪನ ನುಡಿಕೇಳುತಲುಗ್ರದಿ ರಘು । ಪತಿನಂದನನಾಗ ॥ ಪ್ರಥುಳ ಮಹಾಬಲ ವಿತತಿಯ ನೆರಹಿಸಿ । ಹಿತದಲಿ ಪರುಠವಿಸಿ ॥೧॥ ಅನಿತರೊಳಗ್ರಜ ಮನುಮಥದರನೋ । ಲನುಜ ಲವನೊಳೆಂದ॥ ದನುಜನ ಪುರಕೀಕ್ಷ್ಣಣ ಪೊರವುಡುವದು । ಮನದಲಿ ಶಂಕಿಸದೆ ॥೨॥ ಮುನಿಪನು ಮತ್ತೆಂದನು ಭೂವರಕೇಳ್ । ದನುಜಗೆ ಮಾಯದಲಿ ॥ ಅನುದಿನ ಮಿಗಿಲೆಂದೆನಿಪ ವಿಭೀಷಣ । ನನು ನೆನೆಯೈಜವದಿ ॥೩॥

ಕಂದ

ಶರಮಾಧವನಂ ಲವಭೂ । ವರ ತಾ ನೆನಯಲ್ ವಿಭೀಷಣಾಂಕಂ ಚಂಡಾ । ಸುರದಳಪತಿ ಯೊಡನೈತರೆ । ಧರಣಿಪನಾಲಿಂಗಿಸುತ್ತಲೆಂದಂ ಮುದದಿಂ ॥೧॥

ರಾಗ - ಮಧ್ಯಮಾವತಿ - ಏಕತಾಳ

ಲಾಲಿಸು ಶರಮಾಸ್ಯ ಕುಮುದಾಳಿಚಂದ್ರ । ಶ್ರೀಲೋಲಪಾದ ಭಾವಿಕ ಗುಣ ಸಾಂದ್ರ ॥ಪ॥ ಏನ್ನಾತ್ಮಭವ ಚಿತ್ರಕೇತನೆಂಬವನು । ತನ್ನನುಜನ ಕೂಡಿ ಬೇಟೆಗೈದವನು ॥ ಪನ್ನತಿಕೆಯೊಳೊಂದು ಮೃಗವ ಬೆಂಬತ್ತಿ । ಉನ್ನತ ವನಕೋರ್ವ ತೆರಳಿದ ಸುಮತಿ ॥ ಲಾಲಿಸು ॥೧॥ ಕ್ರೂರ ರಕ್ಕಸಿಯೋರ್ವಳವನನೀಕ್ಷಿಸುತ । ಚಾರು ಕಾಂತನ ಗೈವೆನೆಂದು ಭಾವಿಸುತ ॥ ಚೋರೆ ತಾನನುಗನನೊಯ್ದಿಹಳೆಂದು । ವಾರತೆಯುಸುರಿದನಜಪುತ್ರನಿಂದು ॥ ಲಾಲಿಸು ॥೨॥ ಮೂಲಕಾಸುರ ಪುತ್ರ ವಿಂಧ್ಯಾಚಲದೊಳು । ಕಾಲಜಂಘನ ಸಹೋದರಿಯಂತೆಯವಳು ॥ ಖೂಳದೈತ್ಯನ ಮಾಯೆಗಳುಕದ ಭಟನು । ಶೀಲನೀನೆಂದು ನಾ ನೆನೆದೆ ನಿನ್ನುವನು । ಲಾಲಿಸು ॥೩॥

ರಾಗ -ಮುಖಾರಿ - ಏಕತಳ

ಹೋಡೋ ನೀ ಶೋಕಿಸದಿರು ರಾಜೇಂದ್ರ ಮಿಹಿರಾನ್ವಯಚಂದ್ರ ॥ಪ॥ ಪಾತಕಿ ಖಳನನು ನಿಮಿಷಾರ್ಧದಲಿ । ತವಪಿತನೊಲುಮೆಯಲಿ । ಘಾತಿಸದಿರ್ಪೆನೆ ಸಮರಾಗ್ರದಲಿ ॥ ಈತತೂಕ್ಷ್ಣಣ ಬಲ। ವ್ರಾತದೊಡನೆ ಭೂ । ನಾಥನೆ ಪೊರಮಡು । ಭೀತಿಯ ತೊರೆವುತ ॥ ಹೋ ಹೋ ॥೧॥

ಕುನ್ನಿದಾನವನನು ಗಣ್ಯಕೆ ತರೆನು । ಸಂಶಯವಿದಕೇನು । ಎನ್ನ ಮಾರ್ಬಲ ಸಹಿತೈತಂದಿಹೆನು॥ ಖಿನ್ನತೆ ಬಿಡುಗುಣ । ರನ್ನ ನೃಪತಿ ತಡ । ವಿನ್ಯಾತಕೆ ನೀ । ಸನ್ನಹನಾಗೈ । ಹೋ ಹೋ ॥೨॥

ವಾರ್ಧಿಕ

ಕುಶಲವರು ವರವಿಭೀಷಣನೊಡನೆ ಶೀಘ್ರದಿಂ । ದಸಮ ಮಾರ್ಬಲದೊಡನೆ ಪೋಂದೇರ ನಡರುತಂ । ಋಷಿವರನನುಜ್ಞೆಯಂದದಿ ನಿಶಾಚರನ ಪಟ್ಟಣಕೆ ಪಯಣವಗೈಯಲು ॥ ಅಸುರೇಂದ್ರ ಕಾಲಜಂಘಾಖ್ಯನಿತ್ತಲು ತನ್ನ । ವಸತಿಯೊಳು ರತ್ನಮಯ ಸಿಂಹಾಸನವನೆರ್ದು । ಕುಶಲದಿಂ ಗುರುವರ್ಯ ನಿಪುಣ ಮೆದೋಹೂತನಂ ಕರೆಸುತಿಂತೆಂದನು ॥೧॥

ರಾಗ -ಭೈರವಿ - ಝಂಪೆ ತಾಳ

ಗುರುವೆ ಚಿತ್ತವಿಸು ಖೇಚರ ಸುಲೋಚನ ಸುತೆಯ । ಭರದಿ ನಾ ತಂದೆನ್ನ । ಸೆರೆಯೊಳಿಟ್ಟಹೆನು॥೧॥
ಪರಮಲಗ್ನವನು ನೀ । ಪರಿಕಿಸುತ ಪೇಳ್ವುದೆನೆ । ಗುರುವು ಪಂಚಾಂಗವನು । ತ್ವರೆಯೊಳೀಕ್ಷಿಸುತ ॥೨॥
ನಸುನಗುತಲೆಂದ ಹೇ । ನಿಶಿಚರನೆ ಕೇಳ್ ನಾಳೆ । ನಿಶಿಯೊಳಿಹುದೈ ಲಗ್ನ । ವಸಮಸಾಹಸಿಯೆ ॥೩॥
ಇಂತೆನಲು ಖಳನು ಮುದ । ವಾಂತು ಲಗ್ನಕೆ ದಿನವ ।ಗೊಂತೆಸಗಿ ಸಖರಿಗಾ । ಮಂತ್ರಣವ ಕಳುಹಿ ॥೪॥
ಅನಿತರೊಳು ಪುಣ್ಯಜನ।ನನುಜೆ ವೃತಜ್ವಾಲೆ । ವಿನಯದಿಂದಣ್ಣನಡಿ । ವನಜಕೆರಗಿದಳು. ॥೫॥

ರಾಗ -ನವರೋಜು -ಏಕತಾಳ

ಅಗ್ರಜ ಬಿನ್ನವ ಕೇಳು । ರಿಪು । ನಿಗ್ರಹ ಭೂರಿದಯಾಳು ॥ ಶೀಘ್ರದೊಳೆನಗಸು । ರಾಗ್ರಣಿ ವರನನ ।ನುಗ್ರಹಿಪುದು ಬಿಡು । ಉಗ್ರವನೆನ್ನೊಳು ॥೧॥

ರಾಗ -ಕೇತಾರಗೌಳ -ಝಂಪೆ ತಾಳ

ತಂಗಿ ಬಾ ವೃತ್ರಜ್ವಾಲೆ । ತಿಳಿದೆನಿ ।ನ್ನಿಂಗಿತವ ಸುಗುಣ ಶೀಲೆ ॥ ಅಂಗಜೋಪಮ ವರನನು। ನಿನಗೆ ಲ । ಗ್ನಂಗೈವೆ ಬಿಡು ವ್ಯಥೆಯನು ॥೧॥

ರಾಗ -ನವರೋಜು - ಏಕತಾಳ

ಪ್ರಾಯವು ತುಂಬಿಹುದೆನಗೆ । ಆ । ಕಾಯಜ ಬಾಧಿಪನು ಮಿಗೆ ॥ ಜಾಯನಗೈವವು । ಪಾಯವನೊಳ್ಪುದು । ಜೀಯ ನಿಶಾಚರ । ರಾಯನೆ ಕರುಣದಿ ॥೧॥

ರಾಗ -ಕೇತಾರಗೌಳ - ಝಂಪೆ ತಾಳ

ಎನ್ನ ಪರಿಣಯವ ಮೊದಲೇ ನಿಶ್ಚೈಸಿ । ದನ್ನನೀ ನರಿಯೆ ಪ್ರಬಲೆ ॥ ಖಿನ್ನತೆಯಿದ್ಯಾಕೆ ಭಗಿನಿ ॥

ನಿನಗೆ ವರ । ನನ್ನು ಗೈಯದಿರೆ ತರುಣಿ ॥೧॥

ರಾಗ -ನವರೋಜು -ಏಕತಾಳ

ಮುನ್ನವೆ ತೋಷದೊಳೆನಗೆ । ವರ । ನನ್ನೆನಗಿ ನೀ ಕಡೆಗೆ ॥ ಕನ್ನೆಯ ವರಿಸುವ । ದನ್ನಾಲೋಚಿಸು। ರನ್ನ ಕುಸುಮ ಶರ । ನೆನ್ನ ದ ಹಿಸುತಿಹ ॥೧॥

ರಾಗ ಕೇತಾರ ಗೌಳ - ಝುಂಪೆತಾಳ

ಭ್ರಾಂತಿ ಬಿಡು ತಂಗಿ ನೀನು । ನಿನಗೆ ತ ।ಕ್ಕಂಥ ಸುಂದರ ವರನನು ॥ ಗೊಂತುಗೈವುತ ಪರಿಣಯ। ಗೈವೆ ಸಿ ।ದ್ಧಾಂತ ವಿದು ಹಿಡಿಭಾಷೆಯ ॥೧॥

ರಾಗ -ನವರೋಜು - ಏಕತಾಳ

ಸುಂದರಿಯಾದೆನ್ನುವನು । ಪೋ । ಲ್ವಂದದ ವಲ್ಲಭನನ್ನು ॥ ಚಂದದಿ ಮೊದಲಾಂ । ತಂದಿಹೆ ನೆನಗಾ । ನಂದದಿ ಪರಿಣಯ । ವಂದಯ ಮಾಡ್ಯೆ ॥೧॥

ರಾಗ - ಕೇತಾರಗೌಳ -ಝುಂಪೆ ತಾಳ

ಭಂಡೆಯನು ಜಾತೆ ನಿನ್ನ । ಮನಬಂದ । ಮಿಂಡನನು ತಂದು ಮುನ್ನ ॥ ಷಂಡ ವಚನಗಳ ನ್ಯಾಕೆ। ನುಡಿವೆ ಶಿರ । ತುಂಡಿಸುವೆ ನೋಡು ಜೋಕೆ ॥೧॥

ರಾಗ -ನವರೋಜು -ಏಕತಾಳ

ಉಸುರುವದೇತಕೆ ಹೀಗೆ । ಪೋ । ಡಶವರುಷವಾಯ್ತೆನಗೆ ॥ ಕುಶಲದಿಲಗ್ನವ । ನೆಸಗದಿರಲು ಸೈ । ರಿಸೆನಗೆಗೇಡನು । ನಿಶಿಚರವರ್ಯನೆ ॥೧॥

ರಾಗ -ಕೇತಾರ ಗೌಳ -ಝುಂಪೆ ತಾಳ

ಅನುಜೆ ದುಃಖಿಸದಿರೀಗ । ಇನ್ನೆರಡು ದಿನವ ಸೈರಿಸಲು ಬೇಗ ॥ ನಿನಗೋರ್ವ ವಲ್ಲಭನನೇ ಗೈವೆನಿದ । ಕನುಮಾನಬೇಡ ಸುಗುಣೆ ॥೧॥

ವಾರ್ಧಿಕ

ಭಗಿನಿಯನು ದನುಜೇಂದ್ರ ನಂತವಿಸುತಿರಲಿತ್ತ । ಸುಗುಣ ಸುರಮುನಿಯೊಡನೆ ಜನಕ ಜಾನಂದನರು। ವಿಗಡ ಚತುರಂಗ ಮಾರ್ಬಲದೊಡನೆ ನಡೆತಂದು ಖಳನ ನಗರದ್ವಾರದಿ ॥ ಅಗಣಿತ ಭಯಂಕರ ಚರಾವಳಿಯ ನಿರದೆ ಸಂ । ಯುಗದಿ ಧರೆಗಪ್ಪಳಿಸಲಳಿದುಳಿದ ಭಟರು ತಾ । ಮಿಗೆ ಜವದಿ ಕಾಲಜಂಘನ ಬಳಿಗೆ ತೆರಳುತಂ ಮಣಿದು ಬಿನ್ನಹ ಗೈದರು ॥೧॥

ರಾಗ -ಮುಖಾರಿ -ಏಕತಾಳ

ದಾನವಾಗ್ರಣಿಯೆ ಲಾಲಿಸಯ್ಯ । ನಾವೆಂಬ ನುಡಿಯ । ದಾನವಾಗ್ರಣಿಯೆ ಲಾಲಿಸಯ್ಯ ॥ಪ॥ ಕುಶಲವರೆಂದು ನಾಮವಂತೆ । ಸಾಕೇತವೆಂಬ । ವಸುಧೆಯ ನಾಳ್ವ ಭೂಪರಂತೆ ॥ ಅಸಮಮಹಾಬಲ ವಿಸರದೊಡನೆ ಬಂ । ದಸುರ ತತಿಯ ಭಂಗಿಸಿ ನಿಮ್ಮೊಡೆಯನಿ । ಗುಸುರುವದೆನು ತೆಮ್ಮ ಸುವನುಳುಹಿಕಳು। ಹಿಸಿದರು ತವಕದಿ ಪುಸಿಯಲ್ಲೊಡೆಯನೆ ॥ ದಾನವಾಗ್ರಣಿ ॥೧॥ ದನುಜ ವಿಭೀಷಣಾಂಕ ಸಹಿತ । ಬಂದಿಹನು ಕೇಳಾ । ಜನಪಾಲನೊಡನೆ ಸುಪ್ರತೀತ ॥ ಅನುಪಮ ವೀರರ ಘನಸಾಹಸವೇ । ನೆನುತುಸುರಲಿ ಪುರ ಹನನನು ಬರೆ ಭಯ । ವನುಗೊಳರಿದು ಖರೆಯನುಮಾನಿಸದಿಂ । ದನುರಾಗದಿ ರಣಕನು ವಾಗುವದ್ಕೆ ॥ ದಾನವಾಗ್ರಣಿ ॥೨॥

ರಾಗ -ಸೌರಾಷ್ಟ್ರ - ತ್ರಿವುಡೆ ತಾಳ

ಚಾರಕದ ಬಿನ್ನಪವ ಕೇಳುತ । ಕ್ರೂರ ಖಳ ನಿಟಲಾಕ್ಷನಂದದಿ । ಭೂರಿ ಕೋಪವ ತಾಳು ತುಸುರಿದ । ನಾರುಭಟಿಸಿ ॥೧॥ ಪುದುಕುತಿರ್ದನು ನರಸಮೂಹವ । ಮೃಡನ ದಯದಲಿ ದೊರಕಿದರು ಹಾ । ಬಿಡೆನಿವರ ಸಂಹರಿಸದೀಕ್ಷಣ । ಸಡಗರದಲಿ ॥೨॥ ನರರ ಶಿರವರಿದವರ ಮಾಂಸದಿ । ಹರುಷದಿಂ ಭಕ್ಷ್ಯವನು ಗೈವುತ । ವಿರಚಿಸುವೆ ಭೋಜನವ ಮಿತ್ರರ । ನೆರವಿಗೀಗ ॥೩॥ ಮಂತ್ರಿವರ ಚಿತ್ರವಿನಸು ಸೈನ್ಯದ । ತಿಂಥಿಣಿಯ ಸನ್ನಾಹವೆಸಗೈ । ಭ್ರಾಂತ ನರರೊಡ ನಾಹವಕೆ ನಾ । ನಿಂತು ನಡೆವೆ ॥೪॥ ಎನುತಮಿತ ಮಾರ್ಬಲವನೆರಹಿಸಿ ॥ ದನುಜ ಸನ್ನಹ ಗೈವುತಿರೆ ಕುಶ । ಜನಪನೊಳು ಶರಮೇಶನೆಂದನು। ವಿನಯದಿಂದ ॥೫॥

ರಾಗ -ಕೇತಾರಗೌಳ - ಅಷ್ಟತಾಳ

ಕ್ಷಿತಿಪ ಕೇಳೆನ ಗಾಜ್ಞೆ ಹಿತದಿ ಪಾಲಿಪುದೀಗ । ಖತಿಯಿಂದ್ಮೆದುತ ಮಾಯದಿ ॥ ಸುತ ಚಿತ್ರ ಕೇತನ ಜತನದಿ ತರದಿರೆ ಹತಗೈವ ಖಳನವನ ॥೧॥ ದುರುಳ ತಾನರಿಯದ ತೆರದಿ ನಾ ಮಾಯದಿ । ತೆರಳುತ ಬಾಲಕನ ॥ ಸೆರೆಮನೆಯಿಂದೀಗ ತರುವೆನನುಜ್ಞೆಯ। ಕರುಣಿಸು ಜನಪಾಗ್ರಣಿ ॥೨॥ ಎನಲೆಂದ ಕುಶ ಗುಣವನಧಿಯೆ ಕೇಳೀಗ । ನಿನಗಾಜ್ಞೆಯಿತ್ತಿಹೆನು ॥ ಅನುನಯದಿಂದ ಪೋಗೆನಲಾಗ ಶರಮೇಶ । ಘನಮಾಯದಲಿ ತೆರಳಿ ॥೩॥ ಖಳನ ಕಾರಾಲಯದೊಳು ಗುಪ್ತಮಾರ್ಗದಿ । ತಿಳಿಯದಂದದಿ ಪೊಕ್ಕುತಾ॥ ಲಲನೆಯ ಕೂಡಿರ್ಪ ನಳಿನಾಪ್ತಕುಲಜನ । ಸಲೆವೇಗ ಕಂಡೆಂದನು ॥೪॥

ರಾಗ - ಶಂಕರಾಭರಣ -ಏಕತಾಳ

ಬಾಲಚಿತ್ರಕೇತನನೀ । ನೇಳೇಳು ನಿನ್ನಯ್ಯ ತನ್ನ । ಪಾಳಯವನು ಕೂಡಿ ಭರದಿ । ಖೂಳ ದನುಜನ॥ ಕಾಳಗದಲಿ ವಧಿಸಿ ನಿನ್ನ । ಲೀಲೆಯಲಿ ಕೊಂಡೊಯ್ಯಲೆನುತ । ಭೂಲಲಾಮ ಬಂದಿರುವನು।

ಜಾಲವಲ್ಲಯ್ಯ ॥೧॥ ಇಂತೆನಲ್ಕೆ ಚಿತ್ರಕೇತ । ಸಂತಸವ ತಾಳ್ದು ಶರಮಾ । ಕಾಂತಗೆಂದನರರೆಯೆನ್ನ । ತ್ಯಂತ ಪುಣ್ಯದಿ ॥ ಚಿಂತೆಯನ್ನೆ ತೊರೆದೆಯೆನ್ನ । ಕಾಂತೆಸಹಿತ ಬಹೆನು ಸುಗುಣ । ವಂತ ಮುಂದೆ ನಡೆವುದೆಂದ । ಕಂದು ಸನ್ನಿಭ ॥೨॥

ಭಾಮಿನಿ

ರಾತ್ರಿ ಚರ ಶರಮೇಶ ಮತ್ತಾ । ಚಿತ್ರಕೇತನ ರಮಣಿ ಸಹಿತ ಧ । ರಿತ್ರಿಪತಿ ಕುಶಲವರೆಡೆಗೆ ಕೊಂಡೊಯ್ಯೆ ಕ್ಷಿಪ್ರದಲಿ ॥ ಮಿತ್ರವಂಶಲಲಾಮರಡಿ ಶತ । ಪತ್ರಕಣಿಗನು ಮಣಿಯೆ ಲವ ಸತ್ । ಪುತ್ರನನು ಬಿಗಿದಪ್ಪಿ ನುಡಿದನು ಕಂಬನಿಯ ಸುರಿಸಿ ॥೧॥

ರಾಗ -ಶಂಕರಾಭರಣ - ಏಕತಾಳ

ಕಂದನೆನ್ನ ನುಡಿಯ ನೀನು । ಪಿಂದೆ ಧಿಕ್ಕರಿಸುತ ವನಕೆ । ಬಂದೆ ಬೇಟೆಯಾಡಲೆನುತ । ಮಂದಮತಿಯಲಿ ॥೧॥ ಜಾಣಕುವರ ನಿನ್ನ ದನುಜೆ । ಕಾಣುತೊಯ್ದು ಸೆರೆಯೊಳಿಡಲು । ಸ್ಥಾಣು ಕರುಣದಿಂದ ನಿನ್ನ । ಪ್ರಾಣವುಳಿದುದು ॥೨॥ ಅಧಿಕ ಕರುಣೆಸುರ ಮುನೀಂದ್ರ । ಹದನವೆನಗೆ ತಿಳಿಸೆಖಳನ। ಕದನ ಮುಖದಿ ಕೊಲಲು ಬಂದೆ । ಚದುರ ತನದಲಿ ॥೩॥ ನಗರ ಕೊಯ್ದು ಸುದತಿಯಿವಳ । ಮಗನೆ ನಿನಗೆ ಪರಿಣಯವನು । ಮಿಗೆ ವಿಭವದಿ ಗೈವೆ ದಿಟದಿ । ಸುಗುಣ ಲಾಲಿಸು ॥೪॥

ಕಂದ

ಇತ್ತ ನಿಶಾಚರ ರಣಕು । ನ್ಮತ್ತದಿ ಸನ್ನಹನಾಗುತ ಪೊರಮಡುವನಿತರೊಳ್ ॥ ಉತ್ತಮ ಮುನಿವರ ನಾರದ । ಮತ್ತಾ ದನುಜನ ನಿಕೇತನಕೆ ನಡೆತಂದಂ ॥೧॥

ಭಾಮಿನಿ

ನಾರದಾಂಕನನೀಕ್ಷಿಸುತದೇ । ವಾರಿ ಶೀಘ್ರದಿ ಋತ್ವಿಜನ ಪದ । ಸಾರಸಕೆ ಮೈಯಿಕ್ಕಿ ಸಿಂಹಾಸನದಿ ಕುಳ್ಳಿರಿಸಿ । ಸ್ವಾರಿಯಾವಲ್ಲಿಂದ ಬಂದಿಹ । ಕಾರಣವಿದೇನು ಸುರು ಪೊಸತಹ । ವಾರತಗ ಳೇನಿಹುದೆನಲು ಮುನಿವರ್ಯ ನಿಂತೆಂದ ॥೧॥

ರಾಗ - ಕಾಂಬೋಧಿ - ಅಷ್ಟತಾಳ

ಚಿತ್ತವಿಸಸುರಾಗ್ರಗಣ್ಯ । ಪೇಳ್ವೆ । ವೃತ್ತಾಂತವಧಿಕ ಕಾರಿಣ್ಯ ॥ ಬಿತ್ತರಿಸುವದೇ ನನಿತ್ತ ನಿನ್ನನುಜಾತೆ। ವೃತ್ರಜ್ವಾಲೆಯು ಗೈದ । ಕೃತ್ರಿಮದಿರವನ್ನ ॥೧॥ ಕಾರಡವಿಯೊಳು ರಕ್ಕಸಿಯು । ತಾ ಸಂ । ಚಾರಗೈದಿರ್ದಳು ಖರೆಯು ॥ ಧೀರಲವನ ಸುಕುಮಾರಕನೊಂದು ಕಾ । ಸಾರದ ಬದಿಯೊಳು ಭೂರಿನಿದ್ರೆಯೊಳಿರೆ ॥೨॥ ಕಂತು ಸನ್ನಿಭನಾ ಬಾಲನನು । ಕಂಡು । ಭ್ರಾಂತಳಾಗುತ ಮತ್ತಾತನನು ॥ ಕಾಂತನ ಗೈವೆನೆಂದಂತರಂಗದಿ

ನಿನ್ನ । ತ್ಯಂತ ಮೋಹದ ತಂಗಿ ಸಂತಸದಿಂದೊಯ್ದು ॥೩॥ ಗಂಧರ್ವ ಸುತೆಯಿರ್ಪ ನಿನ್ನ । ಕಾರ । ಮಂದಿರದೊಳಗಿಡೆ ಮುನ್ನ ॥ ಚಂದದಿ ಖಚರನ ನಂದನೆಯಳನಾತ । ಪೊಂದಿರಲನಿತರೊಳ್ ಬಂದನು ಲವಭೂಪ ॥ ೪॥ ಸುತನ ಮತ್ತಾ ವಿದ್ಯುನ್ಮತಿಯ । ಭೂಮಿ । ಪತಿ ಮಾಯಕದೊಳೊಯ್ದನಯ್ಯ ॥ ದಿತಿಸುತ ನೀನೀಗ ಜತನದಿಂತೆರಳುತ ಕ್ಷಿತಿಪನ ಗೆಲ್ಲುತ ಸತಿಯ ತಾರೆಂದನು ॥೫॥

ಕಂದ

ಕ್ಷಿತಿಪನ ನುಡಿಯಂ ಕೇಳುತ । ದಿತಿಸುತ ಕಾರಾಲಯವಂ ಪರಿಕಿಸಲಾಗಳ್ ॥ ಸತಿ ವಿದ್ಯುನ್ಮತಿಯಿರದಿರೆ । ಖತಿಯಿಂದಾರ್ಭಟಿಸುತ ಭಗಿನಿಯ ಪಿಡಿದೆಂದಂ ॥೧॥

ರಾಗ -ಭೈರವಿ - ಏಕತಾಳ

ದಿಂಡೆ ಭಗಿನಿ ಬಾರಿತ್ತ । ಹುಲು । ಮಿಂಡರ ಭ್ರಾಂತದರುತ್ತ ॥ ಭಂಡೆಯೆ ಮೋಪವ ಗೈದೆ । ತವ । ಮಂಡೆಯ ತರಿಯುವೆ ನಿಜದೆ ॥೧॥ ನಿಲ್ಲದಿರೆನ್ನಿದಿರೀಗ । ತಡ । ವಿಲ್ಲದೆ ತೊಲಗತಿ ಬೇಗ । ಖುಲ್ಲೆಯೆ ಕೆಡಿಸಿದೆ ಕಾರ್ಯ । ಇದ । ಸೊಲ್ಲಿನಲೇನಾಶ್ಚರ್ಯ॥೨॥

ವಾರ್ಧಿಕ

ಪುಣ್ಯಜನ ತಿಲಕ ಮತ್ತನುಭವೆಯ ಮೂಗ ಕಾ ರುಣ್ಯಮಿಲ್ಲದೆ ತುಂಡಿಸುತ್ತ ಪೋಗೆನುತಲಾ। ರಣ್ಯಕಟ್ಟಲು ವೃತ್ರಜ್ವಾಲೆ ಶೋಕಾಕ್ರಾಂತಳಾಗಿ ತೆರಳಲುದನುಜನು ॥ ಗಣ್ಯವೆಸಗದೆ ಭೂರಿ ಮಾರ್ಬಲವ ನೆರಹಿಸ್ಯೆ । ರಣ್ಯಮಯ ರಥವನಡರುತಲಿ ರಣಕೆಂದು ಕಾ । ಠಿಣ್ಯದಿಂದ ಮರರೆದೆ ಕಂಪಿಸುವ ತೆರದೊಳಾರ್ಭಟೆಗೈದು ನಡೆತಂದನು ॥೧॥

ಕಂದ

ಕೊಳುಗುಳ ಸನ್ನಹನಾಗುತ । ಖಳಪಾಲಕ ಕಾಲಜಂಘನೈತರೆ ಕಂಡುಂ ಮುಳಿದು ವಿಭೀಷಣ ವೀರನ । ದಳಪತಿ ಚಂಡಾಸುರಾಖ್ಯ ತಾನಿದಿರಾದಂ ॥೧॥

ರಾಗ -ಭೈರವಿ - ಏಕತಾಳ

ಚಂಡಾಸುರನುಗ್ರದಲಿ ಕೆಂ । ಗೆಂಡಗಳುಗುಳಿ ಖತಿಯಲಿ ॥ ಷಂಢ ಖಳನಿಗಿದಿರಾದ । ಶರ । ತಂಡವ ಠೀವಿಯೊಳೆಸೆದ ॥೧॥ ಎಸೆದಿಹ ವಿಶಿಖಾವಳಿಯ । ತುಂ। ಡಿಸುತಲಿ ಮೂಲಕ ತನಯ ॥ ಮುಸೆದಲಗುಗಳನು ಸೂಸಿ । ಮ । ತ್ತುಸುರಿದ ನಿಲ್ಲೆಲ ಸಹಸಿ ॥೨॥ ದಿತಿಭವನಲಗುಗಳನ್ನು । ತರಿಯುತ ಚಂಡಾಸುರವರನು ॥ ಮತಿಹೀನನೆ ನಿನಗೀಗ । ಯಮ । ಪಥವನು ತೋರ್ಪೆನು ಬೇಗ ॥೩॥ ಒದರ ದಿರೆಲವೋ ಚಂಡ । ನಿನ್ನೆದೆಯನು ಸೀಳುವೆ ಭಂಡ ॥ ಕದನವು ನಿನಗೆನ್ನೊಡನೆ । ಬಲು । ಸದರವೆ

ನಡೆಕುತ್ಸಿತನೆ ।।೪।। ನಾರಿಯ ಕದ್ದೊಯ್ದವನೆ । ತವ। ಮೋರೆಯ ಸುಡು ದುರ್ಜನನೆ ।।ಪೌರುಷವಿದು ಬಿಡು ಧೂರ್ತ । ನೀ । ಗಾರುಗೆಡದಿರ್ರೈ ವ್ಯರ್ಥ ।।೫।। ಹುಲುನರರಡಿ ಸೇರಿರುವ । ಖಳ। ಕುಲಹೀನನೆ ಬಿಡು ಹಟವ।। ಕೊಲುವೆನೆನುತ ಶರವೆರಡ । ನೆಸೆ ।ಯಲು ಮೈ ಮರೆದನು ಚಂಡ ।।೬।। ಚಂಡನು ಮೂರ್ಛಿಸಲಾಗ । ಖತಿಗೊಂಡು ವಿಭೀಷಣ ಬೇಗ ।। ಷಂಢ ಖಳನೆ ನಿಲ್ಲೆಂದ । ಶರ । ತಂಡ ಧರಿಸುತ್ತೈತಂದ ।।೭।।

ರಾಗ - ಶಂಕರಾಭರಣ - ಏಕತಾಳ

ನೀನೆಕಾಲಜಂಘುನೆಂಬ । ದಾನವಾಗ್ರಗಣ್ಯ ಭಳಿರೆ । ಹೀನ ಕೃತ್ಯಗೈದೆಯಲ್ಲ । ಶ್ವಾನನಂದದಿ ।।೧।। ಏನನೆಂದೆಯೆಲವೊ ಪಿಂತೆ । ಕ್ಷೋಣಿಗಾಗಿ ಯಗ್ರಭವನ । ಹಾನಿಗೈದಭಟನೆ ಸುಡುನಿ । ನ್ನಾನನವನ್ನು ।।೨।।

ಕೌಣಪೇಂದ್ರ ಕೇಳಗ್ರಜನ । ಕ್ಷೋಣಿಗಾಗಿ ಕೊಲಿಸಿದಲ್ಲ । ಸ್ಥಾಣುಸಖನ ಸತಿಯನೊಯ್ದು । ಪ್ರಾಣ ನೀಗಿದ ।।೩।। ಜಾಣನಹೆ ವಿಭೀಷಣಾಂಕ । ಕಾಣಿಸು ನಿನ್ನಧಟ ಲಂಕಾ । ಕ್ಷೋಣಿಗೊಡೆಯ ನೆಂಬ ಹಮ್ಮ । ಮಾಣಿಸುವೆನು ।।೪।। ಅಣ್ಣನಂತೆ ಪರರ ಸತಿಯ । ಕಣ್ಣನಿಟ್ಟು ಕದ್ದ ಧಡಿಗ । ಮಣ್ಣ ಕೂಡಿಸುವೆನು ನಿನ್ನ । ಗಣ್ಯವೇ ನೆಲ ।।೫।। ಮಣ್ಣ ಕೂಡಿಸುವುದಂತಿರಲಿ । ಮಿಣ್ಣನೆ ನೀನಿರದೆಯೆನ್ನ । ಹೆಣ್ಣ ತಂದೊಪ್ಪಿಸುವದುಚಿತ । ಕುನ್ನಿ ಕೇಳೆಲ ।।೬।।

ರಾಗ -ಮಾರವಿ - ಏಕತಾಳ

ಬಳಿಕ ವಿಭೀಷಣ ಖಳರಾಯಗೆ ಕೋಲ್ । ಮಳೆಗರೆಯಲು ದೈತ್ಯ ।।ಅಳುಕದೆ ಪ್ರತಿಶರ ಬಳಗವ ಬಿಡುತರೆ । ಘಳಿಗೆಯೊಳ್ ತುಂಡಿಸುತ ।।೧।। ಅಸುರನು ಸಲೆ ಕೋಪಿಸುತಲಿ ಮಾಯದಿ । ದಶದಿಕ್ಕುಗಳನ್ನ।। ಅಸಮಬಲದಿ ಬಂಧಿಸಿ ಗಾಢಾಂಧವ । ಮುಸುಕಲು ಕಂಡಾಗ ।।೨।। ಶರಮೇಶನು ರವಿ ಶರದಿಂದಿದ ಪರಿ ।ಹರಿಸಲು ದನುಜೇಶ ।। ಹರಮೊದಲಿತ್ತಿಹ ಶರವೆಸೆಯಲು ಮೈ । ಮರೆದ ವಿಭೀಷಣನು ।।೩।।

ಕಂದ

ಅದ್ರಿತನಯೆ ಕೇಳ್ ಸುಗುನಸ । ಮುದ್ರ ವಿಭೀಷಣ ರಣಾಗ್ರದಲಿ ಮೈ ಮರೆಯಲ್ ।। ಕ್ಷುದ್ರನೆ ನಿಲ್ಲೆಂದೆನ್ನುತ । ಭದ್ರದಿ ವರಚಿತ್ರಕೇತ ರಣಕಿದಿರಾದಂ ।।೧।।

ರಾಗ -ಪಂಚಾಗತಿ -ಮಟ್ಟೆಲಾಳ

ಭಲರೆ ಕಾಲ ಜಂಘು ನಿದಕೊ ಕಲಹಕೊದಗಿದೆ । ಸತಿ ಸಮರ್ಥನೆಂಬ ಬಿಂಕ ತಲೆಗಡರ್ದುದೆ।। ಲಲನೆ ವಿದ್ಯುನ್ಮತಿಯನೊಯ್ದೆ ತಿಳಿಯದಂದದಿ । ಖಳದ ಶಾಸ್ಯಗೆಣೆಯು ನೀನು ಚೋರ ವಿದ್ಯದಿ ।।೧।। ಧಿರುಕುವರ ಮನಕೆ ಬಂದ ತೆರದಿಗಳಹುತ । ಬಂದೆ ಕೆಡುವುದುಚಿತವಲ್ಲ ಬಿರಿಸತೋರುತ ।। ತರುಣಿ ವಿದ್ಯುನ್ಮತಿಯ ನೆನಗೆ ಭರದೊಳೀಯಲು । ಬರಿದೆ ಕೆಡುವುದುಚಿತವಲ್ಲ ಬಿರಿನತೋರುತ ।। ತರುಣಿ

ವಿದ್ಯುನ್ಮತಿಯ ನೆನಗೆ ಭರದೊಳೀಯಲು । ತರಳ ನಿನ್ನನಾಹವದಲಿ ಹರಿಸೆ ನಿಜದೊಳು ॥೨॥ ಇಂದು ಮುಖಿಯ ಕೊಡೆನು ಭಯವ ಪೊಂದಿ ಸರ್ವಥಾ । ಮಂದಮತಿಯೆ ನಿನ್ನ ಶೀಘ್ರದಿಂದ ಸವರುತ ॥೩॥ ಪಡಕುಮಾರ ವ್ಯರ್ಥ ಗಾರುಗೆಡುವದೇ ಕೆಲ । ದೃಢದಿ ನಿನ್ನ ಶಿರಕೆ ಗರ್ವವಡರಿಹುದು ಭಲಾ ॥ ಕಡು ಸಮರ್ಥನಾದರಿದನು ತಡೆವುದೆಂದನು । ಬಿಡಲು ನವ್ಯ ಶರವನಣುಗ ಪೊಡವಿಗುರುಳ್ದನು ॥೪॥

ಭಾಮಿನಿ

ರಾತ್ರಿಚರಕುಲತಿಲಕ ಸತ್ಯಚ । ರಿತ್ರ ಶರಮಾಧವನ ಮತ್ತಾ । ಚಿತ್ರಕೇತಸಮರ ಮುಖದಲಿ ಪರಿಭವಿನೆ ಕಂಡು ॥ ಧಾತ್ರಿಪಾಲಕ ಕುಶಮ ಭೂರಿ ವಿ । ಚಿತ್ರಗೊಳಲವನಣ್ಣನಡಿ ಶತ । ಪತ್ರಕೆರಗುತ ಬಿಡು ಭಯವನೆಂದಳವಿಗೈತಂದ ॥೧॥

ರಾಗ - ಘಂಟಾರವ -ಅಷ್ಟತಾಳ

ನಿಲ್ಲು ನಿಲ್ಲೆಲ ಖಿಲ್ಲ ದಾನವ ನಿನ್ನ । ಮಲ್ಲ ವಿಕ್ರಮ ಕಳುಕ ದೀಕ್ಷಣ । ಕೊಲ್ಲುವೆನು ಶಾಭಾ ಸೆಲ ॥೧॥ ಕ್ಷೋಣಿಪಾಲಕ ಬಿಡು ಬಡಿವಾರವ । ಕಾಣಿಸಧಟೆಂದೆನುತ ಶರಗಳ । ಶ್ರೇಣಿಸೂಸಿದನುಗ್ರದಿ ॥೨॥ ಎಸೆದ ಬಾಣ ಸಂಘತವ ತರಿಯಲ್ಕೆ । ಅಸುರ ಕೃತ್ರಿಮದಿಂದ ತಿಮಿರವೇ ಮುಸುಕಿ ನಾಲ್ದೆಸೆ ಭಂಗಿಸಿ ॥೩॥ ಬಡಿವೆ ಮಾನವ ನಿಲ್ಲೆಂದು ಲವನನು । ಪಿಡಿದು ಗಗನಕೆ ಬಿಸುಡೆಲವತಾ । ಪೊಡವಿಗುರುಳಿದ ಮೂರ್ಛಿಸಿ ॥೪॥

ರಾಗ -ಸಾಂಗತ್ಯ -ರೂಪಕತಾಳ

ಅಸುರಾಧಿಪತಿಯ ಸಾಹಸವನ್ನೆ ಕಂಡಾಗ । ವಸುಧೆಪಾಲಕ ಕುಶನಾಗ ॥ ವ್ಯಸನಾಬ್ಧಿಯೊಳಗದ್ದಿಯು ಸುರಿದನಕಟಯೆಂ । ತೆಸಗುವೆನಿವನೊಳಾಹವವ ॥೧॥ ರಾತ್ರಿಂಚರನು ಸರ್ವಸತ್ರಾಣಸುಭಟರ । ಧಾತ್ರಿಯ ಮೇಲುರುಳಿಸಿದ ॥ ಮಿತ್ರ ವಂಶದಿ ರಾಮ ಪುತ್ರನೆಂದೆ ನುತ ಧ । ರಿತ್ರಿಯೊಳ್ಯಾಕೆ ಪುಟ್ಟಿದೆನು॥೨॥ ವಿಗಡ ದಾನವನ ಸಂಯುಗದಿ ಕೊಲ್ಲದೆಯೆನ್ನ । ಮೊಗವೆಂತು ತೋರ್ಪೆ ಭೂಮಿಯಲಿ ॥ ನಗೇಡಾಯ್ತೆಂದತಿ ದುಗುಡದಿಂದಿರಲಾಗ । ಸುಗುಣ ನಾರದನಿಂತುಸುರ್ದ ॥೩॥

ರಾಗ -ಕಾಂಬೋಧಿ - ಝಂಪೆ ತಾಳ

ತರಣಿವಂಶಾಗ್ರಣಿಯೆ ಬರಿದೆ ನೀ ಮನದಿಕರ । ಕರಿಸದಿರು ಧೈರ್ಯಗುಂದುತಲಿ ॥ ಮೆರೆವ ವಿಂಧ್ಯಾದ್ರಿಯೊಳಗಿರು ವಳ್ಳೆ ವಿಗಡ ಕ । ರ್ಬುರನ ಕುಲದೇವಿ ದುರ್ಗಾಂಬೆ ॥೧॥ ಆ ಮಹಾದೇವಿಯಡಿ ತಾಮರಸ ಬಳಿಯಿರ್ಪ । ಹೇಮ ವಿರಚಿತ ಬೊಂಬೆಯೊಳಗೆ. ಯಾಮಿನೀಚರನ ಜೀವನಮಿಹುದು ತೆರಳು ನೀ । ಪ್ರೇಮದಿಂ ವಿಂಧ್ಯಾದ್ರಿ ಬಳಿಗೆ ॥೨॥ ದೇವಿದೇಗುಲದ ಬಳಿ ಕಾವಲಿಹರ್ಸೈಯ ಮಿತ ।

ದೇವವೈರಿಗಳು ನಿತ್ಯದಲಿ ॥ ಭೂವರನೆ ತೆರಳಿ ಖಳ ಜೀವನದ ಬೊಂಬೆ ತರೆ । ಸಾವನಾ ನಿಶಿಚರನು ಕ್ಷಣದಿ॥೩॥ ಎನಲೆಂದ ನವನಿಪತಿ ಮುನಿವರನೆ ಚಿತ್ತವಿಸು । ಎನಗೊಲಿವಳೆಂತು ದುರ್ಗಾಂಬೆ॥ ಅನುನಯದೊಳದಕೊಂದು ಘನತರೋಪಾಯವ । ನ್ನನುಗ್ರಹಿಸಬೇಕೆನಲು ನುಡಿದ ॥೪॥ ಸನ್ನಿಯಲಿ ಜ್ವಾಲಿನಿ ಪ್ರಸನ್ನ ಮಂತ್ರವ ನಿನಗೆ । ಮುನ್ನ ಕರುಣಿಪೆನು ಕೊಳ್ಳೆನುತ ॥ ರನ್ನತಾನುಪ ದೇಶವನ್ನೀಯೆ ಸುಗುಣ ಸಂ । ಪನ್ನ ತೆರಳಿದ ವಿಂಧ್ಯಗಿರಿಗೆ ॥೫॥

ವಾರ್ಧಿಕ

ಜ್ವಾಲಿನಿಯ ಮಂತ್ರೋಪದೇಶವಂ ಪಡೆದು ದೇ ವಾಲಯದ ಬಳಿಗೆ ನಡೆತಂದು ಕಾವಲಿ ನಖಿಳ । ಜಾಲವಂ ಕಂಡು ತನ್ಮಂತ್ರವಂ ಜಪಿಸಲ್ಕೆ ಜವದಿ ದಾನವರೆಲ್ಲರು ॥ ಕಾಲುಕೈಗಳ ಮಡುಹುತಕ್ಷಿ ಮುಚ್ಚುತಲಿಳೆಗೆ । ಬೀಳೆ ನಿದ್ರಾಕ್ರಾಂತರಾಗುತಡ ಕಂಡು ಭೂ । ಪಾಲದೇಗುಲವ ಪೊಗುತಾ ಮಹೇಶ್ವರಿ ಪದಕೆ ಮಣಿದು ಸನ್ನುತಿಗೈದರು ॥೧॥

ರಾಗ -ಸುರುಟಿ - ಏಕತಾಳ

ಜಯ ಜಯ ಮಹದೇವಿ । ತ್ರಿಜಗ -ನ್ಮಯೆ ನತ ಸಂಜೀವಿ ॥ ಭಯನಾಶಿನಿ ಚಿ । ನ್ಮಯೆ ನಿಗಮಾಗಮ । ಚಯನುತ ಭವಸಂ । ಕ್ಷಯೆ ಕಾತ್ಯಾಯಿನಿ ॥೧॥ ಪಂಚ ತುಂಡ ರಮಣಿ । ಜಯೆರಾ । ತ್ರಿಂಚರಾಂಧದ್ಯುಮಣಿ ॥ ವಾಂಛಿತದಾತೆ ವಿ ।ರಿಂಚಿ ದಿವೌಕಸ । ಸಂಚಯ ಸೇವಿತೆ । ಕಾಂಚನ ಮಂಡಿತೆ॥೨॥ ಲಂಬೋದರ ಮಾತೆ ।ಸುರನಿಕು । ರುಂಬೋದ್ಧರಿ ಖ್ಯಾತೆ ॥ ಕಂಬುಕಂಠಿ ಜಗ । ದಂಬೆ ಗೌರಿ ಕರು । ಣಾಂಬುಧಿ ನಿನ್ನನು । ನಂಬಿದೆ ಸಲಹೌ ॥೩॥

ಭಾಮಿನಿ

ಜಯಮಹೇಶ್ವರಿ ಚಂಡಮರ್ದಿನಿ । ಜಯ ಸದಾಶಿವೆ ಸಿಂಹವಾಹಿನಿ । ಜಯ ಪದಾನತನಿಕರ ಪಾಲಿನಿ ಜಯತು ಜಯತೆನಲು ॥ ದಯದಿ ಜ್ವಾಲಿನಿ ದುರ್ಗಿ ಭೂಪನ । ಭಯಭಕುತಿಗುರೆ ಮೆಚ್ಚಿ ತ್ರಿಜಗ। ನ್ಮಯೆಯು ಮೈದೋರುತ ವರವ ಬೇಡೆನಲು ನೃಪನೆಂದ ॥೧॥

ರಾಗ - ಮೋಹನ - ಏಕತಾಳ

ನಮೋ ಶಂಕರಿ ರಿಪು ಭಯಂಕರಿ । ಸುಮನಸಾರಿ ವಿನತೆ ॥ ಕಮಲನೇತ್ರನೈಗ ಮತತಿ ಸೇವಿತೆ । ವಿಮಲೆ ಲೋಕಮಾತೆ ॥ ಪುನೀತೆ ॥೧॥ ಸೋಲವಾದುದಾ ಕಾಲಜಂಘ ಖಳ ॥ ನೀಲಮಣಿ ಕರುಣಾಲವಾಲೆ ಪರಿ । ಪಾಲಿಸೆನ್ನ ಜನನಿ । ಮೃಡಾಣಿ ॥೨॥ ಶೀಘ್ರದಿಂದಲಾ ವ್ಯಗ್ರದಾನವನ । ವಿಗ್ರಹ ಮುಖದಿಂದ ॥ ನಿಗ್ರಹಗೈಯಲನುಗ್ರಹಿಸೌವರ । ವಾಗ್ರ ಮನಾರ್ಚಿತೆಯೆ । ಮಹಮ್ಮಾಯೆ ॥೩॥ ಹರಿಬಗೈದು ಮೈ

ಮರೆತು ಬಿದ್ದ ಮಮ । ತರಳಾನುಜರೆಲ್ಲ ॥ ತ್ವರಿತದಿಂದ ಚೇತರಿಸುವಂತೆ ಸೀ । ವರವೀ ಯಾದೇವಿ । ಸಂಜೀವಿ ॥೪॥

ವಾರ್ಧಿಕ

ಪೊಡವೀಂದ್ರ ತಾನಿಂತು ಪ್ರಾರ್ಥಿಸಲು ಜ್ವಾಲಿನಿಯು । ನುಡಿದಳೆಲೆ ಮಗನೆ ನಿನ್ನಿಚ್ಛೆಗಳ ನಿತ್ತಿಹೆನು। ಕಡುಗಲಿ ನಿಶಾಚರನ ಜೀವ ತುಂಬಿಹ ಸ್ವರ್ಣ ಪ್ರತಿಮೆಯನ್ನೀವೆ ನಿನಗೆ॥ ಘಡದನುಜನಿದಿರು ನೀ ನಿದ ತರಿಯೆ ತತ್‌ಖಳಂ। ಮಡಿವನೆಂದೆನಲು ಭೂಪಾಲನಾ ಬೊಂಬೆಯಂ। ಪಡೆದು ಶಾಂಭವಿಯ ಬೀಳ್ಕೊಂಡು ರಣಭೂಮಿಗೈತಂದತಾನತಿ ವೇಗದಿ ॥೧॥ ಇತ್ತಲಾ ಕಾಲಜಂಘಾ ಸುರನು ಸತಿ ಮದೋನ್ಮತ್ತನಾಗುತರಣಾದಿ ಮೈ ಮರೆದ ಸದ್ಭಟರ। ಮೊತ್ತವಂ ಕಂಡು ಸಂತಸದಿ ಖಚರಾಂಗನೆಯು ತನಗೆ ಕೈಸೇರ್ದಳೆನುತ ॥ ಉತ್ತಮ ವಿವಾಹಕೋಸುಗ ಜವದೊಳಿ। ನರರ ॥ ಕತ್ತರಿಸಿ ಶಿರಗಳಂ ಕರುಳು ಮಾಂಸಾದಿಗಳ। ಮತ್ತೊಯ್ವೆನೆನುತ ಖಡ್ಗವ ಝಳಪಿಸುತ ಬರಲು ತಿಳಿದನವ ಶಕುನಗಳನು ॥೨॥

ಭಾಮಿನಿ

ಬಿತ್ತರಿಸಲೇನಮನು ಚೋದ್ಯವೆ । ಕತ್ತರಿಪುದೆನ್ನಂಘ್ರಿಗಳು ಮೇಣ್ । ಚಿತ್ತದಲಿ ಕಳವಳ ವಧಿಕವಸು ಪೋಪುದೇನಕಟ ॥ ಬತ್ತುವುದು ಕರಚರಣಗಳು ಕುಶ । ನೆತ್ತ ಪೋದನು ಬರಲವನ ಶಿರ ಕತ್ತರಿ ಪೆನೆಂಬ ನಿತರೊಳು ಮೈ ಮರೆತ ನೃಪರೆದ್ದು ॥

ರಾಗ - ಕೇತಾರಗೌಳ - ಝಂಪೆ ತಾಳ

ಘಡ ಕಾಲ ಜಂಘು ಖಳನು । ಯಾವಲ್ಲಿ । ನಡೆದ ರಣಕೊದಗಲಿನ್ನು ॥ ಧಡಿಗ ದನುಜಗೆ ನಿಮಿಷದಿ । ತೋರ್ಪೆವೈ । ಕಡೆಗಾಲವನು ಸಹಜದಿ ॥೧॥ ಎನುತ ಶರಮೇಶ ಲವರು । ಚಿತ್ರ ವಾ । ಹನ ಚಿತ್ರ ಕೇತಭಟರು ॥ ಮುನಿದು ಬರೆ ಕಂಡು ಖಳನು । ಬೆರಗಾಗಿ । ಘನ ಚೋದ್ಯ ಪರಿಯಿದೇ ॥೨॥ ಕೊಲುವೆನಿವರುಗಳನೆನುತ। ದಾನವನು। ಕಲಹಕ್ಕೈತರೆ ಕನಲುತ॥ ಛಲದಿ ಕುಶನಪ್ಪರೊಳಗೆ। ನಡೆತಂದು। ಕಲಹಕಿದಿರಾದ ಖಳಗೆ ॥೩॥

ರಾಗ - ಪಂಚಾಗತಿ - ಮಟ್ಟೆತಾಳ

ಆರೆಲಾ ನಿಶಾಚರಾಧಮ । ಪ॥ ಧಾಮನಿಧಿ ಕುಲಾಗ್ರಗಣ್ಯ । ಭೀಮಕೋಸಲಾಧಿನಾಥ । ರಾಮಚಂದ್ರ ಪುತ್ರಸುಗುಣ । ಭೂಮಿಜಾ ಪಿಚಿಂಡ ಕುಮುದ । ಸ್ತೋಮ ಶಶಿಸಮಾನಹೆ ಭಲಾ । ಕುಶನೆಂದು ಎನ್ನ। ನಾಮಧೇಯ ವಹುದು ಕೇಳೆಲಾ। ಈ ಕ್ಷಣದಿ ನಿನ್ನ। ನಾಮ ವಡಗಿಸುವೆನು ನೋಡೆಲಾ। ಶಭಾಸು ಭಟರೆ। ಯಾರೆಲಾ ॥೧॥ ಶೂಲಪದ ಸರೋಜ ಭ್ರಮರ। ಶೀಲ ಭರಿತ ದೈತ್ಯಕುಲ ಕಿ। ಲಾಲ ನಿಧಿ ಶಶಾಂಕ ನಮವಿ। ಶಾಲ ಸಾರಸಾಗ್ರಗಣ್ಯ। ಮೂಲಕಾಖ್ಯ ಕುವರ ನಾನೆಲಾ। ಮಾಯಾ ಪುರೀಶ।

ಕಾಲ ಜಂಘನೆನ್ನ ಪೆಸರೆಲಾ । ಮದಾಂಧ ವೈರಿ । ಜಾಲ ತಿಮಿರ ಧ್ಯುಮಣಿಯಹೆ ಭಲಾ । ಶಭಾಸು ಭಟರೆ। ಆರೆಲಾ ॥೨॥

ರಾಗ - ಶಂಕರಾಭರಣ - ಮಟ್ಟೆತಾಳ

ಬಿನುಗು ದಾನವೇಂದ್ರ ನಿನ್ನ । ತನುವಿನಾಸೆಯಿರಲು ಜವದಿ । ವನಿತೆ ಕಾಂಕ್ಷೆಯನ್ನೇ ತೊರೆದು। ಕ್ಷಣದಿ ತೊಲಗೆಲಾ ॥ ಘನ ಪರಾಕ್ರಮಗಳ ತೋರೆ । ಹನನ ಗೈಯದಿರೆನು ನಿನ್ನ । ವನಜ ಭವ ಸುರಾಳಿ ಬರಲು । ಮನದಿ ಬೆದರೆನು ॥೧॥ ಫಡ ನರೇಂದ್ರ ಮುಚ್ಚು ಬಾಯ। ಪೊಡವಿಯುರಗ ಲೋಕನಿಳಿಯೆ । ಬಿಡೆನು ನಿನ್ನನರ್ಧಕ್ಷಣದಿ । ಕೆಡಹಿ ಶೌರ್ಯದಿ ॥ ಸಡಗರದಲಿ ಭೂತಗಣದ । ಗಡಣಕೀವೆ ರುಧಿರಪಾನ। ಕಡುಹ ತೋರ್ಪುದೆನುತ ಶರದ ಪಡೆಯನೆಚ್ಚನು ॥೨॥ ಎಸೆದ ಶರಸಮೂಹ ತರಿದು । ವಸುಮತೀಶ ಸರಳ ಮಳೆಯ । ಮುಸುಕೆ ಖತಿಯೊಳಾರು ಭಟಿಸು । ತಸುರವರ್ಯನು ॥ ಅಸಮ ಸಿಡಿಲಿನಾಕೃತಿಯೊಳು । ಕುಶನಿಗೆರಗಿ ಕಪಟದಿಂದ । ಬಿಸಜ ಮಿತ್ರ ಜ್ವಾಲಿನಿಯಳ । ಪ್ರಸರಗೈವುತ ॥೩॥

ರಾಗ - ಮಾರವಿ - ಏಕತಾಳ

ಖಳನಸು ತುಂಬಿಹ ಪೊಳೆವ ಪ್ರತಿಮೆಯನು । ಬಳಿಕ ಧರಾಧಿಪನು ॥ ಇಳೆಗಿಡುತಲಿಯರೆ ಘಳಿಗೆಯೊಳರಿಯಲು । ತಿಳಿದಸುರಾಧೀಶ ॥೧॥ ಕಡೆಗಾಲವು ತನಗಡಸಿತೆನುತ ಭೋ । ರ್ಗುಡಿಸಲು ಕುಶನಾಗ ॥ ಖಡುಗದಿ ದಾನವನಡಿ ಕರಗಳ ತಾ । ಕಡಿದನು ನಿಮಿಷದಲಿ ॥೨॥ ಧರೆಯೆಲ್ಲಾಡುವ ತೆರದಲಿ ದಾನವ । ಪೊರಳುತ ಬೊಬ್ಬಿರಿಯೆ ॥ ನರಪತಿ ಪೊಸಕಣೆ ಗುರಿಯಿಡುತೆಸೆಯಲು । ತೊರೆದನಸುವ ಖಳನು ॥೩॥ ಅಳಿದು ಳಿದಸುರರ ಬಳಗವು ಕ್ಷಣದಿಂ ।ದಳುಕುತಲಹಿಪುರಿಗೆ ॥ ಇಳಿಯಲು ತ್ರಿದಶಾವಳಿ ತೋಷದಿ ಪೂ । ಮಳೆಗರೆಯಲು ಭರದಿ ॥೪॥

ವಾರ್ಧಿಕ

ಆ ಸೈನ್ಯ ಸಹಿತ ಕುಶಲವರು ಪುರಕಯ್ದುತು ।ಲ್ಲಾಸದಿಂ ವಿದ್ಯುನ್ಮತಿಯ ಚಿತ್ರಕೇತಗೆ ಮ। ಹಾ ಸಂಭ್ರಮದಿ ಲಗ್ನ ರಚಿಸಲು ವಸಿಷ್ಠನನುಮತಿಯಂತೆ ಸುಮುಹೂರ್ತವ ॥ ಆಸೀತೆಯಾತ್ಮಜರು ದೃಢವಗೈವುತ ಸಕಲ । ಭೂಸತೀಶ್ವರರಿಗಾ ಮಂತ್ರಣವ ಕಳುಹಿಮ । ತ್ತಾಸುಲೋಚನನಿಂಗೆ ಸುರಮುನಿಪನೊರೆದಂತೆ ಚಾರು ಪತ್ರವ ಕಳುಹಿದ ॥೧॥

ಕಂದ

ಆಚಾರರು ತೆರಳುತ ಸು । ಲೋಚನಗೊಂದಿಸಿ ಲಿಖಿತವನೀಯಲ್ಕಾಗಂ ॥ ಖೇಚರವರ್ಯಂ ಕ್ಷಿಪ್ರದಿ । ವಾಚಿಸಿದಂ ಕುಶಲವರಿತ್ತಿಹ ಲೇಖನವಂ ॥೧॥

ರಾಗ - ಕಾಂಬೋದಿ - ಝಂಪೆ ತಾಳ

ಗಂಧರ್ವ ವಂಶ ಶರದೇಂದು ಸಮ ಚಾರುಗುಣ । ವೃಂದ ಸುಲೋಚನಾಖ್ಯನಿಗೆ ॥ ಚಂದದಿಂ ಕೋಸಲವನುಂಧರಾಧಿಪರಾಮ । ಚಂದ್ರಾತ್ಮಜಾತನಹಕುಶನು ॥೧॥ ಮುದದಿ ಬರೆದಿಹ ಲಿಖಿತ ವಿದುವರೆಗೆ ನಾವು ಶ್ರೀ ಮದನಾರಿ ದಯದಿಕುಶಲಿಗರು ॥ ಚದುರ ನಿನ್ನಯ ಕ್ಷೇಮ ಹದನವನ್ನೆ ಮಗೆ ಬರೆ। ವುದು ಪತ್ರ ಮುಖದೊಳಡಿಗಡಿಗೆ ॥೨॥ ನಿನ್ನ ಮೋಹದ ಕುವರಿಯನ್ನು ಕದ್ದೊಯ್ದು ಖಳ । ಕುನ್ನಿಯನು ರಣದಿ ಸಂಹರಿಸಿ ॥ ಕನ್ನೆ ವಿದ್ಯುನ್ಮತಿಯ ನನ್ನಿಯಲಿ ತಂದಿಹೆನು । ಪನ್ನಗಾ ಭರಣನೊಲವಿನಲಿ ॥೩॥ ಖ್ಯಾತಕೇಳೆನ್ನ ಸಹಜಾತ ಲವಸುತ ಚಿತ್ರ । ಕೇತನೆಂಬಣುಗಂಗೆ ನಿನ್ನ ॥ ಜಾತೆಯನು ಲಗ್ನವಂ ಪ್ರೀತಿಯೆಂದೆಸಗಲು ಮು । ಹೂರ್ತವಂ ದೃಢಗೈದಿರುವೆನು ॥೪॥ ಕರುಣದಲಿ ನೀನು ತವ ಪರಿವಾರ ಸಹಿತ ಮಮ । ಪುರಕೆ ಮಿಗೆ ಜವದೊಳೈತಂದು ॥ ಪರಿಣಯದ ಕಾರ್ಯವನು ನೆರವೇರಿಸುವದೆಂದು । ಹರುಷದಿಂ ಬರೆದ ಲೇಖನವು ॥೫॥

ರಾಗ -ಕೇತಾರಗೌಳ - ಝಂಪೆ ತಾಳ

ಕಂಡು ಲಿಖಿತವ ಖಚರನು । ಭೂರಿಖತಿ ।ಗೊಂಡು ಮತ್ತಿಂತೊರೆದನು ॥ ಪುಂಡು ನರರಿಗೆ ಸುತೆಯನು । ನಾನೀಯೆ । ಭಂಡನೆನ್ನರೆಯೆನ್ನನು ॥೧॥ ಅಮಮ ಮನುಜರ ಗರ್ವವ । ಖೇಚರರ । ರಮಣಿಯರ ವರಿಸಲಳವೆ ॥ ನಿಮಿಷ ಮಾತ್ರದಿ ನರರನು । ನಿರ್ಭಯದಿ । ಸಮರ ಮುಖದಲಿ ಗೆಲುವೆನು॥೨॥ ತರುವೆ ಮತ್ಕುವರಿಯನ್ನು । ಯಾರೆನ್ನ । ಕರತಡೆವರಧಟರಿನ್ನು ॥ ಪೊರಮಡುವೆನೆನುತ ಖಚರ । ಕ್ರೋಧದಿಂ । ದಿರಲು ಬಂದಜಕುಮಾರ ॥೩॥ ಬಂದ ಸುರಮುನಿಗೆರಗುತ । ಪತ್ರವನು । ಚಂದದಿಂದಿತ್ತು ಮತ್ತಾ ॥ ಮಂದಮತಿಕುಶನಗೆಲುತ । ಸುತೆಯ ತಹೆ । ನೆಂದೆನಲು ಪೇಳ್ದನಗುತ ॥೪॥

ವಾರ್ಧಿಕ

ಗಂಧರ್ವಪತಿಯೆ ನೀ ಮತಿಹೀನನೈ ಸಹಜ । ಪಿಂದೆ ಮಾದ್ರಾಧೀಶನಾಗಿಹ ಸುಚೇಲಂಗೆ । ಸಂಧಿಸಿದ ದುರ್ಲಗ್ನ ಸಮಯದೊಳಗಾತ್ಮಭವೆಯುದಿಸೆ ಜನನವ ಪರಿಕಿಸಿ ॥ ನಂದನೆಯ ವನಕೆ ಬಿಸುಡೆನುತ ಬುಧರೊರೆಯಲವ । ನೀಂದ್ರನಂತೆಸಗೆ ನೀನಾ ಕುಮಾರಿಯ ದಿಟದಿ । ತಂದಿರುವೆಯಾದ ಕಾರಣದಿ ನರಸತಿಯು ನರನಂ ವರಿಸೆ ಕುಂದಿರ್ಪುದೆ ॥೧॥

ರಾಗ -ಸೌರಾಷ್ಟ್ರ - ತ್ರಿವುಡೆ ತಾಳ

ನುಡಿಯ ಕೇಳುತ ವರಸುಲೋಚನ । ಕಡುತರಾನಂದದಲಿ ಸುರಮುನಿ।ಯೊಡನೆ ತೆರಳಿದ ಯೋಧ್ಯನಗರಕೆ ಸಡಗರದಲಿ ॥೧॥ ಬಂದ ಖಚರಾಗ್ರಣಿಯ ಸೀತಾ । ನಂದನರು ಪಿಡಿದಪ್ಪಿ ಮನ್ನಿಸಿ । ಕುಂದಣದ ವಿಷ್ಟರದೊಳಿರಿಸಲು । ಚಂದದಿಂದ ॥೨॥ ಅನಿತರೊಳು ವಿದ್ಯುನ್ಮತಿಯು ತಾ । ಜನಕಗೆರಗಲು

ಕಂಡು ತನ್ನಯ । ತನುಜೆಯಳ ಮುದ್ದಾಡಿ ಸೌಲೋ । ಚನನು ಮುದದಿ ॥೩॥ ಮಗಳೆ ಎನ್ನಯ ಪೂರ್ವ ಪುಣ್ಯದಿ । ಹಗೆಯವರ ಕರದಿಂದ ತಪ್ಪಿದೆ । ದುಗುಡವಿರಹಿತನಾದೆ ನಿನ್ನಯ । ಮೊಗವಕಂಡು ॥೪॥ ಅನಿತರೊಳು ವಧುವರರ ಹರುಷದಿ । ವನಿತೆಯರು ಶೃಂಗರಿಸಿ ತವಕದಿ । ಕನಕ ಮಂಟಪದೊಳಗಿರಿಸಿ ಮ। ತ್ರನುನಯದಲಿ ॥೫॥

ಧವಳಾರ

ಮಿತ್ರಾನ್ವಯ ದೊಳಗುದಿಸಿದವನಿಗೆ । ಮಿತ್ರಾಮಿತ ಸಂಕಾಶಭರಿತಗೆ ॥ಚಿತ್ರಕೇತ ಧುರಧೀರ ಸುಂದರಗೆ । ಧಾತ್ರಿಪಾಲನ ಸನ್ಮೋಹದ ಕುವರಗೆ । ಮುತ್ತಿನಾರತಿಯ । ಬೆಳಗಿರೇ ಶೋಭಾನಂ ॥೧॥ ಇಂದೀವರಾಕ್ಷ ಸುಲೋಚನ ಸುತೆಗೆ । ಸುಂದರಿ ರತಿಯಂತಿಹ ಕಾಮಿನಿಗೆ ॥ ಮಂದಗಮನೆ ವರ ವಿದ್ಯುನ್ಮತಿಗೆ । ಕುಂದರದನೆ ಮದಗಜಗಾಮಿನಿಗೆ । ಕುಂದಣದಾರತಿಯ । ಬೆಳಗಿರೇ । ಶೋಭಾನಂ ॥೨॥

ವಾರ್ಧಿಕ

ಧರಣಿ ಸುರರಿಂಗಮಿತ ದಕ್ಷಿಣೆಯನ್ನಿತ್ತು ಭೂ।ವರರು ಸಂತಸದಿ ವೈವಾಹ ವನ್ನೆಸಗಿ ಮ। ತ್ತುರೆ ಭಾಗ್ಯದಿಂದ ಯೋಧ್ಯಾಪುರದಿ ಕುವರರೊಡನಿರ್ದರೆಂಬ । ಕಥೆಯನು ॥ ಧರಣಿಯೊಳ ಗತ್ಯಧಿಕವೆನಿಪ ವಿಟ್ಠಲಪುರದಿ । ಮೆರೆವ ವರ ಸಬರಿಜಿಸ್ಟ್ರಾರರ ಕಛೇರಿಯಲಿ । ಪರಮಾತ್ಮಸೊಲವಿಂದ ನಿರತ ಲೇಖನವೃತ್ತಿಯಿಂದ ಸುಖದಲಿ ವಾಸಿಸ ॥೧॥ ಬಾಲಮತಿ ಬೀ ವಾಸು ದೇವನೆಂಬಣುಗ ನಾ । ಶ್ರೀ ಲಕ್ಷ್ಮಿಯರಸನನುಗ್ರಹದೊಳೀ ಸತ್ಕಥೆಯ । ಲೀಲೆಯಿಂದೆಕ್ಷಗಾನ ದಲಿ ವಿರಚಿಸಿದೆ ಮನ್ಮಿತ್ರರನು ಮತಿಯಂದದಿ ॥ ತಾಳಲಯಗಣ ಪ್ರಾಸು ಕವಿತೆಗಳ ನರಿಯೆಸುವಿ । ಶಾಲ ಕಬ್ಬಿಗರಿದರೊಳಿರಲು ತಪ್ಪುಗಳನ್ನು । ಬಾಲಕನ ಕೃತಿಯೆಂದು ತಿದ್ದಿ ಸಮವೆಸಗಲ್ಕೆ ವಿನಯದಲಿ ಪ್ರಾರ್ಥಿಸುವೆನು ॥೨॥

ರಾಗ -ಮಧ್ಯಮಾವತಿ - ಝಂಪೆ ತಾಳ

ಮಂಗಳಂ ಶ್ರೀ ರಮಾ ವಲ್ಲಭನಿಗೆ । ಮಂಗಲಂ ದನುಜ ಸಂಹಾರಣನಿಗೆ ॥ ಮಂಗಳಂ ದುರಿತೌಘಭಂಗ ಕರುಣಾಪಾಂಗ । ತುಂಗವಿಕ್ರಮಿ ಪಾಂಡುರಂಗ ಕೇಶವಗೆ ॥ ಮಂಗಳಂ ॥೧॥ ಮಂಗಳಂ ಸದ್ಭಕ್ತವತ್ಸಲನಿಗೆ । ಮಂಗಳಂ ಗಜಚರ್ಮ ಭೂಷಣನಿಗೆ ॥ ಮಂಗಳಂ ಸುಮ ಚಾಪ ಭಂಗ ವಿಠಲ ಪುರೇಶ । ಗಂಗಾಧರಗೆ ಪಂಚಲಿಂಗ ಶಂಕರಗೆ ॥ ಮಂಗಳಂ ॥೨॥ ಮಂಗಳಂ ಶಂಖಚಕ್ರಾಂತಿತನಿಗೆ॥ ಮಂಗಳಂ ಖಗರಾಜ ವಾಹನನಿಗೆ ॥ ಮಂಗಳಂ ಶ್ರೀ ವಾಸುದೇವ ದಾಮೋದರಗೆ । ಮಂಗಳಂ ಖಗಪತಿ ತುರಂಗ ಕೃಷ್ಣನಿಗೆ । ಮಂಗಳಂ । ಜಯ ಮಂಗಳಶ್ರೀ ॥೩॥

ಅಂತು ಸಂಧಿ ೧ಕ್ಕೆ ಪದ್ಯ ೪೦ಂಕ್ಕೆ ಮಂಗಳ ಮಹಾ ॥

ಯಕ್ಷಗಾನ

ಮೂಲಕಾಸುರ ಕಾಳಗ

ರಾಗ ನಾಟಿ ರೂಪಕತಾಳ

ಅನುದಿನ ಭಜಿಸುವೆ ತವಪದ । ವನರುಹವನು ಹೃತ್ಕಮಲದಿ । ಗಣನಾಯಕ ಸಲಿ ಸೆನ್ನಯ । ಮನದಿರವನು ಬಿಡದೆ ॥ ಘನಚರಿತಾಮೃತರಸವನು । ನೆನನೆನೆನದೀಂಟುವೆ ನಿರತದಿ । ಕನಕಾಂಬರ ವನರುಹನಂ । ದನರಾರ್ಚಿತ ಶರಣು ॥ ಜಯ ಜಯ ಜಯ ಜಯತು ॥೧॥ ಸಿದ್ಧಿ ವಿನಾಯಕನೆಂಬ ಪ್ರ। ಸಿದ್ಧ ವಿಧಾನದೊಳೆನ್ನಲಿ । ಬದ್ಧಗೊಳಿಸುಕಾರುಣ್ಯಸ । ಮುದ್ರನೆ ನೀನೊಲಿದು ॥ ಸಿದ್ಧಿಸು ನೀನಿಂದೆನ್ನಯ। ಬದ್ಧಿಯೊಳಿದ ವಿವರಿಪ ತೆರ । ಮುದ್ದು ಗಜಾನನ ಚಿತ್ತದೋಳಿದ್ದುದ ವರ್ಣಿಸುವೆ ॥ ಜಯ ಜಯ ಜಯ ಜಯತು ॥೨॥ ಮದನಾರಿಯೆ ಪೊಡವಿಯೊಳಿಹ । ಬುಧಕುಲ ಪರಿಪಾಲಕವರ । ಮಧುಪುರದೊಳಗವತರಿಸಿದೆ। ಮದನೇಶನು ಸಹಿತ ॥ ವದನದಿ ನೇತ್ರವು ಮೂರನು । ಒದಗಿದ ಭುಜನಾಲ್ಕರೊಳಿಹ । ಪದಯುಗಕೆರಗುವೆ ಸಾಷ್ಟಾಂ । ಗದಿ ಲಂಬೋದರನೆ ॥ ಜಯ ಜಯ ಜಯ ಜಯತು ॥೩॥

ವಾರ್ಧಿಕ

ಸರಸಿರುಹಲೋಚನಂ ದುರಿತದ ವಿಮೋಚನಂ । ಮಿರುಪ ಶ್ರುತಿ ವಕ್ರನಂ ಧರ ಶಂಖ ಚಕ್ರನಂ । ವರ ಕಂಬು ಕಂಠನಂ ಮೆರೆವ ವೈಕುಂಠನಂ ಶ್ರೀ ಲೋಲ ವನಮಾಲನಂ ॥ ಗುರುಚರಣ್ಯಾ ವಾಗ್ಮನಂ ಕರಚತುಷ್ಟಯ ಘನಂ । ಉರದಿ ಶ್ರೀ ವತ್ಸನಂ ವರಪದ್ಮನಾಭನಂ । ಪರಮ ಶುಭ ಚರಣನಂ ಉರಗಾರಿಗಮನನಂ ಸ್ಮರಿಸಿ ಮತಿಯಂ ಪಡೆವೆನು ॥೧॥

ರಾಗ ಸೌರಾಷ್ಟ್ರ ಅಷ್ಟತಾಳ

ಪಾಲಯ ಪರಮೇಶ ಪಾರ್ವತಿ ಪ್ರಾಣೇಶ । ಪಾಲಿಸೆನ್ನ । ರುಂಡ ಮಾಲ ಕೈಲಾಸ ಗಿರೀಶ ಶ್ರೀ ಮದನೇಶ । ಪಾಲಿಸೆನ್ನ ॥ ನೀಲ ಕಂದರ ನಿತ್ಯ ಮಂದರಧರ ಮಿತ್ರ । ಪಾಲಿಸೆನ್ನ । ಧೃತ । ಶೂಲ ಕಪಾಲ ಸುಶೀಲ ಸಜ್ಜನಪಾಲ । ಪಾಲಿಸೆನ್ನ ॥೧॥ ರಾಜಶೇಖರ ಫಣಿ ರಾಜ ಕುಂಡಲಧರ । ಪಾಲಿಸೆನ್ನ । ಮೃಗ। ರಾಜಗಮನ ಉಡುರಾಜದ್ಯುಮಣಿ ತೇಜ । ಪಾಲಿಸೆನ್ನ । ಮೂಜಗವನು ಕಾವ ಮುಕ್ಕಣ್ಣ ಮಹದೇವ। ಪಾಲಿಸೆನ್ನ । ನೀವಿ । ರಾಜಿಸು ಮಮಚಿತ್ತ ದೋಳೆಯ ಕರುಣದಿ ಪಾಲಿಸೆನ್ನ॥೨॥

ಭಾಮಿನಿ

ಅಜನರಸಿ ವಾಗೀಶ್ವರಿಯ ಮಹ । ನಿಜ ಪದಕೆ ವಂದಿಸುತ ಲಕ್ಷ್ಮಿಯ । ಭಜಿಸಿ ಭಕ್ತಿಯೊಳನಿಮಿಷರ ಸಂಕುಲಕೆ ತಲೆವಾಗಿ ॥ ದ್ವಿಜಕುಲೋತ್ತಮ ಸೂತ ಶೌನಕ । ತ್ರಿಜಗ ವಂದಿತ ವ್ಯಾಸ ಶುಕಮುನಿ । ಸುಜನರೆನಿಪರ ದುತಿಸಿ ಪೇಳುವೆನೀ ಕಥಾಮೃತವ ॥೧॥

ವಾರ್ಧಿಕ

ಅಮಿತ ವೈಭವದೊಳಗೆ ನೈಮಿಷಾರಣ್ಯದೊಳ । ಗಮಲ ಮುನಿ ಶೌನಕಂ ಶಿಷ್ಯರಂ ವೆರಸಿರಲ್।

ಸುಮನಸಾರ್ಚಿತ ಸೂತ ಬರೆ ಕಾಣುತೆದ್ದು ಸಂಭ್ರಮದಿಂದ ಸತ್ಕರಿಸುತ ॥ ದ್ಯುಮಣಿ ಸಂಕಾಶನೊಳು ಬೆಸಗೊಂಡ ನಿನ್ನಂಘ್ರಿ । ಗಮನ ದಿಂದೇಸು ಧನ್ಯರೊ ನಮ್ಮೊಳರುಹುವುದು । ಕಮಲನೇತ್ರನೆನಿಪ್ಪ ರಾಮನ ಕಥಾಮೃತವನೆಂದು ಶೌನಕ ನಯದೊಳು ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಋಷಿವರನ ನುಡಿ ಕೇಳುತಷ್ಟಾ । ದಶ ಪುರಾಣವನರುಹುತಿರೆ ಪದ । ವಿಸರುಹಕೆ ತಲೆ ವಾಗುತೆಂದರು । ಕುಶಲದಿಂದ ॥೧॥ ತಂದೆ ಪೇಳ್ವೆಪಿಂತೆ ದಶರಥ । ನಂದನನು ಬಳಿಕಾ ಕುಠಾರರ । ಭಂಗಿಸಿದ ಮೇಲೀಧರೆಯ ಪೊರೆ।ದಂದವೆಂತು ॥೨॥ ಖೂಳ ದಶಕಂಧರನ ಸುತನಹ। ಮೂಲಕಾಸುರನೆಂಬ ದೈತ್ಯನ । ಶ್ರೀಲಲನೆ ಸುತನೆಂತು ಮಡುಹಿದ। ಕಾಳಗದಲಿ ॥೩॥ ಶೀಲ ರಘುಪತಿಯೊಲಿದು ವಾನರ । ಜಾಲವನು ಸಂತೈಸಿ ಧರಣಿಯ । ಲೀಲೆಯಿಂ ಪಾಲಿಸಿದ ಕಥನವ । ಪೇಳೆನಲ್ಕೆ ॥೪॥ ಸಂತಸದೊಳೆಲ್ಲರನು ಮಹಧೀ । ಮಂತನಹ ಮುನಿಸೂತ ಮನ್ನಿಸಿ । ಅಂತರಂಗದಿ ಹರಿಯಭಜಿಸುತ । ಲಿಂತು ನುಡಿದ ॥೫॥

ವಾರ್ಧಿಕ

ಅವನಿಸುರರಾಲಿಪುದು ಅಸುರರಂ ಸದೆದು ರಾ। ಘವ ವಿಭೀಷಣಗಿತ್ತು ಲಂಕಾಧಿಪತ್ಯಮಂ । ಅವನಿಸುತೆ ಸಹಿತ ಪುಷ್ಪಕವೇರಿ ಪುರಕೈದಿ ರವಿಜಾದ್ಯರಂ ಕಳುಹಿಸಿ ॥ ಭುವನದೊಡೆತನದೊಳಿರೆ ಚಿತ್ತದೊಳ್ ಚಿಂತೆಯಿಂ । ಕುವರರಿಲ್ಲೆನೆ ಜನಕಜೆಯ ಬಸಿರಿನಿಂದ ಕುಶ । ಲವರುದಿಸೆ ತೋಷದಿಂದಿರಲಯೋಧ್ಯೆಯೊಳನು ಜರೊಗ್ಗಿನಿಂ ಶ್ರೀ ರಾಮನು ॥೧॥

ರಾಗ ಮಧ್ಯಮಾವತಿ ತ್ರಿವುಡೆ ತಾಳ

ಈ ಪರಿಯ ಸೌಭಾಗ್ಯಯುತನಹ । ಭೂಪರಾಘವನಿರಲು ಸುಜನಕ । ಲಾಪವೆಗ್ಗಳಿಸಿದುದನಾಸಂ । ಕ್ಷೇಪದಲಿ ವರ್ಣಿಸುವೆನು । ಚಂದದಿಂದ ॥೧॥ ಆ ಪರಮ ಪುರುಷನ ಸುರಾಜ್ಯದಿ । ಪಾಪಕೃತ್ಯವೆ ಸ್ಮರಿಸಲಮ್ಮವು । ಕಾಪುರುಷರೆಂಬವರ ಕಾಣೆನು । ವ್ಯಾಪಿಸಿತು ಸತ್ಕೀರ್ತಿಯು । ಭಾಪೆನಲ್ಕೆ ॥೨॥ ರಾಮರಾಜ್ಯದಿ ಜನಿಸ ಬೇಕೆಂ । ದೇ ಮಹಾತ್ಮರು ಭಜಿಸಿ ಸದ್ಗುಣ । ಧಾಮರಿರೆ ಬರಿದಾಯ್ತು ರವಿಜನ। ನಾಮ ವಡಗುವ ತೆರದಲಿ । ಕ್ಷೇಮದಿಂದ ॥೩॥ ಭೂಮಿಯಲಿ ತನ್ನಂತೆ ಬೆಳೆದವು । ಕಾಮಿತಾರ್ಥಗಳಾಗೆ ಮೋದದಿ । ಕಾಮಧೇನು ಸುಕಲ್ಪ ವೃಕ್ಷವು । ಶ್ರೀ ಮುಕುಂದನ ಸ್ಮರಿಸಲು । ಏನನೆಂಬೆ ॥೪॥

ವಾರ್ಧಿಕ

ಯತಿ ಕುಲೋತ್ತಮ ಕೇಳು ರಘುಕುಲೋದ್ಭವನಿಂತು । ಕ್ಷಿತಿಯ ಪಾಲಿಸುತಿರಲು ಪೂರ್ವದೊಳು ರಾವಣನ । ಮಥನ ಸಮಯದಿ ಕಾದಿ ಖೂಳ ವಿದ್ಯುಜ್ಜಿಹ್ವ ಮಡಿಯೆ ರಾಘವನೊಳಂದು ॥

ಅತಿಶಯದೊಳಾವಾರ್ತೆಯಂಕೇಳಿಕನಲಿ ದು। ರ್ಮತಿಯೆಂಬಳವನನುಜೆ ಪಾತಾಳದಿಂ ಪೊರಟು। ಪೃಥಿವಿಗೈತಂದು ವಾಲ್ಮೀಕಿ ಮುನಿಯಾಶ್ರಮದಿ ಧೃತಿಗೆಡಿಸಿದಳು ಮುನಿಗಳ ॥೧॥

ರಾಗ ಸವ್ರಾ ಏಕತಾಳ

ಈತೆರದೊಳು ದುರ್ಮತಿತಾ ಮುನಿಕುಲ। ಜಾತರ ಸದೆ ಬಡಿಯಲ್ಕಾಗ ಆತಕ್ಷಣ ಸಾಕೇತಾಧಿಪನೆಡೆ। ಗೈತಂದರು ಭೀತರು ಬೇಗ ॥೧॥

ರಾಗ ಫರಜು ಅಷ್ಟತಾಳ

ರಾಘವ ನೀ ಲಾಲಿಸಿಂದು। ಕೂಗಿ ದನುಜೆಯೋರ್ವೆ ಬಂದು। ಯಾಗ ಶಾಲೆಯನ್ನೆ ಮುರಿದಳು। ಜಪಕಾಗಿ। ಕುಳಿತ। ವ್ಯಾಘ್ರ ಚರ್ಮವನ್ನೆ ಹರಿದಳು ॥೧॥ ಭೋರ್ಗರೆಯುತೆಮ್ಮ ಮುನಿ। ವರ್ಗವನ್ನು ಪಿಡಿದು ಬಡಿದು। ಸ್ವರ್ಗವ ತೋರಿಸುವೆನೆಂಬಳು। ಮತ್ತವಳ ಸಹಸ। ವಾರ್ಗೆಪೇಳಲರಿಯದು ಕೇಳು ॥೧॥ ಅಬ್ಬರವ ತಿಳಿಯುತ ನಾ। ವಿಬ್ಬರೊಂದಾಗೆ ನೋಡಿ। ಕಿಬ್ಬದಿಯ ಬಂದು ತಿವಿದಳು। ಕಬರಿಯಸುತ್ತಿ। ಉಬ್ಬಸವ ಪಡಿಸುವಳು ॥೩॥

ವಾರ್ಧಿಕ

ಪೊಡವಿಯಂ ಬಾಧಿಸುವ ವಿಧವಿಧದ ದೈತ್ಯರಂ। ಕೆಡಹಿನೀ ಸರ್ವರಂ ಪಾಲಿಸಿದ ಮಹಿಮ ಬಂ। ದಡವಿಯೊಳಗಿಹ ದುಷ್ಟ ರಕ್ಕಸಿಯ ಸಂಹರಿಸೆನಲ್ಕಂದ ರಘುವೀರನು ॥ ಬಿಡಿ ಚಿಂತೆಯಂ ಮನದಿ ಕ್ಷಣದಿ ದಾನವಿಯ ಸದೆ। ಬಡಿವೆನಾ ಮೇಲೆ ಸುಖವಹುದೆನಲು ಕೇಳಿಮುನಿ। ಗಡಣ ತೆರಳಲ್ಕಿತ್ತ ಸೈನ್ಯಮಂ ನೆರಹಿ ಪೊರ ಮಡಲು ತಾನನುವಾದನು ॥೧॥

ರಾಗ ಕೇತಾರಗೌಳ ಅಷ್ಟತಾಳ

ರಾಘವನಿಂತನುವಾಗಿ ರಥವನೇರು। ತಾಗಲೆ ಪೊರಮಟ್ಟನು ॥ ಬೇಗ ಲಕ್ಷ್ಮಣ ತಲೆವಾಗುತಣ್ಣಗೆ ಧನು। ಝೀಗೈಯುತಿಂತೆಂದನು ॥೧॥ ಅಣ್ಣ ಪರಾಕು ಮುಕ್ಕಣ್ಣನೆ ಬರಲಿನ್ನು। ಗಣ್ಯವೆ ಎನಗಿದೊಂದು॥ ನಿರ್ಣಯಲಾಲಿಸರಣ್ಯದಿ ಧೂರ್ತೆಯ। ಮಣ್ಣಗೂಡಿಸುವೆನಿಂದು ॥೨॥ ಬಣ್ಣವಲ್ಲಿದು ತಮ್ಮ ಎಣ್ಣಿಸು ಪಾತಾಳ। ಗಣ್ಯ ವಿದ್ಯುಜ್ಜಿಹ್ವನ ॥ ಮಣ್ಣಗೂಡಿಸಿದೆನಾನೆನ್ನುತ ಹಗೆಯೊಳ। ರಣ್ಯದೊಳಿಹಳು ಜಾಣೆ ॥೩॥ ಬಗೆವೆನೆ ಕೇಳು ಕಾಳಗದಿ ದುರಾತ್ಮೆಯ। ಮುಗಿಸದನಕ ಬಾರೆನು ॥ ನಗುತ ವೀಳ್ಯವನಿತ್ತು ರಘುವೀರ ಕಳುಹೆಂದು। ಮಿಗೆ ಶೌರ್ಯವರುಹಿದನು ॥೪॥ ನ್ಯಾಯವಲ್ಲಿದು ನೋಡನ್ಯಾಯದ ವಿಧದಿಂದ। ಮಾಯವನೆಸಗುವಳು ॥ ಆಯಾಸಪಡುವೆ ಬೇಡೈಯೋಗ್ಯವಲ್ಲೆಂದು। ತೋಯಜಾಂಬಕ ಪೇಳಲು ॥೫॥ ಶಕ್ರಾರಿಯಿಂದ ಪರಾಕ್ರಮಿಯೇ ದುಷ್ಟೆ। ಲೆಕ್ಕಿಸಿದೆನೆ ಮೊದಲು। ರಕ್ಕಸಿಯನು ತರಿದಿಕ್ಕುವೆ ನಾನಿಂದು। ನೀ ಕೃಪೆ ಮಾಡೆಂದನು ॥೬॥

ವಾರ್ಧಿಕ

ಅಣ್ಣನಡಿಗೆರಗಿ ಲಕ್ಷ್ಮಣನಿಂತು ನುಡಿಯಲಾ । ಚಿನ್ಮಯಂ ತೆಗೆದಪ್ಪಿ ವಸನಗಳ ನುಡಿಸಿದಂ । ರನ್ನದಾಭರಣಗಳ ತೊಡಿಸಿದಂ ವೀಳ್ಯವಂ ಕೊಡಿಸಿ ಧುರ ಜೈಸೆಂದನು ॥ ಉನ್ನತದ ಚತುರಂಗ ಬಲವನುಂ ನೆರಹಿದಂ। ಸ್ವರ್ಣರಥವಡರಿದಂ ಧನುಶರವ ಧರಿಸಿದಂ। ಪೂರ್ಣಬಲ ಸೌಮಿತ್ರಿವನಕಯ್ತರಲು ಭರದಿ ದುರುಳೆ ದೂರದಿ ಕಂಡಳು ॥೧॥

ಕಂದ

ಅಟವಿಯೊಳೈತಹ ಬಲಮಂ । ಜಠರದೊಳಿರಿಸುವೆನೆನ್ನುತ ಖತಿವಿಡಿಯುತ್ತಂ ॥ ಭಟರಂ ಕಂಡಾರ್ಭಟಿಸುತ । ತುಟಿ ಚಪ್ಪರಿಸುತ್ತಲಿ ದಾನವಿಯಿಂತೆಂದಳ್ ॥೧॥

ರಾಗ ಶಂಕರಾಭರಣ   ಮಟ್ಟೆ ತಾಳ

ನಿಲ್ಲು ನಿಲ್ಲು ಎಲವೊ ಮನುಜ । ಎಲ್ಲಿಗೈದುತಿರುವೆ ನಿನ್ನ । ಹಲ್ಲು ಮುಟ್ಟದಂದದಿ ತಿಂ।ದಿಲ್ಲಿ ತೇಗುವೆ ॥೧॥ ಕೆರಳಿ ಲಕ್ಷ್ಮಣಾಂಕನೆಂದ । ದುರುಳೆ ನಿಲ್ಲು ಧುರಕೆ ನೀನು । ಮೆರೆವ ರಾಮನನುಜನೆಂಬು। ದರಿತು ಬಂದೆಯ ॥೨॥ ಅಣ್ಣನ ಕೊಂದಾತನನುಜ । ನಿನ್ನ ಬಿಡೆನು ಹಿಡಿದು ಕ್ಷಣದಿ । ತಿನ್ನುವಾಸೆಯಿಹುದು ಸೈನ್ಯ । ವನ್ನು ಸಹಿತಲಿ ॥೩॥ ಕೆಟ್ಟ ದನುಜೆ ಕೇಳು ನಿನ್ನ । ಜೇಷ್ಟನೆನ್ನಣ್ಣನೊಳು ಮಡಿದ ।ದಿಟ್ಟೆ ನಿನ್ನ ಕೊಲ್ಲದಿನ್ನು । ಬಿಟ್ಟರನ್ಯಾಯ ॥೪॥ ಇಷ್ಟು ಮಾತುಗಳು ಯಾಕೆಂದು ದುಷ್ಟೆಭರದಿ ಮುಷ್ಟಿ ಬಲಿದು। ಸಿಟ್ಟಿನಿಂದ ಬರಲು ನೋಡಿ । ದಿಟ್ಟ ಲಕ್ಷ್ಮಣ ॥೫॥ ದುರುಳೆ ತಾಳೆನುತ್ತ ಕ್ರೂರ । ಶರವ ಬಿಡಲು ಶಿರವು ಧರಣಿ । ಗುರುಳಲೊಡನೆ ಪುಷ್ಪ ವೃಷ್ಟಿ । ಸುರಿದರಮರರು ॥೬॥

ರಾಗ ಯರಕಲ   ಕಾಂಬೋದಿ ಅಷ್ಟ ತಾಳ

ಲಕ್ಷ್ಮಣ ಮಹವೀರ ಶರಧಿ ಗಂಭೀರ । ರಕ್ಷಿಸಿದ್ಯೆನಮ್ಮ ಇಕ್ಷ್ವಾಕು ಕುವರ ॥ ಮುಂದಿನ್ನು ಭಯವಿಲ್ಲದಂದದಿ ಧೂರ್ತೆಯ । ಕೊಂದು ಕಾನನದೊಳಗಿಂದು ಸುಖದ ವಾಸ । ಹೊಂದುವ ತೆರನಾದುದ್ಯೆ । ಭೂಸುರ ಮುನಿ । ವೃಂದವ ಸಂತೈಸಿದ್ಯೆ । ಮನದೊಳಿರ್ದ । ಸಂದೇಹವನು ತೊರೆದೊಂದಾಗಿರುವೆವೈ ॥ ಲಕ್ಷ್ಮಣ ॥೧॥ ವಸುಧೆ ಭಾರಕರು ಬಾಧಿಸಲವರನು ಸಂಹ। ರಿಸಲೆಂದಯೋಧ್ಯದಿ ರಾಮ ಲಕ್ಷ್ಮಣರೆಂಬ । ಪೆಸರಿಲಿ ಜನಿಸಿದಿರಿ । ಸೂರ್ಯಾನ್ವಯ । ಜಸವನುದ್ಧರಿಸಿದಿರಿ । ಹೀಗೆಂದು ಸಂ। ತಸದಿಂದ ಋಷಿಗಳು ಪೊಗಳಲ್ಕೆ ಸಾರಿ ॥ ಲಕ್ಷ್ಮಣ ॥೨॥ ಮುನಿಗಳೊಳರುಹಿ ಲಕ್ಷ್ಮಣದೇವ ಪುರಕೈದಿ। ವನಜಾಕ್ಷಗಿನಿತ ವಿಸ್ತರಿಸೆ ಶ್ರೀ ರಾಮತ। ನ್ನನುಜನ ತೆಗೆದಪ್ಪುತ । ಶಾಭಾಸೆಂದು । ಗುಣನಿಧಿ ಮನ್ನಿಸುತ। ಪುರದೊಳಿರ್ದ । ಜನರು ಸಂಭ್ರಮದೊಳಗಿರೆ ಕೇಳಿರಿತ್ತ ॥ ಲಕ್ಷ್ಮಣ ॥೩॥

ವಾರ್ಧಿಕ

ಅವಧರಿಸು ಶೌನಕನೆ ಪೂರ್ವದೊಳು ರಾವಣಂ । ಗವತರಿಸಿದಂ ತನಯನೋರ್ವ ಮೂಲಕ ನಾಮ। ದವನ ನೋಡುತ ವಿಪ್ರರಂ ಬರಿಸಿ ಶಿಶು ಲಕ್ಷಣವ ಕೇಳುತಂದು ಭರದಿ ॥ ಭವನದೊಳಗಿರಗೊಡದೆ ಕಾನನಕೆ ಕಳುಹಿ ಬಿಸು । ಟ ವನಿರಲ್ಕಿತ್ತಾಲಾ ವನದೇವಿಯರು ಕಂಡು । ಕುವರನಂ ರಕ್ಷಿ,ಸಲು ಬೆಳೆದನ್ನೆ ದಿನ ದಿನಕೆ ಪೌರ್ಣಮಿಯ ಶಶಿಯಂದದಿ ॥೧॥

ರಾಗ ಸಾಂಗತ್ಯ ರೂಪಕತಾಳ

ಈ ತೆರದಲಿ ದಿನದಿನಕೆ ವರ್ಧಿಸುತಿಪ್ಪ । ಯಾತುಧಾನ ನಿವಾಸ ವನಕೆ ॥ ಆತಪೋ ನಿಧಿನಾರದಾಂಕನಂಬರವಿಳಿ। ದೈತಂದನಿದಿರಾಗಿ ಕ್ಷಣಕೆ ॥೧॥ ನಾರದ ಮುನಿಯನು ದೂರದಿಂದೀಕ್ಷಿಸಿ। ಸಾರುತ್ತ ಕರೆದುಪಚರಿಸಿ ॥ ಭೂರಿ ಕಾರುಣ್ಯದಿ ಕಾರಣೀಕನೆ ಬಂದ । ಕಾರಣ ಪೇಳೆಂದ ನಮಿಸಿ ॥೨॥ ಮಗನೆ ಕೇಳ್ ನಿನ್ನ ನಿರ್ಭಾಗ್ಯದ ಬಲು ಹೀನ । ಬಗೆಯನರುಹಲೆನಗರಿದು ॥ ನಗಧರ ಸುತನು ಭಾಳದಿ ಬರೆದಿಹ ನಿನ್ನ । ನಗೆಗೇಡಿನುದ್ಭವನೆಂದು ॥೩॥ ಎನೆ ಕೇಳುತಲಿದಾನವನು ಕೌತುಕವ ತಾಳಿ । ಘನ ಮಹಾತ್ಮನ ಚರಣದಲಿ ॥ ತನುವ ನೀಡಾಡುತೆಂದನು ಎನ್ನಪೆತ್ತಿಹ । ಜನನಿ ಜನಕರ್ಯಾರೆನ್ನುತಲಿ ॥೪॥

ರಾಗ ಶಂಕರಾಭರಣ ಏಕತಾಳ

ಹುಡುಗ ಕೇಳೊ ಹಿಂದೆ ಲಂಕೆ । ಯೊಡೆಯನಾದ ದಶಕಂಧರಗೆ । ಕಡೆಗೆ ನೀ ಪುಟ್ಟಿರಲು ನಿನ್ನ।ಹಡೆದ ಫಲವನು ॥ಒಡನೆ ತಿಳಿದು ಬೇಸರಿಸುತ ।ಅಡವಿಯೊಳಗೆ ಬಿಸುಡೆ ಬಳಿಕ । ಬಿಡದೆ ವನದೇವಿಯರು ಪೊರೆದು । ಬೆಡಗಿನೊಳಿರಲು ॥೧॥ ಮಿತ್ರಕುಲಜನೆನಿಪಯೋಧ್ಯಾ । ಪೃಥ್ವಿ ಪತಿಯ ಮಾತಿಗಾಗಿ । ಪುತ್ರರಾಮ ಚಂದ್ರ ವಿಪಿನ । ದತ್ತ ಸಾರಲು ॥ ಮತ್ತೆ ರಾವಣೇಶನವನ । ಪತ್ನಿ ಸೀತಾದೇವಿಯನ್ನು । ಕೃತ್ರಿಮದೊಳು ಲಂಕೆಗೊಯ್ದು । ವಾರ್ತೆಯರಿಯಲು ।೨॥ ಕರಡಿ ಕಪಿಗಳನ್ನು ನೆರಹಿ। ಶರಧಿಯನ್ನು ಬಂಧಿಸುತ್ತ । ದುರುಳನನ್ನು ಸದೆದು ಲಂಕಾ । ಪುರದ ಪಟ್ಟವ ॥ ಕಿರಿಯ ವಿಭೀಷಣಗೆ ಧಾರೆ ।ಯೆರೆದು ಕಟ್ಟಿ ರಾಘವೇಂದ್ರ । ತೆರಳಿ ಸತಿಯು ಸಹಿತ ಪೊರೆಯು । ತಿರುವ ರಾಜ್ಯವ ॥೩॥

ರಾಗ ನಾದನಾಮ ಕ್ರಿಯೆ ಅಷ್ಟತಾಳ

ಹೀಗೆಂದು ನಾರದ ತೆರಳಲು । ಖಳ । ತೂಗಿ ಶಿರವ ತನ್ನ ಮನದೊಳು ॥ ಏಗೈವೆನಿನ್ನು ಮುನಿಯ ಮಾತು । ಎನ।ಗಾಗಿ ಈ ರೀತಿ ಸಂಭವಿಸಿತು ॥೧॥ ಬಿಡುವೆನೆ ಕಿರಿಯಗೆ ರಾಜ್ಯವ । ಇನ್ನು । ಬಿಡುವಂತೆ ಮಾಳ್ಪೆನು ವ್ಯಾಜವ ॥ ಪಡೆದಾತಸಿಹ ಲಂಕಾಪುರದಲ್ಲಿ । ಸ್ಥಿರ । ಪಡಿಸುತ್ತ ತಾನಿಹ ಸುಖದಲಿ ॥೨॥ ದೇಶಕೋಶವ ಬಿಟ್ಟಾರಣ್ಯವೆ । ಪರ । ದೇಶಿಯಾಗುವದೆನ್ನ ಪುಣ್ಯವೆ ॥ ಈಸು ದಿನದಲಿ ನಾನರಿಯೆನು। ಈಗ । ವಾಸವಾರ್ಚಿತ ಋಷಿ ನುಡಿದನು ॥೩॥

ಭಾಮಿನಿ

ದಾನವೇಶ್ವರನಾದ ರಾವಣ । ಸೂನು ನಾನಾಗಿರಲು ಪಗೆಗಳ । ಹಾನಿ ಮಾಡದೆ ಬದುಕಿ ಫಲವೇನೆನುತ ಯೋಚಿಸುತ ॥ ಮಾನವರು ದನುಜರನು ಕೊಲುವುದು । ಹೀನವೆಂದಾ ಭದ್ರಕಾಳಿಯ। ತಾನಧಿಕ ಭಕ್ತಿಯಲಿ ತಪಕನುವಾಗಿ ಪ್ರಾರ್ಥಿಸಿದ ॥೧॥

ಧವಳಾರ

ಸರ್ವೇಶ್ವರಿ ಸರ್ವರ ಪೋಷಿಣಿ । ಸರ್ವರಭೀಷ್ಟ ಪ್ರದಾಯಿನಿ । ಸರ್ವಸುಮಂಗಲೆ ಗೀರ್ವಾಣರ॥ ಗೀರ್ವಾಣರ ಮರ್ತ್ಯರ ಜೈಸುವ । ಸರ್ವವರವಿತ್ತು ಸಲಹೆನ್ನ ॥ ಶೋಭಾನ ॥೧॥ ಈ ನಿಖಿಳ ಪ್ರಪಂಚವ ನಿಜ । ನೀನೊಲಿಯುತ ರಕ್ಷಿಸುತಿಹೆ । ಯೋನಿಯೊಳ್ ಜನಿಸಿದ ಸಚರಾಚರ ॥ ಸಚರಾಚರ ಪ್ರಾಣಿಗಳೆನ್ನನು। ಹಾನಿಯೆಸಗದಂತಿರಿಸವ್ವ ॥ ಶೋಭಾನ ॥೨॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಮುನಿಪ ಕೇಳೀ ತೆರದಿ ದಶಶಿರ । ನಣುಗ ಸಾವಿರ ವರುಷ ತಪಗಳ । ನನುಕರಿಸೆ ನಡೆತಂದಳಲ್ಲಿಗೆ। ಚಿನುಮಯಾತ್ಮೆ ॥೧॥ ಕೊಟ್ಟೆನೈಯೆಲೆ ಮಗನೆ ನಿನ್ನಾ । ಭೀಷ್ಟವನು ಮೂಜಗದಿ ನೀನತಿ । ಶ್ರೇಷ್ಟನಹೆಯೆಂದರುಹಿ ತಾ ಬೀಳ್ಕೊಟ್ಟಳಂದು ॥೨॥ ಇತ್ತಲಸುರಾಧಿಪನು ತನ್ನಯ । ಚಿತ್ತದಲಿ ಸಂತಸವ ತಾಳುತ । ಪೆತ್ತವರ ನೆನ ನೆನದು ಬಲು ಮರು । ಗುತ್ತಲೆಂದ ॥೩॥ ತಂದೆಯನು ಕೊಂದವನ ಕಾಯವ । ನಿಂದು ಕೆಡಹುವ ಯುಕ್ತಿ ಮುಂದೇ । ನೆಂದು ಯೋಚಿಸಿ ನೆರಹಿಸಿದ ಖಳ । ವೃಂದವನ್ನು ॥೪॥ ಕರಿ ತುರಗ ರಥ ಸೈನ್ಯವೆಂಬೀ । ಪರಿಯ ಬಲ ನೆನೆದಂತೆ ಒದಗಿತು । ಪರಿಪರಿಯ ಕೈದುಗಳ ತರಿಸುತ। ಧರಿಸಲದನು ॥೫॥

ವಾರ್ಧಿಕ

ದುರುಳನೀ ಪರಿಯಿಂದ ಸೈನ್ಯಮಂ ನೆರಹಿ ಮ । ತ್ತುರವಣಿಸಿ ಕಿರಿಯಯ್ಯನೊಳು ಸೆಣಸುವಂದದಿಂ। ಧರಣಿ ತಲ್ಲಣಿಸಲಯ್ತಂದು ಮುತ್ತಿದ ಲಂಕೆಯಂ ಖತಿಯೊಳತಿ ಶೀಘ್ರದಿ ॥ ಪರಿಕಿಸುತ ಪುರಜನಂ ಕಂಡು ಬೆರಗಾಗಿ ಕಂ । ದಿರಲು ಬಲ ಮುಂದರಿಯೆ ಕಾಣುತಾಕ್ಷಣ ಜವದಿ । ತೆರಹು ಗೊಡೆವೆನುತಲಾ ಬಾಗಿಲಲಿ ನಿಂದ ಚಾರರು ತಡೆದರೇನೆಂಬೆನು ॥೧॥

ರಾಗ ಪಂಚಾಗತಿ ಮಟ್ಟೆತಾಳ

ಮುನಿಲಲಾಮ ಕೇಳು ಚರರು । ದನುಜ ಬಲವ ಪಿಂತೆ ಸರಿಸೆ । ಕಿನಿಸಿನಿಂದ ಮೂಲಕಾಖ್ಯ । ಧನುವ ಧರಿಸುತ ॥ ವಿನಯದಿಂದ ನುಡಿದನವರೊಳಿನಿತು ಕಲಹವ್ಯಾಕೆ ನಮ್ಮೊ।ಳನು ವರಕ್ಕೆ ಬಂದು

ವ್ಯರ್ಥ। ತನುವ ಕೊಡುವಿರಿ ॥೧॥ ಸಾರೆಲಾ ದುರಾತ್ಮ ಕೆಲಕೆ। ದೂರ ನಿಲ್ಲು ನುಗ್ಗಿ ಮುಂದೆ। ದ್ವಾರದೆಡೆಗೆ ಬಂದಡಹುದು । ಘೋರ ಸಮರವು ॥ ಮೀರಿದರೆ ಕಠಾರಿಯಿಂದ । ಹಾರಿಸುವೆವು ಶಿರವನೀಗ । ಭೂರಿಗರ್ವವೇಕೆ ಬರಿದೆ । ಸಾರಿಪೇಳ್ವೆವು ॥೨॥ ಯಾಕೆ ಕೆಡುವಿ ರೆಲವೊ ನಿಮ್ಮ । ಪೋಕತನದೊಳಿಲ್ಲಿ ನೀವು। ಸಾಕು ಸಾಕು ತೆರಳಲೊಳಿತು। ಜೋಕೆ ಸಾರಿದೆ ॥ ಸಾಕಿದವನ ಬರಲು ಪೇಳಿ। ರೈ ಕುಠಾರನವನ ಕರುಳ । ಶಾಕಿನಿಯ ಬಳಗಕೀಯ। ಬೇಕು ನೋಡೆಲ ॥೩॥ ಸಲ್ಲದೀಗ ಸಮಯ ನಮ್ಮ । ವಲ್ಲಭನನು ಕಾಣುವುದಕೆ। ನಿಲ್ಲು ಹೊರಗೆ ಬರುವ ವೇಳೆ।ಯಲ್ಲಿ ನೋಡಿಕೊ ॥ ಬಲ್ಲಿದಾತನೆಂದು ಮದದಿ। ಗುಲ್ಲು ಗೈದರೀಗ ನಿನ್ನ।ಹಲ್ಲ ಮುರಿವೆನೆನುತ ಖಡ್ಗ । ದಲ್ಲಿ ಹೊಯ್ದರು ॥೪॥ ವಿಗಡ ದೈತ್ಯನಂದು ರೋಷ। ಮೊಗದಿ ಬಳಿಕ ಚರರಕ್ಷಣದಿ । ಮುಗಿಸಿ ಬಿಡುವೆನೆನುತ ಬಲವ । ಪೊಗಿಸೆ ಕಾಣುತ ॥ ಬಿಗುಹಿನಿಂದ ಖಳರಿಗಸಿಯ । ನುಗಿದು ಕೆಲರಕೊಲುತ ಪೌರು । ಷಗಳೊಳಿರ್ದರಿವರು ಪಥವ । ನಗಲದೀಪರಿ ॥೫॥ ಒಡನೆ ದಾನವೇಂದ್ರ ನೋಡಿ। ಘುಡುಘುಡಿಸುತ ಖತಿಯೊಳಿಂತು। ತಡೆದು ನಿಂದ ಬಾಗಿಲವರ। ಕೆಡಹಿ ಶೀಘ್ರದಿ ॥ ಪಿಡಿದು ಮುಂದಲೆಯನು ಬಂಧಿ । ಸಿಡುತ ನಿಮ್ಮ ದೊರೆಗೆ ಪೋಗಿ । ನುಡಿವುದೆನುತ ನೂಕಲಾಗ । ನಡೆದರಳುತಲಿ ॥೬॥

ಭಾಮಿನಿ

ಅವನಿಸುರ ಕುಲ ಮೌಳಿ ಕೇಳ್ವೆ। ರವಿ ಮುಳುಗಲಂಬುಧಿಗೆ ರಾತ್ರಿಯೆ। ತವಕದಲಿ ಚಾರಕರು ನಡೆತರಲಿತ್ತ ಭೀತಿಯಲಿ ॥ ಯುವತಿ ಶರಮೆ ವಿಭೀಷಣನು ಸಹ। ಪವಡಿಸಿರೆ ಬಲುನಿದ್ರೆಯ ಲಿಸ್ವ। ಪ್ನವನು ಕಾಣುತಲೆದ್ದು ಕಾಂತನೊಳೆಂದಳತಿ ಭಯದಿ ॥೧॥

ರಾಗ ನವರೋಜು ಆದಿತಾಳ

ಮಾತನು ಲಾಲಿಪುದರಸ। ರಾತ್ರಿಯೆ ಕಂಡೆನು ಕನಸ ॥ ಬೀತಿಯೆ ತೋರ್ಪುದು ಮನಕೆ। ನೀತಿಳಿ ಪೇಳುವೆನದಕೆ ॥೧॥ ಪೂರ್ವದಲಿ ದಶಶಿರಗೆ । ಓರ್ವನು ಪುಟ್ಟಲು ಕಡೆಗೆ ॥ ಪರ್ವತದ ಶಿಖರದೆಡೆ। ಪಾರ್ವರ ವಾಕ್ಯದಿ ಬಿಸುಡೆ ॥೨॥ ಛಿದ್ರರೂಪನನೆಗಹಿ। ಭದ್ರಕಾಳಿಯು ಸಲಹಿ ॥ ಭದ್ರ ಬಲಾನ್ವಿತನಾಗಿ। ಹೊದ್ದಿದ ತಾಧುರಕಾಗಿ ॥೩॥ ವರಯೋನಿಯಿಂ ಜನಿಸೆ । ಚರಿಸುವ ಜೀವಿಗಳೆನಿಸೆ ॥ ಮರಣವು ಬಾರದತೆರದಿ। ವರವಿದೆ ದೇವಿಯ ದಯದಿ ॥೪॥

ರಾಗ ತೋಡಿ - ಅಷ್ಟತಾಳ

ಎಂದ ಮಾತ ಕೇಳಿಕಾಂತೆ। ಗಂದು ವಿಭೀಷಣನು ತೋಷ।ದಿಂದ ನುಡಿದನೊಂದು ಮಾತನು॥ ಚಂದಿರಾನನೆ ಬೆದರಬೇಡೆಲೆ । ಮಂದರಾದ್ರಿಧರನ ಕರುಣ । ದಿಂದ ಭಯಗಳಿಲ್ಲ ನಮಗಿನ್ನು ॥೧॥ ಮಂದರಾದ್ರಿಧರನ ಕರುಣ। ದಿಂದ ಭಯಗಳಿಲ್ಲ ವೈಸೆ। ಮಂದಮತಿಯು ವರವ ಪಡೆದಿಹನು ॥ ಇಂದು

ಕಾದಿ ಸೋತರೆ ನೀ । ಮುಂದೆ ನಮಗೆ ಗತಿಗಳೇನು । ಯೆಂದು ತಿಳಿಯದೆ ಹದನ ಪೇಳಿದೆನು ॥೨॥ ಸಾಟಿಯೇನದೀಗ ನಮ್ಮ । ಕೋಟೆಯನ್ನು ಮೀರಿ ಬರುವ । ಲೂಟಿಗಾರರಿಹರೆ ತ್ರಿಜಗದಿ ॥ ಈಟಿ ಕುಂತ ಖಡ್ಗದಿ ಮೂ ।ರ್ಕೋಟಿ ರಕ್ಕಸರ್ಗಳು ಕ । ವಾಟದಲ್ಲಿ ಕಾಯ್ವರೀ ವಿಧದಿ ॥೩॥ ದಿಟ್ಟತನದಿ ರಾವಣೇಶ। ಕೆಟ್ಟನೆಂತು ಹಿಂದೆ ಜಗ । ಜಟ್ಟಿ ರಾಮನ ಭಕ್ತ ಹನುಮನು ॥ ಸಿಟ್ಟಿನಿಂದ ನಮ್ಮ ಲಂಕಾ । ಪಟ್ಟಣವ ಬಾಲದಗ್ನಿ । ಗಿಟ್ಟು ಸುಟ್ಟುದರಿತುದಿಲ್ಲವೆ ॥೪॥ ಲಲನೆ ಕೇಳು ರಾಮದೇವನ । ಬಲುಮೆಯಿಂದ ಹನುಮದೇವನು । ಬಲಯುತನು ಬಂದಿಹನು ಮಿಕ್ಕಿರುವ ॥ ಹುಲು ದುರಾತ್ಮರು ನಮ್ಮ ಪುರವ । ನಿಲುಕಲಾರರು ವ್ಯರ್ಥವಾಗಿ । ಕಳವಳಿಸದಿರು ಚಿತ್ತದೊಳು ನೀನು ॥೫॥ ತಿಳಿದೆನಿದನು ಸ್ವಪ್ನದಲ್ಲಿ । ಬಳಿಕ ಮನದಿ ಬೆದರಿ ನಿನ್ನೊ।ಳುಳಿಸದಿಂತು ಪೇಳಿದೆನು ಕೇಳು ॥ ಬಲವ ಭದ್ರತೆಗೊಳಿಸಲುಚಿತ । ಸುಲಭವಲ್ಲವೆಂಬ ಸತಿಯ । ಕಳುಹಲಂತಃ ಪುರದೊಳಿರ್ದಳು ॥೬॥

ಭಾಮಿನಿ

ತರಣಿಯುದಯಾಚಲಕೆ ನಡೆತರ। ಲರಿತು ತನ್ನಯ ನಿತ್ಯ ಕರ್ಮಗ ।ಳಿರದೆ ಸಾಂಗೋಪಾಂಗದಿಂದ ವಿಭೀಷಣನು ರಚಿಸಿ ॥ ಮೆರೆವ ಪೀಠದೊಳೋಲಗದೊಳಿರೆ । ಚರರು ನಡುಗುತ ಬಂದು ಕೈಮುಗಿ । ದರುಹಿದರು ವೈರಿಗಳ ಹದನವನಧಿಕ ಭೀತಿಯಲಿ ॥೧॥

ರಾಗ - ಕೇತಾರಗೌಳ - ಝಂಪೆ ತಾಳ

ಕೇಳು ಹದನವ ಸುಮ್ಮಗೆ । ದ್ವಾರವನು । ಪಾಲಿಸುವಡರಿದು ನಮಗೆ ॥ ಖೂಳ ರಕ್ಕಸರು ಬಂದು। ನಮ್ಮವರ । ಗೋಳು ಗುಟ್ಟಿಸಿದರಿಂದು ॥೧॥ ಕೋಟೆಯನು ಮುರಿಯೆ ಕಂಡು । ನಮ್ಮ ಮೂ। ರ್ಕೋಟಿದಾನವರ ದಂಡು ॥ ಈಟಿ ಕುಂತವ ಧರಿಸುತ । ಪೋಗಿ ಸೆಣ । ಸಾಟವಾಯ್ತಧಿಕ ವ್ಯರ್ಥ ॥೨॥ ಎತ್ತ ನೋಡಿದಡಸುರರು । ನಮ್ಮ ಬೆಂ ।ಬತ್ತಿ ಮುತ್ತುತಲಖಿಳರು ॥ ಮತ್ತ ಗಜವಾಜಿ ಸಹಿತ । ಕಾಣಲೆದೆ। ಬತ್ತುತಿದೆ ನೋಡು ಸತ್ಯ ॥೩॥ ಪುರದ ಬಾಗಿಲೊಳಿರುವರು । ಸೆಣಸಲ್ಕೆ । ಕುರುಳ ಪಿಡಿಯುತ ಬಿಗಿದರು॥ ಭರದಿ ನಿಮ್ಮಪ್ಪಗರುಹಿ । ಯೆಂದಟ್ಟಿದರು ಜರೆದು ಪ್ರಾಣವುಳುಹಿ ॥೪॥

ವಾರ್ಧಿಕ

ಚರರೆಂದುದಂ ಕೇಳು ತಾಕ್ಷಣ ವಿಭೀಷಣಂ । ದುರುಳಗಿದಿರಾಗಿ ಧುರಕೈದಲ್ಕೆ ಬರಿಸಿದಂ । ಕರಿ ವರೂಥಂಗಳಂ ತುರಗ ಕಾಲಾಳ್ಗಳಂ ವೀರ ಪಟುಭಟರ ಸಹಿತ ॥ ವರ ಮಂತ್ರ ಶರಗಳಂ ಧರಿಸಿದಂ ಮಾನಸದಿ । ಹರಿಯ ಧ್ಯಾನಿಸಿ ರಥವನೇರಿ ಕೈ ಕಸೆ ಸುತಂ । ಬರುತಲಾ ಮೂಲಕನ ಬಳಿ ಸಾರಿ ಖತಿಯೇರಿ ನೋಡಿದಂ ಮಾತಾಡಿದಂ ॥೧॥

ರಾಗ ಭೈರವಿ- ಅಷ್ಟತಾಳ

ರಾವಣಾತ್ಮಜನೆ ಕೇಳು । ನಮ್ಮನ್ವಯ । ಕಾವಾತ ನೀ ನಮ್ಮೊಳು ॥ ಕೇವಲ ರಿಪುಗಳಂತೀ ವಿಧವೆಸಗಲು । ಜೀವಿಸಲಿಹೆಯ ಪೇಳು ॥೧॥ ಸರಸ ಮಾತುಗಳ್ಯಾತಕೆ । ಲಂಕೆಯೊಳಾಸೆ । ತೊರೆದು ಸಾರೆಲೊ ಕೆಲಕೆ ॥ ಹಿರಿಯನ ಕೊಲಿಸಿ ಸುಸ್ಥಿರದಿ ಬಾಳುವೆನೆಂಬ । ಗರುವವನಿಳಿಸುವೆನು ॥೨॥ ಹಿರಿಯಗ್ರಜನು ಪಡೆದ । ನೀ ಜನಿಸಿದ । ಪರಿಯಿಂದಲವ ಮಡಿದ ॥ ತರಳ ನೀನರಿಯೆ ಸಂಗರ ಬೇಡ ಸಾರಿದೆ । ತೆರಳತ್ತ ನೀನೆಂದನು ॥೩॥ ಬೊಪ್ಪನ ಮಡುಹಿ ನಾನು । ರಣದಿ ಕಿರಿ । ಯಪ್ಪನ ಬಿಡುವೆನೇನು॥ ತಪ್ಪದು ಎನಗಪಕೀರ್ತಿ ನಿನ್ನನು ಕೊಲ । ಲಪ್ಪುದು ಬಳಿಕ ಕೀರ್ತಿ ॥೪॥ ಈ ತೆರದೊಳು ಮೊದಲು । ನೀತಿಯ ನಿನ್ನ । ತಾತನಿಗೊರೆದೆ ಕೇಳು ॥ ಮಾತ ಕೇಳದೆ ಪೋದ ನದರಿಂದ ನಿನಗೀಸು । ನೀತಿಯನುಸುರಿದೆನು ॥೫॥ ತಾತನಿಗಿರುವ ರಾಜ್ಯ । ಆಳುವತನು । ಜಾತಲೋಕದಿ ಸಹಜ ॥ ಭೂತಳವನು ಬಿಟ್ಟು ಪಿಂತೆ ಪೋದರೆ ನಿನ್ನ । ಮಾತನಾಡಿಸೆನೆಂದನು ॥೬॥

ರಾಗ - ಘಂಟಾರವ - ಮಟ್ಟೆತಾಳ

ಎಂದ ಮಾತನು । ಕೇಳಿ ಶರಣನು ॥ ಮುಂದ್ವರಿಸಲು ಖಳನು ಧನುವ । ನಂದು ಪಿಡಿದನು ॥೧॥ ಇಂದಿರೇಶನ । ಪ್ರಿಯ ವಿಭೀಷಣ ॥ ಚಂದ ವ್ಯಾತೆನುತ ಬಿಲ್ಲ । ಕೊಂಡನಾಕ್ಷಣ ॥೨॥ ಬಿಡಲು ಶರವನು। ಕಡಿದು ಬಿಸುಟನು ॥ ಒಡನೆ ಮೇಘ ಬಾಣವನ್ನು । ತಡೆಯದೆಚ್ಚನು ॥೩॥ ಘುಡು ಘುಡಿಸುತಲಿ । ನಡುಗಿ ಬರುವುದ ॥ ತಡೆಯದೇ ವಿಭೀಷಣಾಖ್ಯ । ನಡೆದ ಹಿಂದಕೆ ॥೪॥

ಭಾಮಿನಿ

ಶರಣ ಪಿಂತಿರುಗಲ್ಕೆ ದಾನವ । ಜರೆದನಾತನ ಜೀವಗಳ್ಳರ । ಗುರುವ ಲಾಕಿರಿಯಪ್ಪ ಓಡುವ ಭರವಿದೇನೆನುತ ॥ ಧುರದಿ ತಿರುಗಿದರವನ ವೀರರು । ಮರಳಿ ನಾ ಬೆನ್ನಟ್ಟಿದರೆ ಮಹ । ದುರಿತವಾಹುದೆನುತ್ತ ಖಳನೈದಿದನು ಗಹಗಹಿಸಿ ॥೧॥

ರಾಗ ಬೇಗಡೆ - ಅಷ್ಟತಾಳ

ಕೇಳಿ ಶೌನಕ ಮುಖ್ಯ ಮೌನಿಗಳು । ಬಲುಕ್ರೂರತನವನು । ತಾಳಿ ಶರಣನ ನಿಂತು ಜರೆದಿರಲು॥ ಶ್ರೀಲತಾಂಗಿಯ ಲೋಲ ನೀನೇ । ಪಾಲಿಸೆನುತಾ ನಾಸಿಕಾಗ್ರದ । ಮೂಲದೊಳಗಡಗಿರ್ದನಿತ್ತಲು । ಮೂಲಕಾಸುರನಧಿಕ ಹರುಷದಿ ॥೧॥ ಭೂಸುರೋತ್ತಮನೆಂದ ವಚನವನು । ನಾ ಕೇಳಿದುದರಿಂ । ದೇಶಕೋಶವು ಸೇರಿ ತಿನ್ನೇನು ॥ ಮೋಸದಿಂದಲಿ ತಂದೆಯನ್ನು । ಘಾಸಿಗೈದಿರ್ದವನ ಕೊಂದು । ವಾಸವಾದಿಗಳನ್ನು ಬಡಿದರೆ । ತೋಷ ವಪ್ಪುದೆನುತ್ತಲೈದಿದ ॥೨॥ ಸ್ವರ್ಗ ಪಾಲಕ ನೊಡನೆ ಸೆಣಸಿದನು। ಆ ಸುರಪನಮರರ । ವರ್ಗ ಸಹ ಭಯವನ್ನು ತಾಳಿದನು ॥ ಭರ್ಗಪ್ರಿಯ ಚತುರಾಸ್ಯನಲ್ಲಿಗೆ । ಶೀಘ್ರದಿಂ

ನಡೆತಂದು ಮುಗಿದ ಕ । ರಾಗ್ರವಿಂ ಮೈಯಿಕ್ಕುತಸುರನ । ದುರ್ಘಟವ ವಿಸ್ತರಿಸುತೆಂದನು ॥೩॥

ರಾಗ -ನವರೋಜು - ಏಕತಾಳ

ಸರಸಿಜೋದ್ಭವ ಕೇಳು । ನಾ । ನರುಹುವೆನೈ ಕರುಣಾಳು ॥ ಧರೆಯೊಳಗೀದು ।ಶ್ಚರಿತರ ನಿರ್ಮಿಸಿ। ಸುರಪುರವಾಳದ । ತೆರನೆ ಸಗುವೆಯ ॥೧॥ ದೈತ್ಯರ ಸೃಷ್ಟಿಸುತಿಹುದು । ತವ । ಕರ್ತವ್ಯವಾಗಿಹುದು॥ ಮತ್ತೆ ಬೇಡುವವರ । ವಿತ್ತವರಿಗೆ ನೀ । ನರ್ಥಿಯ ಸಲಿಸೆ ಬೆಂ । ಬೊತ್ತುವರೆನ್ನನು ॥೨॥ ಮೊದಲೊಮ್ಮೆ ದಶಕಂಠ । ಬರೆ । ಸದೆದನು ಶ್ರೀ ವೈಕುಂಠ ॥ ಸದನದಿ ನಾನಿರ । ಲಧಿಕ ದುರಾಗ್ರಹಿ । ಕದನಕೆ ಬಂದಿಹ। ಮದ ಮುಖನೋರ್ವನು ॥೩॥ ದಶಮುಖಾತ್ಮಜನಂತೆ । ಅವ । ವಸತಿಯು ಲಂಕೆಯೊಳಂತೆ ॥ ಪೆಸರು ಮೂಲಕನೆಂ । ದೆಸೆವ ಮೂರ್ಲೋಕದಿ । ಬಸವಳಿಸಿದನೆಂ । ದುಸುರಿದನಂದು ॥೪॥

ರಾಗ - ಸಾಂಗತ್ಯ - ರೂಪಕತಾಳ

ಸುರನಾಥನೆಂದ ಮಾತನು ಕೇಳಿ ಮನದೊಳು । ಸರಸಿಜಾಸನ ನಸುನಗುತ ॥ ಬರಿದೆ ನೀನ್ಯಾಕೆನ್ನ ಜರೆಯುವೆ ದೇವೇಂದ್ರ । ಅರಿಯೆನು ದೈತ್ಯನಾಗಮವ ॥೧॥ ಸೃಷ್ಟಿಗೆ ಕರ್ತೃ ನಾನಲ್ಲದೆ ಬೇರಿಲ್ಲ । ಮುಟ್ಟಿ ರಕ್ಷಿಪ ಲಕ್ಷ್ಮೀ ರಮಣ ॥ ತಟ್ಟನೆ ಹರ ತಾನೆ ಲಯಗೈವನಸುರನ । ಬಟ್ಟೆಯ ಕಾಣೆ ಸಂಪನ್ನ ॥೩॥ ದಶ ಶಿರನಿಂಗೆ ಪಾಲಿಸಿದಾತ ವರಗಳ । ಪಶುಪತಿಯದರಿಂದ ಲಿವಗೆ ॥ ಕುಶಲದಿಂದಿಷ್ಟಾರ್ಥವಿತ್ತನು ನಿಜವಾಗಿ। ಶಿಶು ಮೂಲಕಗೆ ಧರೆಯೊಳಗೆ ॥೩॥ ಈಶನಿರುವನು ಕೈಲಾಸ ಪರ್ವತದೆಡೆ ।ಗೀ ಸಮಸ್ತರನು ಸಂಘಟಿಸಿ ॥ ವಾಸವ ಪೋಪುದೆ ಲೇಸೆಂದು ಪೊರಟುವಾ ।ಣೀಶನು ಸಹಿತಾಗಿ ಗಮಿಸಿ ॥೪॥

ವಾರ್ಧಿಕ

ದ್ವಿಜಕುಲಾಧಿಪ ಕೇಳು ದಿವಿಜರಂ ಸಂಘಟಿಸು । ತಜನೈದಲಿತ್ತಲಸುರಾರಾತಿ ಹರುಷದಿಂ । ರಜತಗಿರಿ ಶಿಖರದೊಳ್ ರಂಜಿಸುವ ಪರಿವಾರ ಗಜ ಮುಖಾದಿಗಳೊಪ್ಪಿರೆ ॥ ಭಜಿಸುತಿಹ ಪಾರ್ವತಿಯ ಭಾವಿತಾರ್ಥಗಳಿಂದ । ಭುಜಗ ಭೂಷಣನಿರಲು ಕಾಣುತಾಕ್ಷಣದಿ ಸರ ।-ಸಿಜತನಯ ವಾಸವಾದ್ಯರು ಸಹಿತ ಬಂದು ಪದ ವ್ರಜಕೆ ಮಣಿದಿಂತೆಂದರು ॥೧॥

ರಾಗ - ಕಾಂಬೋದಿ -ತ್ರಿವುಡೆ ತಾಳ

ಶಂಭೋ ಶಂಕರನೆ ದೇವ । ಸದಾಶಿವ । ಶಂಭೋ ಶಂಕರನೆ ದೇವ ॥ ಅಂಬಿಕಾ ಪ್ರಿಯ ಸಾಂಬ ಶಿವನೆ ತ್ರಿ । ಯಂಬಕಮರ ಕುಟುಂಬಿಗಜಚ । ರ್ಮಾಂಬರನೆ ದುರಿತಾಂಬು ನಿಧಿ ಹುತ । ವೆಂಬ ಪರಿಯೆಮಗಿಂಬ ತೋರಿಸು ॥ ಅ ಪ ॥ ಹರನೆ ನೀ ಲಾಲಿಸಯ್ಯ । ಬಂದುದನು ವಿ । ಸ್ತರಿಸುವೆ ಸಂಗತಿಯ। ಸ್ವರ್ಗದೊಳಿರೆ । ಪರಮ ಸೌಖ್ಯದಲಿ ಜೀಯ । ಇನ್ನೇನು ಕಾರ್ಯ ॥ ಧರಣಿಯೊಳಗಿಂದೋರ್ವದೈತ್ಯನ।

ಸರಸಿಜೋದ್ಭವ ನಿರ್ಮಿಸಲು ಸುರ । ಪುರದೊಳಿರಗೊಡದಂತೆ ನಮ್ಮನು । ದುರುಳ ಬಾಧಿಪ ಪರಿಯ ಲಾಲಿಸು ॥ ಶಂಭೋ ॥೧॥ ಮೂಲಕಾಸುರನೆಂಬವ । ದಶಗಳನೆನಿಪ । ಖೂಳನವನ ಸಂಭವ । ಮೂಲೋಕವ । ಗೋಳು ಗುಟ್ಟಿಸಿದನವ । ಪೇಳೆಮಗೆ ಪಥವ ॥ ಶೂಲದಿಂದಲಿ ಸೂರ್ಯಸಾತ್ಮಜ । ನಾಲಯಕೆ ದೈತ್ಯರನು ಸಮರದಿ । ಬೀಳಗೆಡಹುತ ಬಳಿಕ ನಮ್ಮನು । ಪಾಲಿಸೈ ನೀನೊಲಿದು ಕರುಣದಿ॥ ಶಂಭೋ ॥೨॥

ಭಾಮಿನಿ

ದಶಮುಖನು ಸಾಹಸಿಗನೆಂಬರು । ವಸುಧೆಯೊಳಗಿಹರೆಲ್ಲ ಕೇಳೀ । ಅಸುರನಿಂಗಿದಿರ್ಯಾರೊ ಪಾಡಲ್ಲವನು ಪರಿಕಿಸಲು ॥ ಶಶಿಧರನೆ ನೀನೊಲಿದು ಎಮ್ಮಯ।ಪೊಸತು ಕಷ್ಟವ ಪರಿಹರಿಸಿ ನಿಜ । ವಸತಿಯಲಿ ನಿಲಿಸೆನಲು ಸುರಪತಿಗೆಂದ ತ್ರಿಪುರಾರಿ ॥೧॥

ರಾಗ ದೇಶಿ - ಏಕತಾಳ

ಚಂದವಾದುದು ದೇವೇಂದ್ರ ಬಂದುದಿಲ್ಲಿಗೆ । ಅರ । ವಿಂದ ತನಯಾದಿ ಸುರ ವೃಂದದಿಂ ಮಿಗೆ ॥ಪ॥ ಧರಣಿಯಲ್ಲಿ ನೊರಜುಗಳಿಗೆ ಗರಿಯು ಬರಲು ಹೀಗೆ । ಮತ್ತೆ । ಚರಿಸಲೆಂದು ಲಂಘಿಸಲ್ಕೆ ಗರುವದಿಂ ಮೇಗೆ ॥ ಪರಿಕಿಸಲಂಬರದಿ ವಿಹಗಗಳಿರದೆ ಜೀವಿಗಳ್ಗೆ । ಬ್ಯಾ। ತೆರೆದು ತಿಂಬೋಪಾದಿಯಿಂದ ದುರುಳರ್ನಿಮಗೆ ॥ ಚಂದ ॥೧॥ ತರಳತನದೊಳಿರ್ದು ಪ್ರಾಯಭರಿತವಾಗಲು । ತಮ್ಮ । ಭರಿತ ಮದದಿ ತಾವೆ ಸುರರ ತೆರದೊಳಾಗಲು ॥ ಭರದಿ ನಮ್ಮ ಧುರದೊಳವರ ಶಿರವನರಿಯಲು । ಇಂತೀ । ಪರಿಯನರಿತು ವ್ಯರ್ಥಮನದಿ ಮರುಗದಿರು ಕೇಳು ॥ ಚಂದ ॥೨॥ ಇನಿತು ಕಾರ್ಯಕಿಲ್ಲಿ ಬಂದು ದಣಿದು ಕೊಂಡಿರಿ । ಪೋಗಿ ಕನಕವಸನಗರುಹಲಾಗಿ ದನುಜಕುಲವೈರಿ ॥ ಘನ ಮದಾಂಧನನ್ನು ಕೊಲುವ ಇನಕುಲೋದ್ಧಾರಿ । ದುಷ್ಟ । ಹನನವಾದ ಮೇಲೆ ನೀವು ಸುಖದೊಳಿರುವಿರಿ ॥ ಚಂದ ॥೩॥

ವಾರ್ಧಿಕ

ರಾವಣನ ಮಥಿಸಲೋಸುಗ ಧರಣಿಯೊಳು ಜನಿಸಿ । ಶ್ರೀವರಂ ರಾಮಾಭಿಧಾನದಿಂದೆಸೆಯುತಿಹ। ನೀವಯೋಧ್ಯಾಪುರಕೆ ಪೋಪುದೆನೆ ಸುರರಂದು ಭೂವಳಯಕಯ್ತಂದರು ॥ ದೇವೇಂದ್ರನಂಬುಜಾಸನ ಸಹಿತಲೆಲ್ಲರುಂ । ಪಾವನಾತ್ಮಕನ ರಾಜಾಲಯಕೆ ಬರಲು ಕಂ । ಡೀ ವಿಕಾರಗಳಿಂದ ಬರವೇನೆನಲು ರಾಮಗೆರಗಿ ಸ್ತುತಿಸುತಲೆಂದರು ॥೧॥

ರಾಗ ಮಧ್ಯಮಾವತಿ - ಏಕತಾಳ

ಪಾಲಿಸು ಶ್ರೀ ಲಕ್ಷ್ಮೀ ಲೋಲ ಪರಾಕು । ನೀಲ ನಿಭಾಂಗ ಸಂರಕ್ಷಿಸಬೇಕು ॥ಪ॥ ಜಾಲ

ಮಾತುಗಳಲ್ಲ । ಖೂಳನೋರ್ವನು ಎಲ್ಲ । ಹಾಳೆಸಗಿದನಲ್ಲ । ನೀಲಕಂಧರ ಬಲ್ಲ ॥ ಪಾಲಿಸು ॥೧॥ ಪೆಸರು ಮೂಲಕನೆಂಬ । ದಶಶಿರ ಪ್ರತಿಬಿಂಬ । ವಸುಧೆಯೊಳಗೆ ಸ್ತಂಭ । ಪಸರಿಸಿದನು ತುಂಬ ॥ ಪಾಲಿಸು ॥೨॥ ನೆಲಸಲಾರೆವು ಸುರ । ನಿಳಯದಿ ರಘುವೀರ । ಕಳೆದಸುರನ ಶಿರ । ಸಲಿಸೆಮ್ಮ ನುಡಿಧೀರ॥ ಪಾಲಿಸು ॥೩॥ ಧುರದೊಳೋಡಿದ ಲಂಕಾ । ಪುರದ ವಿಭೀಷಣಾಂಕ । ತೆರಳಿಸಿದನ ಬಿಂಕ । ಕರುಣದಿ ಕೇಳ್ನಿಶ್ಶಂಕ ॥ ಪಾಲಿಸು ॥೪॥

ರಾಗ -ಕಾಂಬೋದಿ -ಝಂಪೆತಾಳ

ಇಂತೆಂದು ಸ್ತುತಿಗೈದ ಇಂದ್ರನನು ತಕ್ಕೈಸಿ । ಕಂತುಪಿತಕಡುಹರುಷದಿಂದ ॥ ಚಿಂತೆ ಬೇಡಿನ್ನು ಧೈರ್ಯವ ತಾಳು ದನುಜನ ಕೃ । ತಾಂತನಾಲಯಕೆ ಕಳುಹಿಸುವೆ ॥೧॥ ತೆರಳಿ ನೀವೆಂದು ಸತ್ಕರಿಸೆ ಕೈ ಮುಗಿದು ಸುರ । ನೆರವಿಯ್ಯೈದಿದುದು ಸಂತಸದಿ ॥ ಕರುಣಾಳು ರಾಘವೇಶ್ವರನರಿತು ಮನದಿ ಖತಿ । ಧರಿಸಿ ಕರೆದನು ಚರರ ಭರದಿ ॥೨॥ ವಂದಿಸುತಕೆಲಬಲದಿ ನಿಂದಿರುವ ದೂತರೊಳು । ಇಂದಿರೇಶನು ನುಡಿದನಾಗ ॥ ಚಂದದಿಂದೈದಿ ಕಿಷ್ಕಿಂಧೆಗಿರಿಗಾತರಣಿ । ನಂದನನ ಪರಿಕಿಸಲು ಬೇಗ ॥೩॥ ವಾನರರ ಸಂಘಟಿಸಿ ತಾನೆ ಕ್ಷಿಪ್ರದಿ ಬರಲಿ । ನ್ನೇನು ತಡವ್ಯಾಕೆನಲು ಮೇಗೆ ॥ ಮಾನವಾಧಿಪಗೆರಗಿ ಸಾನುರಾಗದಿ ಪೋಗೆ । ಆ ನಿಖಿಳ ಕಪಿಗಳಿದ್ದೆಡೆಗೆ ॥೪॥

ವಾರ್ಧಿಕ

ಬಂದು ಚರರರುಹಲಾ ವಾರ್ತೆಯಂ ಕೇಳಿ ರವಿ । ನಂದನಂ ಹನುಮ ಜಾಂಬವ ದ್ವಿವಿದನಳನೀಲ। ಗಂಧ ಮಾದನ ಗವಯ ಗಜ ಗವಾಕ್ಷಾದಿ ಕಪಿ ಪ್ರಮುಖರಂ ಕರೆಸಿ ಜವದಿ ॥ ಬಂದಯೋಧ್ಯಾಪುರಕೆ ಪರಿಕಿಸುತ್ತಲಿ ಇನಕು । ಲೇಂದ್ರನಂಘ್ರಿಯೊಳೆರಗಿ ನಿಂದಿರಲು ನೋಡಿ ದಶ । ಸ್ಯಂದನಾತ್ಮಜನಧಿಕ ಸಂತೋಷದಿಂದ ಮನ್ನಿಸುತೆಂದ ಭಾಸ್ಕರಜಗೆ ॥೧॥

ರಾಗ -ಮಧುಮಾಧವಿ - ಏಕತಾಳ

ವಾನರಾಧಿಪ ಕೇಳು ಸುಗ್ರೀವ । ಭಾನು ಸನ್ನಿಭ ಪಾವ । ಮಾನಿಜಾಂಬವ ಸಹ ॥ಪ॥ ಪೂರ್ವದಿ ದಶಶಿರ ಪುಟ್ಟಿ ಸ್ವರ್ಗದೊಳಿದ್ದ । ಗೀರ್ವಾಣತತಿ ಸೆರೆ ಸಿಕ್ಕಿದಂದದಲಿ ॥ ಓರ್ವ ಬಂದಿಹನಂತೆ ದಶಮುಖಾತ್ಮಜನಂತೆ । ನಿರ್ವಹಿಸಲು ಪಿಂತೈದಿತು ದಿವಿಜಾಳಿ ॥ ವಾನರಾಧಿಪ ॥೧॥ ರೋಷದಿಂದಲಿ ಲಂಕಾದೇಶಕೆ ಪೋಗಿ ವಿ। ಭೀಷಣನೊಳು ಕಾದಿ ಜೈಸಿಹನಂತೆ ॥ ನಾಸಿಕ ಗಿರಿಯಲ್ಲಿ ತಾ ಸತಿಯರು ಸಹ। ವಾಸವಾಗಿಹನಂತೆ ಕೈಕಸಾತ್ಮಜನು ॥ ವಾನರಾಧಿಪ ॥೨॥ ವ್ಯರ್ಥದಿ ನಮಗಪಕೀರ್ತಿ ಬಾರದ ಮುನ್ನ । ಧೂರ್ತನ ಸದೆಯಲು ಕರೆಸಿದೆ ನಿಮ್ಮ ॥ ಕಾತ್ಯಾಯಿನೀಶನ ಕರುಣದಿಂದಲಿ ನೀನು । ಆತ್ರಿಜಟೆಯರಸನ ನೋಡಿ ಬಾ ಹನುಮ ॥ ವಾನರಾಧಿಪ ॥೩॥

ರಾಗ ಭೈರವಿ - ಏಕತಾಳ

ಇಂತೆನಲಾ ವಚನವನು । ಹನು । ಮಂತನು ಕೇಳಿ ನುಡಿದನು ॥ ಕಂತು ಜನಕ ತವದಯದಿ। ಬಲ । ವಂತನ ಕೆಡಹುವೆ ರಣದಿ ॥೧॥ ಇನಿತ್ಯಾತಕೆ ಯೋಚನೆಯು । ಹುಲು । ದನುಜಗೆ ಯಮನರಮನೆಯು ॥ ಅನುವರದಲಿ ಸವನಿಸದೆ। ಮರು ।ತನ ಸುತ ನಾನೆನಬಹುದೆ ॥೨॥ ಪಂಥಪರಾಕ್ರಮ ಕೇಳಿ । ಭೂ । ಕಾಂತನು ಹರುಷವ ತಾಳಿ ॥ ತಾಂತರಿಸುತ ವೀಳ್ಯವನು । ಕಪಿ । ತಿಂಥಿಣಿಗೀಯಲ್ಕವನು ॥೩॥ ಮತ್ತಾಹನುಮನ ಕಳುಹೆ । ಮುದ । ವೆತ್ತಿ ಬರಲು ತಿಳಿದೂಹೆ ॥ ಅತ್ತ ಮೂಲಕ ಖಳಕರೆಸಿ । ಸಚಿ ।ವೋತ್ತಮಗೆಂದನು ಸಹಸಿ ॥೪॥

ರಾಗ ತುಜಾವಂತು - ಝಂಪೆ ತಾಳ

ಮಂತ್ರೀಶ ಕೇಳು ಸ್ವತಂತ್ರವಾಯ್ತೆನ್ನ । ಯಂತ್ರವಾಹಕರಮರ ಸಂತತಿಯ ಸಂಗರದಿ । ಪ॥ ಅಡವಿ ವಾಸದೊಳು ಮುನಿ ನುಡಿಯ ತಿಳಿದುದರಿಂದ । ಪಡೆದವನ ಲಂಕೆ ಕೈ ವಿಡಿದೆ ನಿನ್ನೇನು ॥ ಬಡಿದು ವಾಸವ ಮುಖ್ಯ ಬಿಡುಗಣ್ಣರನು ಜೈಸಿ । ಕಡುಹ ನಿಲಿಸಿದೆನು ಕಿರಿಯಯ್ಯನನು ನಾನು ॥ ಮಂತ್ರೀಶ ॥೧॥ ಇನಿತು ಕಾರ್ಯಗಳ ಪೂರೈಸಿದೆನು ಶೌರ್ಯದಲಿ । ಮನದೊಳಿನ್ನೊಂದಿಹುದು ನಿನಗೆ ಪೇಳುವೆನು ॥ ಜನಕನನು ಮರ್ದಿಸಿದ ಮನುಜಕುರಿಯನು ಸದೆಯೆ । ಘನತೆ ವೈಭವದಿ ರಂಜಿಸಲು ಕುಂದೇನು । ಮಂತ್ರೀಶ ॥೨॥ ತೆರಳಬೇಕಿನ್ನಯೋಧ್ಯಾಪುರಕೆ ಸಂಗರಕೆ । ತ್ವರಿತದಿಂದಲಿ ತರಿಸು ಕರಿತುರಗರಥವ ॥ ಪರಿವಾರಗಳ ಸಹಿತ ಬರಿಸೆನಲು ಸಚಿವ ತಾ । ನರುಹಿದನು ಹಿತ ವಚನ ದುರುಳಕುಲಜಂಗೆ ॥ ಮಂತ್ರೀಶ ॥೩॥

ರಾಗ ಕಾಪಿ - ಅಷ್ಟತಾಳ

ತರವಲ್ಲ ದನುಜ ಸಂಜಾತ । ಬಲು । ತರಗರ್ವ ಬುದ್ಧಿಯು ನಿನಗೆ ಪ್ರಖ್ಯಾತ ॥ ಪ ॥ ಆದಿ ನಾರಾಯಣನವನು । ರಾಮ । ಮೇದಿನಿಯೊಳಗೆ ಬಾಧಿಸುವ ದೈತ್ಯರನು ॥ ಕಾದಿ ಸಂಹರಿಸುವ ದೆನುತ। ನರ । ನಾದನಲ್ಲದೆ ಬೇರೆಯಿಹುದೆ ಕೇಳಿತ್ತ ॥ ತರವಲ್ಲ ॥೧॥ ನಿನ್ನ ಸಾಹಸ ಸಲ್ಲದಯ್ಯ । ಈಗ । ಮನ್ನಿಸೆನ್ನಯ ಸೊಲ್ಲ ದಾನವರೆರೆಯ ॥ ಅನ್ಯೋನ್ಯ ಭಾವದೊಳಿರಲು । ಮಿಕ್ಕ । ಕುನ್ನಿಗಳಿದಿರೆ ಸಂಶಯವಿಲ್ಲ ತಾಳು ॥ ತರವಲ್ಲ ॥೨॥ ಹಿಂದೆ ನಿನ್ನಯ್ಯ ರಾಮನೊಳು । ದ್ವೇಷ । ದಿಂದ ಸೆಣಸಲವಗೆಂದ ನೀತಿಯೊಳು ॥ ಮಂದಮತಿಯು ತಾ ಗಣಿಸದೆ । ಮತ್ತೆ । ಸಂದ ನುರಣದಲಿ ಸತ್ಯ ಭಾವಿಸದೆ ॥ ತರವಲ್ಲ ॥೩॥ ಧುರವನ್ನೆ ಬಯಸಿ ಹರಿಯೊಳು । ಪೋಗಿ । ತಿರುಗಿದವರನು ಕಾಣೆನು ಪೌರುಷದೊಳು ॥ತರಳ ನೀ ನಿನಗೇತಕಯ್ಯ । ವೈರ । ವೆನಲಿಂತೆಂದನು ಮಂತ್ರಿಗಾಖಳರಾಯ ॥ ತರವಲ್ಲ ॥೪॥

ವಾರ್ಧಿಕ

ಪೂತುರೇ ಮಂತ್ರೀಶ ತಾತನಂ ಘಾತಿಸಿದ । ನೇತರವನಿರಲಿ ನೀನಾತನಂ ಪೊಗಳ್ವುದೇ । ನೀತೆರದಿ ನಾತಡೆಯೆ ಮಾತೆತ್ತಿದರೆ ನಿನ್ನನೇ ತರಿವೆ ನೋಡೆಂದನು ॥ ಭೂತಳದ ಖ್ಯಾತ ಕ್ಷಿತಿನಾಥರೆನಗಿದಿರೆ ನಿ। ರ್ಭೀತಿಯಿಂದಲಿ ಸೈನ್ಯ ವ್ರಾತವಂ ನೆರಹಿಸೆನ । ಲಾತ ಸನ್ನಹವೆಸಗೆ ದೈತ್ಯೇಶ ಪೊರಟು ಸಾಕೇತ ಪಟ್ಟಣಕ್ಕೈದಲು ॥೧॥

ಭಾಮಿನಿ

ಅವನಿಸುರ ಕೇಳಿತ್ತ ದಾನವ । ನಿವಹ ಬರುತಿರಲತ್ತ ಮಾರ್ಗದಿ । ಪವನಜನು ಕಾಣುತ್ತ ಹಾಯ್ದನು ಲಂಕೆಗತಿ ಜವದಿ ॥ ಬವರದಲಿ ಬೆನ್ನಿಕ್ಕಿಪರ್ವತ । ದವಯವದೊಳಡಗಿದ ವಿಭೀಷಣ । ನಿವನ ಕಂಡತಿ ತೋಷಗೊಳಲಿಂತೆಂದನಾ ಹನುಮ ॥೧।

ರಾಗ -ಶಂಕರಾಭರಣ -ತ್ರಿವುಡೆ ತಾಳ

ಬಲು ಪರಾಕ್ರಮಿ ಕಲಿ ವಿಭೀಷಣ । ತಿಳುಹಿಸಯ್ಯ ಲಂಕೆಯ ॥ ನಿಳಯವನು ಬಿಟ್ಟಿತ್ತ ನಡೆತಂ। ದುಳಿದ ಕಾರ್ಯ ॥೧॥ ಕ್ಷೇಮವೇನ್ನೆ ನಿನಗೆ ನಿನ್ನಯ । ಕಾಮಿನಿಯರು ಸುಖಿಯರೆ ॥ ಆ ಮಹಾಮಂತ್ರಿಗಳು ನಾಲ್ವರು । ಪ್ರೇಮರಿಹರೆ ॥೨॥ ನೋಡಿ ಬಾರೆಂದೆನ್ನನಟ್ಟಿದ । ರೂಢಿಪತಿ ರಘು ನಾಯಕ ॥ ಓಡಿ ಬಂದೆನು ಪೇಳೆನಗೆ ತಡ । ಮಾಡದನಕ ॥೩॥ ಎಂಬ ಮಾತನು ಲಾಲಿಸುತ ನಯ । ನಾಂಬುವನು ಹೊರಸೂಸುತ॥ ಕುಂಭಕರ್ಣನ ಸೋದರನು ತಾ । ನೆಂದನಿನಿತ ॥೪॥

ರಾಗ ನೀಲಾಂಬರಿ - ಏಕತಾಳ

ಮುಖ್ಯಪ್ರಾಣ ಪೇಳಲಿನ್ನೇನು । ಎನ್ನಂತಃ ಸ್ಥಿತಿಯ । ಒಕ್ಕಣಿಸಲರಿಯದದನಿನ್ನು ॥ ರಕ್ಕಸನ ಉಪಟಳವನ್ನು । ಸಹಿಸಲಾರೆ । ಮುಕ್ಕಣ್ಣ ತಾನೊಬ್ಬ ಬಲ್ಲನು ॥೧॥ ಸಪ್ತದುರ್ಗಗಳ ಮುರಿದು । ದ್ವಾರದೊಳಿರ್ದ । ಸರ್ಪ ಜತೆಯ ದೂತರ ಬಡಿದು ॥ ಸಪ್ತ ಶರಧಿ ಮುತ್ತುವಂದದಿ । ಲಂಕೆಗೆ ಬಂದು। ತಪ್ತರಾಗಿ ದುರುಳರುಗ್ರದಿ ॥೨॥ ಇರಲು ವಾರ್ತೆಯರಿತು ಸೆಣಸಲು । ದಾನವ ಧೂರ್ತ । ತಿರುಗಿಸಿದನೆನ್ನ ಕಣನೊಳು ॥ ಜರೆದುದರುಹಲೆಂತು ಮನದೊಳು । ಬೆದರಿ ನಾನಿಲ್ಲಿ । ಗಿರಿಯೊಳಿರುವೆನಧಿಕ ಭಯದೊಳು ॥೩॥ ಮೆರೆವಯೋಧ್ಯಾನಗರಕೈದಿದ । ಮಾರ್ಬಲವೆರಸಿ । ಭರಿತ ಖತಿಯ ನಾಂತು ದುರ್ಮದ ॥ ಭರದೊಳುಸುರು ರಾಘವಗಿದನು । ಎನೆಕೇಳುತೆಂದ । ಮರುತ ತನಯನೊಂದು ಮಾತನು ॥೪॥

ಭಾಮಿನಿ

ಕ್ಲೇಶವನು ಬಿಡು ರಾಮಚಂದ್ರನ । ಮೀಸಲಿನ ಕೃಪೆಯುಂಟು ನಿನಗೆಂ । ದಾಸಮಸ್ತರ

ಸಂತವಿಸಿದನು ಮರುತನಂದನನು ॥ ಆಸಕಲ ಹದನರುಹಿ ಬಳಿಕ ವಿ ಭೀಷಣನ ಸಂಘಟಿಸಿ ಬಲಸಹ । ದಾಶರಥಿ ಬಳಿಗೈದಿ ಮಣಿದಿಂತೆಂದ ವಾರ್ತೆಗಳ ॥೧॥

ರಾಗ ಮಧ್ಯಮಾವತಿ - ಏಕತಾಳ

ಸ್ವಾಮಿಪರಾಕು ಶ್ರೀ ರಾಮ ರಾಮೇಶ । ನಾಮ ಸಹಸ್ರ ಸುತ್ರಾಮಾದಿ ತೋಷ ॥ ಕಾಮ ಸನ್ನಿಭ ನೀನು ಕಳುಹಿದಂದದಲಿ । ನಾ ಮುನ್ನ ಪೋದೆ ಲಂಕೆಯ ಬಿಟ್ಟು ಬಳಲಿ ॥೧॥ ನಾಸಿಕಗಿರಿಯಲ್ಲಿ ವಾಸವಾಗಿರುವ । ಈಶರಣನ ಕಂಡು ಬಿಡಿಸಿದೆ ಭಯವ ॥ ದೂಷಕನೆಸಗಿದ ದುರಿತವೆಲ್ಲವನು । ಕ್ಲೇಶದಿಂದರುಹಿದ ನಾ ಸಂತೈಸಿದೆನು ॥೨॥ ಇಂತಿರಲಾ ದೈತ್ಯ ಸೈನ್ಯವ ನೆರಹಿ । ಮುಂತೆ ಮೂಲಕ ಬಂದನಿಲ್ಲಿಯೆಂದರುಹಿ ॥ ಸಂತಸದಿಂದ ನಾವಿಬ್ಬರೊಂದಾಗಿ । ನಿಂತುಕೊಳ್ಳದೆ ಬಂದೆವೈ ಬೇಗ ಸಾಗಿ ॥೩॥

ಭಾಮಿನಿ

ಇಂತು ಹನುಮನು ಪೇಳುತಿರಲಾ । ನಂತ ದುಶ್ಶಕುನಗಳು ಪುಟ್ಟಲು । ಅಂತ್ಯವಿಲ್ಲದ ದುರ್ಘಟದ ದುರ್ಗಮವ ಪೂಜಿಸುತ ॥ ಚಿಂತೆಯಿಲ್ಲದೆ ರಘುಜ ತನ್ನ ಸ್ವ । ತಂತ್ರದಲಿ ನಿಂದಿರೆ ವಿಭೀಷಣ । ಕಂತು ಪಿತನಡಿಗೆರಗಿ ಬಿನ್ನವಿಸಿದನು ಖಳನಿರವ ॥೧॥

ರಾಗ ಕಲ್ಯಾಣಿ - ಅಷ್ಟತಾಳ

ರಾಮ ಹರೇ ಪಾಹಿ ಮಾಂ । ಜಯತು ರಘು । ರಾಮ ಹರೇ ಪಾಹಿಮಾಂ ॥ ಗೋಮಿನಿಪತಿಸುರ। ಸ್ತೋಮವಂದಿತಸೀತಾ । ರಾಮ ರಕ್ಷಿಸು ದೊರೆಯೆ । ಶ್ರೀ ಹರಿಯೆ ॥೧॥ ನಾಮವ ಸ್ಮರಿಸುತ್ತಲಿ । ಇರುವೆನೆಂದ । ರಾ ಮೂರ್ಖ ಬಿಡನೆನ್ನಲ್ಲಿ ॥ ನಾ ಮುನ್ನ ಪಡೆದ ಪ್ರಾರಭ್ಧಾನುವಶದಿಂದ । ಕಾಮಿಸಿ ದೊರಕಿತಲ್ಲ । ಸತ್ಯವಿದೆಲ್ಲ ॥೨॥ ಮೊದಲೊಮ್ಮೆ ಮಮಚೇಷ್ಟನು । ಕ್ರೂರತ್ವದಿ । ಕದನವೆಸಗಿ ದುಷ್ಟನು॥ ಸದೆದನಿಂದೀಪರಿ ವಿಧಿಸಿ ದುರಾತ್ಮನು । ಸದನದಿಂದೋಡಿಸಿದ । ನೀ ಕೇಳಿದ ॥೩॥ ಅರುಹಲಿನ್ನೇನು ನಾನು । ಸಂತತ ನಿನ್ನ । ಸ್ಮರಣೆಯೊಳಿರಿಸೆನ್ನನು ॥ ದುರುಳನ ಬಿಡದೆ ಸಂಗರದಿ ಮುರಿದ ಮೇಲೆ । ಇರಿಸು ಲಂಕೆಯೊಳೆನ್ನನೆ । ಮಾಧವನೆ ॥೪॥

ಭಾಮಿನಿ

ಮರುಗದಿರು ನಿನ್ನೆಡರು ಎನ್ನದು । ಮುರಿದು ಹಗೆಯನು ಬಳಿಕ ಲಂಕೆಯೊ ।ಳಿರಿಸುವೆನು ನಾನಿನ್ನ ಕೇಳೈಬವರವೆನ್ನದಿದು ॥ ತರಣಿಸುತ ಮೊದಲಾದ ಕಪಿಗಳ । ನೆರವಿ ಸನ್ನಹವಿರಲೆನುತ ರಘು। ವರನಿರಲು ಖಳಬಂದ ವಾರ್ತೆಯನುಸುರಿದರು ಚರರು ॥೧॥

ರಾಗ ಘುಖಾರಿ - ಏಕತಾಳ

ರಾಜಾಧಿರಾಜ ರಘುನಾಥ। ನಮ್ಮ ಸಾಕೇತ। ರಾಜಾಲಯಕೆ ಬಂದ ಧೂರ್ತ॥ ಮೂಜಗದೊಳಗತಿ ತೇಜವ ಮೆರೆಸಿ ನಿ। ಯೋಜಿಸಿ ಯುದ್ಧವ ಮಾಜದೆಯೆಮ್ಮೊಳು । ಯೋಜನದಗಲಕ್ಕಾ ಜಗಜಟ್ಟಿಯು। ತೇಜಿಯನೇರಿ ವಿರಾಜಿಪ ಕೇಳೈ ॥೧॥ ಚರರ ಮಾತನು ಕೇಳಿರಾಮ । ಕಳುಹುತ್ತಲವರ । ಪರಿಕಿಸಿ ಸಭೆಯ ನಿಸ್ಸೀಮ ॥ ತರಣಿಜ ಮುಖ್ಯರಿಗಿರದಾಜ್ಞಾಪಿಸಿ । ಕರದಲಿ ಧನು ಝೇಂಕರಿಸಲು ಕಾಣುತ ॥ ಭರದಿಂ ಲಕ್ಷ್ಮಣ ಧುರಸನ್ನಹದಿಂ । ದರುಹಿದ ಶಪಥವ ವರ ರಘು ವರೆಗೆ ॥೨॥

ರಾಗ ಸಾಂಗತ್ಯ - ರೂಪಕ ತಾಳ

ಅಣ್ಣ ನೀ ಪೊರಡಲ್ಯಾಕಿನ್ನು ನಾನಸುರನ । ಮಣ್ಣಗೂಡಿಸಿ ಬರಲಿಹೆನು ॥ ಪುಣ್ಯ ಪುರುಷ ವೀಳ್ಯವನ್ನಿತ್ತು ಕಳುಹಿಸು । ಯೆನ್ನಲಿಂತೆಂದ ಭಾನುಜನು ॥೧॥ ಘೋರ ಪಾತಕಿಯ ಸಂಹಾರದ ಬಗೆಗಿಂಥ । ಭೂರಿಯೋಚನೆಗಳಿನ್ನೇನು ॥ ಧಾರಿಣಿಪತಿ ನಿನ್ನ ಧೈರ್ಯದಿಂದಾತನ । ಮಾರಿ ಗೌತಣವ ನಿಕ್ಕುವೆನು ॥೨॥ ಎನಲೆಂದ ಮಣಿದು ಧಿಮ್ಮನೆ ರಾಘವನೊಳಾಗ । ಹನುಮ ಸಾಹಸದಿಂದಲಂದು॥ ದನುಜೇಶದಶಕಂಠನೆನುವಾತನಾಗಲಿ । ಘನ ಮುಷ್ಟಿಯಿಂ ಕೊಲ್ವೆನೆಂದು ॥೩॥ ಕಪಿ ವೀರರೆಲ್ಲರೀ ತೆರದಿಂದಲೊಂದೊಂದು । ಶಪಥವ ನುಡಿಯೆ ಶೌರ್ಯದಲಿ ॥ ಚಪಲನೇತ್ರನು ಕಂಡು ಭಲಕೆ ಮೆಚ್ಚಿದನಂದು । ನಿಪುಣರು ನೀವೆಂದು ಪೇಳಿ ।೪॥ ತಮ್ಮ ಕೇಳೀ ನಮ್ಮ ಬೊಮ್ಮಸುತಾದ್ಯರ । ಒಮ್ಮೆ ನೀ ಕೂಡಿ ಕೊಂಡೈದಿ ॥ ನಮ್ಮ ವಿರೋಧಿಯ ಜೈಸೆಂದು ಆ ಪರ । ಬ್ರಹ್ಮ ವೀಳ್ಯವ ಕೊಟ್ಟ ಮುದದಿ ॥೫॥

ದ್ವಿಪದಿ

ಅವಧರಿಸು ನೃಪನಾಜ್ಞೆಯಂತೆ ಲಕ್ಷ್ಮಣನು । ಜವದಿಂದ ನಳನೀಲ ಗವಯ ಮುಖ್ಯರನು ॥೧॥ ಕರೆಸಿ ಪೂರ್ವದ ದ್ವಾರಕಿರದೆ ಜೊತೆಯಿಂದ । ಮುರಿಯದಂದದಿ ಕಾಯ್ದರರಿತು ಧುರದಂದ ॥೨॥ ಉತ್ತರಕೆ ಶತ್ರುಘ್ನನೊತ್ತಿನಿಂ ರವಿಜ । ಅರ್ತಿಯಿಂ ನೆಲಸಿದರು ಪಶ್ಚಿಮಕೆ ಸಹಜ ॥೩॥ ಭರತನಿದ್ದನು ತೆಂಕು ಮೆರೆವ ಬಾಗಿಲಲಿ ॥ ಭರದಿ ರಕ್ಷಿಸಲು ನಿಂದಿರ್ದಧೈರ್ಯದಲಿ ॥೪॥ ನಿಂದಿರಲು ಬಿಲ್ಲ ಝೇಂಕರಿಸಿ ಭಟರಿರಲು । ಮಂದಮತಿ ದನುಜ ತಿಳಿದದ ಕ್ಷಣದಿ ಬರಲು ॥೫॥

ರಾಗ ಪಂಚಾಗತಿ ಮಟ್ಟೆತಾಳ

ದನುಜ ಬರುವ ಭರವ ನೋಡಿ । ಕಿನಿಸಿನಿಂದ ಕಪಿಗಳೆಲ್ಲ । ಘನಕರಾಗ್ರದಲ್ಲಿ ಗಿರಿಯ । ಕುಣಿಸುತಿದಿರಲಿ ॥ಕೆಣಕುವಂತೆ ಸಿಂಹನಾದ । ವನುಗೊಡಲ್ಕೆ ಪರಿಕಿಸುತ್ತ । ಕಣನೊಳಾರ್ಭಟಿಸುತ ಹಾಯ್ದು । ನಣಕಿಸುತ್ತಲಿ ॥೧॥ ನಲಿವ ಕೋತಿ ಕುಲವನೆರಡು। ಫಳಿಗೆ ನಿಂದು ನೋಡಿ ಮತ್ತೆ। ಮುಳಿದು

ಬಾಲ ಪಿಡಿದು ಎಳೆದು । ನೆಲಕೆ ಬಡಿದನು । ಕೆಲದಿ ಪೊರಳುತಿರಲು ತನ್ನ । ಬಲವನೆರಹಿ ಧನುಶರಗಳ। ಧರಿಸಿ ನಿಲಲು ತಡೆದು ಖಳನ । ಭರತನೆಂದನು ॥೨॥

ರಾಗನಾದನಾಮಕ್ರಿಯೆ - ಅಷ್ಟತಾಳ

ಫಡ ಫಡ ದೈತ್ಯ ಕುಮಾರಕ । ನಿನ್ನ । ಹುಡುಗ ಬುದ್ಧಿಯದ್ಯಾಕೆ ಮೂಲಕ ॥ ಬಡಕಪಿಗಳನೆಲ್ಲ ಬಡಿಯಲು । ಕೀರ್ತಿ । ವಡೆವುದೆ ನಿನಗೆ ಈ ಧರೆಯೊಳು ॥೧॥ ಧೃತಿಗೆಟ್ಟು ಮಾತನುಸುರ್ದೆಯ । ಬಲು। ಹಿತವಾಯ್ತು ನೀನಿತ್ತ ಬರೆಕಾರ್ಯ ॥ ಸುತನ ಪಿಡಿಯಲತಿ ಶೀಘ್ರದಿ । ಬಹ । ಪಿತನಂತೆ ಬಂದೆ ನೀ ಶೌರ್ಯದಿ ॥೨॥ ಖಳರ ಸಹಜವೇನೆಂದರಿವೆಯ । ಕಾಯ । ವಳಿವ ತನಕ ಮಾಳ್ಪುದನ್ಯಾಯ ॥ ಕುಲದ ಬಿರಿದು ಬಿಡಲಾರದು । ನಿನ್ನ । ಬಲುಹತೋರಿಸದಿರಲಾಗದು ॥೩॥ ಬರಿದು ನೀ ನ್ಯಾಯವೆಂದರಿವೆಯ । ನರ । ಗುರಿಗಳ ಭಕ್ಷಿಸುವುದೆ ನ್ಯಾಯ ॥ ಬರಿದೆ ಬಿಡುವನಲ್ಲ ನಿನ್ನನು । ಗೋಣ । ಮುರಿವೆನೆನುತ್ತಲಿ ನುಡಿದನು ॥೪॥ ಎಂದ ಮಾತನು ಕೇಳಿ ಭರತನು । ಖತಿಯಿಂದ ಗರ್ಜಿಸುತೆಚ್ಚ ಶರವನು ॥ ಮಂದಮತಿಯು ಕಡಿದೆಸೆಯಲು । ಬಿದ್ದ । ನಂದು ಕೈಕಾತ್ಮಜ ಧರೆಯೊಳು ॥೫॥

ಭಾಮಿನಿ

ಭರತನಸು ಪಸರಿಸಲು ಕಾಣುತ । ಲುರವಣೆಪ ದಾನವನ ಸಾಹಸ । ದಿರವನಾ ಶತ್ರುಘ್ನನೀಕ್ಷಿಸಿ ದೋಷಮಯನಾಗಿ ॥ ಕರದಿಧನುಶರಗಳನು ಪಿಡಿದ । ಬ್ಬರಿಸಿ ಮುಂದ್ವರಿಸುತಲಿ ತವಕದಿ । ದುರುಳನನು ತಾ ತಡೆದು ಹೂಂಕರಿಸುತ್ತಲಿಂತೆಂದ ॥೧॥

ರಾಗ ದೇಶಿ - ಅಷ್ಟತಾಳ

ಖಳ ಕುಲಾಧಮ ಕುಲಶಿರೋಮಣಿ ನಿನ್ನ । ಬಲುಹ ನಿಲಿಸುವೆನೀರಣಾಂಗಣ ।ದೊಳಗೆ ಪರಿಕಿಸು ಸಮರದಿ ॥೧॥ ಸಾರೆಲಾಚಿಕ್ಕಪೋರ ನಿನಗೆ ಸಲ್ಲ । ದೀರಣಾಗ್ರದಿ ಕೊಲ್ವೆ ನಿನ್ನಯ । ಧೀರನಣ್ಣನ ಕರೆಸಿಕೊ ॥೨॥ ನಿನ್ನೊಳು ಕಾದಲಣ್ಣ ತಾ ಬರಬೇಕೆ । ಸಣ್ಣವನ ಬಗೆ ತೋರ್ಪೆನೆನುತಲಿ । ಗಣ್ಯವಿಲ್ಲದೆ ನುಡಿದನು॥೩॥ ತರಳಪೋಗೆಲೊ ತರವಲ್ಲ ನಿನಗಿಂಥ । ಬರಿಯ ಗರ್ವವು ವ್ಯರ್ಥವೆನ್ನೊಳು । ಪೊರಳದಿರು ಭೂತಳದಲಿ ॥೪॥ ಬಲ್ಲೆಬಲ್ಲೆನು ಬಲುವೀರ ನೀನೆಂದು । ನಿಲ್ಲು ನಿಲ್ಲೆಲೊ ಸಹಸ ತೋರಿದ । ರಿಲ್ಲಿ ತೋರ್ಪೆನು ಶೌರ್ಯವ ॥೫॥ ಎಂಬ ಮಾತನು ಕೇಳಿ ಶತ್ರುಘ್ನ ನಿ।ಗಂಬನೆಸೆಯಲು ಹಂಬಲಿಸಿದನು । ಕುಂಭಿನೀ ಪತಿ ಸಹಜನು ॥೬॥

ವಾರ್ಧಿಕ

ಭರತ ಶತ್ರುಘ್ನರಂ ಭಂಗಿಸುತ ಮೂಲಕಂ । ತರಣಿಜನ ಪರಿಭವಿಸಿ ಗವಯನಂ ಜವಗೆಡಿಸಿ।

ಸುರಪ ಮೊಮ್ಮನಗೆಲಿದು ಹನುಮನಂ ಬಡಿದಟ್ಟಿ ನಳನೀಲರಂ ಸೋಲಿಸಿ ॥ ದುರುಳ ಮುಂದೊತ್ತುತಿರೆ ಕಂಡು ಸೌಮಿತ್ರಿ ಖತಿ । ಧರಿಸಿ ದಿವ್ಯಾಸ್ತ್ರಮಂ ಕೈಗೊಳುತ ವಹಿಲದಿಂ । ತರುಬಿಶರವೃಷ್ಟಿಯಂ ಗರೆಯೆ ಪರಿಕಿಸಿ ದೈತ್ಯ ಬರಲೆಂದ ನವಗೆ ಭರದಿ ॥೧॥

ರಾಗ ಭೈರವಿ - ಏಕತಾಳ

ರಾತ್ರಿಂಚರ ಕೇಳೆಲವೊ । ಕ್ಷಣ । ಮಾತ್ರದಿ ನಮ್ಮಯ ಬಲವ ॥ ಧಾತ್ರಿಯೊಳೊರಗಿಸಿ ಪೋಪ। ಎಡೆ । ಮುತ್ತುವ ಜಠರಸಂಕ್ಷೇಪ ॥೧॥ ಎನೆಕೇಳುತ ದಾನವನು । ನಿಜ । ಮನದಲಿ ಹೂಂಕರಿಸಿದನು॥ ನಿನಗೆಡೆ ಮಾಡಿಹೆರಣದಿ । ಮ । ತ್ತಿನಜನ ಮನೆಯೊಳು ಕ್ಷಣದಿ ॥೨॥ ಇನಜನ ಮನೆಯೊಳಗಿನ್ನು ॥ ತವ। ಜನಕನು ವಾಸಿಸುತಿಹನು ॥ ತನುಜನು ಪಿತನಿರುವೆಡೆಗೆ । ಪೋ । ಗನುಚಿತವಲ್ಲಿದು ಕಡೆಗೆ ।೩॥ ಬಿಡುವನೆ ಬವರದಿ ದನುಜ । ಎನ್ನ । ಪಡೆದನ ಮಡುಹಿದ ಮನುಜ ॥ ಒಡಹುಟ್ಟಿದನನು ತೋರು ।ನೀ । ನಡೆಸುಮ್ಮನೆ ಕೆಲಸಾರು ॥೪॥

ರಾಗ - ಶಂಕರಾಭರಣ - ಮಟ್ಟೆತಾಳ

ಎಂದ ಮಾತ ಕೇಳಿ ಕೋಪದಿಂದ ದೈತ್ಯಗೆ ॥ ಇಂದಿರೇಶನನುಜನೆಚ್ಚ । ನಂದು ಶರಮಿಗೆ ॥೧॥ ಉರಗ ತಿಮಿರ ಪರ್ವತಾಸ್ತ್ರ । ವಿರದೆ ಎಸೆಯಲು ॥ ಗರುಡ ತರಣಿ ಕುಲಿಶದಿಂದ । ತರಿದು ಬಿಸುಡಲು॥೨॥ ಮೇಘ ಬಾಣ ಅಗ್ನಿಶರವ । ಬಿಡಲು ಲಕ್ಷ್ಮಣ ॥ ಬೇಗ ಮರುತ ವರುಣನಿಂದ । ಕಡಿದನಾಕ್ಷಣ ॥೩॥ ಮತ್ತೆ ಬರುವಸ್ತ್ರಗಳನರಿದು । ದೈತ್ಯ ಶಕ್ತಿಯ ॥ ಒತ್ತಿ ಬಿಡಲು ತಡೆಯದದನು । ಧಾತ್ರಿಗೊರಗಿದ ॥೪॥ ಬಿದ್ದನಾ ಸೌಮಿತ್ರಿಯೆಂದು । ರೌದ್ರರೂಪನು ॥ ಎದ್ದು ಬಂದು ಹನುಮನವಗೆ । ಗುದ್ದಿ ನಿಂದನು ॥೫॥

ರಾಗ ಸೌರಾಷ್ಟ್ರ - ತ್ರಿವುಡೆತಾಳ

ಎಲವೊ ಘಡ ದಾನವನೆ ನಮ್ಮಯ । ಬಲವ ಸವರಿದೆನೆಂದು ಮನದ । ಗ್ಗಳಿಕೆಯೇನ್ನೆ ನಿಲಿಸದುಳಿಯೆನು । ಸುಲಭದಿಂದ ॥೧॥ ಮಂಗ ನಿನ್ನಯ ಹೊಲಬುತಪ್ಪಿತೆ । ಸಂಗಡದೊಳಿಹರೆಲ್ಲಿ ಪೋದರು । ಸಂಗರಕೆ ನೀ ಬಂದೆಯಾ ಬಿಡೆ । ಭಂಗಿಸುವೆನು ॥೨॥ ವೃಕ್ಷಚರನ ವಿಶೇಷ ಗುಣಗಳ । ನೀಕ್ಷಿಸೆನುತಲಿ ಬಲಿದು ಮುಷ್ಟಿಯ । ನಾಕ್ಷಣದಿ ತಿವಿಯಲ್ಕೆದನುಜನ । ವಕ್ಷವನ್ನು ॥೩॥ ಕರಹತಿಗೆ ತಲೆ ತಿರುಗಿ ಭೂಮಿಯೊಳರೆ ಘಳಿಗೆ ಮೂರ್ಛಿಸುತಲೆಚ್ಚರ । ವರಿತು ಮತ್ತಿಂತೆಂದ ಹನುಮಗೆ । ದುರುಳನಂದು ॥೪॥ ಭಳಿರೆ ಮೆಚ್ಚಿದೆ ನಿನಗೆ ಧರಣೀ । ತಳದಿ ಬಲುಭಟನಹುದುಕಲಹದಿ । ಗೆಲುವದಂತಿರಲಿನ್ನು ಸ್ಮರಿಸರು । ಮಲೆತರಿಗಳು ॥೫॥ ದುರುಳ ಪೂರ್ವದಿ ತಿಳಿಯೊದಶ ಕಂ । ಧರನು ಬಾಯಿಂದುಗುಳಿ ಬಿಸಿನೆ ।ತ್ತರನು ಕಾರಿದ ಬಗೆಯ ನೀನದ । ನರಿಯದಿಂತು ॥೬॥ ಎನೆ ಹಸಾದವೆನುತ್ತಲಾಶುಗ । ತನಯಗಿಟ್ಟನು ಮುಳಿದು ಶಕ್ತಿಯ । ಘನಕೆ ಸೈರಿಸದತ್ತ ತಿರುಗಿದ । ನನಿಲಜಾತ॥೭॥

ಭಾಮಿನಿ

ಗರುಡಗಸದಳವೆನಿಪ ಗರಳವು । ದುರುಳಹಾವಡಿಗರಿಗೆ ಪಥ್ಯವೆ। ಭರತ ಮುಖ್ಯರಿಗಳುಕದಿಹ ರಕ್ಕಸನು ಕಪಿಗಳಿಗೆ ॥ ಮರಳುವನೆ ಮಹದೇವ ಬಲ್ಲನು । ಚರರಿರದೆ ರಣಕಣದ ದುಸ್ಥಿತಿ । ಯರಿತುದನು ರಘುಪತಿಗೆ ಸೂಚಿಸೆ ಮರುಗಿದನು ಸ್ಮರಿಸಿ ॥೧॥

ರಾಗ ತೋಡಿ - ಆದಿತಾಳ

ತಮ್ಮ ವರ ಬೊಮ್ಮರೂಪ । ನಿರ್ಮಲ ಪ್ರತಾಪ ॥ ಒಮ್ಮೆ ಪೋಗಿ ದೈತ್ಯನೊಡನೆ । ಶರ್ಮದಿ ಸೆಣಸಿರ್ಪೆ ॥೧॥ ಅತಿಕಾಯಾದಿ ಅಸುರರನ್ನು । ಮಥಿಸಿ ಈತನೊಡನೆ ॥ ಕ್ಷಿತಿಯೊಳೊರಗಲಾಯ್ತೆಯಿಂತು। ಗತಿ ಮುಂದೇನು ಕಾಣೆ ॥೨॥ ಮೂರುಲೋಕದೊಳು ನಿನ್ನಂಥ । ವೀರರುಂಟೆ ಭರತ ॥ ಮಾರಿಯಾದ ದೈತ್ಯ ನಿನಗೆ । ಕ್ರೂರ ಶರದಿಘಾತ ॥೩॥ ಶತ್ರುಗಳನು ವಧಿಸುವಂಥ । ಸತ್ವವಿಂದೇನಾಯ್ತು ॥ ಶತ್ರುಘ್ನ ನೀನೆಂಬ ಬಿರಿದು । ವ್ಯರ್ಥವಾದುದೆಂತು ॥೪॥ ಶಕ್ರಾರಿಯು ಶೌರ್ಯದಿಂದ । ಶುಕ್ರನಭಿಮತದೆ ॥ ಆಕ್ರತುವೆಸಗೆ ಖಳನ । ವಿಕ್ರಮದಿ ತರಿದೆ ॥೫॥

ರಾಗ ನೀಲಾಂಬರಿ - ರೂಪಕತಾಳ

ಯಾತಕೆ ಕಳುಹಿದೆ ನಿಮ್ಮನು । ಘಾತಕ ಖಳನೊಳು ಸೆಣಸಲು । ಭೂತಳದೊಳು ಮಲಗಿರಲಿ। ನ್ನೇತರ ವಿಧಿಯೈಹಾ ॥ ಈತೆರದೊಳಗೆನ್ನನುಜರ । ಪಾತಕಿಗಿಕ್ಕಿದ ಮೇಲಿ ।ನ್ನೀ ತನು ವಿಡಿದೆಂತಿಹೆನಹ। ತಾತೋರದು ಪಾಯ ॥೧॥ ಕಾಲ ಮಹಾತ್ಮೆಯೊ ನಮ್ಮಯ । ಪೀಳಿಗೆ ಗೊದಗಿದ ದುರಿತವೊ । ಶೂಲಿ ಮನದ ಸಂಕ್ಷೇಪದ । ಲೀಲೆಯೊ ನಾನರಿಯೆ ॥ ಖೂಳದಶಾನನ ಮುಖ್ಯರ । ಕಾಳಗದಲಿ ಬಡಿದಿಕ್ಕಿದೆ । ಮೂಲಕನಿಂದಲಿ ಸಮರವು । ಸೋಲೊದಗಿತೆಯಿಂತು ॥೨॥ ಅಳಲುವದುಚಿತವೆ ಭಾಸ್ಕರ । ಕುಲಜ ರಿಗರಿಯದಿದೆಂಬುದ । ತಿಳಿಯುತ ಮನದಲಿ ರಘುವರ । ಮುಳಿದನು ತಕ್ಷಣದಿ ॥ ಝಳಪಿಸುವಾ ಯುಧದಿಂದಲಿ । ಖಳಶಿರವರಿವೆನೆನುತ್ತಲಿ । ಬಲವೆರಸುತ್ತಲಿ ಬರೆಹೊರ । ವಳಯದೊಳಿದಿರಾಗಿ ॥೩॥

ಭಾಮಿನಿ

ನೋಡಿದನು ರಘುಪತಿಯ ಬಲರಣ । ರೂಢಿಗೈತರುವುದನು ಖಳಪತಿ । ಕೂಡೆ ಬೆನ್ನಟ್ಟಲ್ಕೆ ತನ್ನಯ ಪಡೆಯ ನಿಲಿಸುತಲಿ ॥ ಪೂಡಿದನು ಬಹುಕ್ರೂರ ಶರಗಳ । ನಾಡಲೇನದ ನಿಮಿಷದೊಳು ಹುಡಿ। ಮಾಡುತತಿ ಮೃದು ನುಡಿಯೊಳವಗಿಂತೆಂದನಸುರಾರಿ ॥೧॥

ರಾಗ ಕಾಂಬೋದಿ - ಅಷ್ಟತಾಳ

ಬಲುಧೀರನಹುದು ಕುಮಾರ । ನಿನ್ನ । ನೆಲೆಯನರಿತೆ ರಣಶೂರ ॥ ಛಲದಂಕ ಲಕ್ಷ್ಮಣ ಭರತ

ಶತ್ರುಘ್ನರ । ಗೆಲಿದೆ ನೀ ಚತುರಂಗ ಮಾರ್ಬಲ । ಬಲು ಪರಾಕ್ರಮಿಯಹುದೆಲೈ ॥೧॥ ಹುಡುಗರ ಕೆಡಹಿದನ್ಯಾಯ । ನಿನ್ನ । ಪಿಡಿದು ಬಡಿವುದೊಂದೆ ನ್ಯಾಯ । ಬಿಡುವವನಲ್ಲ ಮುಂದಡಿಯಿಡದಿರು ಜೋಕೆ । ಕೆಡುವ ಕಾಲದ ಬುದ್ಧಿಯಿದು ಖಳ । ಕೆಡುಕನಹೆ ನೀ ನಿಶ್ಚಯ ॥೨॥ ನುಡಿವೆ ನಿನ್ನಯ್ಯ ಪೂರ್ವದೊಳು । ಛಲ । ವಿಡಿದು ಕಾದಲು ಸಂಗ್ರಾಮದೊಳು ॥ ಕಡಿದು ಬಿಸುಟೆ ಹತ್ತು ಗಿಡಗಳಂದದಿ ಶಿರ । ಬೆಡಗಿದಲ್ಲೈ ನಡೆಯೊ ಸುಮ್ಮನೆ । ದೃಢದಿ ಸಾರಿದೆ ನೋಡಿ ಕೊ ॥೩॥ ಪಿತನ ರಣಾಗ್ರದಿ ತರಿದೆ। ನಿನ್ನ । ಮಥಿಸಲನ್ಯಾಯವಾಗುವುದೆ ॥ ಸುತನಿದ್ದು ಫಲವೇನೆಂದತಿ ಪರಾಕ್ರಮದಿಂದ । ರಥವಡರಿ ರಾವಣನ ನೂರ್ಮಡಿ । ಕ್ಷಿತಿಯೊಳೆನಿಸಿದನಸುರನು ॥೪॥

ಭಾಮಿನಿ

ಮುಂದೆ ಖಾಡಾಖಾಡಿಯಲಿ ರಘು । ನಂದನನ ಸಮರದಲಿ ಮೂಲಕ । ಹಿಂದೆ ಸರಿಯದ ತೆರದಿ ನಿಂದಿರೆ ಕಂಡು ಬೆರಗಾಗೆ ॥ ತಂದೆ ತಾಯಿಗಳಿರ್ದ ಯೋನಿಜ।ರಿಂದ ಹೊರತನ್ಯರಲಿ ಮರಣವ। ಹೊಂದನೀಖಳನೆನುತುಸುರಿತಶರೀರ ನುಡಿಯಂದು ॥೧॥

ರಾಗ ಮಾರವಿ - ಏಕತಾಳ

ಕೇಳಿದನಾನುಡಿಯಾಲಿಸಿ ಕುಶ ತಾ । ಪೇಳಿದ ಪಿತಗೆರಗಿ ॥ ಪಾಲಿಸು ವೀಳ್ಯವ ಖೂಳನ ಧುರಕೀ। ವೇಳೆಗೆ ಮನವೆಸಗಿ ॥೧॥ ಸಣ್ಣವನೆನುತಲಿ ಎಣ್ಣಿಸದಿರು ಮು।ಕ್ಕಣ್ಣನೆ ಬರಲಿನ್ನು ॥ ಗಣ್ಯವೆ ಪಾಡೇನಿನ್ನೀಧೂರ್ತನ । ಮಣ್ಣಗೂಡಿಸದಿರೆನು ॥೨॥ ದೃಢವಿದೆನುತ ಮುಂಗಡೆಯೊಳಿರಲು ಸುತ । ಪೊಡವೀಶನು ಕಂಡು ॥ ತಡೆಯದೆ ವೀಳ್ಯವ ಕೊಡಲಾಕ್ಷಣ ತಾ । ನಡೆದನು ಮುಂಕೊಂಡು ॥೩॥

ರಾಗ ಶಂಕರಾಭರಣ - ಮಟ್ಟೆತಾಳ

ಜನಕಜಾತ್ಮಭವನ ನೋಡಿ ದನುಜ ರೋಷದಿ । ಕೆಣಕಲಿವನ ಬಡಿವೆನೆನುತ ಮನದ ಗರ್ವದಿ॥ ತನಯ ನಿನ್ನನಿಲ್ಲಿ ಕಳುಹಿ ಜನಕನಾತನು । ಸೆಣಸಲಳುಕಿದರೆ ಬಿಡುವೆನೆ ಗಣಿಸೆನವನನು ॥೧॥ ಖೂಳ ನಿನಗೆ ಎನ್ನೊಳಂತ್ಯ ಕಾಲವೆನಿಸಿಕೊ । ಕೀಲಿಸುವೆನು ನಿನಗೆ ಸರಳ ಜಾಲ ನೋಡಿಕೊ ॥ ಬಾಲನೆಂದು ಭಾವಿಸಿದೆಯ ಮೂಲಕಾಖ್ಯನೆ । ತೋಳ ಬಲುಹ ತೋರು ಬರಿದೆ ವೇಳೆಯಿಲ್ಲನೆ ॥೨॥ ಮುನಿದು ಸರಿ ಸಮಾನರೆನಿಸುತಿರಲು ದೈತ್ಯನ। ಕಣೆಯ ಮಳೆಯೊಳಿರದೆ ಮುಸುಕೆ ತಣಿಸಲಾಕ್ಷಣ ॥ ಇನಕುಲೇಂದ್ರ ಜಾತ ನೆಸೆದನೆನಿತೊ ಶರಗಳ । ದನುಜ ಕುಲವರೇಣ್ಯ ತರಿದನನಿತನೇಂ ಛಲ ॥೩॥ ಉರಿಯನುಗುಳಿ ಖಳನು ಶರವ ಸುರಿಯೆ ಸವರುತ। ಭರದೊಳೆಚ್ಚ ಕುಶನ ದಿವ್ಯ ಶರವು ತಾಗುತ ॥ ಧರೆಗೆ ಬಿದ್ದು ದೈತ್ಯಮಡಿದುದರಿತು ರಾಮನು । ತರಳನನ್ನು ಪೊಗಳೆ ಸುರಪ ಸುರಿಸೆ ಸುಮವನು ॥೪॥

ಭಾಮಿನಿ

ಕೇಳು ಶೌನಕ ಮುಂದೆದನುಜನ । ಪಾಳಯವು ಸಹಿತೈದೆ ರಾಘವ । ಕಾಳಗದಿ ಕೆಡೆದನುಜ ವಾನರ ಜಾಲವನು ನೋಡಿ ॥ ಮೇಲು ಮೇಲಿಂ ನೆನೆದು ಶೋಕದೊ।ಳಾಳಿದನು ರವಿ ಜಾತ ಮುಖ್ಯರು। ಊಳಿಗದೊಳೆನಗಾಗಿ ಬಳಲಿರ್ದವರೆನುತ ಮನದಿ ॥೧॥

ರಾಗ ಕೇತಾರಗೌಳ - ಅಷ್ಟತಾಳ

ದುರುಳನ ಹತಿಗೆ ಮೈ ಮರೆದ ಸೇನಾಬ್ಧಿಯ । ಪರಿಕಿಸಿರಘುವೀರನು ॥ ಹರ ಹರ ಎನ್ನ ನಂಬಿರುವವರಿಂಗೆ ಈ । ಪರಿಯಾಯ್ತು ಧುರದಿ ಮೇಣು ॥೧॥ ಕಾತರಿಸುತಲಿಂತು ಖ್ಯಾತನಿರಲುಯೆನ್ನ। ತಾತಚಿಂತಿಸುವನೆಂದು ॥ ಭೂತಳಕಾಪದ್ಮಜಾತನಾರದ ಸುರ । ವ್ರಾತಸಹಿತಲಿ ಬಂದು ॥೨॥ ವರ ರಘೂದ್ವಹನುತಾನರಿಯದಿರಲು ಮತ್ತೆ । ಸರಸಿಜಭವಸರಿದು ॥ ಚರಣವ ಪಿಡಿದು ಕುಳ್ಳಿರಿಸೆ ಕಣ್ದೆರೆಯಲು। ಪರಿಕಿಸುತಿಂತೆಂದನು ॥೩॥

ರಾಗ ಮಧ್ಯಮಾವತಿ - ತ್ರಿವುಡೆ ತಾಳ

ದೇವದೇವೋತ್ತಮನೆ ನಿನ್ನಯ । ಭಾವವರಿತವರಿಲ್ಲ ಜಗದೊಳ । ಗೀವಿಕಾರವನೆಸಗಲೆಮಗಿ। ನ್ನಾರಲೈಪಾಲಿಸುವರು । ಪಾವನಾತ್ಮ ॥೧॥ ಕಾವವರೆ ವಂಚಿಸಿದ ತೆರದಲಿ । ದೇವ ನೀನೀ ತೆರದ ಶೋಕ ಸ್ವ । ಭಾವವನು ತೋರಿಸಿದಡದು ಸಂ। ಭಾವ್ಯವಲ್ಲೆನಲೆಂದನು । ರಾವಣಾರಿ ॥೨॥ ಮೊದಲು ದಶಮುಖನೀ ಕಪಿವ್ರಜ । ಸದೆದನಿಂದೀ ಮೂಲಕಾಖ್ಯನೊ । ಳೊದಗಿತೀ ಪರಿಯೆನುತ ರಾಘವ । ಪದುಮಭವನಿಂಗುಸುರಿದ । ವಿಧವಿಧದಲಿ ॥೩॥ ವರ ನುಡಿಯನಾಲಿಸುತ ಕಮ ಲಜ । ಕರೆದು ವೈದ್ಯಸುಷೇಣ ನೀನಿಂ । ದಿರದೆ ಮೃತರಾದವರನೆಬ್ಬಿಸು । ತರಿಸು ಸಂಜೀವನವನು । ತ್ವರಿತದಿಂದ ॥೪॥

ಭಾಮಿನಿ

ಪಂಡಿತನು ಸಂಜೀವನವಕ್ಕೈ । ಕೊಂಡು ತಳಿಯಲು ಕ್ಷಣಕೆ ತಲೆಗಳ । ತುಂಡು ಕೂಡಿತು ಭರತ ಶತ್ರುಹ ಲಕ್ಷ್ಮಣಾದ್ಯರಿಗೆ ॥ ತಂಡತಂಡದೊಳಲ್ಲಿ ಮೂರ್ಛೆಯ । ಗೊಂಡ ರವಿಸುತ ಹನುಮ ಮುಖ್ಯ ಪ್ರಚಂಡರೆದ್ದರು ಕಪಿಕಟಕ ಸಹಿತಲಿ ಮಹೋತ್ಸಹದಿ ॥೧॥

ಕಂದ

ಆ ಸಮಯದೊಳಲ್ಲಿಂದಬು । ಜಾಸನ ಸುರತತಿನಾರದ ಮುಖ್ಯರು ಮುದದಿಂ ॥ ದಾಶರಥಿಗೆ ವಂದಿಸಿ ನಭ । ದಾಸುಪಥವ ಪಿಡಿ ದಯ್ದಿದ ರೆಲ್ಲರ್ ಜವದಿಂ ॥೧॥

ರಾಗ ಕೇತಾರಗೌಳ - ಝಂಪೆ ತಾಳ

ಬಳಿಕ ರಾಘವನೆಂದನು । ಶರಣಂಗೆ । ಕಳವಳಿಸಬೇಡ ನೀನು ॥ ತಳುವದಿನ್ನಯ್ದು ಪುರಕೆ । ಬೆದರದಿರು । ಸಲಿಸಿದೆನು ನಿನ್ನ ಬಯಕೆ ॥೧॥ ದೇವ ನಿನ್ನಂಘ್ರಿಯುಗದಿ । ಎನ್ನಸಂ । ಭಾವಿಸೈ ಪುಣ್ಯಶರಧಿ॥ ಭಾವಿಸೆನು ಲಂಕೆ ತೊಡರ । ಒಲ್ಲೆನಂ । ದಾವಿಭೀಷಣ ನಿರ್ಧರ ॥೨॥ ತನುವಿರಲಿ ನಿನ್ನ ಪುರದಿ । ಧೈರ್ಯದಿಂ ದಿರಿಸು ಮನವೆನ್ನ ಪದದಿ ॥ ಅನುದಿನವು ಸುಖಿಸೆನುತಲಿ । ಕಳುಹಿದನು । ಘನ ಶರಣನನು ನಗುತಲಿ ॥೩॥ ರವಿಜ ಜಾಂಬವಹನುಮರು । ಸಂಘಟಿಸಿ । ಭವನ ಕಯ್ತುರಲನುಜರು ॥ ಲವಕುಶರು ಸಹಿತ ಬರಲು । ಕಾಣುತ್ತ । ಯುವತಿಯರು ಸಂಭ್ರಮದೊಳು ॥೪॥

ರಾಗ ಧವಳಾರ - ಏಕತಾಳ

ಅಂಗನೆಯರು ತಾವಯ್ತಂದು । ಶೃಂಗಾರದ ಹಸೆ ಮಣೆ ತಂದು ॥ ಏಂಗಡಿಸುತ್ತಲಿ ಅಂಗಜನಯ್ಯಗೆ । ಭೃಂಗಕುಂತಳೆ ಕೋಮಲಾಂಗಿಗೆ ಸೊಬಗಿನ । ಮಂಗಳಾರತಿಯ ಬೆಳಗಿರೆ ॥ ಶೋಭಾನ ॥೧॥ ನೆತ್ತಿಗೆ ಕುಂಕುಮ ಏಡಿಸಿದರು । ಹಸ್ತದಿ ತಾಂಬೂಲ ಪಿಡಿಸಿದರು ॥ ಮತ್ತೆ ಶೋಭಾನವ ಪಾಡುತ ಸತಿಯರು । ಅರ್ತಿಯೊಳಗೆ ಸುಸ್ವರದಿಂ ಕೂಡುತ । ಮುತ್ತಿನಾರತಿಯ ಬೆಳಗಿರೆ ॥ ಶೋಭಾನ॥೨॥ ತರುಣಿಯರೀ ಪರಿ ಘೋಷದಲಿ । ಪರಿಪರಿನರ್ತನದೊಲಪಿನಲಿ ॥ ಮೆರೆಯುವ ಕಹಳೆ ಮೃದಂಗರವದಿ। ಭರಿತ ಸುಸಂಭ್ರಮವಿರೆಸಂತಸದೊಳು । ಕುರುಜಿನಾರತಿಯ ಬೆಳಗಿರೆ ॥ ಶೋಭಾನ ॥೩॥

ವಾರ್ಧಿಕ

ಯತಿವರ್ಯ ಲಾಲಿಸೀ ತೆರದ ವೈಭವದಿಂದ । ಸತಿಯರಾರತಿ ಬೆಳಗಲಾ ಸಮಯದಲಿ ವಿಪ್ರ। ತತಿ ಶರಧಿ ಘೋಷದಿಂ ಮಂತ್ರಾಕ್ಷತೆಯನು ಸೀತಾಪತಿಗೆ ತಳಿಯಲಂದು ॥ ಶತಪತ್ರಲೋಚನಂ ಬಳಿಕ ವಾನರರ ಸಂ। ತತಿಗೆ ಭೋಜನಗೈಸಿ ಹನುಮನಂ ಸತ್ಕರಿಸಿ । ಕ್ಷಿತಿ ಸುರರಿಗಿಷ್ಟಾರ್ಥಗಳನಿತ್ತು ರಾರಾಜಿಸಿದ ಮಂಗಲೋತ್ಸವದೊಳು ॥೧॥

ಭಾಮಿನಿ

ಇಳೆಗೆ ಮಂಗಲ ಜೀವರಿಗೆ ಸುಖ । ಕೆಲಬರಿಗೆ ಇಹಪರದ ಸೌಖ್ಯದ । ನೆಲೆಗೆ ಕಾರಣವೆನಿಸುತಿಹ ಶ್ರೀರಾಮ ಚರಿತೆಯನು ॥ ತಿಳುಹಿದೆನು ನಿರ್ಮಲದ ಕಥನದೊ।ಳೊಲಿವ ನಾರಾಯಣನು ನಿತ್ಯದಿ । ಕಲುಷಹರವಿದುಯೆನುತ ಶೌನಕಗೆಂದನಾ ಸೂತ ॥೧॥

ರಾಗ ಸೌರಾಷ್ಟ್ರ - ತ್ರಿವುಡೆತಾಳ

ಪದುಮಭವ ಕುಲಜಾತ ಬುಧರೊಳ । ಗಧಿಕ ಹರಿಚರಿತಾ ವಿನೋದಿತ । ಮಧುಪುರದ

ಮದನೇಶ್ವರನ ಸನ್ನಿಧಿಯ ಶರಣ ||೧|| ಶಂಕರಾತ್ಮಜ ಚರಣಪೂಜಿತ । ವೆಂಕಟೇಶನ ತನಯನಾಹರಿ। ಕಿಂಕರನು ನಾರಾಯಣಾಖ್ಯನಿ । ಶ್ಯಂಕೆಯಿಂದ ||೨|| ಪ್ರಾಣ ಪದಯತಿಗಣಗಳೆಂಬುದ । ನೇನರಿಯದಾತರಳನ್ನೆಗೀ ।ವಾರ್ಣಪತಿನುತ ರಾಮಚಂದ್ರನು । ಕಾರುಣ್ಯದಲಿ ||೩|| ರಕ್ಷಿಸುವನೆನುತೆಸಗಿದೆನು ಈ । ಯಕ್ಷಗಾನವ ಕೇಳಿಸುಜನರ । ಪೇಕ್ಷೆಯನು ಸಲಿಸುವನು ನಿಜವಿದು । ಲಕ್ಷ್ಮಿರಮಣ ||೪|| ಪದದ ಕ್ರಮ ತಪ್ಪಿರಲು ಬಲ್ಲವ । ರಿದನು ಸರಿಯೆನಿಸುವುದು ಸಮ್ಮತ । ಮಧುಪುರದ ಮದನೇಶ ಸಲಹುವ। ಮುದದಿ ನಮ್ಮ ||೫||

ಮಂಗಲ

ರಾಗ ಮೋಹನ - ಏಕತಾಳ

ಜಲಚರನಾಗಿ ಶ್ರುತಿಯ ತಂದವಗೆ । ಕುಲಗಿರಿ ಪೊತ್ತಿಹ ಕೂರ್ಮನಿಗೆ || ಇಳೆಯನು ಕದ್ದ ಖಳನ ಗೆಲಿದವಗೆ || ಒಲಿದು ಪ್ರಹ್ಲಾದನ ಕಾಯ್ದ ನೃಹರಿಗೆ || ಮಂಗಲಂ । ಜಯ । ಮಂಗಲಂ ||೧|| ವಸುಧೆಯನೀರಡಿಯಳೆದವಗೆ । ಜಸದಿ ಪರಶುಧರನೆನಿಸಿದಗೆ || ದಶಶಿರನನು ಕೊಂದ ರಾಮನಿಗೆ । ಕುಶಲದಿ ತುರುಗಳ ಸಲಹಿದಗೆ || ಮಂಗಲಂ । ಜಯ । ಮಂಗಲಂ ||೨|| ಬರಿಯ ಬತ್ತಲೆ ನಿಂತ ಬೌದ್ಧನಿಗೆ । ತುರಗವಾಹನ ಖಳಜನ ಹರಗೆ || ವರಲಕ್ಷ್ಮಿಪತಿಗೆ ನಾರಾಯಣಗೆ । ಧರೆಯೊಳು ಮಧುಪುರವಾಸ ಗಣೇಶಗೆ || ಮಂಗಲಂ । ಜಯ । ಮಂಗಲಂ ||೩||

ಭಾಮಿನಿ

ಕೇಳು ಶೌನಕ ಮುಂದೆಹನುಜನ । ಪಾಳಯವು ಸಹಿತೈದೆ ರಾಘವ । ಕಾಳಗದಿ ಕೆಡೆದನುಜ ವಾನರ ಜಾಲವನು ನೋಡಿ ॥ ಮೇಲು ಮೇಲಿಂ ನೆನೆದು ಶೋಕದೊ।ಳಾಳಿದನು ರವಿ ಜಾತ ಮುಖ್ಯರು। ಊಳಿಗದೊಳೆನಗಾಗಿ ಬಳಲಿರ್ದವರೆನುತ ಮನದಿ ॥೧॥

ರಾಗ ಕೇತಾರಗೌಳ - ಅಷ್ಟತಾಳ

ದುರುಳನ ಹತಿಗೆ ಮೈ ಮರೆದ ಸೇನಾಬ್ಧಿಯ । ಪರಿಕಿಸಿರಘುವೀರನು ॥ ಹರ ಹರ ಎನ್ನ ನಂಬಿರುವವರಿಂಗೆ ಈ । ಪರಿಯಾಯ್ತು ಧುರದಿ ಮೇಣು ॥೧॥ ಕಾತರಿಸುತಲಿಂತು ಖ್ಯಾತನಿರಲುಯೆನ್ನ। ತಾತಚಿಂತಿಸುವನೆಂದು ॥ ಭೂತಳಕಾಪದ್ಮ ಜಾತನಾರದ ಸುರ । ವ್ರಾತಸಹಿತಲಿ ಬಂದು ॥೨॥ ವರ ರಘೂದ್ವಹನುತಾನರಿಯದಿರಲು ಮತ್ತೆ । ಸರಸಿಜಭವಸರಿದು ॥ ಚರಣವ ಪಿಡಿದು ಕುಳ್ಳಿರಿಸೆ ಕಣ್ದೆರೆಯಲು। ಪರಿಕಿಸುತಿಂತೆಂದನು ॥೩॥

ರಾಗ ಮಧ್ಯಮಾವತಿ - ತ್ರಿವುಡೆ ತಾಳ

ದೇವದೇವೋತ್ತಮನೆ ನಿನ್ನಯ । ಭಾವವರಿತವರಿಲ್ಲ ಜಗದೊಳ । ಗೀವಿಕಾರವನೆಸಗಲೆಮಗಿ। ನ್ನಾರೆಲ್ಲೈಪಾಲಿಸುವರು । ಪಾವನಾತ್ಮ ॥೧॥ ಕಾವವರೆ ವಂಚಿಸಿದ ತೆರದಲಿ । ದೇವ ನೀನೀ ತೆರದ ಶೋಕ ಸ್ವ । ಭಾವವನು ತೋರಿಸಿದಡದು ಸಂ। ಭಾವ್ಯವಲ್ಲೆನಲೆಂದನು । ರಾವಣಾರಿ ॥೨॥ ಮೊದಲು ದಶಮುಖನೀ ಕಪಿವ್ರಜ । ಸದೆದನಿಂದೀ ಮೂಲಕಾಖ್ಯನೊ । ಳೊದಗಿತೀ ಪರಿಯೆನುತ ರಾಘವ । ಪದುಮಭವನಿಂಗುಸುರಿದ । ವಿಧವಿಧದಲಿ ॥೩॥ ವರ ನುಡಿಯನಾಲಿಸುತ ಕಮ ಲಜ । ಕರೆದು ವೈದ್ಯಸುಷೇಣ ನೀನಿಂ । ದಿರದೆ ಮೃತರಾದವರನೆಬ್ಬಿಸು । ತರಿಸು ಸಂಜೀವನವನು । ತ್ವರಿತದಿಂದ ॥೪॥

ಭಾಮಿನಿ

ಪಂಡಿತನು ಸಂಜೀವನವಕೈ । ಕೊಂಡು ತಳಿಯಲು ಕ್ಷಣಕೆ ತಲೆಗಳ । ತುಂಡು ಕೂಡಿತು ಭರತ ಶತ್ರುಹ ಲಕ್ಷ್ಮಣಾದ್ಯರಿಗೆ ॥ ತಂಡತಂಡದೊಳಲ್ಲಿ ಮೂರ್ಛೆಯ । ಗೊಂಡ ರವಿಸುತ ಹನುಮ ಮುಖ್ಯ ಪ್ರಚಂಡರೆದ್ದರು ಕಪಿಕಟಕ ಸಹಿತಲಿ ಮಹೋತ್ಸಹದಿ ॥೧॥

ಕಂದ

ಆ ಸಮಯದೊಳಲ್ಲಿಂದಬು । ಜಾಸನ ಸುರತತಿನಾರದ ಮುಖ್ಯರು ಮುದದಿಂ ॥ ದಾಶರಥಿಗೆ ವಂದಿಸಿ ನಭ । ದಾಸುಪಥವ ಪಿಡಿ ದಯ್ದಿದ ರೆಲ್ಲರ್ ಜವದಿಂ ॥೧॥

ರಾಗ ಕೇತಾರಗೌಳ - ಝುಂಪೆ ತಾಳ

ಬಳಿಕ ರಾಘವನೆಂದನು । ಶರಣಂಗೆ । ಕಳವಳಿಸಬೇಡ ನೀನು ॥ ತಳುವದಿನ್ನಯ್ದು ಪುರಕೆ । ಬೆದರದಿರು । ಸಲಿಸಿದೆನು ನಿನ್ನ ಬಯಕೆ ॥೧॥ ದೇವ ನಿನ್ನಂಘ್ರಿಯುಗದಿ । ಎನ್ನಸಂ । ಭಾವಿಸೈ ಪುಣ್ಯಶರಧಿ॥ ಭಾವಿಸೆನು ಲಂಕೆ ತೊಡರ । ಒಲ್ಲೆನೆಂ । ದಾವಿಭೀಷಣ ನಿರ್ಧರ ॥೨॥ ತನುವಿರಲಿ ನಿನ್ನ ಪುರದಿ । ಧೈರ್ಯದಿಂ ದಿರಿಸು ಮನವೆನ್ನ ಪದದಿ ॥ ಅನುದಿನವು ಸುಖಿಸೆನುತಲಿ । ಕಳುಹಿದನು । ಘನ ಶರಣನನು ನಗುತಲಿ ॥೩॥ ರವಿಜ ಜಾಂಬವಹನುಮರು । ಸಂಘಟಿಸಿ । ಭವನ ಕಯ್ತರಲನುಜರು ॥ ಲವಕುಶರು ಸಹಿತ ಬರಲು । ಕಾಣುತ್ತ । ಯುವತಿಯರು ಸಂಭ್ರಮದೊಳು ॥೪॥

ರಾಗ ಢವಳಾರ - ಏಕತಾಳ

ಅಂಗನೆಯರು ತಾವಯ್ತಂದು । ಶೃಂಗಾರದ ಹಸೆ ಮಣೆ ತಂದು ॥ ವಿಂಗಡಿಸುತ್ತಲಿ ಅಂಗಜನಯ್ಯಗೆ । ಭೃಂಗಕುಂತಳೆ ಕೋಮಲಾಂಗಿಗೆ ಸೊಬಗಿನ । ಮಂಗಳಾರತಿಯ ಬೆಳಗಿರೆ ॥ ಶೋಭಾನ ॥೧॥ ನೆತ್ತಿಗೆ ಕುಂಕುಮ ವಿಡಿಸಿದರು । ಹಸ್ತದಿ ತಾಂಬೂಲ ಪಿಡಿಸಿದರು ॥ ಮತ್ತೆ ಶೋಭಾನವ ಪಾಡುತ ಸತಿಯರು । ಅರ್ತಿಯೊಳಗೆ ಸುಸ್ವರದಿಂ ಕೂಡುತ । ಮುತ್ತಿನಾರತಿಯ ಬೆಳಗಿರೆ ॥ ಶೋಭಾನ॥೨॥ ತರುಣಿಯರೀ ಪರಿ ಘೋಷದಲಿ । ಪರಿಪರಿನರ್ತನದೊಲಪಿನಲಿ ॥ ಮೆರೆಯುವ ಕಹಳೆ ಮೃದಂಗರವದಿ। ಭರಿತ ಸುಸಂಭ್ರಮವಿರೆಸಂತಸದೊಳು । ಕುರುಜಿನಾರತಿಯ ಬೆಳಗಿರೆ ॥ ಶೋಭಾನ ॥೩॥

ವಾರ್ಧಿಕ

ಯತಿವರ್ಯ ಲಾಲಿಸೀ ತೆರದ ವೈಭವದಿಂದ । ಸತಿಯರಾರತಿ ಬೆಳಗಲಾ ಸಮಯದಲಿ ವಿಪ್ರ। ತತಿ ಶರಧಿ ಘೋಷದಿಂ ಮಂತ್ರಾಕ್ಷತೆಯನು ಸೀತಾಪತಿಗೆ ತಳಿಯಲಂದು ॥ ಶತಪತ್ರಲೋಚನಂ ಬಳಿಕ ವಾನರರ ಸಂ। ತತಿಗೆ ಭೋಜನಗೈಸಿ ಹನುಮನಂ ಸತ್ಕರಿಸಿ । ಕ್ಷಿತಿ ಸುರರಿಗಿಷ್ಟಾರ್ಥಗಳನಿತ್ತು ರಾರಾಜಿಸಿದ ಮಂಗಲೋತ್ಸವದೊಳು ॥೧॥

ಭಾಮಿನಿ

ಇಳೆಗೆ ಮಂಗಲ ಜೀವರಿಗೆ ಸುಖ । ಕೆಲಬರಿಗೆ ಇಹಪರದ ಸೌಖ್ಯದ । ನೆಲೆಗೆ ಕಾರಣವೆನಿಸುತಿಹ ಶ್ರೀರಾಮ ಚರಿತೆಯನು ॥ ತಿಳುಹಿದೆನು ನಿರ್ಮಲದ ಕಥನದೊಳೊಲಿವ ನಾರಾಯಣನು ನಿತ್ಯದಿ । ಕಲುಷಹರವಿದುಯೆನುತ ಶೌನಕಗೆಂದನಾ ಸೂತ ॥೧॥

ರಾಗ ಸೌರಾಷ್ಟ್ರ - ತ್ರಿವುಡೆತಾಳ

ಪದುಮಭವ ಕುಲಜಾತ ಬುಧರೊಳ । ಗಧಿಕ ಹರಿಚರಿತಾ ವಿನೋದಿತ । ಮಧುಪುರದ

ಮದನೇಶ್ವರನ ಸನ್ನಿಧಿಯ ಶರಣ ॥೧॥ ಶಂಕರಾತ್ಮಜ ಚರಣಪೂಜಿತ । ವೆಂಕಟೇಶನ ತನಯನಾಹರಿ। ಕಿಂಕರನು ನಾರಾಯಣಾಖ್ಯನಿ । ಶ್ಯಂಕೆಯಿಂದ ॥೨॥ ಪ್ರಾಣ ಪದಯತಿಗಣಗಳೆಂಬುದ । ನೇನರಿಯದಾತರಳನ್ನೆಗೀ ।ವಾರ್ಣಪತಿನುತ ರಾಮಚಂದ್ರನು । ಕಾರುಣ್ಯದಲಿ ॥೩॥ ರಕ್ಷಿಸುವನೆನುತೆಸಗಿದೆನು ಈ । ಯಕ್ಷಗಾನವ ಕೇಳಿಸುಜನರ । ಪೇಕ್ಷೆಯನು ಸಲಿಸುವನು ನಿಜವಿದು । ಲಕ್ಷ್ಮಿರಮಣ ॥೪॥ ಪದದ ಕ್ರಮ ತಪ್ಪಿರಲು ಬಲ್ಲವ । ರಿದನು ಸರಿಯೆನಿಸುವುದು ಸಮ್ಮತ । ಮಧುಪುರದ ಮದನೇಶ ಸಲಹುವ। ಮುದದಿ ನಮ್ಮ ॥೫॥

ಮಂಗಲ

ರಾಗ ಮೋಹನ - ಏಕತಾಳ

ಜಲಚರನಾಗಿ ಶ್ರುತಿಯ ತಂದವಗೆ । ಕುಲಗಿರಿ ಪೊತ್ತಿಹ ಕೂರ್ಮನಿಗೆ ॥ ಇಳೆಯನು ಕದ್ದ ಖಳನ ಗೆಲಿದವಗೆ ॥ ಒಲಿದು ಪ್ರಹ್ಲಾದನ ಕಾಯ್ದ ನೃಹರಿಗೆ ॥ ಮಂಗಲಂ । ಜಯ । ಮಂಗಲಂ ॥೧॥ ವಸುಧೆಯನೀರಡಿಯಳೆದವಗೆ । ಜಸದಿ ಪರಶುಧರನೆನಿಸಿದಗೆ ॥ ದಶಶಿರನನು ಕೊಂದ ರಾಮನಿಗೆ । ಕುಶಲದಿ ತುರುಗಳ ಸಲಹಿದಗೆ ॥ ಮಂಗಲಂ । ಜಯ । ಮಂಗಲಂ ॥೨॥ ಬರಿಯ ಬತ್ತಲೆ ನಿಂತ ಬೌದ್ಧನಿಗೆ । ತುರಗವಾಹನ ಖಳಜನ ಹರಗೆ ॥ ವರಲಕ್ಷ್ಮಿಪತಿಗೆ ನಾರಾಯಣಗೆ । ಧರೆಯೊಳು ಮಧುಪುರವಾಸ ಗಣೇಶಗೆ ॥ ಮಂಗಲಂ । ಜಯ । ಮಂಗಲಂ ॥೩॥